ಭಾನುವಾರ, ಜೂನ್ 15, 2025 ₹ 7.00
www.prajavani.net
prajavani.net prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

**ಆಂಬುಲೆನ್ಸ್ ಕೊಡುಗೆ**

ಭಾರತವು ನೇಪಾಳಕ್ಕೆ 40 ಆಂಬುಲೆನ್ಸ್‌ಗಳನ್ನು ಕೊಡುಗೆಯಾಗಿ ನೀಡಿದೆ



**ಓದುಗರ ಗಮನಕ್ಕೆ**

ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ..





ಟೌನ್ ಹಾಲ್ ಎದುರು ರಸ್ತೆಗಳು ಗುಂಡಿಗಳಿಂದ ತುಂಬಿದೆ ಚಿತ್ರ: ಕಿಶೋರ್ ಕುಮಾರ್ ಬೋಳಾರ್



ಮಡಿವಾಳದಲ್ಲಿ ವೈಟ್ ಟಾಪಿಂಗ್ ರಸ್ತೆಯಲ್ಲಾಗಿರುವ ಗುಂಡಿ ಚಿತ್ರ: ಆ್ಯನಾ ಫಾತಿಮಾ

# ಕಾಮಗಾರಿ ಮುಗಿವವರೆಗೂ ಗುಂಡಿ ಮುಚ್ಚಲ್ಲ

## ವೈಟ್ ಟಾಪಿಂಗ್, ಬ್ಲ್ಯಾಕ್ ಟಾಪಿಂಗ್ ಕಾಮಗಾರಿ ನಡೆಯುತ್ತಿರುವ ರಸ್ತೆಗಳಲ್ಲಿ ಸಂಕಷ್ಟ

• ಆರ್. ಮಂಜುನಾಥ್

**ಬೆಂಗಳೂರು:** ನಗರದಲ್ಲಿ ಅಭಿವೃದ್ಧಿಯಾಗಿರುವ ರಸ್ತೆಗಳಲ್ಲಿ ಗುಂಡಿ ಸಮಸ್ಯೆಯ ಜೊತೆಗೆ ಅಭಿವೃದ್ಧಿ ಕಾಮಗಾರಿ ನಡೆಯುತ್ತಿರುವ ರಸ್ತೆಗಳ ಹಳ್ಳಗಳಲ್ಲಿ ಜನರು ಬೀಳುತ್ತಿದ್ದು, ಮಣ್ಣು, ಕೆಸರಿನಲ್ಲಿ ವಾಹನಗಳು ಸಿಲುಕಿಕೊಳ್ಳುತ್ತಿವೆ.



**ರಸ್ತೆ ಗುಂಡಿ ಅಪಾಯಕ್ಕೆ ದಾರಿ**

ನಗರದ ಹಲವು ಪ್ರಮುಖ ರಸ್ತೆಗಳಲ್ಲಿ ವೈಟ್ ಟಾಪಿಂಗ್, ಬ್ಲ್ಯಾಕ್ ಟಾಪಿಂಗ್ ಮಾಡಲು ಕಾಮಗಾರಿ ನಡೆಸಲಾಗುತ್ತಿದೆ. ಹಲವು ತಿಂಗಳು ಈ ಕಾಮಗಾರಿಗಳು ನಡೆಯಲಿದ್ದು, ಇಂತಹ ರಸ್ತೆಯಲ್ಲಿರುವ ಗುಂಡಿಗಳನ್ನು ಮುಚ್ಚುವ ಕೆಲಸವೂ ಆಗುತ್ತಿಲ್ಲ. 'ಹೇಗಿದ್ದರೂ ಪೂರ್ಣವಾಗಿ ಕಾಂಕ್ರೀಟ್ ಹಾಕುತ್ತೇವೆ. ಒಟ್ಟಿಗೆ ಎಲ್ಲವನ್ನೂ ಮುಚ್ಚುತ್ತೇವೆ' ಎಂದು ಬಿಬಿಎಂಪಿ ಎಂಜಿನಿಯರ್‌ಗಳು ಹೇಳುತ್ತಾರೆ.

'ನಾಲ್ಕಾರು ತಿಂಗಳು ಗುಂಡಿ ತುಂಬಿರುವ ರಸ್ತೆಗಳಲ್ಲಿ ವಾಹನ ಸಂಚಾರ ಕಷ್ಟಸಾಧ್ಯವಾಗಿದ್ದು, ಕಾಮಗಾರಿಯೂ ವೇಗವಾಗಿ ನಡೆಯುವ ಲಕ್ಷಣಗಳಿಲ್ಲ' ಎಂದು ಜೆ.ಸಿ. ರಸ್ತೆಯ ವ್ಯಾಪಾರಿ ಮಹಮದ್ ತಿಳಿಸಿದರು.

ಮಿನರ್ವ ವೃತ್ತದಿಂದ ಪುರಭವನದವರೆಗೆ ವೈಟ್ ಟಾಪಿಂಗ್ ಕಾಮಗಾರಿ ನಡೆಯುತ್ತಿದೆ. ಈ ಕಾಮಗಾರಿ ಆರಂಭವಾಗಿ ಆರು ತಿಂಗಳಾಗಿದ್ದರೂ, ಶೇ 10ರಷ್ಟು ಕೆಲಸವೂ ಮುಗಿದಿಲ್ಲ. ಜೆ.ಸಿ. ರಸ್ತೆಯಲ್ಲಿ ಹಾಗೂ ಪುರಭವನದ ಮುಂದೆ ನೂರಾರು ಗುಂಡಿಗಳಿವೆ. ಆದರೆ, ಇವುಗಳಿಗೆ ಕನಿಷ್ಠ ವೆಟ್‌ಮಿಕ್ಸ್ ಹಾಕಿ ಮುಚ್ಚುವ ಕೆಲಸವನ್ನೂ ಮಾಡುತ್ತಿಲ್ಲ. ಕಾಮಗಾರಿ ನಡೆಸುತ್ತಿರುವ ಗುತ್ತಿಗೆದಾರರು, 'ರಸ್ತೆಗೆ ಕಾಂಕ್ರೀಟ್ ಹಾಕುವುದರಿಂದ ಈಗ ಡಾಂಬರು ಹಾಕಿದರೆ ನಷ್ಟವಾಗುತ್ತದೆ' ಎನ್ನುತ್ತಾರೆ. ಗುಂಡಿಗಳನ್ನು ಮುಚ್ಚಿ, ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕಾದ ಬಿಬಿಎಂಪಿ ಎಂಜಿನಿಯರ್‌ಗಳು ಇತ್ತ ಸುಳಿಯುತ್ತಲೇ ಇಲ್ಲ.

ಚಾಮರಾಜಪೇಟೆ, ಗಾಂಧಿನಗರ, ಮಲ್ಲೇಶ್ವರ, ಮಹಾಲಕ್ಷ್ಮಿ ಲೇಔಟ್, ರಾಜಾಜಿನಗರದ ಹಲವು ಪ್ರದೇಶಗಳಲ್ಲಿ ನಡೆಯುತ್ತಿರುವ ರಸ್ತೆ ಅಭಿವೃದ್ಧಿ ಕಾಮಗಾರಿಯಿಂದ ರಸ್ತೆಯಲ್ಲಿ ವಾಹನ ಸಂಚಾರ ದುಸ್ತರವಾಗಿದೆ. ರಸ್ತೆ ಗುಂಡಿಗಳನ್ನೂ ಮುಚ್ಚದೆ ಹೆಚ್ಚಿನ ಗುಂಡಿಗಳನ್ನು ಮಾಡಲಾಗಿದೆ. 'ರಸ್ತೆ ಉತ್ತಮವಾಗಿ ಅಭಿವೃದ್ಧಿಯಾಗಬೇಕಾದರೆ ಒಂದಷ್ಟು ದಿನ ತೊಂದರೆಯಾಗುತ್ತದೆ, ಸಹಕರಿಸಬೇಕು' ಎಂದು ಬಿಬಿಎಂಪಿ ಎಂಜಿನಿಯರ್‌ಗಳು ಹೇಳುತ್ತಿದ್ದಾರೆ.

'ಒಂದಷ್ಟು ದಿನ ಅಥವಾ ತಿಂಗಳು ಕಾಯಲು ನಮಗೆ ಅಭ್ಯಂತರವಿಲ್ಲ. ಆದರೆ, ವರ್ಷವಾದರೂ ರಸ್ತೆ ಅಭಿವೃದ್ಧಿ ಪೂರ್ಣಗೊಳ್ಳುತ್ತಿಲ್ಲ. ವಾಹನ ಸಂಚಾರಕ್ಕೆ ಅನುವು ಮಾಡಿಕೊಡುವುದಿಲ್ಲ. ಮಣ್ಣು, ಕೆಸರಿನಿಂದ ಹಲವು ವಾಹನ ಸವಾರರು ಬೀಳುತ್ತಿದ್ದಾರೆ. ಮಳೆ ಬಂದಾಗ ಸಮಸ್ಯೆ ಹೆಚ್ಚಾಗುತ್ತದೆ. ಕಾಮಗಾರಿಗಾಗಿ ಅಗೆಯುವ ಹಳ್ಳಗಳನ್ನು ಸರಿಯಾಗಿ ಮುಚ್ಚದೆ ನಾಗರಿಕರು ಬೀಳುವಂತಾಗಿದೆ' ಎಂದು ರಾಜಾಜಿನಗರದ ಭೀಮೇಶ್ ದೂರಿದರು.

'ರಸ್ತೆ ಕಾಮಗಾರಿಗಳನ್ನು ನಡೆಸುವಾಗ ಒಂದು ಬದಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಬೇಕು. ಗುಂಡಿಗಳನ್ನು ಹಾಗೆಯೇ ಬಿಟ್ಟು ವಾಹನಕ್ಕೆ ಅವಕಾಶ ಮಾಡಿಕೊಟ್ಟರೆ ಸಂಕಷ್ಟವೇ ಹೆಚ್ಚು. ಹೀಗಾಗಿ, ಒಂದು ಬದಿ ಕಾಮಗಾರಿ ಮುಗಿದು, ಸುಗಮವಾಗಿ ವಾಹನ ಸಂಚಾರಕ್ಕೆ ಅನುವಾದ ಮೇಲೆಯೇ ಮತ್ತೊಂದು ಬದಿ ಕಾಮಗಾರಿ ಕೈಗೊಂಡರೆ ಸಾಕಷ್ಟು ಸಮಸ್ಯೆಗೆ ಪರಿಹಾರವಾಗುತ್ತದೆ' ಎಂದು ಹಲವು ನಾಗರಿಕರು ಆಗ್ರಹಿಸಿದ್ದಾರೆ.



ಹೊಸಕೆರೆಹಳ್ಳಿಯ ಕೆರೆಕೋಡಿ ರಸ್ತೆಯಲ್ಲಿ ಅಗೆದ ರಸ್ತೆಯ ದುಃಸ್ಥಿತಿ ಚಿತ್ರ:ರಂಜು ಪಿ.

### 'ದಂಡ ವಿಧಿಸಿದ್ದರೂ ಸಿಗದ ವೇಗ'

ವೆಸ್ಟ್ ಆಫ್ ಕಾರ್ಡ್ ರಸ್ತೆ ಹಾಗೂ ಹೊಸಕೆರೆಹಳ್ಳಿ ಮುಖ್ಯರಸ್ತೆ, ವೈಯಾಲಿ ಕಾವಲ್ ರಸ್ತೆಯಲ್ಲಿ ಕಾಮಗಾರಿ ವಿಳಂಬವಾಗಿದ್ದು, ಗುತ್ತಿಗೆದಾರರಿಗೆ ಬಿಬಿಎಂಪಿ ವತಿಯಿಂದ ದಂಡ ವಿಧಿಸಲಾಗಿದೆ. ಆದರೂ ಕಾಮಗಾರಿ ವೇಗ ಪಡೆದುಕೊಂಡಿಲ್ಲ ಎಂಬುದು ನಾಗರಿಕರ ದೂರು.



ಮಾಗಡಿ ರಸ್ತೆಯಿಂದ ಕೆಂಪೇಗೌಡನಗರಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯಲ್ಲಿ ಗುಂಡಿ ಬಿದ್ದು, ಸಂಪೂರ್ಣವಾಗಿ ಹಾಳಾಗಿರುವುದು

**ಜಯೇಂದ್ರ,** ಕೆಂಪೇಗೌಡನಗರ



ಕನಕಪುರ ಮುಖ್ಯರಸ್ತೆ ತಲಘಟ್ಟಪುರದ ನ್ಯಾಯಾಂಗ ಬಡಾವಣೆಯ ಎರಡನೇ ಹಂತದ ಮುಖ್ಯರಸ್ತೆಯಲ್ಲಿ ಗುಂಡಿ ಬಿದ್ದು, ಮಳೆ ನೀರು ಶೇಖರಣೆಯಾಗಿರುವುದು

**ವಿಜಯಲಕ್ಷ್ಮಿ ಜಗನ್ನಾಥ್,** ನ್ಯಾಯಾಂಗ ಬಡಾವಣೆ



ಯಲಹಂಕ ನ್ಯೂಟೌನ್‌ನ ಅಟ್ಟೂರು ಗ್ರಾಮದಿಂದ ಚಿತ್ರಾ ಬಡಾವಣೆಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಗುಂಡಿ ಬಿದ್ದಿರುವುದು

**ಪ್ರಭಾಕರ್,** ಚಿತ್ರಾ ಬಡಾವಣೆ

### ರಸ್ತೆ ಗುಂಡಿ ಕಂಡರೆ ಫೋಟೊ ಕಳುಹಿಸಿ

ಶಾಶ್ವತ ನಾಗರಿಕರು ತಾವು ವಾಸಿಸುವ ಹಾಗೂ ಸಂಚರಿಸುವ ರಸ್ತೆಗಳಲ್ಲಿ ಗುಂಡಿ ಕಂಡರೆ ಅದರ ಚಿತ್ರ ಸಹಿತ ಮಾಹಿತಿಯನ್ನು 'ಪ್ರಜಾವಾಣಿ'ಗೆ ಕಳುಹಿಸಿಕೊಡಬಹುದು. ನಿಮ್ಮ ಹೆಸರು ಹಾಗೂ ವಿಳಾಸವಿರಲಿ.

ವಾಟ್ಸ್ ಆ್ಯಪ್: 9606038256

## ಸುದ್ದಿ 2 ನಿಮಿಷ

### ಕಾರ್ವಾಗ್ಗಿಯೊ ಕಲಾಕೃತಿ ಪ್ರದರ್ಶನಕ್ಕೆ ಚಾಲನೆ

**ಬೆಂಗಳೂರು:** ನಗರದಲ್ಲಿರುವ ಇಟಲಿಯ ಕಾನ್ಸುಲೇಟ್ ಜನರಲ್, ಸಂಸ್ಕೃತಿ ಸಚಿವಾಲಯ ಹಾಗೂ ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್ (ಎನ್‌ಜಿಎಂಎ) ಜಂಟಿಯಾಗಿ ನಗರದಲ್ಲಿ ಹಮ್ಮಿಕೊಂಡಿರುವ ಇಟಲಿ ಕಲಾವಿದ ಕಾರ್ವಾಗ್ಗಿಯೊ ಅವರ ಕಲಾಕೃತಿಯ ಪ್ರದರ್ಶನಕ್ಕೆ ಶುಕ್ರವಾರ ಚಾಲನೆ ದೊರೆಯಿತು.

ಅರಮನೆ ರಸ್ತೆಯಲ್ಲಿರುವ ಎನ್‌ಜಿಎಂಎ ಗ್ಯಾಲರಿಯಲ್ಲಿ ಜುಲೈ 6ರವರೆಗೆ 'ಮ್ಯಾಗ್ಡಲೆನ್ ಇನ್ ಎಕ್ಸ್ಟಸಿ' ಶೀರ್ಷಿಕೆಯಡಿ ರಚಿಸಲಾದ ಕಲಾಕೃತಿಯ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಸೋಮವಾರ ಮತ್ತು ರಾಷ್ಟ್ರೀಯ ರಜಾ ದಿನಗಳನ್ನು ಹೊರತುಪಡಿಸಿ, ಉಳಿದ ದಿನಗಳು ಬೆಳಿಗ್ಗೆ 10ರಿಂದ ಸಂಜೆ 6 ಗಂಟೆವರೆಗೆ ಈ ಪ್ರದರ್ಶನ ನಡೆಯಲಿದೆ. ಈ ಕಲಾಕೃತಿಯು 17ನೇ ಶತಮಾನದ್ದಾಗಿದ್ದು, ಇದೇ ಮೊದಲ ಬಾರಿ ಬೆಂಗಳೂರಿನಲ್ಲಿ ಪ್ರದರ್ಶನಕ್ಕೆ ಇರಿಸಲಾಗಿದೆ.

ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಇಟಾಲಿಯನ್ ಕಲ್ಚರಲ್ ಸೆಂಟರ್ ನಿರ್ದೇಶಕ ಆಂಡ್ರಿಯಾ ಅನಸ್ತಾಸಿಯೊ, 'ಈ ಅಪರೂಪದ ಕಲಾಕೃತಿಯು 2014ರಲ್ಲಿ ಬಿಜೀಂಗ್‌ನ ಖಾಸಗಿ ಸಂಗ್ರಹಾಲಯದಲ್ಲಿ ದೊರೆತಿದೆ. ಇಟಲಿಯಲ್ಲಿ ಪ್ರದರ್ಶಿಸಿದ ಬಳಿಕ ಭಾರತಕ್ಕೆ ತರಲಾಗಿದೆ. ಈಗಾಗಲೇ ನವದೆಹಲಿಯಲ್ಲಿ ಈ ಕಲಾಕೃತಿ ಪ್ರದರ್ಶನಗೊಂಡಿದೆ. ಈಗ ಬೆಂಗಳೂರಿನಲ್ಲಿ ಪ್ರದರ್ಶನಕ್ಕೆ ಇರಿಸಲಾಗಿದೆ' ಎಂದು ಹೇಳಿದರು.

ನವದೆಹಲಿಯ ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್‌ನ ಮಹಾನಿರ್ದೇಶಕ ಸಂಜೀವ್ ಕಿಶೋರ್ ಗೌತಮ್, 'ಈ ಅದ್ಭುತ ಕಲಾಕೃತಿ ವಿಶ್ವ ಕಲಾ ಇತಿಹಾಸದ ಮೇಲೆ ಪ್ರಭಾವ ಬೀರುತ್ತದೆ' ಎಂದು ಬಣ್ಣಿಸಿದರು.

### 'ಪಾರಂಪರಿಕ ತಾಣ'ವಾಗಿ ಜ್ಞಾನಭಾರತಿ: ಮತ್ತೆ ಮನವಿ



**ಬೆಂಗಳೂರು:** ಜ್ಞಾನಭಾರತಿ ಆವರಣದಲ್ಲಿರುವ 'ಜೈವಿಕ ವನ'ವನ್ನು 'ಪಾರಂಪರಿಕ ತಾಣ' ಎಂದು ಘೋಷಿಸಲು ಕ್ರಮಕೈಗೊಳ್ಳಬೇಕು ಎಂದು ರಾಜ್ಯಪಾಲರಿಗೆ ಮತ್ತೆ ಮನವಿ ಸಲ್ಲಿಸಲಾಗಿದೆ.

ಜ್ಞಾನಭಾರತಿ ವಾಯು ವಿಹಾರಿಗಳ ಸಂಘದ ಸದಸ್ಯರು ಶುಕ್ರವಾರ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರನ್ನು ಭೇಟಿ ಮಾಡಿ, ವಾಸ್ತವವನ್ನು ವಿವರಿಸಿದರು.

'ವಿ.ವಿ ಸಿಂಡಿಕೇಟ್‌ನಲ್ಲಿ 2017 ಮತ್ತು 2022ರಲ್ಲಿ ಬಯೊಪಾರ್ಕ್ ಸಂರಕ್ಷಿಸಲು ನಿರ್ಣಯ ಕೈಗೊಳ್ಳಲಾಗಿದೆ. ಎಲ್ಲ ರೀತಿಯ ನಿರ್ಮಾಣ ಚಟುವಟಿಕೆಗಳನ್ನು ನಿಷೇಧಿಸಬೇಕು ಎಂದು ನ್ಯಾಕ್ ಹೇಳಿದೆ. ಜೀವವೈವಿಧ್ಯ ಕಾಯ್ದೆ- 2002ರಂತೆ 'ಪಾರಂಪರಿಕ ತಾಣ' ಎಂದು ಘೋಷಿಸಬೇಕು' ಎಂದು ವಿ.ವಿ ರಚಿಸಿದ್ದ ಸಮಿತಿ ವರದಿ ನೀಡಿದೆ. ಈ ವರದಿಯನ್ನು ನಿಮ್ಮ ಸೂಚನೆ ಮೇಲೆ ಸಿದ್ಧಪಡಿಸಲಾಗಿದ್ದರೂ ಅದನ್ನು ನಿಮಗೆ ತಲುಪಿಸಿಲ್ಲ. ಹೀಗಾಗಿ ವರದಿ ತರಿಸಿಕೊಂಡು ಕ್ರಮ ಕೈಗೊಳ್ಳಬೇಕು' ಎಂದು ಸಂಘದ ಸದಸ್ಯರು ಮನವಿ ಮಾಡಿದರು.

'ಜ್ಞಾನಭಾರತಿ ಜಮೀನನ್ನು ಯಾರಿಗೂ ನೀಡದಂತೆ ಸಿಂಡಿಕೇಟ್ ಸಭೆಯಲ್ಲಿ 2017ರಲ್ಲಿ ನಿರ್ಣಯಿಸಲಾಗಿದೆ. 'ಜೀವ ವೈವಿಧ್ಯ ವನ'ವನ್ನಾಗಿ ಉಳಿಸಿಕೊಳ್ಳುವಂತೆ ಸರ್ಕಾರವೂ ಆದೇಶಿಸಿದೆ. ಯುಜಿಸಿ ಕೂಡ 'ನಗರವನ ಬೆಳೆಸಿ 'ಜೀವವೈವಿಧ್ಯ ಅರಣ್ಯ' ಮಾಡಲು ಆದೇಶಿಸಿದೆ. ಆದರೂ, ಜ್ಞಾನಭಾರತಿಯಲ್ಲಿರುವ ಸಹ್ಯಾದ್ರಿ ವನದಲ್ಲಿ 50 ಎಕರೆಯನ್ನು ಯುವಿಸಿಇಗೆ ನೀಡಲಾಗಿದೆ' ಎಂದು ಮಾಹಿತಿ ನೀಡಿದರು.

ಸಂಘದ ಅಧ್ಯಕ್ಷ ಟಿ.ಜೆ. ರೇಣುಕಾ ಪ್ರಸಾದ್, ಸದಸ್ಯರಾದ ಸುಬ್ರಹ್ಮಣ್ಯಂ, ಜೊಸೆಫ್ ಹೂವರ್, ಸತ್ಯನಾರಾಯಣ ಭಟ್, ಗಣಪತಿ ಭಟ್ ಮನವಿ ಸಲ್ಲಿಸಿದರು.

### ಸಮಾಲೋಚನೆ ಸಭೆ: ಕಸ ವಿಲೇವಾರಿ ಸ್ಥಗಿತಕ್ಕೆ ಆಗ್ರಹಿಸಿ ಪ್ರತಿಭಟನೆಯ ಎಚ್ಚರಿಕೆ

# ಚಿಗರೇನಹಳ್ಳಿ: ಬಿಬಿಎಂಪಿ ವಿರುದ್ಧ ಮತ್ತೆ ಹೋರಾಟ

ಪ್ರಜಾವಾಣಿ ವಾರ್ತೆ

**ದೊಡ್ಡಬಳ್ಳಾಪುರ:** ತಾಲ್ಲೂಕಿನ ಚಿಗರೇನಹಳ್ಳಿಯಲ್ಲಿ ಬಿಬಿಎಂಪಿ ಕಸ ವಿಲೇವಾರಿ ವಿರುದ್ಧ ಇಲ್ಲಿನ ಸ್ಥಳೀಯರು ಮತ್ತೆ ಹೋರಾಟಕ್ಕೆ ಮುಂದಾಗಿದ್ದಾರೆ.

ಈ ಸಂಬಂಧ ನಗರದ ಡಾ. ಬಾಬುಜಗಜೀವನ್ ರಾಮ್ ಭವನದಲ್ಲಿ ಶನಿವಾರ ನಡೆದ ಗ್ರಾಮ ಪಂಚಾಯಿತಿ, ನಗರಸಭೆ ಚುನಾಯಿತ ಜನಪ್ರತಿನಿಧಿಗಳು, ವಿವಿಧ ಸಂಘಟನೆ ಮುಖಂಡರು ಹಾಗೂ ಸಾರ್ವಜನಿಕರ ಸಮಾಲೋಚನೆ ಸಭೆಯಲ್ಲಿ ಮತ್ತೆ ಹೋರಾಟ ಆರಂಭಿಸುವ ತೀರ್ಮಾನ ಕೈಗೊಳ್ಳಲಾಯಿತು.

ಶಾಸಕ ಧೀರಜ್ ಮುನಿರಾಜ್ ಮಾತನಾಡಿ, ಬಿಬಿಎಂಪಿ ವ್ಯಾಪ್ತಿ ಕಸ ವಿಲೇವಾರಿ ಸ್ಥಗಿತಗೊಳಿಸುವಂತೆ ಆಗ್ರಹಿಸಿ ಬೃಹತ್ ಪ್ರತಿಭಟನೆ ನಡೆಸಲಾಗುವುದು.



ದೊಡ್ಡಬಳ್ಳಾಪುರ ಡಾ.ಬಾಬುಜಗಜೀವನ್ ರಾಮ್ ಭವನದಲ್ಲಿ ಶನಿವಾರ ನಡೆದ ಸಭೆಯಲ್ಲಿ ಶಾಸಕ ಧೀರಜ್ ಮುನಿರಾಜ್ ಮಾತನಾಡಿರು

ತಾಲ್ಲೂಕಿನ ಜನರ ಆರೋಗ್ಯ, ಪರಿಸರ ರಕ್ಷಣೆಗೆ ಎಲ್ಲರು ಪಕ್ಷಾತೀತವಾಗಿ ಬೆಂಬಲಸಬೇಕು ಎಂದು ಮನವಿ ಮಾಡಿದರು.

'ಎರಡು ವರ್ಷಗಳಿಂದಲೂ ಬಿಬಿಎಂಪಿ ಕಸ ವಿಲೇವಾರಿ ವಿರುದ್ಧ ಹೋರಾಟ ನಡೆಸಲಾಗುತ್ತಿದೆ. ತಾಲ್ಲೂಕಿನ ಅಭಿವೃದ್ಧಿ ಕೆಲಸಗಳಿಗೆ ಯಾವುದೇ ಅನುದಾನ ಪಡೆಯದೆ ಪ್ರತಿರೋಧ ವ್ಯಕ್ತಪಡಿಸಲಾಗಿದೆ. ನಮಗೆ ಬೇಕಿರುವುದು ಬಿಬಿಎಂಪಿ ಅನುದಾನ ಅಲ್ಲ, ಕಸ ಇಲ್ಲಿಗೆ ಬರುವುದು ನಿಲ್ಲಬೇಕು' ಎಂದರು.

### ವೃಷಭಾವತಿ ಬೇಡ: ಶಾಸಕ ಧೀರಜ್

ತಾಲ್ಲೂಕಿಗೆ ಬೇಕಿರುವುದು ಎತ್ತಿನಹೊಳೆ ಹಾಗೂ ಕಾವೇರಿ ನೀರೇ ಹೊರತು, ಬೆಂಗಳೂರಿನಲ್ಲಿ ಶುದ್ಧೀಕರಿಸಿರುವ ವೃಷಾಭಾವತಿಯ ನೀರು ಅಲ್ಲ. ವೃಷಭಾವತಿ ನೀರಾವರಿ ಯೋಜನೆ ವಿರುದ್ಧ ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯಿತಿಗಳು 15 ದಿನಗಳಲ್ಲಿ ನಿರ್ಣಯ ಅಂಗೀಕರಿಸಿ ನೀಡುವಂತೆ ಶಾಸಕ ಧೀರಜ್ ಮುನಿರಾಜು ಮನವಿ ಮಾಡಿದರು.

ನಗರದಲ್ಲಿ ನಡೆದ ಸಮಾಲೋಚನ ಸಭೆಯಲ್ಲಿ ಮಾತನಾಡಿದರು. ಸ್ಥಳೀಯ ರೈತರ ವಿರೋಧದ ನಡುವೆಯು ಈಗಾಗಲೇ ನೆಲಮಂಗಲ ತಾಲ್ಲೂಕಿನ ಕೆರೆಗಳಿಗೆ ವೃಷಭಾವತಿ ನೀರು ಹರಿಸುವ ಯೋಜನೆಯ ಕಾಮಗಾರಿಗೆ ಉಪಮುಖ್ಯಮಂತ್ರಿ ಗುದ್ದಲಿ ಪೂಜೆ ನರವೇರಿಸಿದ್ದಾರೆ ದೊಡ್ಡಬಳ್ಳಾಪುರ ತಾಲ್ಲೂಕಿನ ಮಧುರೆ ಕೆರೆ ಹಾಗೂ ಅರಳುಮಲ್ಲಿಗೆ ಕೆರೆಗಳಿಗೂ ವೃಷಾಭಾವತಿ ನೀರನ್ನು ಶುದ್ಧೀಕರಿಸಿ ಹರಿಸುವ ಕಾಮಗಾರಿಯ ಸಮಗ್ರ ಯೋಜನಾ ವರದಿ ಸಿದ್ಧವಾಗುತ್ತಿದೆ. ಇದಕ್ಕೆ ಸ್ಥಳೀಯರು ಜನಪ್ರತಿನಿಧಿಗಳು ಮತ್ತು ಜನರು ಪ್ರತಿರೋಧ ತೋರಬೇಕು ಎಂದು ಹೇಳಿದರು.

ನಗರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ವಿ.ಎಸ್.ರವಿಕುಮಾರ್, ಬಿಜೆಪಿ ತಾಲ್ಲೂಕು ಘಟಕದ ಅಧ್ಯಕ್ಷ ನಾಗೇಶ್, ಮುಖಂಡರಾದ ಕೆ.ಎಂ.ಹನುಮಂತರಾಯಪ್ಪ, ತಿ.ರಂಗರಾಜು, ಜೋ.ನ. ಮಲ್ಲಿಕಾರ್ಜುನ್, ವತ್ಸಲಾ ಇದ್ದರು.

# ಕ್ರೆಡಲ್‌ನಿಂದ 'ರನ್ ವಿತ್ ದಿ ವಿಂಡ್' ಮ್ಯಾರಥಾನ್ ಆಯೋಜನೆ

**ಬೆಂಗಳೂರು:** ವಿಶ್ವ ಪವನ ದಿನಕ್ಕೆ (ಜೂನ್ 15) ಪೂರ್ವಭಾವಿಯಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮವು ಭಾರತೀಯ ಪವನ ಶಕ್ತಿ ಸಂಘ (ಐಡಬ್ಲ್ಯುಪಿಎ) ಮತ್ತು ಕೇಂದ್ರದ ನವ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯದ ಸಹಯೋಗದೊಂದಿಗೆ ಶನಿವಾರ 'ರನ್ ವಿತ್ ದಿ ವಿಂಡ್' ಮ್ಯಾರಥಾನ್ ಆಯೋಜಿಸಿತ್ತು.

ಪವನ ಶಕ್ತಿಯ ಅಗಾಧ ಸಾಮರ್ಥ್ಯ ಮತ್ತು ಸುಸ್ಥಿರ ಭವಿಷ್ಯ ರೂಪಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಜಾಗೃತಿ ಮೂಡಿಸಲು ಆಯೋಜಿಸಿದ್ದ ಈ ಓಟಕ್ಕೆ ನಾಗರಬಾವಿಯ ಕ್ರೆಡಲ್ ಕಚೇರಿಯ ಆವರಣದಲ್ಲಿ ಚಾಲನೆ ನೀಡಲಾಯಿತು.

ಹಸಿರು, ಸುಸ್ಥಿರ ಕರ್ನಾಟಕದತ್ತ ಸಾಮೂಹಿಕ ಹೆಜ್ಜೆಯ ದ್ಯೋತಕವಾಗಿದ್ದ 2ಕೆ ಮತ್ತು 5ಕೆ ವಿಭಾಗಗಳ ಓಟದಲ್ಲಿ ಶಾಲಾ, ಕಾಲೇಜು ವಿದ್ಯಾರ್ಥಿಗಳು, ವೃತ್ತಿಪರರು, ಸರ್ಕಾರಿ ಅಧಿಕಾರಿಗಳು ಸೇರಿದಂತೆ 500ಕ್ಕೂ ಹೆಚ್ಚು ಓಟಗಾರರು ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಕ್ರೆಡಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ. ರುದ್ರಪ್ಪಯ್ಯ, 'ನವೀಕರಿಸಬಹುದಾದ ಇಂಧನ ವಲಯವನ್ನು ಮುನ್ನಡೆಸುವಲ್ಲಿ ಪವನ ಶಕ್ತಿ ಪ್ರಮುಖ ಪಾತ್ರ ವಹಿಸುತ್ತದೆ. ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಕರ್ನಾಟಕವನ್ನು ದೇಶದಲ್ಲಿಯೇ ಮೊದಲ ರಾಜ್ಯವನ್ನಾಗಿಸುವ ಗುರಿ ಹೊಂದಿದ್ದೇವೆ' ಎಂದರು.



ನಾಗರಬಾವಿಯ ಕ್ರೆಡೆಲ್ ಕಚೇರಿ ಆವರಣದಲ್ಲಿ ಮ್ಯಾರಥಾನ್‌ಗೆ ಚಾಲನೆ ನೀಡಲಾಯಿತು

'2024–25ರ ಹಣಕಾಸು ವರ್ಷದಲ್ಲಿ ರಾಜ್ಯಕ್ಕೆ ದಾಖಲೆಯ 1,332 ಮೆಗಾವಾಟ್ ಪವನ ಸಾಮರ್ಥ್ಯವನ್ನು ಸೇರ್ಪಡೆಗೊಳಿಸಿದ್ದೇವೆ. ಈ ಮೂಲಕ ಗುಜರಾತ್ ಮತ್ತು ತಮಿಳುನಾಡನ್ನು ನಾವು ಹಿಂದಿಕ್ಕಿದ್ದೇವೆ' ಎಂದು ಹೇಳಿದರು.

'ಒಟ್ಟು 7,351 ಮೆಗಾವಾಟ್ ಸ್ಥಾಪಿತ ಪವನ ವಿದ್ಯುತ್ ಸಾಮರ್ಥ್ಯದೊಂದಿಗೆ, ರಾಜ್ಯವು ದೇಶದ ಪವನ ವಿದ್ಯುತ್ ವಲಯದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದೆ' ಎಂದು ಅವರು ಹೇಳಿದರು.

ಐಡಬ್ಲ್ಯುಪಿಎ ಉಪಾಧ್ಯಕ್ಷ ಯು.ಬಿ. ರೆಡ್ಡಿ ಮಾತನಾಡಿ, 'ಪವನ ಶಕ್ತಿಯ ಸಾಮರ್ಥ್ಯ ಹೆಚ್ಚಳಕ್ಕೆ ಒತ್ತು ನೀಡುವ ಮೂಲಕ 2070ರ ವೇಳೆಗೆ ಇಂಗಾಲದ ನಿವ್ವಳ ಶೂನ್ಯ ಹೊರಸೂಸುವಿಕೆಯ ಗುರಿ ತಲುಪಬಹುದಾಗಿದೆ. ಈ ನಿಟ್ಟಿನಲ್ಲಿ ಕೆಲಸ ಮಾಡಲು ಐಡಬ್ಲ್ಯುಪಿಎ ಬದ್ಧವಾಗಿದೆ' ಎಂದರು.

ಎಂಎನ್‌ಆರ್‌ಇ ನಿರ್ದೇಶಕ ಪಿ.ಕೆ. ದಾಸ್, ಎನ್‌ಐಡಬ್ಲ್ಯೂಇನ ಪ್ರಧಾನ ನಿರ್ದೇಶಕ ರಾಜೇಶ್ ಕತ್ಯಾಲ್, ಕೆಎಸ್‌ಪಿಡಿಸಿಎಲ್‌ನ ಸಿಇಒ ಟಿ.ಎಂ. ಶಿವಪ್ರಕಾಶ್, ಕೆಎಸ್‌ಪಿಡಿಸಿಎಲ್ ಪ್ರಧಾನ ವ್ಯವಸ್ಥಾಪಕ ಅಮರನಾಥ್ ಮತ್ತಿತರರು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು

**ಆರ್ಗ್ಯಾನಿಕ್ ಸಂತೆ: 'ಎಚ್‌ಎಸ್‌ವಿ'ಗೆ ಭಾವಗೀತೆಗಳ ನೃತ್ಯ ನಮನ:** ಅತಿಥಿಗಳು: ಜೋಗಿ, ಶ್ರೀನಿವಾಸ ಉಡುಪ, ರಮ್ಯಾ ವಾಸಿಷ್ಠ, ಆಯೋಜನೆ ಮತ್ತು ಸ್ಥಳ: ದಿ ಗ್ರೀನ್ ಪಾತ್, ಮಲ್ಲೇಶ್ವರ, ಬೆಳಿಗ್ಗೆ 9

**ಸಂಸ್ಥಾಪನಾ ದಿನಾಚರಣೆ, ಸಾಮಾಜಿಕ ಸಂಗತಿಗಳ ವಿಚಾರಸಂಕಿರಣ:** ಅತಿಥಿಗಳು: ಎನ್.ವಿ. ಅಂಬಾಮಣಿ, ಸಿ.ಎಸ್. ದ್ವಾರಕಾನಾಥ್, ಎಸ್. ಷಡಕ್ಷರಿ, ವಾಹಿನಿ, ಅಧ್ಯಕ್ಷತೆ: ಪಿ.ಎನ್. ಶ್ರೀನಿವಾಸಾಚಾರಿ, ಆಯೋಜನೆ: ಕರ್ನಾಟಕ ವಿಶ್ವಕರ್ಮ ಸಾಹಿತ್ಯ-ಕಲಾ ಅಕಾಡೆಮಿ, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10

**ಎಚ್‌ಎಸ್‌ವಿ ಅವರಿಗೆ ನುಡಿನಮನ:** ಬಿ.ಆರ್. ಲಕ್ಷ್ಮಣರಾವ್, ಎಚ್.ಎಸ್.ವಿ ಕುರಿತು: ಶ್ರೀನಿವಾಸ್ ಜಿ. ಕಪ್ಪಣ್ಣ, ವತ್ಸಲಾ ಮೋಹನ್, ಅಧ್ಯಕ್ಷತೆ: ಎಚ್.ಎಸ್. ಸುಧೀಂದ್ರಕುಮಾರ್, ಅತಿಥಿ: ಎಂ. ಪ್ರಕಾಶ ಮೂರ್ತಿ, ಉಪಸ್ಥಿತಿ: ಮಂಜುನಾಥ್, ಜಯರಾಂ, ಡಾ. ವೆಂಕಟಸ್ವಾಮಿ, ಡಾ. ವಿನಯ್, ಸಂಗೀತ ಕಛೇರಿ: ಸಂಗೀತಾ ಕಟ್ಟಿ, ಎಚ್‌ಎಸ್‌ವಿ ನುಡಿ ನಮನ ಗೀತೆ: ಅಪ್ಪಗೆರೆ ತಿಮ್ಮರಾಜು, ವೀರೇಶ್, ರವಿ ಇಗ್ಗಲೂರು, ಶರ್ವಾಣಿ ಎಸ್. ನಾಡಿಗ್, ಶ್ರೀವಾಣಿ ಎಸ್. ನಾಡಿಗ್, ಸಿಂಧೂ, ಭೂಮಿಕಾ, ಆಯೋಜನೆ: ಕನ್ನಡ ಸಾಹಿತ್ಯ ಪರಿಷತ್ತು ಯಶವಂತಪುರ ವಿಧಾನಸಭಾ ಕ್ಷೇತ್ರ, ಸ್ಥಳ: ಶೇಷಾದ್ರಿಪುರಂ ಕಾಲೇಜಿನ ಸಭಾಂಗಣ, ಮೂರನೇ ಮುಖ್ಯರಸ್ತೆ, ಕೆಂಗೇರಿ ಉಪನಗರ, ಬೆಳಿಗ್ಗೆ 10ರಿಂದ



ಬಿ.ಆರ್. ಲಕ್ಷ್ಮಣರಾವ್


**'ಡಾ. ಅನುಪಮಾ ನಿರಂಜನ ಮತ್ತು ಡಾ. ಕೋ.ವೆಂ. ರಾಮಕೃಷ್ಣಗೌಡರ ಜನ್ಮದಿನ, ಪ್ರಶಸ್ತಿ ಪ್ರದಾನ, ಕಥಾ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ:** ಉದ್ಘಾಟನೆ: ಡಾ. ವಸುಂಧರಾ ಭೂಪತಿ, ಅಧ್ಯಕ್ಷತೆ: ರಾಮಣ್ಣ ಎಚ್. ಕೋಡಿಹೊಸಹಳ್ಳಿ, ಅತಿಥಿ: ಎಚ್. ದಂಡಪ್ಪ, ಪ್ರಶಸ್ತಿ ಸ್ವೀಕರಿಸುವವರು: ಡಾ. ವಿಜಯಲಕ್ಷ್ಮಿ ದೇಶಮಾನೆ, ಕೆ. ಸುರೇಶ್, ಕಥಾ ಸ್ಪರ್ಧೆ ವಿಜೇತರು: ಆಶಾ ನಾಗರಾಜ್, ಎಚ್. ನಾಗರತ್ನ, ಅಚಲ ಬಿ. ಹೆನ್ಲ, ಆಯೋಜನೆ: ಕನ್ನಡ ಸಂಘರ್ಷ ಸಮಿತಿ, ಸ್ಥಳ: ಬಿ.ಎಂ.ಶ್ರೀ ಕಲಾಭವನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10



ಡಾ. ವಿಜಯಲಕ್ಷ್ಮಿ ದೇಶಮಾನೆ

**ಇಂದುಮಣಿ ಆರ್.ಎ. ಅವರ 'ಇಂದ್ರ ಧನುಸ್ಸು' ಪುಸ್ತಕ ಬಿಡುಗಡೆ:** ಉದ್ಘಾಟನೆ: ವೈ.ಬಿ.ಎಚ್. ಜಯದೇವ್, ಅಧ್ಯಕ್ಷತೆ: ಲತಾ ಜೋಶಿ, ಪುಸ್ತಕ ಬಿಡುಗಡೆ: ಗಾಯತ್ರಿ ಅಪ್ಪಣ್ಣಾಚಾರ್, ಪುಸ್ತಕ ಪರಿಚಯ: ಡಿ. ಮಲ್ಲಾರೆಡ್ಡಿ, ಆಯೋಜನೆ: ಶ್ರೀ ಪ್ರಕಾಶನ, ಸ್ಥಳ: ಭೂಮಿಕಾ ಸೇವಾ ಫೌಂಡೇಷನ್, ಟಿ. ದಾಸರಹಳ್ಳಿ, ಬೆಳಿಗ್ಗೆ 10

**ಬುದ್ಧಫೆಸ್ಟ್–2025:** ಸಾನ್ನಿಧ್ಯ: ಭಂತೇಜಿ, ಧಮ್ಮೋಪನ್ಯಾಸ: ಮೂಡ್ನಾಕೂಡು ಚಿನ್ನಸ್ವಾಮಿ, ಅಧ್ಯಕ್ಷತೆ: ಶಿವಲಿಂಗ ಬಿ.ಎನ್., ಗೌರವ ಸಮರ್ಪಣೆ: ಎಸ್. ಮರಿಸ್ವಾಮಿ, ಮಹಾದೇವಯ್ಯ ಕಲ್ಲಾರೆಪುರ, ಸಿ.ವಿ. ಲಕ್ಷ್ಮಿ, ಸಿ. ಚಂದ್ರಪ್ಪ, ಉಪಸ್ಥಿತಿ: ಡಿ. ಶಿವಶಂಕರ್, ಮಹಾದೇವಸ್ವಾಮಿ, ವಿಜಯಕುಮಾರ್ ಬೆಣಗಿ, ಎಸ್.ಎಂ. ಸೋಲಂಕಿ, ತಿಪ್ಪೇಸ್ವಾಮಿ ಸಿ.ಎನ್., ಆಯೋಜನೆ: ಭಾರತೀಯ ವಿದ್ಯಾರ್ಥಿ ಸಂಘ, ಸ್ಥಳ: ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಸಭಾಂಗಣ, ಮಹಾರಾಣಿ ಕಾಲೇಜಿನ ಹತ್ತಿರ, ಬೆಳಿಗ್ಗೆ 10.30ರಿಂದ



**ನಿಖಿಲ್ ಕುಮಾರಸ್ವಾಮಿ ಅವರ 'ಪಕ್ಷ ಸಂಘಟನಾ ರಾಜ್ಯ ಪ್ರವಾಸ', 'ಮಿಸ್ಡ್ ಕಾಲ್ ಸದಸ್ಯತ್ವ ಅಭಿಯಾನ'ಕ್ಕೆ ಚಾಲನೆ, ಪಕ್ಷದ ಸಮಾವೇಶ:** ಉದ್ಘಾಟನೆ: ಎಚ್.ಡಿ. ದೇವೇಗೌಡ, ಅಧ್ಯಕ್ಷತೆ: ಎಚ್.ಡಿ. ಕುಮಾರಸ್ವಾಮಿ, ಸ್ಥಳ: ಜೆ.ಪಿ. ಭವನ, ಜೆಡಿಎಸ್ ಪಕ್ಷದ ರಾಜ್ಯ ಕಚೇರಿ, ಬೆಳಿಗ್ಗೆ 11

**'ನಿಜ ನಾಯಕ ಅಪ್ಪ' ಕನ್ನಡ ಭಾವಚಿತ್ರ ಗೀತೆ ಬಿಡುಗಡೆ:** ಜಗ್ಗೇಶ್, ಗಣೇಶ್, ದೇವರಾಜ್, ಅತಿಥಿ: ಪ್ರಜ್ವಲ್ ದೇವರಾಜ್, ಗಾಯನ: ರಾಜೇಶ್ ಕೃಷ್ಣನ್, ಸಾಹಿತ್ಯ: ವಿ. ನಾಗೇಂದ್ರಪ್ರಸಾದ್, ಅಧ್ಯಕ್ಷತೆ: ಆರ್. ಅಶೋಕ, ಸ್ಥಳ: ಜೆಎಸ್‌ಎಸ್ ಎಜುಕೇಷನ್ ಕಾಂಪ್ಲೆಕ್ಸ್, ಜೆಎಸ್‌ಎಸ್ ವೃತ್ತ, ಎಂಟನೇ ಬ್ಲಾಕ್, ಜಯನಗರ, ಬೆಳಿಗ್ಗೆ 11ರಿಂದ

**ರಾಷ್ಟ್ರೀಯ ಪ್ಯಾಲೆಸ್ಟೀನ್ ಬೆಂಬಲ ದಿನ: ಸ್ಥಳ:** ಘಾಟೆ ಭವನ, ಗಾಯತ್ರೀ ದೇವಿ ಪಾರ್ಕ್ ಬಡಾವಣೆ, ವೈಯಾಲಿ ಕಾವಲ್, ಮಧ್ಯಾಹ್ನ 3

**19ನೇ ಹಾರ್ಮೋನಿಯಂ ಹಬ್ಬ:** ಹಾರ್ಮೋನಿಯಂ ಸೋಲೊ: ಅಮೇಯ ಬಿಚ್ಚು, ಗಾಯನ: ಅನಿರುದ್ಧ ಐತಾಳ, ಪ್ರವೀಣ ಶಿವೋಲಿಕರ, ರವೀಂದ್ರ ಗುರುರಾಜ ಕಾಟೋಟಿ, ಪಿಟೀಲು, ಹಾರ್ಮೋನಿಯಂ ಯುಗಳ ವಾದನ: ವಿಶ್ವನಾಥ ಕಾನ್ಹೇರೆ, ತಬಲಾ: ಗುರು ಮೂರ್ತಿ ವೈದ್ಯ, ರೂಪಕ ಕಲ್ಲೂರ್ಕರ್, ಹಾರ್ಮೋನಿಯಂ: ತೇಜಸ್ ಕಾಟೋಟಿ, ಆಯೋಜನೆ: ಬಿಜಾಪುರೆ ಹಾರ್ಮೋನಿಯಂ ಫೌಂಡೇಷನ್, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಮಧ್ಯಾಹ್ನ 3.30

**ಎಚ್.ಎ. ಸತ್ಯವತಿ ಅವರ 'ಚೌಂಡರಸ–ಒಂದು ಅಧ್ಯಯನ' ಸಂಶೋಧನಾ ಕೃತಿ ಬಿಡುಗಡೆ:** ಹಂಪ. ನಾಗರಾಜಯ್ಯ, ಕೃತಿ ಪರಿಚಯ: ಎಲ್.ಜಿ. ಮೀರಾ, ಅತಿಥಿ: ಆರ್. ಲಕ್ಷ್ಮೀನಾರಾಯಣ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 5

**'ಬೈಠಕ್' ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ:** ಗಾಯನ: ಶಶಿಕಲಾ ಭಟ್, ತಬಲಾ: ಕೌಶಿಕ್ ಭಟ್, ಹಾರ್ಮೋನಿಯಂ: ಮಧೂಸೂದನ್ ಯು. ಭಟ್, ಆಯೋಜನೆ: ಶ್ರೀರಾಮ ಕಲಾ ವೇದಿಕೆ, ಸ್ಥಳ: ಶ್ರೀರಾಮ ದೇವರ ದೇವಸ್ಥಾನ, ಅಮೃತ್‌ಹಳ್ಳಿ, ಸಂಜೆ 5.30

**'ಅಗ್ನಿ ಪರೀಕ್ಷೆ' ಯಕ್ಷಗಾನ ಪ್ರದರ್ಶನ:** ಹಿಮ್ಮೇಳದ ಭಾಗವತರು: ಪ್ರಸನ್ನ ಕುಮಾರ್ ಹೆಗಡೆ ಮಾಗೋಡು, ಮದ್ದಳೆ: ಅಗ್ನೆಯ ಭಟ್ ಕ್ಯಾಸನೂರು, ಮುಮ್ಮೇಳ: ರವಿ ಐತುಮನೆ, ಆದಿತ್ಯ ಸಿ. ಹಲ್ಕೋಡ್, ಅಕ್ಷಯ್ ಹೆಗಡೆ ಹೂಡ್ಲಮನೆ, ಮಿತ್ರ ಮಧ್ಯಸ್ಥ ಗೊರಮನೆ, ಆಯೋಜನೆ ಮತ್ತು ಸ್ಥಳ: ಮಾತಿನ ಮನೆ, ಆರನೇ ರಸ್ತೆ, ಚಾಮರಾಜಪೇಟೆ, ಸಂಜೆ 6

**'ಮೀಸ್ಟರ್ ರಾವ್ ಅಸೋಸಿಯೇಟ್ಸ್' ನಾಟಕ ಪ್ರದರ್ಶನ:** ರಚನೆ: ಭೀಷ್ಮ ರಾಮಯ್ಯ, ನಿರ್ದೇಶನ: ಬಾಷ್ ರಾಘವೇಂದ್ರ, ಆಯೋಜನೆ: ಅಂತರಂಗ ಬಹಿರಂಗ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

### ಉ.ಪ್ರ: ರಾಕೆಟ್ ಉಡ್ಡಯನ ಪರೀಕ್ಷೆ

**ಕುಶಿನಗರ (ಉತ್ತರ ಪ್ರದೇಶ) (ಪಿಟಿಐ):** ಇಸ್ರೊ, ಉತ್ತರ ಪ್ರದೇಶದಲ್ಲಿ ರಾಕೆಟ್ ಉಡ್ಡಯನ ಪರೀಕ್ಷೆಯನ್ನು ಶನಿವಾರ ಯಶಸ್ವಿಯಾಗಿ ನಡೆಸಿತು. ಇದು ಉತ್ತರ ಪ್ರದೇಶದಲ್ಲಿ ನಡೆಸಿದ ಮೊದಲ ಉಪಗ್ರಹ ಉಡ್ಡಯನವಾಗಿದೆ.

ಥ್ರಸ್ಟ್ ಟೆಕ್ ಇಂಡಿಯಾ ಲಿಮಿಟೆಡ್ ಸಹಯೋಗದಲ್ಲಿ ಸಂಜೆ 5.14ಕ್ಕೆ ನಡೆದ ಪರೀಕ್ಷಾರ್ಥ ಹಾರಾಟದ ವೇಳೆ ರಾಕೆಟ್ 1.1 ಕಿ.ಮೀ. ಎತ್ತರಕ್ಕೆ ಹಾರಿತು.

'ರಾಕೆಟ್ 1.1 ಕಿ.ಮೀ. ಎತ್ತರಕ್ಕೆ ಜಿಗಿದ ಬಳಿಕ ಅದರಿಂದ ಸಣ್ಣ ಉಪಗ್ರಹ (ಪೇಲೋಡ್) ಹೊರ ಬಂತು. ಅದು ಐದು ಮೀಟರ್ ಕೆಳಗೆ ಬೀಳುತ್ತಿದ್ದಂತೆ ಅದರಿಂದ ಪ್ಯಾರಾಚೂಟ್ ಸಕ್ರಿಯಗೊಂಡ ನಂತರ ಉಪಗ್ರಹ ಲ್ಯಾಂಡ್ ಆಯಿತು. 15 ಕೆ.ಜಿ. ತೂಕದ ರಾಕೆಟ್ ಸಹ ಸುರಕ್ಷಿತವಾಗಿ ಕೆಳಗಿಳಿಯಿತು' ಎಂದು ಇಸ್ರೊ ವಿಜ್ಞಾನಿ ಅಭಿಷೇಕ್ ಸಿಂಗ್ ಹೇಳಿದರು.

## ಬೆಂಗಳೂರು ರೇಸ್

### ಫಿನ್‌ಬಾಸ್ ಗೆಲ್ಲುವ ನಿರೀಕ್ಷೆ

ಬೆನಕ ಡೆವಲಪರ್ಸ್ ಫಿಲ್ಲೀಸ್ ಚಾಂಪಿಯನ್‌ಶಿಪ್ ಸ್ಟೇಕ್ಸ್ ಭಾನುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಫಿನ್‌ಬಾಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.30ಕ್ಕೆ ಆರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1. ಸ್ಟಾರ್ ಆಫ್ ಇಂಡಿಯಾ 4, ಸೀ ಡೈಮಂಡ್ 1, ವಾಕಿಝಾಕ್ಸಿ 3
2. ಇಂಡಿಯನ್ ಬ್ರಾಕೆಡ್ 4, ಡಿವೈನ್ ಸೀಕ್ರೆಟ್ 2, ವೈಟ್ ಸೀಕ್ರೆಟ್ 3
3. ಆಲ್ ಅಟ್ರ್ಯಾಕ್ಷನ್ 3, ಪೋಸಿಟಾನೊ 10, ಥಂಡರಿಂಗ್ ಫಿನಿಕ್ಸ್ 11
4. ಕಾಂಕ್ರಾ 3, ಅಕಿಟಾನಿಯಾ 5, ನೆಮೊಸಿನ್ 8
5. ಫಿನ್‌ಬಾಸ್ 2, ಬಿಷಪ್ 1, ಗ್ಲೋರಿಯಸ್‌ನೆಸ್ 4
6. ವ್ಯಾಸ 8, ವಿಕ್ಟೋರಿಯಾ ದೊರೆಸಾನಿ 1, ಅಕ್ವಮ್ಯಾಟಿಕ್ 2
7. ಐರನ್ ಕಿಂಗ್ 1, ನಾಟಿ ಸ್ಕಾಟಿ 2, ಎಕ್ಸ್‌ಟ್ರಾಆರ್ಡಿನರಿ 3

**ಉತ್ತಮ ಬೆಟ್: ಇಂಡಿಯನ್ ಬ್ರಾಕೆಡ್**

| ಜಾಕ್‌ಪಾಟ್‌ಗೆ | 1ನೇ ಟ್ರಿಬಲ್ | 2ನೇ ಟ್ರಿಬಲ್ |
|---|---|---|
| 3,4,5,6,7 | 2,3,4 | 5,6,7 |

ಭಾನುವಾರ, ಜೂನ್ 15, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 165 | ಪುಟ 24
www.prajavani.net prajavani.net prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

## ಜಿಮ್ನಾಸ್ಟ್ ಪ್ರಣತಿಗೆ ಕಂಚು



ಭಾರತದ ಪ್ರಣತಿ ನಾಯಕ ಅವರು ದಕ್ಷಿಣ ಕೊರಿಯಾದಲ್ಲಿ ಶನಿವಾರ ನಡೆದ 12ನೇ ಸೀನಿಯರ್ ಮಹಿಳಾ ಏಷ್ಯನ್ ಆರ್ಟಿಸ್ಟಿಕ್ ಜಿಮ್ನಾಸ್ಟಿಕ್ಸ್‌ನ ವಾಲ್ಟ್ ಫೈನಲ್‌ನಲ್ಲಿ ಕಂಚು ಗೆದ್ದರು.

## ಲಡಾಖ್ ಪ್ರವಾಸ



ಲಡಾಖ್‌ಗೆ ಶನಿವಾರದಿಂದ ನಾಲ್ಕು ದಿನಗಳ ಪ್ರವಾಸ ಆರಂಭಿಸಿದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್

₹25 ಲಕ್ಷ ಮಧ್ಯಂತರ ಪರಿಹಾರ 7 | ಕನ್ನಡದಲ್ಲಿ ಉತ್ತರ: ಉಪನ್ಯಾಸಕನ ಕೆಲಸಕ್ಕೆ ಕುತ್ತು 4



# ಅಪಘಾತ ಕಾರಣ ಪತ್ತೆಗೆ ಸಮಿತಿ

## ವಿಮಾನ ದುರಂತ: 270 ತಲುಪಿದ ಸಾವಿನ ಸಂಖ್ಯೆ • ತನಿಖೆ ಇನ್ನಷ್ಟು ಚುರುಕು

ಅಹಮದಾಬಾದ್/ನವದೆಹಲಿ (ಪಿಟಿಐ): ಏರ್ ಇಂಡಿಯಾ ವಿಮಾನ ದುರಂತದ ಕಾರಣ ಪತ್ತೆಹಚ್ಚಲು ಕೇಂದ್ರ ಸರ್ಕಾರ ಉನ್ನತ ಮಟ್ಟದ ಸಮಿತಿಯನ್ನು ಶನಿವಾರ ರಚಿಸಿದೆ. ಈ ಮಧ್ಯೆ, ಅವಘಡದಲ್ಲಿ ಮೃತಪಟ್ಟವರ ಸಂಖ್ಯೆ 270ಕ್ಕೆ ಏರಿಕೆಯಾಗಿದೆ.

‘ಅಪಘಾತಕ್ಕೆ ಕಾರಣವಾದ ಅಂಶ ಗಳನ್ನು ಪರಿಶೀಲಿಸಲು ಮತ್ತು ಭವಿಷ್ಯದಲ್ಲಿ ಇಂತಹ ಘಟನೆ ಮರುಕಳಿಸುವುದನ್ನು ತಡೆಯಲು ಬೇಕಾದ ಪ್ರಮಾಣಿತ ಕಾರ್ಯಾಚರಣೆ ವಿಧಾನ (ಎಸ್‌ಒಪಿ) ಸಿದ್ಧಪಡಿಸಲು ಕೇಂದ್ರ ಗೃಹ ಕಾರ್ಯದರ್ಶಿ ಗೋವಿಂದ ಮೋಹನ್ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ’ ಎಂದು ನಾಗರಿಕ ವಿಮಾನಯಾನ ಸಚಿವ ರಾಮಮೋಹನ್ ನಾಯ್ಡು ಅವರು ನವದೆಹಲಿಯಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಈ ಸಮಿತಿಯು ಘಟನೆ ಬಗ್ಗೆ ತನಿಖೆ ನಡೆಸುತ್ತಿರುವ ಇತರ ಸಂಸ್ಥೆಗಳಿಗೆ ಪರ್ಯಾಯವಾಗಿ ಕೆಲಸ ಮಾಡುವುದಿಲ್ಲ. ಎಸ್‌ಒಪಿ ರೂಪಿಸುವತ್ತ ಗಮನಹರಿಸ ಲಿದ್ದು, ಮೂರು ತಿಂಗಳಲ್ಲಿ ವರದಿ ಸಲ್ಲಿಸಲಿದೆ’ ಎಂದು ಹೇಳಿದರು.

‘ಅಪಘಾತಕ್ಕೀಡಾದ ವಿಮಾನದ ಬ್ಲ್ಯಾಕ್ ಬಾಕ್ಸ್ ಶುಕ್ರವಾರ ಸಂಜೆ ಪತ್ತೆಯಾಗಿದ್ದು, ಅದರಲ್ಲಿನ ದತ್ತಾಂಶಗಳ ಪರಿಶೀಲನೆಯು ದುರಂತಕ್ಕೆ ಕೆಲವೇ ಕ್ಷಣಗಳ ಮೊದಲು ಏನಾಯಿತು ಎಂಬ ಕುರಿತು ಮಾಹಿತಿ ಒದಗಿಸಲಿದೆ’ ಎಂದರು.

ಸರ್ದಾರ್ ವಲ್ಲಭಭಾಯಿ ಪಟೇಲ್ ವಿಮಾನ ನಿಲ್ದಾಣದಿಂದ ಲಂಡನ್‌ಗೆ ಹೊರಟಿದ್ದ ಏರ್ ಇಂಡಿಯಾ ವಿಮಾನ ಗುರುವಾರ ಮಧ್ಯಾಹ್ನ ಮೇಘಾನಿನಗರದ ಬಿ.ಜೆ ವೈದ್ಯಕೀಯ ಕಾಲೇಜು ಹಾಸ್ಟೆಲ್ ಕಟ್ಟಡಕ್ಕೆ ಅಪ್ಪಳಿಸಿತ್ತು. ವಿಮಾನದಲ್ಲಿದ್ದ 242 ಮಂದಿಯಲ್ಲಿ ಒಬ್ಬರು ಮಾತ್ರ ಬದುಕುಳಿದಿದ್ದರು.

7

### ತನಿಖೆಯಲ್ಲಿ ಯಾರು ಭಾಗಿ?

ವಿಮಾನ ಅಪಘಾತ ತನಿಖಾ ಸಂಸ್ಥೆ (ಎಎಐಬಿ), ನಾಗರಿಕ ವಿಮಾನಯಾನ ನಿರ್ದೇಶನಾಲಯ (ಡಿಜಿಸಿಎ), ಅಹಮದಾಬಾದ್ ಪೊಲೀಸರ ಅಪರಾಧ ವಿಭಾಗ ಮತ್ತು ಸ್ಥಳೀಯ ಪೊಲೀಸರು ಸೇರಿದಂತೆ ಇತರ ಸಂಸ್ಥೆಗಳು ತನಿಖೆಯಲ್ಲಿ ಭಾಗಿಯಾಗಿವೆ. ಎನ್‌ಐಎ ಅಧಿಕಾರಿಗಳೂ ಶುಕ್ರವಾರ ಸ್ಥಳಕ್ಕೆ ಭೇಟಿ ನೀಡಿದ್ದರು ಎಂದು ಮೂಲಗಳು ತಿಳಿಸಿವೆ. ಎಎಐಬಿ, ದುರಂತದ ದಿನವೇ ಪ್ರಾಥಮಿಕ ತನಿಖೆ ಆರಂಭಿಸಿತ್ತು. ಸಂಸ್ಥೆಯ ನಿರ್ದೇಶಕರ ನೇತೃತ್ವದ ತಂಡ ಸ್ಥಳಕ್ಕೆ ಭೇಟಿ ನೀಡಿತ್ತು.

### ಸಮಿತಿಯಲ್ಲಿ ಇರುವವರು...

ನಾಗರಿಕ ವಿಮಾನಯಾನ ಸಚಿವಾಲಯದ ಕಾರ್ಯದರ್ಶಿ, ಗೃಹ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ, ಅಹಮದಾಬಾದ್ ಪೊಲೀಸ್ ಕಮಿಷನರ್, ಭಾರತೀಯ ವಾಯುಪಡೆಯ ತಪಾಸಣಾ ಮತ್ತು ಸುರಕ್ಷತೆಯ ಮಹಾನಿರ್ದೇಶಕರು, ಗುಪ್ತಚರ ನಿರ್ದೇಶನಾಲಯದ ವಿಶೇಷ ನಿರ್ದೇಶಕರು, ವಿಧಿ ವಿಜ್ಞಾನ ಸೇವೆಗಳ ನಿರ್ದೇಶನಾಲಯದ ನಿರ್ದೇಶಕರು ಅಲ್ಲದೆ ಗುಜರಾತ್ ಗೃಹ ಇಲಾಖೆ, ಗುಜರಾತ್ ವಿಪತ್ತು ನಿರ್ವಹಣೆ ಪ್ರಾಧಿಕಾರ, ನಾಗರಿಕ ವಿಮಾನಯಾನ ಭದ್ರತಾ ಸಂಸ್ಥೆ (ಬಿಸಿಎಎಸ್) ಹಾಗೂ ಡಿಜಿಸಿಎ ಪ್ರತಿನಿಧಿಗಳು ಉನ್ನತ ಮಟ್ಟದ ಸಮಿತಿಯ ಭಾಗವಾಗಿದ್ದಾರೆ.



ಅಹಮದಾಬಾದ್‌ನಲ್ಲಿ ಅಪಘಾತಕ್ಕೀಡಾದ ಏರ್ ಇಂಡಿಯಾ ವಿಮಾನದ ಅವಶೇಷಗಳನ್ನು ಶನಿವಾರ ಕ್ರೇನ್ ಮೂಲಕ ತೆರವುಗೊಳಿಸಲಾಯಿತು —ಪಿಟಿಐ ಚಿತ್ರ

### ದಿನದ ಬೆಳವಣಿಗೆ

- ವಿಮಾನ ದುರಂತದಲ್ಲಿ ಮೃತಪಟ್ಟ 11 ಮಂದಿಯ ಡಿಎನ್‌ಎ ಇದುವರೆಗೆ ಸಂಬಂಧಿಕರೊಂದಿಗೆ ಹೊಂದಾಣಿಕೆಯಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ
- ಅಪಘಾತದಲ್ಲಿ ಹಾನಿಗೊಳಗಾದ ಬಿ.ಜೆ ವೈದ್ಯಕೀಯ ಕಾಲೇಜಿನ ಹಾಸ್ಟೆಲ್ ಕಟ್ಟಡವನ್ನು ಎಐಐಬಿ ತನಿಖಾಧಿಕಾರಿಗಳು ಪರಿಶೀಲಿಸಲಿರುವುದರಿಂದ ಅಲ್ಲಿನ ವಿದ್ಯಾರ್ಥಿಗಳನ್ನು ಸ್ಥಳಾಂತರಿಸಲಾಗಿದೆ
- ದುರಂತದಲ್ಲಿ ಬಲಿಯಾದ ತನ್ನ ದೇಶದ ಪ್ರಜೆಗಳ ಕುಟುಂಬದ ಸದಸ್ಯರಿಗೆ ನೆರವು ನೀಡಲು ಬ್ರಿಟನ್ ಸರ್ಕಾರ, ಅಹಮದಾಬಾದ್ ವಿಮಾನ ನಿಲ್ದಾಣದ ಸಮೀಪದ ಹೋಟೆಲ್‌ನಲ್ಲಿ ಸಹಾಯ ಕೇಂದ್ರ ಆರಂಭಿಸಿದೆ.
- ತನಿಖೆ ನಡೆಸುತ್ತಿರುವ ವಿವಿಧ ಸಂಸ್ಥೆಗಳಿಗೆ ನೆರವಾಗಲು ದುರಂತ ನಡೆದ ಸ್ಥಳದಲ್ಲಿ ಎನ್‌ಎಸ್‌ಜಿ ಕಮಾಂಡೊಗಳನ್ನು ನಿಯೋಜಿಸಲಾಗಿದೆ
- ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಅಹಮದಾಬಾದ್‌ನ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ ಗಾಯಾಳುಗಳನ್ನು ಭೇಟಿಯಾದರು



ವಿಮಾನ ದುರಂತದಲ್ಲಿ ಮೃತಪಟ್ಟ ಸಂತ್ರಸ್ತರ ನೆನಪಿನಲ್ಲಿ ಅಮೃತಸರದಲ್ಲಿ ಬೆಳಗಿದ ಮೊಂಬತ್ತಿ —ಪಿಟಿಐ ಚಿತ್ರ

## ಹೊಸ ವಿನ್ಯಾಸ, ಅದೇ ವಿಶ್ವಾಸ

ಪ್ರಿಯ ಓದುಗರೇ,

ಬದಲಾವಣೆಯೊಂದೇ ಶಾಶ್ವತ ಎಂಬ ಸಿದ್ಧಾಂತದಲ್ಲಿ ನಂಬಿಕೆ ಇಟ್ಟಿರುವ ಪತ್ರಿಕೆ ‘ಪ್ರಜಾವಾಣಿ’. ಚಲನಶೀಲತೆ ಮತ್ತು ಜೀವಂತಿಕೆ ಬದಲಾವಣೆಯ ಪ್ರಮುಖ ಗುಣಲಕ್ಷಣಗಳಾಗಿವೆ. ಕಾಲದ ಅಗತ್ಯಗಳಿಗೆ ಸ್ಪಂದಿಸದೆ ಹೋದರೆ ಎಂಥ ಸೃಜನಶೀಲತೆ ಕೂಡ ಜಡಗೊಳ್ಳುತ್ತದೆ. ‘ಪ್ರಜಾವಾಣಿ’ಯು ನಿರಂತರವಾಗಿ ತನ್ನನ್ನು ತಾನು ಬದಲಾವಣೆಯ ಅಗ್ನಿದಿವ್ಯಕ್ಕೆ ಒಪ್ಪಿಸಿಕೊಳ್ಳುತ್ತಲೇ ಬಂದಿದೆ. ಆಯಾ ಕಾಲದ ಅಗತ್ಯಗಳನ್ನು ಮನಗಂಡು ತನ್ನನ್ನು ತಾನು ನವೀಕರಿಸಿಕೊಳ್ಳಲು ಪ್ರಯತ್ನಿಸಿದೆ. ಈ ನಿಟ್ಟಿನಲ್ಲಿ, ಏಳೂವರೆ ದಶಕಗಳ ತನ್ನ ಚರಿತ್ರೆಯ ಹಾದಿಯಲ್ಲಿ ಪತ್ರಿಕೆ ನಡೆಸಿದ ಪ್ರಯೋಗಗಳು ಕನ್ನಡ ಪತ್ರಿಕಾರಂಗದಲ್ಲಿ ಹೊಸ ಮಾದರಿಗಳನ್ನು ಸೃಷ್ಟಿಸಿವೆ. ‘ಪ್ರಜಾವಾಣಿ’ಯು ತನ್ನ ವಿನ್ಯಾಸವನ್ನು ಬದಲಾಯಿಸಿಕೊಂಡು ಸರಿಯಾಗಿ ಹತ್ತು ವರ್ಷಗಳು ತುಂಬಿರುವ ಈ ಹೊತ್ತಿನಲ್ಲಿ ಮತ್ತೆ ಹೊಸರೂಪ ಪಡೆದಿದೆ.

ವಿನ್ಯಾಸದಲ್ಲಿ ಬದಲಾವಣೆ ಆಗಿದ್ದರೂ ಅಭಿವ್ಯಕ್ತಿಗೆ ಸಂಬಂಧಿಸಿದಂತೆ ‘ಪ್ರಜಾವಾಣಿ’ ಅನುಸರಿಸಿಕೊಂಡು ಬಂದಿರುವ ಯಾವ ಮೌಲ್ಯವನ್ನೂ ಬಿಟ್ಟುಕೊಟ್ಟಿಲ್ಲ. ಸುದ್ದಿ, ಪ್ರಚಲಿತ ವಿದ್ಯಮಾನಗಳ ವಿಶ್ಲೇಷಣೆ ಮತ್ತು ಮಾಹಿತಿ ನೀಡುವುದರಲ್ಲಿ ಪತ್ರಿಕೆ ಸದಾ ಕಾಪಾಡಿಕೊಂಡು ಬಂದಿರುವ ವಿಶ್ವಾಸಾರ್ಹತೆಯಲ್ಲಿ ರಾಜಿಯಿಲ್ಲ. ಸತ್ಯ ಹೇಳುವುದರಲ್ಲಿ ಯಾವುದೇ ಹಿಂಜರಿಕೆಯೂ ಇಲ್ಲ. ಇದನ್ನು ಖಾತರಿಪಡಿಸುವ ನಿಖರತೆ, ಜನಮುಖಿ ಮಾಧ್ಯಮಧರ್ಮ ಪಾಲನೆಗೆ ‘ಪ್ರಜಾವಾಣಿ’ ತನ್ನನ್ನು ತಾನೀಗ ಮರುಸಮರ್ಪಿಸಿಕೊಂಡಿದೆ.

**ಹೊಸ ಬದಲಾವಣೆಗಳ ಬಗ್ಗೆ ನಿಮ್ಮ ಅನಿಸಿಕೆಗಳಿಗೆ ಸ್ವಾಗತ.**

—ಕಾರ್ಯನಿರ್ವಾಹಕ ಸಂಪಾದಕ

editor.prajavani@prajavani.co.in

# ನಿಖಿಲ್ ರಾಜ್ಯಕ್ಕೆ ಪ್ರಥಮ

## ನೀಟ್: ಮೊದಲ ನೂರು ರ‍್ಯಾಂಕ್‌ಗಳಲ್ಲಿ ರಾಜ್ಯದ 6 ಮಂದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ನಡೆಸಿದ್ದ ರಾಷ್ಟ್ರೀಯ ಪ್ರವೇಶ ಮತ್ತು ಅರ್ಹತಾ ಪರೀಕ್ಷೆ (ನೀಟ್)– 2025ರ ಫಲಿತಾಂಶವು ಶನಿವಾರ ಪ್ರಕಟವಾಗಿದ್ದು ವಿಜಯಪುರದ ನಿಖಿಲ್ ಸೊನ್ನದ ಅವರು ಅಖಿಲ ಭಾರತ ರ‍್ಯಾಂಕ್‌ನಲ್ಲಿ 17ನೇ ಸ್ಥಾನ ಮತ್ತು ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾರೆ.



ನಿಖಿಲ್ ಸೊನ್ನದ

ಅಖಿಲ ಭಾರತ ಮಟ್ಟದ ಮೊದಲ 50 ರ‍್ಯಾಂಕ್‌ಗಳಲ್ಲಿ ನಿಖಿಲ್ ಸೊನ್ನದ ಸೇರಿ ರಾಜ್ಯದ ರುಚಿರ್ ಗುಪ್ತಾ (22ನೇ ರ‍್ಯಾಂಕ್), ತೇಜಸ್ ಶೈಲೇಶ್ ಘೋಟ್ಗಲ್ಕರ್ (38) ಮತ್ತು ಪ್ರಂಶು ಜಹಗೀರದಾರ್ (42) ಸ್ಥಾನ ಪಡೆದಿದ್ದಾರೆ. ಮೊದಲ ನೂರು ರ‍್ಯಾಂಕ್‌ಗಳಲ್ಲಿ ಹರಿಣಿ ಶ್ರೀರಾಮ್ (72) ಮತ್ತು ದಿಗಂತ್ ಎಸ್. (80) ಸೇರಿ ರಾಜ್ಯದ ಆರು ಅಭ್ಯರ್ಥಿಗಳು ಸ್ಥಾನ ಪಡೆದಿದ್ದಾರೆ. ಮೊದಲ 20 ರ‍್ಯಾಂಕ್ ಪಡೆದ ಬಾಲಕಿಯರ ಪ್ರತ್ಯೇಕ ಪಟ್ಟಿ ಪ್ರಕಟಿಸಿದ್ದು, ಅದರಲ್ಲಿ ರಾಜ್ಯದ ಹರಿಣಿ ಶ್ರೀರಾಮ್ (9) ಮತ್ತು ನಿಧಿ ಕೆ.ಜಿ. (11) ಸ್ಥಾನ ಪಡೆದಿದ್ದಾರೆ. ಇನ್ನು ಮೊದಲ 20 ರ‍್ಯಾಂಕ್ ಪಡೆದ ಬಾಲಕರ ಪಟ್ಟಿಯಲ್ಲಿ ನಿಖಿಲ್ ಸೊನ್ನದ 15ನೇ ರ‍್ಯಾಂಕ್ ಪಡೆದಿದ್ದಾರೆ.

ಪರಿಶಿಷ್ಟ ಜಾತಿಗಳ ಅಭ್ಯರ್ಥಿಗಳಲ್ಲಿ ಮೊದಲ 10 ರ‍್ಯಾಂಕ್ ಪಡೆದವರಲ್ಲಿ ರಾಜ್ಯದ ಕೆ.ಪ್ರಜ್ವಲ್ ಸಿಂಗ್ ರಾಥೋಡ್ (ಅಖಿಲ ಭಾರತ ರ‍್ಯಾಂಕ್ 263) ಸ್ಥಾನ ಪಡೆದಿದ್ದಾರೆ.

ಅಖಿಲ ಭಾರತ ಮಟ್ಟದಲ್ಲಿ 17ನೇ ರ‍್ಯಾಂಕ್ ಪಡೆದಿರುವ ನಿಖಿಲ್ ಸೊನ್ನದ ಅವರು 720 ಅಂಕಗಳಿಗೆ 670 ಅಂಕ ಗಳಿಸಿದ್ದಾರೆ.

4

### ಮಹೇಶ್ ಕುಮಾರ್ ದೇಶಕ್ಕೆ ಮೊದಲು

ನವದೆಹಲಿ (ಪಿಟಿಐ): ನೀಟ್–ಯುಜಿಯಲ್ಲಿ ರಾಜಸ್ಥಾನದ ಮಹೇಶ್ ಕುಮಾರ್ ಪ್ರಥಮ ಮತ್ತು ಮಧ್ಯಪ್ರದೇಶದ ಉತ್ಕರ್ಷ್ ಅವಧಿಯಾ ಅವರು ದ್ವಿತೀಯ ರ‍್ಯಾಂಕ್ ಗಳಿಸಿದ್ದಾರೆ.

ಮಹಾರಾಷ್ಟ್ರದ ಕೃಶಾಂಗ್ ಜೋಷಿ ಮತ್ತು ದೆಹಲಿಯ ಮೃನಾಲ್ ಕಿಶೋರ್ ಝಾ ಅವರು ಕ್ರಮವಾಗಿ ಮೂರನೇ ಹಾಗೂ ನಾಲ್ಕನೇ ಸ್ಥಾನಗಳಿಸಿದ್ದಾರೆ. ಮಹಿಳಾ ಅಭ್ಯರ್ಥಿಗಳ ಪೈಕಿ ದೆಹಲಿಯ ಅವಿಕಾ ಅಗರ್ವಾಲ್ ಪ್ರಥಮ ಸ್ಥಾನ ಗಳಿಸಿದ್ದು, ರಾಷ್ಟ್ರೀಯ ಮಟ್ಟದಲ್ಲಿ ಐದನೇ ರ‍್ಯಾಂಕ್ ಪಡೆದುಕೊಂಡಿದ್ದಾರೆ.

ಉತ್ತರ ಪ್ರದೇಶದ (1.70 ಲಕ್ಷಕ್ಕೂ ಅಧಿಕ) ಅಭ್ಯರ್ಥಿಗಳೇ ಹೆಚ್ಚಿನ ಸಂಖ್ಯೆಯಲ್ಲಿ ಉತ್ತೀರ್ಣರಾಗಿದ್ದಾರೆ. ನಂತರದಲ್ಲಿ ಮಹಾರಾಷ್ಟ್ರ (1.25 ಲಕ್ಷಕ್ಕೂ ಅಧಿಕ) ಮತ್ತು ರಾಜಸ್ಥಾನದ (1.19 ಲಕ್ಷಕ್ಕೂ ಅಧಿಕ) ಅಭ್ಯರ್ಥಿಗಳು ಉತ್ತೀರ್ಣರಾಗಿದ್ದಾರೆ.

ಪ್ರಶ್ನೆ ಪತ್ರಿಕೆ ಸೋರಿಕೆ ಸೇರಿದಂತೆ ಕಳೆದ ವರ್ಷ ನೀಟ್ ಪರೀಕ್ಷೆಯಲ್ಲಿ ಹಲವು ಅಕ್ರಮಗಳು ನಡೆದಿದ್ದವು. ಈ ಕಾರಣದಿಂದ ನೀಟ್–ಯುಜಿ ಪರೀಕ್ಷೆಯನ್ನು ನಿಲ್ಲಿಸಲಾಗಿತ್ತು. ಈ ಎಲ್ಲದರ ಕುರಿತು ಸಿಬಿಐ ತನಿಖೆ ನಡೆಸುತ್ತಿದೆ.



# ಶಿಥಿಲಾವಸ್ಥೆಯಲ್ಲಿದ್ದ ಶಾಲೆಗೆ ಹೊಸ ರೂಪ



ಹಳೆಯ ವಿದ್ಯಾರ್ಥಿಗಳ ನೆರವಿನಿಂದ ಹೊಸ ರೂಪ ಪಡೆದಿರುವ ಶಿವಮೊಗ್ಗ ತಾಲ್ಲೂಕು ಹರಮಘಟ್ಟದ ಸರ್ಕಾರಿ ಶಾಲೆಯ ನೋಟ

• ವೆಂಕಟೇಶ ಜಿ.ಎಚ್.

ಶಿವಮೊಗ್ಗ: ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆಯ ಮನವಿಗೆ ಸ್ಪಂದಿಸಿದ ತಾಲ್ಲೂಕಿನ ಹರಮಘಟ್ಟ ಗ್ರಾಮದ ಸರ್ಕಾರಿ ಶಾಲೆಯ ಹಳೆಯ ವಿದ್ಯಾರ್ಥಿಗಳು, ಶಿಥಿಲಾವಸ್ಥೆಯಲ್ಲಿದ್ದ ಸರ್ಕಾರಿ ಶಾಲೆಯ ಕಟ್ಟಡವನ್ನು ₹ 30 ಲಕ್ಷ ವೆಚ್ಚದಲ್ಲಿ ನವೀಕರಿಸಿದ್ದಾರೆ.

ಹರಮಘಟ್ಟದ ಸರ್ಕಾರಿ ಶಾಲೆ ಕಟ್ಟಡ 1952ರಲ್ಲಿ ನಿರ್ಮಾಣವಾಗಿದೆ. 74 ವರ್ಷ ಹಳೆಯ ಕಟ್ಟಡದ ಹೆಂಚಿನ ಚಾವಣಿ ಸೋರುತ್ತಿತ್ತು, ಕಿಟಕಿ– ಬಾಗಿಲು ಮುರಿದಿದ್ದವು. ಮಣ್ಣಿನ ಗೋಡೆ ಕಾಣುತ್ತಿತ್ತು. ನೆಲಹಾಸು ಕಿತ್ತು ಹೋಗಿ ಗುಂಡಿ ಬಿದ್ದಿತ್ತು. ವಿದ್ಯಾರ್ಥಿಗಳು ಕೂರಲೂ ಆಗದ ಪರಿಸ್ಥಿತಿ ಇತ್ತು.

ಇದೇ ವೇಳೆ, ‘ನಮ್ಮ ಶಾಲೆ ನಮ್ಮ ಜವಾಬ್ದಾರಿ’ ಯೋಜನೆಯಡಿ ಶಾಲೆಯ ಅಭಿವೃದ್ಧಿಗೆ ಹಳೆಯ ವಿದ್ಯಾರ್ಥಿಗಳ ನೆರವು ಪಡೆಯುವಂತೆ ಇಲಾಖೆಯಿಂದ ಸುತ್ತೋಲೆ ಬಂದಿದೆ.

ಆಗ ಶಾಲೆಯ ಮುಖ್ಯಶಿಕ್ಷಕಿ ಕೆ.ಎಸ್. ಗಾಯತ್ರಿ, ಗ್ರಾಮದ ಮುಖಂಡ ಮಂಜಪ್ಪ ಅವರ ಸಹಕಾರದಿಂದ ಶಾಲೆಯ ಹಳೆಯ ವಿದ್ಯಾರ್ಥಿಗಳನ್ನು ಸಂಪರ್ಕಿಸಿ ಶಾಲೆಯ ಅಭಿವೃದ್ಧಿಗೆ ಕೈಜೋಡಿಸುವಂತೆ ಕೋರಿದ್ದಾರೆ.

6

### ಚಿನಕುರುಳಿ ಪ್ರಕಾಶ್ ಶೆಟ್ಟಿ




### ಇಸ್ರೇಲ್ ಸೇನೆ ಕ್ಷಮೆಯಾಚನೆ

ಜೆರುಸಲೇಂ (ಪಿಟಿಐ): ಜಮ್ಮು ಮತ್ತು ಕಾಶ್ಮೀರವನ್ನು ಪಾಕಿಸ್ತಾನದ ಭಾಗವಾಗಿ ತೋರಿಸಿ ತಪ್ಪಾದ ನಕ್ಷೆಯನ್ನು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದ ಇಸ್ರೇಲ್ ಸೇನೆಯು ಶನಿವಾರ ಭಾರತೀಯರ ಕ್ಷಮೆ ಯಾಚಿಸಿದೆ.

ಇರಾನ್ ವಿರುದ್ಧದ ಕಾರ್ಯಾಚರಣೆ ಭಾಗವಾಗಿ ಶುಕ್ರವಾರ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದ ಇಸ್ರೇಲ್ ರಕ್ಷಣಾ ಪಡೆಯು (ಐಡಿಎಫ್), ಅದರ ಜತೆಗೆ ಹಂಚಿಕೊಂಡಿದ್ದ ನಕ್ಷೆಯಲ್ಲಿ ಜಮ್ಮು ಮತ್ತು ಕಾಶ್ಮೀರ ಪಾಕಿಸ್ತಾನಕ್ಕೆ ಸೇರಿದೆ ಎಂದು ತೋರಿಸಿತ್ತು. ಇದಕ್ಕೆ ಭಾರತದ ಸಾಮಾಜಿಕ ಜಾಲತಾಣ ಬಳಕೆದಾರರಿಂದ ಆಕ್ಷೇಪ ವ್ಯಕ್ತವಾಗಿತ್ತು.

ಸೂರ್ಯೋದಯ: 5:53 ಸೂರ್ಯಾಸ್ತ : 6:46 ಚಂದ್ರೋದಯ: ರಾ. 9:34 ಚಂದ್ರಾಸ್ತ: ಬೆ. 8:18 | ಶನಿವಾರದ ಉಷ್ಣಾಂಶ : ಗರಿಷ್ಠ 28° ಕನಿಷ್ಠ 21°
ಭಾನುವಾರದ ಉಷ್ಣಾಂಶ 29° ಗರಿಷ್ಠ 21° ಕನಿಷ್ಠ | ಸೋಮವಾರ 30° - 20° | ಮಂಗಳವಾರ 30° - 20° | ಬುಧವಾರ 30° - 20°
ಭಾನುವಾರ • ಜೂನ್ 15, 2025
ಪ್ರಜಾವಾಣಿ

**ಹವಾಮಾನ ಮುನ್ಸೂಚನೆ:** ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ಲಘುವಾಗಿ ಮಳೆಯಾಗುವ ಸಾಧ್ಯತೆ ಇದೆ



'ಅಮರ ಮಧುರ ಪ್ರೇಮ' ನಾಟಕ ಪ್ರದರ್ಶಿಸಲಾಯಿತು –ಪ್ರಜಾವಾಣಿ ಚಿತ್ರ

## ಹಾಡು–ಕುಣಿತ, ರೊಟ್ಟಿ ಊಟದ ಸವಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಉತ್ತರ ಕರ್ನಾಟಕದ ಹಾಡು, ಕುಣಿತ, ನಾಟಕವನ್ನು ಒಂದೇ ಸೂರಿನಡಿ ಕಣ್ತುಂಬಿಕೊಂಡು ಸಂಭ್ರಮಿಸಿದ ನಗರದ ಜನರು, ಆ ಭಾಗದ ವಿಶೇಷ ರೊಟ್ಟಿ ಊಟವನ್ನು ಸವಿದರು.

ಹೋಟೆಲ್ ನಳಪಾಕ, ವಂದೇ ಕರ್ನಾಟಕ ಹಾಗೂ ಹುಬ್ಬಳ್ಳಿಯ ಗುರು ಇನ್‌ಸ್ಟಿಟ್ಯೂಟ್ ಜಂಟಿಯಾಗಿ ಕೋಣನಕುಂಟೆಯ ಪ್ರೆಸ್ಟೀಜ್ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್‌ನಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಉತ್ತರೋತ್ತಮ ಉತ್ಸವ'ವು ಉತ್ತರ ಕರ್ನಾಟಕ ಭಾಗದ ಸಾಂಸ್ಕೃತಿಕ ಸೊಗಡನ್ನು ಪರಿಚಯಿಸಿತು.

ಈ ಸಾಂಸ್ಕೃತಿಕ ಉತ್ಸವದಲ್ಲಿ ಐಶ್ವರ್ಯ ದೇಸಾಯಿ ಅವರು ಹಿಂದೂಸ್ಥಾನಿ ಗಾಯನವನ್ನು ಪ್ರಸ್ತುತಪಡಿಸಿದರು. ಗಾಯಕಿ ಸಂಗೀತ ಕಟ್ಟಿ ಕುಲಕರ್ಣಿ ಅವರು ನಡೆಸಿಕೊಟ್ಟ ಸಂಗೀತ ವೈವಿಧ್ಯ ಕಾರ್ಯಕ್ರಮವು ನೆರೆದಿದ್ದವರನ್ನು ರಂಜಿಸಿತು. ಗುರುಬಲ ಎಂಟರ್‌ಟೈನರ್ಸ್ ವತಿಯಿಂದ 'ಅಮರ ಮಧುರ ಪ್ರೇಮ' ನಾಟಕವನ್ನು ಪ್ರದರ್ಶಿಸಲಾಯಿತು.

ಹುಬ್ಬಳ್ಳಿಯ ಗುರು ಇನ್‌ಸ್ಟಿಟ್ಯೂಟ್ ವತಿಯಿಂದ ಪ್ರಸ್ತುತಪಡಿಸಿದ 'ರಾಶಿಚಕ್ರ' ಏಕವ್ಯಕ್ತಿ ಹಾಸ್ಯ ರಂಗಪ್ರಯೋಗವು ಪ್ರೇಕ್ಷಕರು ನಗೆಗಡಲಲ್ಲಿ ತೇಲುವಂತೆ ಮಾಡಿತು. ಕಲಾವಿದೆ ಸ್ಫೂರ್ತಿ ಜೋಶಿ ಅವರು ಕಥಕ್ ನೃತ್ಯ ಪ್ರಸ್ತುತಪಡಿಸಿದರು.

ಇದೇ ಸಮಾರಂಭದಲ್ಲಿ ರಂಗಕರ್ಮಿ ಯಶವಂತ ಸರದೇಶಪಾಂಡೆ ಅವರನ್ನು ಗೌರವಿಸಲಾಯಿತು. ರಂಗಭೂಮಿ ಕ್ಷೇತ್ರದ ಪ್ರಮುಖರು ಭಾಗವಹಿಸಿದ್ದರು.

ರಾಜಾಜಿನಗರದ ನಳಪಾಕ ಹೋಟೆಲ್ ವತಿಯಿಂದ ಉತ್ತರ ಕರ್ನಾಟಕದ ರೊಟ್ಟಿ ಊಟ ಏರ್ಪಾಡು ಮಾಡಲಾಗಿತ್ತು. ಕಲಾಸಕ್ತರು ಬಿಸಿ ರೊಟ್ಟಿ, ಪಲ್ಯ, ಖಡಕ್ ರೊಟ್ಟಿ, ಚಟ್ನಿಯನ್ನು ಒಳಗೊಂಡ ಊಟವನ್ನು ಸವಿದರು.

# ಪ್ರಶ್ನೆಯಲ್ಲಿ ತೇಜಸ್ವಿಸೂರ್ಯ ನಂ.1

### ಸಂಸದರು, ಶಾಸಕರ ಬಗ್ಗೆ ಸಿವಿಕ್‌ನಿಂದ 'ನಮ್ಮ ನೇತಾ ನಮ್ಮ ರಿವ್ಯೂ' ಕಾರ್ಡ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಿಂದ ಆಯ್ಕೆಯಾಗಿರುವ ನಾಲ್ವರು ಸಂಸದರ ಒಂದು ವರ್ಷದ ಸಾಧನೆ, 32 ಶಾಸಕರ ಎರಡು ವರ್ಷದ ಸಾಧನೆ ಏನು ಎಂಬುದರ ಬಗ್ಗೆ 'ಸಿವಿಕ್' ಸಂಸ್ಥೆಯು ನಾಗರಿಕ ವರದಿಯನ್ನು ಶನಿವಾರ ಬಿಡುಗಡೆ ಮಾಡಿದೆ.

ಸಂಸತ್ ಅಧಿವೇಶನದಲ್ಲಿ ಭಾಗವಹಿಸುವುದರಲ್ಲಿ ಪಿ.ಸಿ. ಮೋಹನ್ ಮೊದಲ ಸ್ಥಾನದಲ್ಲಿದ್ದರೆ, ಪ್ರಶ್ನೆ ಕೇಳುವುದರಲ್ಲಿ ತೇಜಸ್ವಿ ಸೂರ್ಯ ಮೊದಲ ಸ್ಥಾನ ಪಡೆದಿದ್ದಾರೆ. ಸಂಸದರ ನಿಧಿ ಬಳಕೆಯಲ್ಲಿ ಡಾ. ಸಿ.ಎನ್. ಮಂಜುನಾಥ್ ಮುಂಚೂಣಿಯಲ್ಲಿದ್ದಾರೆ ಎಂದು ವರದಿ ತಿಳಿಸಿದೆ.

ಕಲಾಪದಲ್ಲಿ ಸಂಸದ ಪಿ.ಸಿ. ಮೋಹನ್ ಅವರು ಶೇ 98.51, ಸಿ.ಎನ್. ಮಂಜುನಾಥ್ ಶೇ 94ರಷ್ಟು ಭಾಗವಹಿಸಿದ್ದಾರೆ. ರಾಷ್ಟ್ರೀಯ ಸರಾಸರಿಯು ಶೇ 87 ಆಗಿದ್ದು, ತೇಜಸ್ವಿ ಸೂರ್ಯ ಶೇ 77.6ರಷ್ಟು ಹಾಜರಾತಿ ಹೊಂದಿದ್ದಾರೆ. ಸಚಿವೆ ಶೋಭಾ ಕರಂದ್ಲಾಜೆ ಅವರ ಹಾಜರಾತಿ ವಿವರಗಳನ್ನು ವರದಿಯಲ್ಲಿ ನೀಡಿಲ್ಲ.

**ಮುಖ್ಯಾಂಶಗಳು**

- ಅಧಿವೇಶನದಲ್ಲಿ ಭಾಗವಹಿಸುವಿಕೆ: ಪಿ.ಸಿ. ಮೋಹನ್ ಪ್ರಥಮ
- ಸಂಸದರ ನಿಧಿ ಬಳಕೆ: ಡಾ. ಸಿ.ಎನ್. ಮಂಜುನಾಥ್ ಮುಂದು

ತೇಜಸ್ವಿ ಸೂರ್ಯ 84 ಪ್ರಶ್ನೆಗಳನ್ನು ಕೇಳಿದ್ದರೆ, ಸಿ.ಎನ್. ಮಂಜುನಾಥ್ 9, ಪಿ.ಸಿ. ಮೋಹನ್ 1 ಪ್ರಶ್ನೆ ಮಾತ್ರ ಕೇಳಿದ್ದಾರೆ. ಮಂಜುನಾಥ್ ಶೇ 126.64, ತೇಜಸ್ವಿ ಸೂರ್ಯ ಶೇ 116, ಶೋಭಾ ಕರಂದ್ಲಾಜೆ ಶೇ 97.6ರಷ್ಟು ಸಂಸದರ ನಿಧಿ ಬಳಕೆ ಮಾಡಿದ್ದರೆ, ಪಿ.ಸಿ. ಮೋಹನ್ ಶೇ 9.48ರಷ್ಟು ಮಾತ್ರ ಬಳಕೆ ಮಾಡಿ ಕೊನೇ ಸ್ಥಾನದಲ್ಲಿದ್ದಾರೆ.

ಬೆಂಗಳೂರಿನ ಶಾಸಕರಿಗೆ ಸಂಬಂಧಿಸಿದಂತೆ ಸಾಧನೆ ನೋಡಿದರೆ ಶಾಸಕರ ನಿಧಿಯನ್ನು ಬಳಸುವಲ್ಲಿ ನಿರ್ಲಕ್ಷ್ಯ ಕಂಡು ಬಂದಿದೆ. ನಾಲ್ವರು ಶಾಸಕರು ಮಾತ್ರ ಸಂಪೂರ್ಣವಾಗಿ ಬಳಸಿಕೊಂಡಿದ್ದಾರೆ. ಆರು ಶಾಸಕರು ಶೇ 90ಕ್ಕಿಂತ ಅಧಿಕ ನಿಧಿ ಬಳಕೆ ಮಾಡಿದ್ದಾಗಿ ವರದಿಯಲ್ಲಿ ತಿಳಿಸಲಾಗಿದೆ.

ವಿಧಾನಸಭಾ ಕಲಾಪದಲ್ಲಿ ನೆಲಮಂಗಲದ ಎನ್. ಶ್ರೀನಿವಾಸ ಅವರು ಶೇ 100ರಷ್ಟು ಹಾಜರಾತಿ ಹೊಂದಿದ್ದಾರೆ. ಮೂವರು ಶಾಸಕರು ಶೇ 70ಕ್ಕಿಂತ ಕಡಿಮೆ ಹಾಜರಾತಿ ಹೊಂದಿದ್ದಾರೆ. ಶೇ 53.62ರಷ್ಟು ಹಾಜರಾತಿ ಹೊಂದಿರುವ ಪ್ರಿಯಕೃಷ್ಣ ಕೊನೆಯ ಸ್ಥಾನದಲ್ಲಿದ್ದಾರೆ.

ಬಹುತೇಕ ಶಾಸಕರ ಆದಾಯ ಹೆಚ್ಚಳವಾಗಿದೆ. ಕೆ.ಗೋಪಾಲಯ್ಯ (ಶೇ 1,3399) ಮತ್ತು ಮುನಿರತ್ನ (ಶೇ 959) ಆದಾಯ ವಿಪರೀತ ಏರಿಕೆಯಾಗಿದೆ. ಎನ್.ಎ. ಹ್ಯಾರಿಸ್ (ಶೇ 318) ಮತ್ತು ಆರ್.ಅಶೋಕ್ (ಶೇ 104) ಆನಂತರದ ಸ್ಥಾನ ಹೊಂದಿದ್ದಾರೆ. ರಂಗಕರ್ಮಿ ಪ್ರಕಾಶ್ ಬೆಳವಾಡಿ, ಸಿವಿಕ್ ಬೆಂಗಳೂರು ಸಂಸ್ಥೆಯ ಕಾರ್ಯನಿರ್ವಾಹಕ ಟ್ರಸ್ಟಿ ಕಾತ್ಯಾಯಿನಿ ಚಾಮರಾಜ್, ಸದಸ್ಯ ಎ.ಕೃಷ್ಣ ಪ್ರಶಾಂತ್ ಉಪಸ್ಥಿತರಿದ್ದರು.

**ಕ್ರಿಮಿನಲ್ ಪ್ರಕರಣಗಳು**

ನಗರದ 32 ಶಾಸಕರಲ್ಲಿ 11 ಮಂದಿ ಯಾವುದೇ ಕ್ರಿಮಿನಲ್ ಅಪರಾಧ ಹೊಂದಿಲ್ಲ. 11 ಶಾಸಕರ ಮೇಲೆ ತಲಾ ಒಂದು ಕ್ರಿಮಿನಲ್ ಪ್ರಕರಣಗಳಿವೆ. ಇಬ್ಬರು ಶಾಸಕರು ಎರಡು, ಮೂವರು ಶಾಸಕರು ಮೂರು, ಮೂವರು ಶಾಸಕರು ನಾಲ್ಕು ಕ್ರಿಮಿನಲ್ ಪ್ರಕರಣಗಳನ್ನು ಎದುರಿಸುತ್ತಿದ್ದಾರೆ. ಒಬ್ಬರು ಐದು ಪ್ರಕರಣ ಹಾಗೂ ಒಬ್ಬರು ಎಂಟು ಕ್ರಿಮಿನಲ್ ಪ್ರಕರಣಗಳನ್ನು ಎದುರಿಸುತ್ತಿದ್ದಾರೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

ಸಂಸದರಲ್ಲಿ ಶೋಭಾ ಕರಂದ್ಲಾಜೆ ಐದು, ತೇಜಸ್ವಿ ಸೂರ್ಯ ಮೂರು, ಪಿ.ಸಿ. ಮೋಹನ್ ಎರಡು ಕ್ರಿಮಿನಲ್ ಪ್ರಕರಣಗಳಲ್ಲಿದ್ದಾರೆ. ಸಿ.ಎನ್. ಮಂಜುನಾಥ್ ಮೇಲೆ ಯಾವುದೇ ಅಪರಾಧ ಪ್ರಕರಣಗಳಿಲ್ಲ ಎಂದು ವರದಿಯಲ್ಲಿದೆ.



ತೇಜಸ್ವಿ



ಮೋಹನ್



ಡಾ.ಸಿ.ಎನ್. ಮಂಜುನಾಥ್



# 'ನಂಬಿಕೆ ದ್ರೋಹ ಮಾಡುವುದಿಲ್ಲ'

ಪ್ರಜಾವಾಣಿ ವಾರ್ತೆ

**ಕೆಂಗೇರಿ:** 'ನನ್ನ ಅಭ್ಯರ್ಥಿ ಗೆಲುವಿಗಾಗಿ ಬಚ್ಚಲು ತೊಳೆಯಲೂ ಸಿದ್ಧ. ಆದರೆ ವಂಚನೆ, ನಂಬಿಕೆ ದ್ರೋಹ ಮಾಡುವುದಿಲ್ಲ' ಎಂದು ಶಾಸಕ ಎಸ್. ಟಿ. ಸೋಮಶೇಖರ್ ಹೇಳಿದರು.

ಬಮುಲ್ ನೂತನ ನಿರ್ದೇಶಕರಾಗಿ ಆಯ್ಕೆಯಾದ ಕೆ.ಎಂ. ಕೃಷ್ಣಯ್ಯ (ಕಾವೇರಿ ಕೃಷ್ಣಪ್ಪ) ಅಭಿನಂದನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬಮುಲ್ ನಿರ್ದೇಶಕರ ಆಯ್ಕೆಗೆ ನಡೆದ ಚುನಾವಣೆಯಲ್ಲಿ ನಾನು ನನ್ನ ಅಭ್ಯರ್ಥಿಯ ಗೆಲುವಿಗೆ ಶ್ರಮಿಸುತ್ತಿದ್ದರೆ, ಕೆಲ ವಿರೋಧಿಗಳು, ನನ್ನನ್ನು ಪಕ್ಷಾಂತರಿ ಶಾಸಕರು ಡ್ರೈವರ್ ಕೆಲಸ ಮಾಡುತ್ತಿದ್ದಾರೆ ಎಂದು ವ್ಯಂಗ್ಯ ಮಾಡಿದ್ದರು. ನಾನು ಮೋಸ ಮಾಡಲು ಹೋಗಿರಲಿಲ್ಲ. ಚುನಾವಣಾ ತಂತ್ರದ ಭಾಗವಾಗಿ ಒಗ್ಗೂಡಿಸುವ ಕಾರ್ಯದಲ್ಲಿ ತೊಡಗಿದ್ದೆ ಎಂದರು. ಜನ ಬೆಂಬಲ ಇರುವವರೆಗೂ ಯಶವಂತಪುರ ಕ್ಷೇತ್ರದಲ್ಲಿ ನನ್ನನ್ನು ಯಾರೂ ಅಲುಗಾಡಿಸಲು ಸಾಧ್ಯವಿಲ್ಲ' ಎಂದರು.



ಬಮುಲ್ ನೂತನ ನಿರ್ದೇಶಕರಾಗಿ ಆಯ್ಕೆಯಾದ ಕೆ.ಎಂ. ಕೃಷ್ಣಯ್ಯ ಅವರನ್ನು ಶಾಸಕ ಎಸ್‌.ಟಿ.ಸೋಮಶೇಖರ್ ಅಭಿನಂದಿಸಿದರು

ಮುಂಬರುವ ಬಿಬಿಎಂಪಿ, ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ ಚುನಾವಣೆಯಲ್ಲೂ ನನ್ನ ಬೆಂಬಲಿಗರಿಗೆ ಸಹಕಾರ ನೀಡುತ್ತೇನೆ. ನನ್ನ ಚುನಾವಣೆಯ ಗೆಲುವಿಗೆ ಅವರು ಶ್ರಮಿಸಲಿದ್ದಾರೆ ಎಂದು ಹೇಳಿದರು.

ಕೆ.ಎಂ. ಕೃಷ್ಣಯ್ಯ ಮಾತನಾಡಿ, 'ಹಲವಾರು ಅಡೆ ತಡೆಗಳ ನಡುವೆಯೂ ಶಾಸಕರ ಬೆಂಬಲದಿಂದ ಗೆಲುವು ಸಾಧ್ಯವಾಯಿತು. ಕ್ಷೇತ್ರ ವ್ಯಾಪ್ತಿಯ ಎಲ್ಲಾ ಸಹಕಾರಿ ಸಂಘಗಳ ಅಭಿವೃದ್ಧಿಗೆ ಶ್ರಮಿಸುತ್ತೇನೆ' ಎಂದು ತಿಳಿಸಿದರು.

ಮುಖಂಡರಾದ ಗಿರೀಶ್, ಕೇಶವ, ಮಂಜುನಾಥ್, ದೇವರಾಜು, ವೇಣುಗೋಪಾಲ್, ಬಿ.ಎಚ್. ಪ್ರಭು, ಚಿಕ್ಕರಾಜು, ಶಿವಮಾದಯ್ಯ, ಹಾಲು ಒಕ್ಕೂಟ ಸಹಕಾರ ಸಂಘದ ಹಲವಾರು ಅಧ್ಯಕ್ಷರು, ಸದಸ್ಯರು, ಮುಖಂಡರು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

## ಹೊಸದಾಗಿ ಜಾತಿವಾರು ಸಮೀಕ್ಷೆ ಬ್ರಾಹ್ಮಣ ಮಹಾಸಭಾ ಸ್ವಾಗತ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕಾಂತರಾಜ ಮತ್ತು ಜಯಪ್ರಕಾಶ ಹೆಗ್ಡೆ ನೇತೃತ್ವದ ಆಯೋಗ ನೀಡಿದ ವರದಿಗೆ ತೀವ್ರ ಆಕ್ಷೇಪ ವ್ಯಕ್ತವಾದ ಕಾರಣ, ಹೊಸದಾಗಿ ಜಾತಿವಾರು ಸಮೀಕ್ಷೆ ನಡೆಸಲು ರಾಜ್ಯ ಸರ್ಕಾರ ನಿರ್ಧರಿಸಿರುವುದನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸ್ವಾಗತಿಸಿದೆ.

ಈ ನಿರ್ಧಾರ ತೆಗೆದುಕೊಂಡ ಮುಖ್ಯಮಂತ್ರಿ ಮತ್ತು ಸಚಿವ ಸಂಪುಟವನ್ನು ಅಭಿನಂದಿಸುತ್ತೇವೆ ಎಂದು ಮಹಾಸಭಾದ ಅಧ್ಯಕ್ಷ ಎಸ್.ರಘುನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಸುದ್ದಿ 2 ನಿಮಿಷ**

## ವಿದ್ವತ್ ಮನುಷ್ಯನನ್ನು ಬೆಳಗುತ್ತದೆ ಹಂಪ ನಾಗರಾಜಯ್ಯ ಅಭಿಮತ

**ಬೆಂಗಳೂರು:** 'ವಿದ್ಯುತ್ ಮತ್ತು ವಿದ್ವತ್ ಎರಡೂ ಮನುಷ್ಯನಿಗೆ ಅತ್ಯವಾಗಿದೆ. ವಿದ್ಯುತ್ ಬೆಳಕು ನೀಡಿದರೆ, ವಿದ್ವತ್ ಮನುಷ್ಯನನ್ನು ಬೆಳಗುತ್ತದೆ' ಎಂದು ಸಾಹಿತಿ ಹಂಪ ನಾಗರಾಜಯ್ಯ ಹೇಳಿದರು.

ವೀರಲೋಕ ಪುಸ್ತಕ ಪ್ರಕಾಶನ ತನ್ನ 3ನೇ ವರ್ಷದ ವಾರ್ಷಿಕೋತ್ಸವದ ಪ್ರಯುಕ್ತ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಲೇಖಕ ಲಕ್ಷ್ಮಣ ಕೊಡಸೆ ಅವರ 'ಪತ್ರಕರ್ತನ ಪಯಣ', ರಾಜಶೇಖರ ಮಠಪತಿ (ರಾಗಂ) ಅವರ 'ಸುಪಾರಿ ಸ್ವಾಮಿ ಮತ್ತು ಸಕೀನ', ಲಕ್ಷ್ಮಣಕೌಂಟೆ ಅವರ 'ವೀರ ಬಲ್ಲಾಳ', ರಾಧಾಕೃಷ್ಣ ಕಲ್ಚಾರ್ ಅವರ 'ಲೋಕ ರಾವಣ', ಸಂತೋಷ ಹಾನಗಲ್ಲ ಅವರ 'ಭಾಷೆ- ಬದುಕು', ಗಿರಿಜಾ ರೈಕ್ವ ಅವರ 'ದೇವ ಸನ್ನಿದಿ', ಅಕ್ಷತಾ ಪಾಂಡವಪುರ ಅವರ 'ರುಚಿಗೆ ತಕ್ಕಷ್ಟು..?' ಹಾಗೂ ಆರ್.ಬಿ. ಗುರುಬಸವರಾಜ ಅವರ 'ಏನಾಗುತ್ತೆ ಗುರು' ಪುಸ್ತಕಗಳನ್ನು ಬಿಡುಗಡೆ ಮಾಡಿದರು.

ವೀರಲೋಕ ಪುಸ್ತಕ ಪ್ರಕಾಶನದ ಸಂಸ್ಥಾಪಕ ವೀರಕಪುತ್ರ ಶ್ರೀನಿವಾಸ್, 'ಮೂರು ವರ್ಷಗಳಲ್ಲಿ 300 ಕೃತಿಗಳನ್ನು ಲೋಕಾರ್ಪಣೆ ಮಾಡುವ ಆಲೋಚನೆಯಿತ್ತು. ಆದರೆ, ಪುಸ್ತಕಸಂತೆ ಕಾರ್ಯಕ್ರಮ ಹಲವು ಪಾಠಗಳನ್ನು ಕಲಿಸಿದೆ. ಇದರಿಂದಾಗಿ ಗುಣಮಟ್ಟದ ಪುಸ್ತಕಗಳನ್ನು ಮಾತ್ರ ಬಿಡುಗಡೆ ಮಾಡುವ ನಿರ್ಣಯಕ್ಕೆ ಬಂದಿದ್ದೇನೆ. ಮುಂದೆ ಕೂಡ ಗುಣಮಟ್ಟದ ಕೃತಿಗಳನ್ನು ಓದುಗರ ಕೈಗಿಡುವ ಕೆಲಸ ಮಾಡುತ್ತೇನೆ' ಎಂದರು.

ಲೇಖಕ ಮತ್ತು ಪ್ರಕಾಶಕ ಜಿ.ಎನ್. ಮೋಹನ್, 'ವೀರಲೋಕರ ಪುಸ್ತಕ ಪ್ರಕಾಶನದ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

### 'ಭೈರಪ್ಪರ ಬದುಕು, ಸಾಹಿತ್ಯ ಒಂದೇ'




**ಬೆಂಗಳೂರು:** 'ಸಾಹಿತಿ ಎಸ್. ಎಲ್. ಭೈರಪ್ಪ ಅವರ ಜೀವನ ಮತ್ತು ಸಾಹಿತ್ಯಕ್ಕೆ ಎರಡು ವಿಶ್ಲೇಷಣೆ ಅಗತ್ಯವಿಲ್ಲ. ಎರಡೂ ಒಂದೇ' ಎಂದು ಸಂಸದ ಬಸವರಾಜ ಬೊಮ್ಮಾಯಿ ಅಭಿಪ್ರಾಯಪಟ್ಟರು.

'ಸಾಹಿತಿ ಎಸ್. ಎಲ್ ಭೈರಪ್ಪ ಪ್ರತಿಷ್ಠಾನ' ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

'ಭೈರಪ್ಪನವರ ಕೃತಿಗಳನ್ನು ಅರ್ಥ ಮಾಡಿಕೊಳ್ಳುವುದೇ ಕಷ್ಟ. ನಾನು ಪರ್ವ ಕಾದಂಬರಿಯನ್ನು ಕಾಲೇಜು ಜೀವನದಲ್ಲಿಯೇ ಓದಲು ಪ್ರಯತ್ನ ಮಾಡಿದ್ದೆ, ಅಷ್ಟು ಸುಲಭವಾಗಿ ಅರ್ಥವಾಗಿರಲಿಲ್ಲ. ಕೆಲವು ವರ್ಷಗಳ ನಂತರ ಮತ್ತೆ ಓದಿದೆ. ಪ್ರತಿ ಸಾರಿ ಓದಿದಾಗ ಹೊಸ ಆಯಾಮ ಸಿಗುತ್ತದೆ. ನನಗೆ ಕಾಡಿರುವ ಎರಡು ಪುಸ್ತಕಗಳು. ಒಂದು ಭೈರಪ್ಪನವರ ಪರ್ವ, ಇನ್ನೊಂದು ಸ್ವಾಮಿ ವಿವೇಕಾನಂದರ 'ಲೈಫ್ ಆಫ್ಟರ್ ಡೆತ್' ಎಂದು ಹೇಳಿದರು.

'ನಮಗೆ ಸಮಾಜ ಏನು ಕೊಟ್ಟಿದೆಯೋ ಅದನ್ನು ನಾವು ಸಮಾಜಕ್ಕೆ ವಾಪಸ್ ಕೊಟ್ಟಾಗ ನಮ್ಮ ಬದುಕಿನ ಬ್ಯಾಲೆನ್ಸ್ ಶೀಟ್ ಪೂರ್ತಿಯಾಗುತ್ತದೆ. ಭೈರಪ್ಪನವರು ಸಮಾಜ ಕೊಟ್ಟಿರುವುದನ್ನು ಸಮಾಜಕ್ಕೆ ವಾಪಸ್ ಕೊಟ್ಟಿದ್ದಾರೆ' ಎಂದು ಬಸವರಾಜ ಬೊಮ್ಮಾಯಿ ಹೇಳಿದರು.

## ಮೈಸೂರು: ಇನ್ಫೋಸಿಸ್ ಟ್ರೈನಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

**ಮೈಸೂರು:** ಇಲ್ಲಿನ ಇನ್ಫೋಸಿಸ್ ಕ್ಯಾಂಪಸ್‌ನಲ್ಲಿ ಟ್ರೈನಿಯಾಗಿ ಕೆಲಸ ಮಾಡುತ್ತಿದ್ದ ಆಂಧ್ರ ಪ್ರದೇಶದ ಗೌತಮಿ ಗೋಯಾ (23) ಶನಿವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ಆಂಧ್ರ ಪ್ರದೇಶದಲ್ಲಿ ಬಿ.ಟೆಕ್ ಮುಗಿಸಿದ್ದ ಗೌತಮಿ, ಮೂರು ತಿಂಗಳಿಂದ ಮೈಸೂರಿನಲ್ಲಿರುವ ಇನ್ಫೋಸಿಸ್‌ನಲ್ಲಿ ಟ್ರೈನಿ ಆಗಿ ಕೆಲಸ ಮಾಡುತ್ತಿದ್ದರು. ಕಂಪನಿಯ ಟ್ರೈನಿಗಳ ವಸತಿ ನಿಲಯದಲ್ಲಿ ಅವರು ಆತ್ಮಹತ್ಯೆ ಮಾಡಿಕೊಂಡಿದ್ದರು.

ಪ್ರೇಮ ನಿರಾಕರಣೆಯಿಂದ ಯುವತಿ ನೊಂದಿದ್ದರು ಎಂಬ ಮಾಹಿತಿ ದೊರೆತಿದೆ. ಯುವತಿಯ ಪೋಷಕರು ಬಂದ ಬಳಿಕ ಪ್ರಕರಣ ದಾಖಲಿಸಿಕೊಳ್ಳಲಾಗುವುದು' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

## ಬಿಬಿಎಂಪಿ: ತಡೆಗೋಡೆ ತೆರವು, ಸಂಚಾರಕ್ಕೆ ಅನುವು

ಪ್ರಜಾವಾಣಿ ವಾರ್ತೆ

ಬಿಬಿಎಂಪಿ ಸುದ್ದಿ

**ರಾಜರಾಜೇಶ್ವರಿನಗರ:** ಕಲ್ಯಾಣ ಮಂಟಪ ನಿರ್ಮಾಣಕ್ಕಾಗಿ ಬಿಬಿಎಂಪಿ ನಗರ ಯೋಜನೆಗೆ ಸುಳ್ಳು ಮಾಹಿತಿ ನೀಡಿ, ಸಾರ್ವಜನಿಕರು ಓಡಾಡುವ ರಸ್ತೆ ಬಂದ್ ಮಾಡಿದ್ದನ್ನು ಬಿಬಿಎಂಪಿ ಅಧಿಕಾರಿಗಳು ತೆರವುಗೊಳಿಸಿದ್ದಾರೆ.

ಜ್ಞಾನ ಜ್ಯೋತಿನಗರದಲ್ಲಿ ಕಲ್ಯಾಣ ಮಂಟಪ ನಿರ್ಮಿಸಲು ಮಾಲೀಕರು ಅನುಮತಿ ಪಡೆದಿದ್ದರು. ಅದರಲ್ಲಿ ಸಾರ್ವಜನಿಕರು ಓಡಾಡಲು ರಸ್ತೆಯನ್ನು ಬಿಡಲಾಗಿದೆ ಎಂದು ಮಾಹಿತಿ ನೀಡಿದ್ದರು. ಅನುಮತಿ ಪಡೆದ ನಂತರ ಮೂರನೇ ಅಡ್ಡರಸ್ತೆಗೆ ಶೀಟ್‌ಗಳನ್ನು ಅಡ್ಡಲಾಗಿ ನಿಲ್ಲಿಸಿ ತಡೆಗೋಡೆ ನಿರ್ಮಿಸಲಾಗಿತ್ತು. ಇದರಿಂದ ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗಿತ್ತು. ಈ ಸಂಬಂಧ ಪಾಲಿಕೆಗೆ ದೂರು ಬಂದಿತ್ತು.

ದೂರು ಆಧರಿಸಿ ಕ್ರಮ ಕೈಗೊಂಡ ಬಿಬಿಎಂಪಿ ವಲಯ ಆಯುಕ್ತ ಸತೀಶ್.ಬಿ.ಸಿ ಅವರು ರಸ್ತೆ ಬಂದ್ ಮಾಡಿರುವುದನ್ನು ತೆರವುಗೊಳಿಸಲು ಆದೇಶಿಸಿದರು.

ಆ ಆದೇಶದ ಮೇರೆಗೆ ಕಾರ್ಯಪಾಲಕ ಎಂಜಿನಿಯರ್ ಪಾಪರೆಡ್ಡಿ, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ವರನಾರಾಯಣ್, ನಗರಯೋಜನೆ ವಿಭಾಗದ ಸಹಾಯಕ ನಿರ್ದೇಶಕ ಹನುಮಂತರಾಯ, ಕಂದಾಯ ವಿಭಾಗದ ಸಹಾಯಕ ಕಂದಾಯ ಅಧಿಕಾರಿ ಸುರೇಶ್ ಮತ್ತು ಸಿಬ್ಬಂದಿ ವರ್ಗದವರು ಪೊಲೀಸ್ ಸಹಕಾರದೊಂದಿಗೆ ತಡೆಗೋಡೆಯನ್ನು ತೆರವುಗೊಳಿಸಿದರು. ಸಾರ್ವಜನಿಕರ ಸಂಚಾರಕ್ಕೆ ಅನುಕೂಲ ಕಲ್ಪಿಸಿದರು.

'ರಸ್ತೆಗೆ ಅಡ್ಡವಾಗಿ ನಿರ್ಮಿಸಿದ್ದ ತಡೆಗೋಡೆ ತೆರವುಗೊಳಿಸಿದ್ದೇವೆ. ಸಾರ್ವಜನಿಕರಿಗೆ ತೊಂದರೆ ಮಾಡದಂತೆ ಮಾಲೀಕರಿಗೆ ಎಚ್ಚರಿಕೆ ನೀಡಲಾಗಿದೆ' ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ತಿಳಿಸಿದರು.



ಬೈರತಿ ಬಸವರಾಜ ಅವರು ಕ್ರೀಡಾಜ್ಯೋತಿ ಬೆಳಗಿಸಿ ಉತ್ಸವಕ್ಕೆ ಚಾಲನೆ ನೀಡಿದರು

# 'ಕ್ರೀಡೆಯಲ್ಲಿ ಪಾಲ್ಗೊಳ್ಳುವುದು ಮುಖ್ಯ'

ಪ್ರಜಾವಾಣಿ ವಾರ್ತೆ

**ಕೆ.ಆರ್.ಪುರ:** ಕ್ರೀಡೆಯಲ್ಲಿ ಸೋಲು ಗೆಲುವು ಮುಖ್ಯವಲ್ಲ. ಪ್ರತಿಯೊಬ್ಬರೂ ಕ್ರೀಡೆಗಳಲ್ಲಿ ಪಾಲ್ಗೊಳ್ಳುವ ಮನೋಭಾವ ಬೆಳಸಿಕೊಳ್ಳಬೇಕು ಎಂದು ಶಾಸಕ ಬೈರತಿ ಬಸವರಾಜ ತಿಳಿಸಿದರು.

ಕೆ.ಆರ್.ಪುರ ಕ್ಷೇತ್ರದ ಎಸ್.ಎಲ್.ಎಸ್ ಕ್ರೀಡಾಂಗಣದಲ್ಲಿ ಎಸ್.ಕೆ.ಫೌಂಡೇಷನ್ ವತಿಯಿಂದ ಆಯೋಜಿಸಿದ್ದ ಕ್ರೀಡಾ ಉತ್ಸವಕ್ಕೆ ಚಾಲನೆ ನೀಡಿ ಮಾತನಾಡಿದರು.

ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದು ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಸಹಕಾರಿಯಾಗಲಿದೆ. ಪ್ರತಿಯೊಬ್ಬರಿಗೂ ಆರೋಗ್ಯ ಎಂಬುದು ಬಹಳ ಮುಖ್ಯ. ಆರೋಗ್ಯವನ್ನು ಸಮತೋಲನದಿಂದ ಕಾಯ್ದುಕೊಳ್ಳಲು ಪ್ರತಿದಿನ ವ್ಯಾಯಾಮ ಮಾಡಬೇಕು ಎಂದರು.

ಎಸ್.ಕೆ.ಫೌಂಡೇಷನ್ ಅಧ್ಯಕ್ಷೆ ಶಾಂತ-ಕೃಷ್ಣಮೂರ್ತಿ ಮಾತನಾಡಿದರು. ಕ್ರಿಕೆಟ್, ಥ್ರೋಬಾಲ್, ನಡಿಗೆ ಓಟ ಸೇರಿದಂತೆ ವಿವಿಧ ಕ್ರೀಡೆಗಳನ್ನು ಆಯೋಜಿಸಲಾಗಿತ್ತು. ವಿಜೇತ ತಂಡಗಳಿಗೆ ಬಹುಮಾನ ವಿತರಿಸಲಾಯಿತು. ಸಂಸ್ಥಾಪಕ ಸದಸ್ಯ ಕಲ್ಕೆರೆ ಕೃಷ್ಣಮೂರ್ತಿ ಹಾಜರಿದ್ದರು.

## ಬೆಂಗಳೂರು–ಬೀದರ್ ನಡುವೆ ವಿಶೇಷ ರೈಲು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪ್ರಯಾಣಿಕರ ದಟ್ಟಣೆಯನ್ನು ಕಡಿಮೆ ಮಾಡಲು ಬೆಂಗಳೂರು–ಬೀದರ್ ನಡುವೆ ಎರಡೂ ಕಡೆಯಿಂದ ತಲಾ ಐದು ಟ್ರಿಪ್ ವಿಶೇಷ ಎಕ್ಸ್‌ಪ್ರೆಸ್ ರೈಲು ಓಡಿಸಲು ನೈರುತ್ಯ ರೈಲ್ವೆ ನಿರ್ಧರಿಸಿದೆ. ಸರ್ ಎಂ.ವಿಶ್ವೇಶ್ವರಯ್ಯ ಟರ್ಮಿನಲ್ (ಎಸ್‌ಎಂವಿಟಿ)- ಬೀದರ್ ಎಕ್ಸ್‌ಪ್ರೆಸ್ ವಿಶೇಷ ರೈಲು ಜೂನ್ 15ರಿಂದ 29ರವರೆಗೆ ಪ್ರತಿ ಶುಕ್ರವಾರ ಮತ್ತು ಭಾನುವಾರ ಸಂಚರಿಸಲಿದೆ. ಎಸ್‌ಎಂವಿಟಿಯಿಂದ ರಾತ್ರಿ 9.15ಕ್ಕೆ ಹೊರಟು ಮರುದಿನ ಬೆಳಿಗ್ಗೆ 11.30ಕ್ಕೆ ಬೀದರ್‌ಗೆ ತಲುಪಲಿದೆ. ಬೀದರ್‌ನಿಂದ ಜೂನ್ 16ರಿಂದ 30ರವರೆಗೆ ಪ್ರತಿ ಶನಿವಾರ ಮತ್ತು ಸೋಮವಾರ ರೈಲು ಸಂಚರಿಸಲಿದೆ. ಮಧ್ಯಾಹ್ನ 1 ಗಂಟೆಗೆ ಹೊರಟು ಮರುದಿನ ಬೆಳಿಗ್ಗೆ 4ಕ್ಕೆ ಬೆಂಗಳೂರಿಗೆ ತಲುಪಲಿದೆ.





# 'ದೇಸಿ ಬೀಜ ವೈವಿಧ್ಯ ಸಂರಕ್ಷಿಸಿ'

## ದೇಸಿ ಬೀಜೋತ್ಸವ: ಪಿಪಿವಿಎಫ್‌ಆರ್‌ಎ ಅಧ್ಯಕ್ಷ ತ್ರಿಲೋಚನ ಮಹಾಪಾತ್ರ ಕರೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಸಮುದಾಯಗಳು ತಲೆಮಾರುಗಳಿಂದ ಉಳಿಸಿಕೊಂಡು ಬಂದಿರುವ ದೇಸಿ ತಳಿಯ ಬೀಜ ವೈವಿಧ್ಯವನ್ನು ನೋಂದಣಿ ಮಾಡಿಸಿ, ಆ ಮೂಲಕ, ಮುಂದಿನ ಪೀಳಿಗೆಗೂ ಸಂರಕ್ಷಿಸಿ ಕೊಡಬೇಕಿದೆ' ಎಂದು ಭಾರತೀಯ ಸಸ್ಯ ತಳಿ ಸಂರಕ್ಷಣೆ ಮತ್ತು ರೈತರ ಹಕ್ಕು ಪ್ರಾಧಿಕಾರದ (ಪಿಪಿವಿಎಫ್‌ಆರ್‌ಎ) ಅಧ್ಯಕ್ಷ ಡಾ. ತ್ರಿಲೋಚನ ಮಹಾಪಾತ್ರ ಕರೆ ನೀಡಿದರು.

ನಗರದ ಕೃಷಿ ತಂತ್ರಜ್ಞರ ಸಂಸ್ಥೆ(ಐಎಟಿ)ಯು `ಸಹಜ ಸಮೃದ್ಧ' ಸಾವಯವ ಕೃಷಿಕರ ಬಳಗ ಜತೆಗೂಡಿ 'ಕ್ರಾಪ್ಸ್4ಎಚ್ಡಿ' ಹಾಗೂ 'ಕೀ ಸ್ಟೋನ್' ಸಂಸ್ಥೆ ಸಹಯೋಗದಲ್ಲಿ ಆಯೋಜಿ-ಸಲಾಗಿರುವ ಎರಡು ದಿನಗಳ 'ದೇಸಿ ಬೀಜೋತ್ಸವ'ವನ್ನು ಶನಿವಾರ ಉದ್ಘಾಟಿಸಿ ಅವರು ಮಾತನಾಡಿದರು.

ಕೃಷಿಯು ತಂತ್ರಜ್ಞಾನ, ಅಧಿಕ ಇಳುವರಿ, ಪೋಷಕಾಂಶ ಹಾಗೂ ಹವಾಮಾನ ಬದಲಾವಣೆಯಂಥ ಹಲವು ವಿಷಯಗಳ ಮೇಲೆ ಅವಲಂಬಿತವಾಗಿದೆ. ಇದರಲ್ಲಿ ಯಾವುದೇ ಒಂದು ಅಂಶ ಹೆಚ್ಚು ಕಡಿಮೆಯಾದರೂ ಆಹಾರ ಉತ್ಪಾದನೆ ಏರುಪೇರಾಗುತ್ತದೆ. ಆದರೆ ಇದೆಲ್ಲದರ ಮೂಲ ಹಾಗೂ ಕೇಂದ್ರ ಬಿಂದು ಬೀಜದಲ್ಲಿದೆ. ಹೀಗಾಗಿಯೇ ಗುಣಮಟ್ಟದ ಬೀಜಗಳ ಉತ್ಪಾದನೆ ಹಾಗೂ ತಳಿ ಸಂರಕ್ಷಣೆಗೆ ಬಗ್ಗೆ ಹೆಚ್ಚು ಗಮನ ಹರಿಸಬೇಕು' ಎಂದು ಸಲಹೆ ನೀಡಿದರು.

ಕೃಷಿ ತಂತ್ರಜ್ಞರ ಸಂಸ್ಥೆಯ ಅಧ್ಯಕ್ಷ ಡಾ. ಎ.ಬಿ. ಪಾಟೀಲ 'ಹವಾಮಾನ ವೈಪರೀತ್ಯವನ್ನು ಎದುರಿಸಿ ಬೆಳೆಯುವ ದೇಸಿ ಬೀಜಗಳನ್ನು ಹೆಚ್ಚೆಚ್ಚು ಪ್ರದೇಶಕ್ಕೆ ವಿಸ್ತರಿಸಬೇಕು' ಎಂದು ಸಲಹೆ ನೀಡಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಸುರೇಶ ಎಸ್.ವಿ., ಕೃಷಿ ವಿಜ್ಞಾನಿ ಎನ್. ದೇವಕುಮಾರ್, ಪಿಪಿವಿಎಫ್‌ಆರ್‌ಎ ರಿಜಿಸ್ಟ್ರಾರ್ ಜನರಲ್ ದಿನೇಶಕುಮಾರ ಅಗರವಾಲ್, ಕರ್ನಾಟಕ ರಾಜ್ಯ ಬೀಜ ನಿಗಮದ ವ್ಯವಸ್ಥಾಪಕ ನಿರ್ದೇಶಕ ಕೆ. ಅನೂಪ್, ಬೀಜ ಸಂರಕ್ಷಕಿ ಕಮಲಮ್ಮ, 'ಸಹಜ ಸಮೃದ್ಧ'ದ ಅಧ್ಯಕ್ಷ ಶಿವನಾಪುರ ರಮೇಶ ಹಾಗೂ 'ಸ್ವಿಸ್ ಏಡ್' ಸಂಸ್ಥೆಯ ಪ್ರತಿನಿಧಿ ಕವಿತಾ ಗಾಂಧಿ ಉಪಸ್ಥಿತರಿದ್ದರು.

ದೇಸಿ ತಳಿಗಳ ಸಂರಕ್ಷಣೆಗೆ ಶ್ರಮಿಸಿದ ವಿಜ್ಞಾನಿಗಳಾದ ಎನ್.ಜಿ. ಹನುಮರಟ್ಟಿ, ಜಯಪ್ರಕಾಶ ನಿಡಗುಂದಿ, ಉಲ್ಲಾಸ್ ಎಂ.ವೈ., ಬೀಜಮಾತೆ ಪಾಪಮ್ಮ ಹಾಗೂ ವಿನಾಯಕ ಸ್ತ್ರೀಶಕ್ತಿ ಸಂಘದ ಪ್ರತಿನಿಧಿಗಳನ್ನು ಸನ್ಮಾನಿಸಲಾಯಿತು.

### ಮುಖ್ಯಾಂಶಗಳು

- ಗುಣಮಟ್ಟದ ಬೀಜಗಳ ಉತ್ಪಾದನೆ ಬಗ್ಗೆ ಹೆಚ್ಚು ಗಮನ ಹರಿಸಲು ಸಲಹೆ
- ಹವಾಮಾನ ವೈಪರೀತ್ಯ ಎದುರಿಸಿ ಬೆಳೆಯುವ ದೇಸಿ ಬೀಜಗಳನ್ನು ವಿಸ್ತರಿಸಲು ಕರೆ





ದಿನೇಶಕುಮಾರ ಅಗರವಾಲ್, ತ್ರಿಲೋಚನ ಮಹಾಪಾತ್ರ, ಜಿ.ಕೃಷ್ಣಪ್ರಸಾದ್, ಎ.ಬಿ. ಪಾಟೀಲ ಅವರಿಗೆ ದೇಸಿ ಬೀಜಸಂರಕ್ಷಕ ಶಂಕರ ಲಂಗಟಿ ಅವರು ತಮ್ಮಲ್ಲಿರುವ ದೇಸಿ ಭತ್ತದ ತಳಿಗಳ ಕುರಿತು ಮಾಹಿತಿ ನೀಡಿದರು.

### ಬೀಜೋತ್ಸವದಲ್ಲಿ..

ವಿವಿಧ ರಾಜ್ಯಗಳ 200ಕ್ಕೂ ಹೆಚ್ಚು ಬೀಜ ಸಂರಕ್ಷಕರು ಪಾಲ್ಗೊಂಡಿದ್ದಾರೆ. 50 ಮಳಿಗೆಗಳಿವೆ. ಪಶ್ಚಿಮ ಬಂಗಾಳದ ಬೇಳೆ ಕಾಳು, ಒಡಿಶಾದ ಭತ್ತಗಳು, ಕೇರಳದ ವಯನಾಡಿನ ಗಡ್ಡೆಗೆಣಸುಗಳು, ಕುಂದುಗೋಳದ ಸಿರಿಧಾನ್ಯಗಳನ್ನು ಪ್ರದ-ರ್ಶಿಸಲಾಗಿದೆ. ತಾರಸಿ ತೋಟ, ಮನೆ ಅಂಗಳದ ಕೈತೋಟಕ್ಕೆ ಹೊಂದುವಂತಹ ಅಪರೂಪದ ದೇಸಿ ತರಕಾರಿ ಬೀಜಗಳಿವೆ.

## ದ್ವಿಭಾಷಾ ನೀತಿ ಜಾರಿಗೊಳಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದಲ್ಲಿ ದ್ವಿಭಾಷಾ ನೀತಿ ಜಾರಿಗೊಳಿಸಬೇಕು ಎಂದು 'ನಮ್ಮ ನಾಡು ನಮ್ಮ ಆಳ್ವಿಕೆ' ಸಂಸ್ಥೆ ಆಗ್ರಹಿಸಿದೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಸ್ಥೆಯ ಅಧ್ಯಕ್ಷ ಕವಿರಾಜ್, ಉಪಾಧ್ಯಕ್ಷ ಅರುಣ್ ಜಾವಗಲ್, 'ತಮಿಳುನಾಡು ಮಾದರಿಯಲ್ಲಿ ನಮ್ಮ ರಾಜ್ಯದಲ್ಲೂ ದ್ವಿಭಾಷಾ ನೀತಿಯನ್ನು ಜಾರಿಗೊಳಿಸಬೇಕು.' ಎಂದರು.

ಅಲ್ಲದೇ, 'ತ್ರಿಭಾಷಾ ನೀತಿಯಿಂದ ದಕ್ಷಿಣ ಭಾರತದ ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ಅನುಕೂಲವಾಗುತ್ತಿಲ್ಲ. ಇದು ಕೇಂದ್ರ ಸರ್ಕಾರದ ಹಿಂದಿ ಹೇರಿಕೆಯ ಒಂದು ಭಾಗವಾಗಿದೆ' ಎಂದು ಆರೋಪಿಸಿದರು.

'ತ್ರಿಭಾಷಾ ನೀತಿಯಿಂದಾಗಿ ನಮ್ಮ ಮಕ್ಕಳು ಹೆಚ್ಚುವರಿಯಾಗಿ ಹಿಂದಿ ಕಲಿಯಬೇಕಾಗಿದೆ. 2024–25ನೇ ಶೈಕ್ಷಣಿಕ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 1.24 ಲಕ್ಷ ವಿದ್ಯಾರ್ಥಿಗಳು ಹಿಂದಿ ವಿಷಯದಲ್ಲಿ ಅನುತ್ತೀರ್ಣರಾಗಿದ್ದಾರೆ. ದ್ವಿಭಾಷಾ ನೀತಿ ಹೋರಾಟ ಬೆಂಬಲಿಸಿ, ಈಗಾಗಲೇ ಆನ್‌ಲೈನ್ ಮೂಲಕ ನಡೆಯುತ್ತಿರುವ ಅಭಿಯಾನಕ್ಕೆ 30 ಸಾವಿರಕ್ಕೂ ಹೆಚ್ಚು ಜನ ಸಹಿ ಹಾಕಿದ್ದಾರೆ' ಎಂದು ಅವರು ಮಾಹಿತಿ ನೀಡಿದರು.

ಚಲನಚಿತ್ರ ನಿರ್ದೇಶಕ ಬಿ.ಎಂ. ಗಿರಿರಾಜ್, ಸಾಮಾಜಿಕ ಕಾರ್ಯಕರ್ತ ಡಾ. ರಮೇಶ್ ಬೆಲ್ಲಂಕೊಂಡ ಅವರು ಸುದ್ದಿಗೋಷ್ಠಿಯಲ್ಲಿದ್ದರು.

ಭಾನುವಾರ • ಜೂನ್ 15, 2025
ಪ್ರಜಾವಾಣಿ

# ‘ಕಸ ಟೆಂಡರ್‌ನಲ್ಲಿ ನಿಯಮ ಉಲ್ಲಂಘನೆ’

## ಸಚಿವರ ಆಪ್ತರಿಗೆ ಅವಕಾಶ ಮಾಡಿಕೊಡಲು ಮಾರ್ಪಾಟು: ಗುತ್ತಿಗೆದಾರರ ಆರೋಪ

• ಆರ್.ಮಂಜುನಾಥ್

**ಬೆಂಗಳೂರು:** ತ್ಯಾಜ್ಯ ವಿಲೇವಾರಿಗೆ 33 ಪ್ಯಾಕೇಜ್‌ನಲ್ಲಿ ಕರೆಯಲಾಗಿರುವ ಟೆಂಡರ್‌ನಲ್ಲಿ, ಪ್ರೀ-ಬಿಡ್ ಪ್ರಕ್ರಿಯೆ ಮುಗಿದ ಮೇಲೆ ನಿಯಮ ಮೀರಿ ಹೊಸ ಷರತ್ತು ಹಾಗೂ ವಿನಾಯಿತಿಗಳನ್ನು ಸೇರಿಸಲಾಗಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ರಾಥಮಿಕ ತ್ಯಾಜ್ಯ ಸಂಗ್ರಹ, ಎರಡನೇ ಹಂತದ ತ್ಯಾಜ್ಯ ವರ್ಗಾವಣೆ, ರಸ್ತೆ ಗುಡಿಸಿದ ಕಸ ಸಂಗ್ರಹಿಸಲು 33 ವಿಭಾಗವಾರು ಟೆಂಡರ್ ಅನ್ನು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ಕಂಪನಿ (ಬಿಎಸ್‌ಡಬ್ಲ್ಯು-ಎಂಎಲ್) ಮೇ 28ರಂದು ಆಹ್ವಾನಿಸಲಾಗಿತ್ತು. ಜೂನ್ 9ರಂದು ನಡೆದ ಪ್ರೀ-ಬಿಡ್ ಸಭೆಯಲ್ಲಿ ಚರ್ಚಿಸಲಾಗದಂತಹ ವಿನಾಯಿತಿ, ಷರತ್ತುಗಳನ್ನು ವಿಧಿಸಿ ಹೊಸ ಅನುಬಂಧವನ್ನು ಎಂಜಿನಿಯರ್‌ಗಳು ಸೇರಿಸಿದ್ದಾರೆ ಎಂದು ಗುತ್ತಿಗೆದಾರರು ಆರೋಪಿಸಿದ್ದಾರೆ.

ತ್ಯಾಜ್ಯ ವಿಲೇವಾರಿ ಟೆಂಡರ್ ಪಡೆಯಲು ಐದು ವರ್ಷಗಳ ಸೇವೆಯನ್ನು 2019–20ನೇ ಆರ್ಥಿಕ ಸಾಲಿನಿಂದ 2023–24ನೇ ಸಾಲಿನವರೆಗೆ ಪರಿಗಣಿಸಲಾಗುತ್ತದೆ ಎಂದು ನಮೂದಿಸಲಾಗಿತ್ತು. ಇದನ್ನು ಮಾರ್ಪಾಟು ಮಾಡಿ, 2019–20ನೇ ಆರ್ಥಿಕ ಸಾಲನ್ನು ಬಿಟ್ಟು 2024–25ನೇ ಸಾಲನ್ನು ಸೇರಿಸಲಾಗಿದೆ. ಕೋವಿಡ್‌ನಿಂದ ಲಾಕ್‌ಡೌನ್ ಆಗಿ 2019–20ನೇ ಸಾಲಿನಲ್ಲಿ ಹೆಚ್ಚು ಕಾಮಗಾರಿ ನಡೆದಿರಲಿಲ್ಲ. ಆರ್ಥಿಕ ವಹಿವಾಟು ಕಡಿಮೆಯಾಗಿತ್ತು. ಆದರೂ ನಿರ್ವಹಣೆ ಕಾರ್ಯವನ್ನು ಗುತ್ತಿಗೆದಾರರು ಕಷ್ಟಪಟ್ಟು ನಿರ್ವಹಿಸಿದ್ದರು. ಈ ಗುತ್ತಿಗೆದಾರರನ್ನು ಈಗ ಪರಿಗಣಿಸಲಾಗುತ್ತಿಲ್ಲ.

ಹೊಸದಾಗಿ ಗುತ್ತಿಗೆ ನೋಂದಣಿಯನ್ನು ಪಡೆದಿರುವವರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದಲೇ ಬಿಎಸ್‌ಡಬ್ಲ್ಯುಎಂಎಲ್ ಎಂಜಿನಿಯರ್‌ಗಳನ್ನು 2024–25ನೇ ಆರ್ಥಿಕ ಸಾಲಿಗೆ ಸೇರಿಸಿದ್ದಾರೆ. ಆರ್ಥಿಕ ವಹಿವಾಟನ್ನು ಈ ಸಾಲಿನಲ್ಲಿ ಪರಿಗಣಿಸುವುದಿಲ್ಲ ಎಂದು ಹೇಳಲಾಗಿದೆ. ಆದರೆ ಸೇವೆಯನ್ನು ಪರಿಗಣಿಸುತ್ತೇವೆ ಎಂದು ಹೊಸ ಅನುಬಂಧದಲ್ಲಿ ತಿಳಿಸಿರುವುದು ಕಾನೂನು, ನಿಯಮ ಉಲ್ಲಂಘನೆ ಎಂದು ಗುತ್ತಿಗೆದಾರರು ದೂರಿದ್ದಾರೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿನ ಪಾರದರ್ಶಕ (ಕೆಟಿಪಿಪಿ) ಕಾಯ್ದೆಯಂತೆ 33 ಪ್ಯಾಕೇಜ್‌ಗಳ ಟೆಂಡರ್ ಆಹ್ವಾನಿಸಲಾಗಿದೆ. ಕೆಪಿಪಿ ಪೋರ್ಟಲ್‌ನಲ್ಲೇ ಪ್ಯಾಕೇಜ್‌ನ ಪೂರ್ಣ ಮೊತ್ತದ ಆರ್ಥಿಕ ಬಿಡ್ ಸಲ್ಲಿಸಬೇಕು. ಆದರೆ, ಪ್ರತಿ ವಾಹನದ ತಿಂಗಳ ಬಳಕೆ ಶುಲ್ಕವನ್ನು ಟೆಂಡರ್‌ನ ಅಂತಿಮ ದಿನದ ಮೂರು ದಿನ ಮುನ್ನ ಬಿಎಸ್‌ಡಬ್ಲ್ಯು-ಎಂಎಲ್ ಎಂಜಿನಿಯರ್‌ಗಳಿಗೆ ಮುಚ್ಚಿದ ಲಕೋಟೆಯಲ್ಲಿ ನೀಡಬೇಕೆಂಬ ಹೊಸ ನಿಯಮ ಸೇರಿಸಿರುವುದು ಕೆಟಿಪಿಪಿ ಕಾಯ್ದೆಯ ಉಲ್ಲಂಘನೆ ಎಂದು ಆರೋಪಿಸಲಾಗಿದೆ.

‘ಏಳು ವರ್ಷದ ಟೆಂಡರ್ ಗುತ್ತಿಗೆ ಪಡೆಯುವ ಪಾಲುದಾರಿಕೆಯ ಗುತ್ತಿಗೆದಾರರಲ್ಲಿ ಉಂಟಾಗುವ ಸಮಸ್ಯೆಗೆ ಬಿಎಸ್‌ಡಬ್ಲ್ಯುಎಂಎಲ್ ಎಂಜಿನಿಯರ್‌ಗಳು ನೀಡುವ ತೀರ್ಪೇ ಅಂತಿಮ ಎಂದು ಹೇಳಿದ್ದಾರೆ. ಆದರೆ, ಪಾಲುದಾರರು ತಮ್ಮ ಸಮಸ್ಯೆಗಳನ್ನು ತಾವೇ ಬಗೆಹರಿಸಿಕೊಳ್ಳದೆ ಎಂಜಿನಿಯರ್‌ಗಳಿಗೆ ಅಧಿಕಾರ ನೀಡಿದರೆ, ಪಕ್ಷಪಾತ ಉಂಟಾಗುತ್ತದೆ. ಯಾರನ್ನು ಬೇಕಾದರೂ ಕಪ್ಪು ಪಟ್ಟಿಗೆ ಸೇರಿಸಬಹುದಾಗಿದೆ’ ಎಂದು ಗುತ್ತಿಗೆದಾರರು ಆತಂಕ ವ್ಯಕ್ತಪಡಿಸಿದರು.

**ಗೊಂದಲ ಸೃಷ್ಟಿ:** ಬಿಎಸ್‌ಡಬ್ಲ್ಯುಎಂಎಲ್ ತ್ಯಾಜ್ಯ ನಿರ್ವಹಣೆಗೆ 2022ರ ಸೆಪ್ಟೆಂಬರ್‌ನಲ್ಲಿ 89 ಪ್ಯಾಕೇಜ್‌ಗಳಲ್ಲಿ ಟೆಂಡರ್ ಕರೆದಿತ್ತು. ತಾಂತ್ರಿಕ ಬಿಡ್ ಅರ್ಹತೆ ಸಮಸ್ಯೆಯಿಂದ ಟೆಂಡರ್ ರದ್ದಾಗಿತ್ತು. 2023ರ ಜನವರಿಯಲ್ಲಿ ಎರಡನೇ ಬಾರಿಗೆ ಟೆಂಡರ್ ಆಹ್ವಾನಿಸಿದ್ದಾಗ, ಅರ್ಹತಾ ಸುತ್ತಿನಲ್ಲಿ ಕೆಲವರನ್ನು ಅನರ್ಹಗೊಳಿಸಿದ್ದರಿಂದ ವಿಷಯ ಕೋರ್ಟ್ ಹಂತಕ್ಕೆ ತಲುಪಿತು. ಹೊಸ ಟೆಂಡರ್ ಪ್ರಕ್ರಿಯೆ ನಡೆಸುವುದಾಗಿ, ನ್ಯಾಯಾಲಯಕ್ಕೆ ಸರ್ಕಾರ ಹೇಳಿತ್ತು. ಅದರಂತೆ, ಸಚಿವ ಸಂಪುಟದಲ್ಲಿ ಅನುಮೋದನೆ ಪಡೆದು, 33 ಪ್ಯಾಕೇಜ್‌ಗೆ ಟೆಂಡರ್ ಆಹ್ವಾನಿಸಲಾಗಿದೆ. ಈಗ ಮತ್ತೊಮ್ಮೆ ಗೊಂದಲ ಸೃಷ್ಟಿಯಾಗಿದೆ.

**ಮುಖ್ಯಾಂಶಗಳು**

- ಮೇ 28ರಂದು ಟೆಂಡರ್ ಆಹ್ವಾನ
- ಜೂನ್ 9ರಂದು ನಡೆದ ಪ್ರೀ-ಬಿಡ್ ಸಭೆ
- ಪ್ರೀ-ಬಿಡ್ ಸಭೆಯ ನಂತರ ಹೊಸ ಷರತ್ತು: ಆರೋಪ

**ಅಂಕಿ ಅಂಶಗಳು**

**33** ಘನತ್ಯಾಜ್ಯ ವಿಲೇವಾರಿಗೆ ಟೆಂಡರ್ ಕರೆಯಲಾಗಿರುವ ಪ್ಯಾಕೇಜ್‌ಗಳ ಸಂಖ್ಯೆ

**7** ವರ್ಷ ಗುತ್ತಿಗೆಯ ಅವಧಿ

**₹544 ಕೋಟಿ** ಪ್ರತಿ ವರ್ಷದ ಅಂದಾಜು ವೆಚ್ಚ



ತ್ಯಾಜ್ಯ ವಿಲೇವಾರಿಯ ಆಟೊ ಟಿಪ್ಪರ್‌ಗಳು

### ಕಾನೂನು ಸಲಹೆ ಪಡೆಯಲಾಗಿದೆ: ಲೋಕೇಶ್

‘ಆರ್ಥಿಕ ಸಾಮರ್ಥ್ಯವನ್ನು ಪರಿಶೀಲಿಸುವಾಗ ಹಿಂದಿನ ಆರ್ಥಿಕ ವರ್ಷ ಮುಗಿದು ಮೂರು ತಿಂಗಳಾಗಿರಬೇಕು ಎಂದು ನ್ಯಾಯಾಲಯ ಆದೇಶಿಸಿದೆ. ತ್ಯಾಜ್ಯ ಪ್ಯಾಕೇಜ್‌ನಲ್ಲಿ ನಾವು 2019–20ನೇ ಸಾಲಿನಲ್ಲಿ ಘನತ್ಯಾಜ್ಯ ನಿರ್ವಹಣೆಯ ಸೇವೆಯನ್ನು ಪರಿಗಣಿಸುವ ಬದಲು 2024–25ನೇ ಸಾಲನ್ನು ನಮ್ಮ ಕಾನೂನು ತಜ್ಞರಿಂದ ಅಭಿಪ್ರಾಯ ಪಡೆದುಕೊಂಡೇ ಸೇರಿಸಿದ್ದೇವೆ. ಘನತ್ಯಾಜ್ಯ ನಿರ್ವಹಣೆ ಕೆಲಸವನ್ನು ನಿರ್ವಹಿಸಿರುವ ಪ್ರಮಾಣದಲ್ಲೂ 2024–25ನೇ ಸಾಲನ್ನು ಸೇರಿಸಿದ್ದೇವೆ. ಇದರಿಂದ ನಿಯಮ ಉಲ್ಲಂಘನೆಯಾಗಿಲ್ಲ. ಸಚಿವರ ಆಪ್ತರು ಅಥವಾ ಯಾರೊಬ್ಬರಿಗೆ ಅನುಕೂಲ ಕಲ್ಪಿಸಲು ನಾವು ಹೀಗೆ ಮಾಡಿಲ್ಲ. 33 ಪ್ಯಾಕೇಜ್‌ಗೂ ಇದು ಅನ್ವಯವಾಗುತ್ತದೆ’ ಎಂದು ಬಿಎಸ್‌ಡಬ್ಲ್ಯುಎಂಎಲ್‌ನ ಮುಖ್ಯ ಪ್ರಧಾನ ವ್ಯವಸ್ಥಾಪಕ ಲೋಕೇಶ್ ತಿಳಿಸಿದರು.

### ‘ಪಾರದರ್ಶಕ ಕಾಯ್ದೆ ಉಲ್ಲಂಘನೆ’

‘ಪ್ರೀ-ಬಿಡ್ ಸಭೆಯಲ್ಲಿ ಚರ್ಚೆಯಾಗದ ವಿಷಯಗಳನ್ನು ಹೊಸದಾಗಿ ಸೇರಿಸಲಾಗಿದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿನ ಪಾರದರ್ಶಕ ಕಾಯ್ದೆಯನ್ನು ಉಲ್ಲಂಘಿಸಲಾಗಿದೆ. ಸಚಿವರ ಆಪ್ತರಿಗೆ ಅನುಕೂಲ ಕಲ್ಪಿಸಲು ತುರ್ತಾಗಿ ಷರತ್ತುಗಳನ್ನು ಸಡಿಲಗೊಳಿಸಲಾಗಿದೆ. ಇದರಿಂದ ಸುಮಾರು 80 ಗುತ್ತಿಗೆದಾರರಿಗೆ ಸಮಸ್ಯೆಯಾಗುತ್ತದೆ’ ಎಂದು ಬೆಂಗಳೂರು ಮಹಾನಗರ ಸ್ವಚ್ಛತೆ ಮತ್ತು ಲಾರಿ ಮಾಲೀಕರು–ಗುತ್ತಿಗೆದಾರರ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಎನ್. ಬಾಲಸುಬ್ರಮಣಿಯಂ ಆರೋಪಿಸಿದರು.

## ಸುದ್ದಿ 2 ನಿಮಿಷ


### ಕಾಮಗಾರಿ: ಮೂರು ತಿಂಗಳು ವಾಹನ ಸಂಚಾರ ಬಂದ್

**ಬೆಂಗಳೂರು:** ಕೆ.ಆರ್.ಪುರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಬೆನ್ನಿಗಾನಹಳ್ಳಿಯಿಂದ ಕಸ್ತೂರಿನಗರದ ಕಡೆಗೆ ತೆರಳುವ ರೈಲ್ವೆ ಸಮನಾಂತರ ರಸ್ತೆಯಲ್ಲಿ ರೈಲ್ವೆ ಇಲಾಖೆಯಿಂದ ಸೇತುವೆ ಕಾಮಗಾರಿ ಕೈಗೊಳ್ಳಲಾಗಿದ್ದು, ಮೂರು ತಿಂಗಳು ವಾಹನ ಸಂಚಾರ ಬಂದ್ ಮಾಡಲಾಗಿದೆ. ವಾಹನ ಸಂಚಾರಕ್ಕೆ ಪರ್ಯಾಯ ಮಾರ್ಗ ಕಲ್ಪಿಸಲಾಗಿದೆ.

**ನಿರ್ಬಂಧಿಸಿರುವ ರಸ್ತೆಗಳು:** ಬೆನ್ನಿಗಾನಹಳ್ಳಿ (ಸದಾನಂದ ನಗರ ಸೇತುವೆ) ಕಡೆಯಿಂದ ಹಳೆ ಮದ್ರಾಸ್ ರಸ್ತೆಗೆ ಸೇರುವ ಕೋಕೊ ಕೋಲಾ ಗೋದಾಮು ರಸ್ತೆಯಲ್ಲಿ ಸಂಚರಿಸುವ ಎಲ್ಲ ರೀತಿಯ ವಾಹನಗಳ ಸಂಚಾರವನ್ನು ಬಂದ್ ಮಾಡಲಾಗಿದೆ.

**ಪರ್ಯಾಯ ಮಾರ್ಗ:** ಹಳೆ ಮದ್ರಾಸ್ ರಸ್ತೆಯ ಬೆನ್ನಿಗಾನಹಳ್ಳಿ ರೈಲ್ವೆ ಸೇತುವೆ ಕಡೆಯಿಂದ ಕಸ್ತೂರಿ ನಗರದ ಕಡೆಗೆ ಹೋಗುವ ವಾಹನ ಸವಾರರು, ಬೈಪಾಸ್ ಹೆಬ್ಬಾಳ ರಿಂಗ್ ರಸ್ತೆಯ ಮೂಲಕ ಕಸ್ತೂರಿ ನಗರದ ಕಡೆಗೆ ಸಂಚರಿಸಬಹುದು.

ಕಸ್ತೂರಿ ನಗರದ ಕಡೆಯಿಂದ ಹಳೆ ಮದ್ರಾಸ್ ರಸ್ತೆ ಕಡೆಗೆ ತೆರಳುವ ವಾಹನ ಸವಾರರು, ಸದಾನಂದ ನಗರ ಕಡೆಯಿಂದ ಎನ್‌ಜಿಇಎಫ್ ಸಿಗ್ನಲ್ ಮೂಲಕ ಹಳೆ ಮದ್ರಾಸ್ ರಸ್ತೆ ಕಡೆಗೆ ಸಂಚರಿಸಬಹುದು ಎಂದು ಪೂರ್ವ ವಿಭಾಗ (ಸಂಚಾರ) ಡಿಸಿಪಿ ಸಾಹಿಲ್ ಬಾಗ್ಲಾ ತಿಳಿಸಿದ್ದಾರೆ.




### ಪರಿಶಿಷ್ಟ ಜಾತಿ ಸಮಗ್ರ ಸಮೀಕ್ಷೆ: ಮನೆಗಳಿಗೆ ಸ್ಟಿಕರ್

**ಬೆಂಗಳೂರು:** ಪಶ್ಚಿಮ ವಲಯದಲ್ಲಿ ಪರಿಶಿಷ್ಟ ಜಾತಿ ಸಮಗ್ರ ಸಮೀಕ್ಷೆ ನಡೆದಿರುವ ಮನೆಗಳಿಗೆ ಸ್ಟಿಕ್ಕರ್ ಅಂಟಿಸಬೇಕು ಎಂದು ವಲಯ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಪರಿಶಿಷ್ಟ ಜಾತಿ ಸಮಗ್ರ ಸಮೀಕ್ಷೆಯ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಸಮೀಕ್ಷೆ ಪೂರ್ಣಗೊಳಿಸಲಾಗಿರುವ ಎಲ್ಲ ಮನೆಗಳಿಗೆ ಸ್ಟಿಕ್ಕರ್ ಅಂಟಿಸಿದರೆ ಸರ್ವೆ ಮಾಡಬೇಕಿರುವ ಮನೆಗಳನ್ನು ಸುಲಭವಾಗಿ ಗುರುತಿಸಬಹುದು. ಸ್ಟಿಕ್ಕರ್ ಅಂಟಿಸುವ ವೇಳೆ ಸಮೀಕ್ಷೆ ಆಗಿದೆಯೇ ಇಲ್ಲವೇ ಎಂಬುದನ್ನು ಖಾತರಿಪಡಿಸಿಕೊಳ್ಳಬೇಕು. ಅದಕ್ಕಾಗಿ ಎನ್‌ಎಸ್‌ಎಸ್, ಎನ್‌ಸಿಸಿ, ನೋಂದಾಯಿತ ಸಂಸ್ಥೆಗಳ ಸಹಯೋಗ ಪಡೆದುಕೊಳ್ಳಲು ತಿಳಿಸಿದರು.

ಬೆಸ್ಕಾಂ, ಜಲಮಂಡಳಿಯ ದತ್ತಾಂಶ ಆಧಾರದ ಮೇಲೆ ಸಮೀಕ್ಷೆ ಕಾರ್ಯವನ್ನು ಪರಿಶೀಲಿಸಿ, ಬಾಕಿ ಸಮೀಕ್ಷೆ ಮಾಡಬೇಕಿರುವುದನ್ನು ತ್ವರಿತವಾಗಿ ಪೂರ್ಣಗೊಳಿಸಬೇಕೆಂದು ಸೂಚಿಸಿದರು.

ಬಿಬಿಎಂಪಿ ವ್ಯಾಪ್ತಿಯ 27 ವಿಧಾನಸಭಾ ಕ್ಷೇತ್ರಗಳಲ್ಲಿ ಪರಿಶಿಷ್ಟ ಜಾತಿ ಸಮಗ್ರ ಸಮೀಕ್ಷೆಯಲ್ಲಿ ಜೂನ್ 14ರವರೆಗೆ 1,77,718 ಪರಿಶಿಷ್ಟ ಜಾತಿಯವರ ಮನೆ ಹಾಗೂ 32,02,449 ಇತರರ ಮನೆಗಳಿಗೆ ಭೇಟಿ ನೀಡಿ ದತ್ತಾಂಶ ಸಂಗ್ರಹಿಸಲಾಗಿದೆ ಎಂದು ಹೇಳಿದರು.



ಚಿತ್ರಕಲೆ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಎಸ್‌.ಟಿ.ಸೋಮಶೇಖರ್ ಬಹುಮಾನ ವಿತರಿಸಿದರು

## ಶಾಲಾ ಮಕ್ಕಳಿಂದ ಪರಿಸರ ಜಾಗೃತಿ

ಪ್ರಜಾವಾಣಿ ವಾರ್ತೆ

**ರಾಜರಾಜೇಶ್ವರಿನಗರ:** ಹೇರೋಹಳ್ಳಿ, ದೊಡ್ಡ ಬಿದರಕಲ್ಲು ವಾರ್ಡ್ ಮತ್ತು ಕೊಡಿಗೇಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸರ್ಕಾರಿ ಪ್ರಾಥಮಿಕ ಪ್ರೌಢಶಾಲೆ ಸೇರಿದಂತೆ 17 ಶಾಲೆಗಳ ಮಕ್ಕಳು ಪರಿಸರ ಜಾಗೃತಿ ಮೂಡಿಸಿದರು.

ಹೇರೋಹಳ್ಳಿಯ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಂಡಿದ್ದ ಪರಿಸರದ ಬಗ್ಗೆ ನಾಟಕ, ನೃತ್ಯ, ಜಾಗೃತಿ ಮೂಡಿಸುವ ಗೀತಾಗಾಯನ, ಅರಣ್ಯ, ಮರ, ಗಿಡ, ಕೆರೆ, ಕುಂಟೆ ನಾಶ, ಪ್ಲಾಸ್ಟಿಕ್ ಬಳಕೆಯಿಂದಾಗುವ ದುಷ್ಪ ಪರಿಣಾಮ, ಮಲೀನ ನೀರು, ಆಹಾರ ಕಲಬೆರಕೆಯ ಬಗ್ಗೆ ಶಾಲಾ ಮಕ್ಕಳು ಮಾತನಾಡಿದರು.

ಶಾಸಕ ಎಸ್.ಟಿ.ಸೋಮಶೇಖರ್ ಅವರು ಹೇರೋಹಳ್ಳಿ ಕೆರೆ ಆವರಣದಲ್ಲಿ ವಿವಿಧ ಜಾತಿಯ ಸಸಿಗಳನ್ನು ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಹೇರೋಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಚ್.ಶ್ರೀಧರ್, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಸುಮ, ಯುವ ಕಾಂಗ್ರೆಸ್ ಅಧ್ಯಕ್ಷ ನಿಖಿಲ್‌ಗೌಡ, ನಿವೃತ್ತ ಮುಖ್ಯ ಶಿಕ್ಷಕ ನಾಗರಾಜು, ಗ್ರಾ.ಪಂ ಅಧ್ಯಕ್ಷೆ ವಿನೋಧ ನರಸಿಂಹಮೂರ್ತಿ, ಪ್ರಕಾಶ್, ರೋಹಿಣಿ, ಆದಿತ್ಯ ರಮೇಶ್, ಎಂ.ಗಂಗರಾಜು, ನಿಖಿತ್‌ಗೌಡ, ಹೇಮ, ದೇವೇಗೌಡ, ಹನುಮಂತು ಉಪಸ್ಥಿತರಿದ್ದರು.

# ‘ಬಾನಂದೂರು ಕೆಂಪಯ್ಯಗೆ ಪದ್ಮಶ್ರೀ ನೀಡಲಿ’

## ಸಮತಾ ಸೈನಿಕ ದಳದ ರಾಜ್ಯ ಘಟಕದ ಅಧ್ಯಕ್ಷ ಎಂ. ವೆಂಕಟಸ್ವಾಮಿ ಒತ್ತಾಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಜಾನಪದ ಕಲಾವಿದರಾದ ಬಾನಂದೂರು ಕೆಂಪಯ್ಯ ಅವರಿಗೆ ಕೇಂದ್ರ ಸರ್ಕಾರ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಬೇಕು’ ಎಂದು ಸಮತಾ ಸೈನಿಕ ದಳದ ರಾಜ್ಯ ಘಟಕದ ಅಧ್ಯಕ್ಷ ಎಂ. ವೆಂಕಟಸ್ವಾಮಿ ಹೇಳಿದರು.

ಕರ್ನಾಟಕ ರಾಜ್ಯ ಸಂವಿಧಾನ ಬಳಗ ಶನಿವಾರ ಆಯೋಜಿಸಿದ್ದ ‘ದಣಿವರಿಯದ ಗಾನಕೋಗಿಲೆ ಬಾನಂದೂರು ಕೆಂಪಯ್ಯ ಅವರಿಗೆ 75ರ ಸಂಭ್ರಮ’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ನಾಲ್ಕು ದಶಕಗಳಿಂದ ಬಾನಂದೂರು ಕೆಂಪಯ್ಯ ಜಾನಪದ ಗೀತೆಗಳನ್ನು ಹಾಡುವ ಮೂಲಕ ಮನೆ ಮಾತಾಗಿದ್ದಾರೆ. ಅವರಿಗೆ ದೇಶದ ಉನ್ನತ ಪ್ರಶಸ್ತಿ ನೀಡುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಮನವಿ ಸಲ್ಲಿಸಬೇಕು. ಈ ಬಗ್ಗೆ ಕೇಂದ್ರ ಸಚಿವ ರಾಮದಾಸ್ ಅಠವಳೆ ಅವರ ಮೂಲಕ ಮನವಿ ಸಲ್ಲಿಸಲಾಗುವುದು. ಮುಂದಿನ ಅವರ ಜನ್ಮದಿನಕ್ಕೆ ಪದ್ಮಶ್ರೀ ಪ್ರಶಸ್ತಿ ಸಿಗುವಂತಾಗಬೇಕು’ ಎಂದು ಆಶಿಸಿದರು.

‘ಕೆಂಪಯ್ಯ ಅವರಿಗೆ ಪದ್ಮಶ್ರೀ ಪ್ರಶಸ್ತಿಗೆ ಶಿಫಾರಸು ಮಾಡುವಂತೆ ದಲಿತ ಸಂಘಟನೆಗಳ ಮುಖಂಡರು, ಸಾಹಿತಿಗಳು, ಕಲಾವಿದರು, ಚಿಂತಕರು, ಸಂಘ–ಸಂಸ್ಥೆಗಳು, ನಮ್ಮ ಸಮುದಾಯದ ಸಚಿವರು ರಾಜ್ಯ ಸರ್ಕಾರದ ಮೇಲೆ ಒತ್ತಡ ಹಾಕಬೇಕು’ ಎಂದರು.

ಇದೇ ಸಂದರ್ಭದಲ್ಲಿ ಕೆಂಪಯ್ಯ ಅವರಿಗೆ ಬೆಳ್ಳಿ ಕಿರೀಟ ತೊಡಿಸಿ ಗೌರವಿಸಲಾಯಿತು. ಕೆಂಪಯ್ಯ ಅವರ ಪತ್ನಿ ಸುಚಿತ್ರಾ ಉಪಸ್ಥಿತರಿದ್ದರು. ಹಲವಾರು ಜಾನಪದ ಕಲಾವಿದರು ಕೆಂಪಯ್ಯ ಅವರಿಗೆ ತಮ್ಮ ಹಾಡುಗಳ ಮೂಲಕ ಗೌರವ ಸಲ್ಲಿಸಿದರು.

ಕರ್ನಾಟಕ ಸಂವಿಧಾನ ಬಳಗದ ರಾಜ್ಯ ಘಟಕದ ಅಧ್ಯಕ್ಷ ಎಸ್. ಜಯಕಾಂತ್ ಚಾಲುಕ್ಯ, ಮಾಜಿ ಶಾಸಕ ಎ.ಕೆ. ಅನ್ನದಾನಿ, ಮಾಜಿ ವಿಧಾನ ಪರಿಷತ್ ಸದಸ್ಯ ಡಿ.ಎಸ್. ವೀರಯ್ಯ, ಪತ್ರಕರ್ತ ಇಂದೂಧರ ಹೊನ್ನಾಪುರ, ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್, ಚಲನಚಿತ್ರ ನಟ ಮದನ್ ಪಟೇಲ್ ಉಪಸ್ಥಿತರಿದ್ದರು.



ಕರ್ನಾಟಕ ರಾಜ್ಯ ಸಂವಿಧಾನ ಬಳಗ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜಾನಪದ ಕಲಾವಿದ ಬಾನಂದೂರು ಕೆಂಪಯ್ಯ ಅವರಿಗೆ ಬೆಳ್ಳಿ ಕಿರೀಟ ತೊಡಿಸಿ ಸನ್ಮಾನಿಸಲಾಯಿತು. ಕೆಂಪಯ್ಯ ಅವರ ಪತ್ನಿ ಸುಚಿತ್ರಾ, ಮಾಜಿ ಶಾಸಕ ಎ.ಕೆ. ಅನ್ನದಾನಿ, ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಎಸ್. ವೀರಯ್ಯ, ಬಳಗದ ರಾಜ್ಯ ಘಟಕದ ಅಧ್ಯಕ್ಷ ಎಸ್. ಜಯಕಾಂತ್ ಚಾಲುಕ್ಯ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

## ಚಿಟಿಕೆ ಸುದ್ದಿ

### ‘ಅಧಿಕಾರಿಗಳ ವರ್ಗಾವಣೆಯಲ್ಲಿ ಹರಾಜು’

**ಕಲಬುರಗಿ:** ‘ರಾಜ್ಯದಲ್ಲಿ ಭ್ರಷ್ಟಾಚಾರ ಮನೆ ಮಾತಾಗಿದ್ದು, ಹರಾಜಿನ ಮೂಲಕ ಅಧಿಕಾರಿಗಳ ವರ್ಗಾವಣೆ ನಡೆಯುತ್ತಿದೆ. 60 ಪರ್ಸೆಂಟ್ ಸರ್ಕಾರವೆಂದು ಗುತ್ತಿಗೆದಾರ ಸಂಘದವರೇ ಹೇಳಿದ್ದಾರೆ’ ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಆರೋಪಿಸಿದರು.



ಪ್ರಲ್ಹಾದ ಜೋಶಿ

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ರಾಜ್ಯದಲ್ಲಿನ ಅಸಮರ್ಥ ನಾಯಕತ್ವ, ಒಳಜಗಳದ ಪರಿಣಾಮದಿಂದಾಗಿ ಗೊಂದಲ ಸೃಷ್ಟಿಯಾಗಿದೆ. ಮನ ಬಂದಂತೆ ನಿರ್ಣಯಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಅದರ ನೇರ ಪರಿಣಾಮ ಆಡಳಿತದ ಮೇಲಾಗಿ, ಮತಾಂಧ ಶಕ್ತಿಗಳ ಸಂಖ್ಯೆ ಹೆಚ್ಚಾಗುತ್ತಿದೆ’ ಎಂದು ಅವರು ಆಪಾದಿಸಿದರು.

### ಡಿವೈಎಸ್‌ಪಿ ವರ್ಗಾವಣೆ ಆದೇಶಕ್ಕೆ ತಡೆ

**ಬೆಂಗಳೂರು:** ಸಿಐಡಿ ಡಿವೈಎಸ್‌ಪಿ ಟಿ.ಕೋದಂಡರಾಮ ಅವರನ್ನು ಕಬ್ಬನ್‌ಪಾರ್ಕ್ ಉಪ ವಿಭಾಗದ ಎಸಿಪಿಯಾಗಿ ಶನಿವಾರ ರಾತ್ರಿ ವರ್ಗಾವಣೆ ಮಾಡಿದ್ದ ಪೊಲೀಸ್ ಇಲಾಖೆ, ಕೆಲವೇ ಕ್ಷಣಗಳಲ್ಲಿ ಆದೇಶವನ್ನು ತಡೆಹಿಡಿದಿದೆ.

ಕಬ್ಬನ್‌ಪಾರ್ಕ್ ಉಪ ವಿಭಾಗಕ್ಕೆ ನಿಯುಕ್ತಿಗೊಳಿಸಲಾಗಿದ್ದು, ತಕ್ಷಣವೇ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಬೇಕು ಎಂದು ಮೊದಲ ಆದೇಶದಲ್ಲಿ ತಿಳಿಸಲಾಗಿತ್ತು. ಅದಾದ ಕೆಲವೇ ಕ್ಷಣಗಳಲ್ಲಿ ಸ್ಥಳ ನಿಯುಕ್ತಿಗೊಳಿಸಿ ಮಾಡಲಾದ ಆದೇಶವನ್ನು ಮುಂದಿನ ಆದೇಶದ ವರೆಗೆ ತಡೆ ಹಿಡಿಯಲಾಗಿದೆ ಎಂದು ಇನ್ನೊಂದು ಆದೇಶದಲ್ಲಿ ತಿಳಿಸಲಾಗಿದೆ.

## ಒಳ್ಳೆಯ ಕೆಲಸವನ್ನು ಗುರುತಿಸುವ ಪತ್ರಿಕೆ: ಸಂಸದ ಬಸವರಾಜ ಬೊಮ್ಮಾಯಿ

# ಕೂಡ್ಲಿ ಗುರುರಾಜಗೆ ಖಾದ್ರಿ ಶಾಮಣ್ಣ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ರಾಜಕೀಯ ಸುದ್ದಿ ಇಲ್ಲದಿದ್ದರೆ ಪತ್ರಿಕೆ ಆಕರ್ಷಕವಾಗಿರುವುದಿಲ್ಲ. ಅದೇ ರೀತಿ ರಾಜಕಾರಣಿಯ ಸುದ್ದಿಗಳು ಪತ್ರಿಕೆಯಲ್ಲಿ ಬರದಿದ್ದರೆ ಆ ರಾಜಕಾರಣಿಗೆ ಅಸ್ತಿತ್ವವೇ ಇರುವುದಿಲ್ಲ’ ಎಂದು ಸಂಸದ ಬಸವರಾಜ ಬೊಮ್ಮಾಯಿ ಅಭಿಪ್ರಾಯಪಟ್ಟರು.


ನಗರದಲ್ಲಿ ಶನಿವಾರ ಖಾದ್ರಿ ಶಾಮಣ್ಣ ಸ್ಮಾರಕ ಟ್ರಸ್ಟ್ ಏರ್ಪಡಿಸಿದ್ದ ಸಮಾರಂಭದಲ್ಲಿ ಪತ್ರಕರ್ತ ಕೂಡ್ಲಿ ಗುರುರಾಜ ಅವರಿಗೆ ‘ಖಾದ್ರಿ ಶಾಮಣ್ಣ ಪತ್ರಿಕೋದ್ಯಮ ಪ್ರಶಸ್ತಿ’ ಪ್ರದಾನ ಮಾಡಿ ಮಾತನಾಡಿದರು.

‘ಪತ್ರಿಕೋದ್ಯಮ ಬಹಳ ಪ್ರಭಾವಶಾಲಿ ಉದ್ಯಮ, ಪ್ರಜಾಪ್ರಭುತ್ವದಲ್ಲಿ ಜಾಗೃತವಾಗಿ ಇರುವುದು ಎಷ್ಟು ಮುಖ್ಯವೋ, ಜನ ಸಮುದಾಯದ ಪರ ಕೆಲಸ ಮಾಡುವುದು ಅಷ್ಟೇ ಮುಖ್ಯ. ಅದನ್ನು ಪತ್ರಿಕೋದ್ಯಮ ಮಾಡುತ್ತದೆ ಎಂಬ ವಿಶ್ವಾಸ ಇದೆ’ ಎಂದು ಅವರು ತಿಳಿಸಿದರು.

‘ಅದು, ನಮ್ಮ ಸರ್ಕಾರ ಬದಲಾಗುವ ಬಗ್ಗೆ ಚರ್ಚೆ ನಡೆಯುತ್ತಿದ್ದ ಸಮಯ. ಆಗ, ನಾನು ಕೇಂದ್ರದಿಂದ ಏಳು ನೀರಾವರಿ ಯೋಜನೆಗಳಿಗೆ ಅನುಮತಿ ಪಡೆದಿದ್ದೆ, ಅದನ್ನು ಪತ್ರಕರ್ತ ಉಮಾಪತಿ ಅವರು ಸರ್ಕಾರ ಬೀಳುವ ಸಂದರ್ಭದಲ್ಲಿಯೂ ಸಚಿವರು ನೀರಾವರಿ ಯೋಜನೆಗಳಿಗೆ ಅನುಮತಿ ಪಡೆದಿದ್ದಾರೆ ಎಂಬ ವಿಶ್ಲೇಷಣಾತ್ಮಕ ಲೇಖನ ಬರೆದಿದ್ದರು. ಒಳ್ಳೆಯ ಕೆಲಸ ಮಾಡಿದರೆ ಪತ್ರಿಕೆಯವರು ಗುರುತಿಸುತ್ತಾರೆ’ ಎಂದು ಹೇಳಿದರು.

ಪ್ರಶಸ್ತಿ ಸ್ವೀಕರಿಸಿದ ಕೂಡ್ಲಿ ಗುರುರಾಜ ಅವರು ತಮ್ಮ ವೃತ್ತಿಜೀವನದ ಅನುಭವಗಳನ್ನು ಹಂಚಿಕೊಂಡರು. ಹಾಗೆಯೇ, ಪ್ರಶಸ್ತಿಯೊಂದಿಗೆ ನೀಡಿದ್ದ ₹15 ಸಾವಿರ ಮೊತ್ತದ ಚೆಕ್ ಅನ್ನು ಟ್ರಸ್ಟ್‌ಗೆ ನೀಡಿ, ಟ್ರಸ್ಟ್ ಏಳಿಗೆಗೆ ಬಳಸಿಕೊಳ್ಳುವಂತೆ ಮನವಿ ಮಾಡಿದರು.

ಜಾನಪದ ವಿದ್ವಾಂಸ ಮೀರಾಸಾಬಿಹಳ್ಳಿ ಶಿವಣ್ಣ ಮಾತನಾಡಿದರು. ಕಾರ್ಯಕ್ರಮದಲ್ಲಿ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ, ಅಸ್ಸಾಂ ಕೇಂದ್ರಿಯ ವಿಶ್ವವಿದ್ಯಾಲಯದ ನಿವೃತ್ತ ಸಮ ಕುಲಪತಿ ಪ್ರೊ. ಕೆ.ವಿ. ನಾಗರಾಜ್ ಮಾತನಾಡಿದರು. ಟ್ರಸ್ಟ್ ಅಧ್ಯಕ್ಷ ಎಚ್. ಆರ್. ಶ್ರೀಶ ಹಾಜರಿದ್ದರು.



ನಗರದಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪತ್ರಕರ್ತ ಕೂಡ್ಲಿ ಗುರುರಾಜ ಅವರಿಗೆ ‘ಖಾದ್ರಿ ಶಾಮಣ್ಣ ಪತ್ರಿಕೋದ್ಯಮ’ ಪ್ರಶಸ್ತಿ ಪ್ರದಾನ ಮಾಡಲಾಯಿತು. ವೂಡೇ ಪಿ. ಕೃಷ್ಣ, ಬಸವರಾಜ ಬೊಮ್ಮಾಯಿ, ಮೀರಾಸಾಬಿಹಳ್ಳಿ ಶಿವಣ್ಣ, ಕೆ.ವಿ. ನಾಗರಾಜ್, ಎಚ್. ಆರ್. ಶ್ರೀಶ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

## ತಿರುಮಲ ತಿರುಪತಿ ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಬಿ.ಆರ್. ನಾಯ್ಡುಗೆ ಎಂ.ಆರ್. ಜಯರಾಮ್ ಮನವಿ

# ‘ಧ್ಯಾನಮಂದಿರ ನಿರ್ಮಾಣಕ್ಕೆ ಸ್ಥಳಾವಕಾಶ ನೀಡಿ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಆಂಧ್ರಪ್ರದೇಶದ ತಿರುಪತಿಯ ತಿರುಮಲದಲ್ಲಿ ವೆಂಕಟೇಶ್ವರ ಸ್ವಾಮಿ ಧ್ಯಾನ ಮಂದಿರವನ್ನು ನಿರ್ಮಿಸಲು ಸ್ಥಳಾವಕಾಶ ನೀಡಬೇಕು ಎಂದು ಕರ್ನಾಟಕ ಪ್ರದೇಶ ಬಲಿಜ ಸಂಘ ಹಾಗೂ ಕೈವಾರ ಕ್ಷೇತ್ರದ ಧರ್ಮಾಧಿಕಾರಿ ಎಂ.ಆರ್. ಜಯರಾಮ್ ಅವರು ಶನಿವಾರ ನಡೆದ ಸಮಾಲೋಚನಾ ಸಭೆಯಲ್ಲಿ ಟಿಟಿಡಿ ಅಧ್ಯಕ್ಷ ಬಿ.ಆರ್. ನಾಯ್ಡು ಅವರಿಗೆ ಮನವಿ ಸಲ್ಲಿಸಿದರು.


ನಂತರ ಮಾತನಾಡಿದ ಎಂ.ಆರ್. ಜಯರಾಮ್, ‘ಕೈವಾರದ ಸಂತ ಶ್ರೀ ಯೋಗಿನಾರೇಯಣ ತಾತಯ್ಯನವರು ತಿರುಮಲದ ವೆಂಕಟೇಶ್ವರಸ್ವಾಮಿಯ ಬಗ್ಗೆ ಹಲವಾರು ಕೀರ್ತನೆಗಳನ್ನು ರಚಿಸಿ, ಸ್ತುತಿಸಿದ್ದಾರೆ. ಮಾನಸ ಪೂಜೆಯಲ್ಲಿ ಪ್ರಥಮವಾಗಿ ವೆಂಕಟೇಶ್ವರಸ್ವಾಮಿಯನ್ನು ಆರಾಧಿಸಿದ್ದಾರೆ. ತಾತಯ್ಯನವರು ಯೋಗಸೂತ್ರದಲ್ಲಿ ವೆಂಕಟೇಶ್ವರಸ್ವಾಮಿ ಕುರಿತು ವರ್ಣನೆ ಮಾಡಿದ್ದಾರೆ. ಕೈವಾರಕ್ಕೂ ಹಾಗೂ ತಿರುಪತಿಗೂ ಅವಿನಾಭಾವ ಸಂಬಂಧವಿದೆ. ಆದ್ದರಿಂದ ತಿರುಮಲದಲ್ಲಿ ವೆಂಕಟೇಶ್ವರಸ್ವಾಮಿ ಧ್ಯಾನಮಂದಿರ ನಿರ್ಮಿಸಲು ಸ್ಥಳಾವಕಾಶವನ್ನು ನೀಡಬೇಕು’ ಎಂದು ಮನವಿ ಮಾಡಿದರು.

ಮನವಿ ಸ್ವೀಕರಿಸಿ ಮಾತನಾಡಿದ ಟಿಟಿಡಿ ಅಧ್ಯಕ್ಷ ಬಿ.ಆರ್. ನಾಯ್ಡು, ‘ನಾನು ಟಿಟಿಡಿ ಅಧ್ಯಕ್ಷನಾದ ಮೇಲೆ ಹಲವಾರು ಸುಧಾರಣೆಗಳನ್ನು ತಂದಿದ್ದೇನೆ. ಮುಂದಿನ ದಿನಗಳಲ್ಲಿ ಕೃತಕ ಬುದ್ಧಿಮತ್ತೆ (ಎಐ) ಸಹಾಯದಿಂದ ಭಕ್ತರಿಗೆ ಇನ್ನೂ ಹೆಚ್ಚಿನ ಸಹಾಯವಾಗುವ ರೀತಿಯಲ್ಲಿ ಯೋಜನೆಗಳನ್ನು ರೂಪಿಸಲಾಗುತ್ತಿದೆ. ವೆಂಕಟೇಶ್ವರಸ್ವಾಮಿಯ ದರ್ಶನಕ್ಕೆ ಭಕ್ತರಿಗೆ ಹೆಚ್ಚು ಸಮಯ ತೆಗೆದುಕೊಳ್ಳದಂತೆ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ. ತಿರುಮಲದಲ್ಲಿ ವೆಂಕಟೇಶ್ವರ ಸ್ವಾಮಿ ಧ್ಯಾನ ಮಂದಿರ ನಿರ್ಮಾಣ ಮಾಡಲು ನೀಡಿರುವ ಮನವಿಯನ್ನು ಪರಿಶೀಲಿಸಿ, ಟ್ರಸ್ಟ್‌ನಲ್ಲಿ ಸೂಕ್ತ ನಿರ್ಧಾರವನ್ನು ಕೈಗೊಳ್ಳಲಾಗುವುದು’ ಎಂದು ತಿಳಿಸಿದರು.

ಮಾಜಿ ಸಚಿವ ಎಂ.ಆರ್. ಸೀತಾರಾಮ್, ನಿವೃತ್ತ ಐಎಎಸ್ ಅಧಿಕಾರಿಗಳಾದ ಎಂ.ಆರ್. ಶ್ರೀನಿವಾಸ ಮೂರ್ತಿ, ಬಿ.ಎನ್. ಕೃಷ್ಣಯ್ಯ, ಐಎಸ್‌ಎಫ್ ಮನೋಜ್‌ಕುಮಾರ್, ಟಿಟಿಡಿ ಸದಸ್ಯರಾದ ನರೇಶ್, ಶಾಂತಾರಾಮ್, ಮಾಜಿ ಶಾಸಕ ಎ. ನಾಗರಾಜ್, ನಟಿ ತಾರಾ ಅನುರಾಧ, ಮಾಜಿ ಮೇಯರ್ ಪದ್ಮಾವತಿ, ಬಲಿಜ ಸಂಘದ ಅಧ್ಯಕ್ಷ ಪೆರಿಕಲ್ ಸುಂದರ್ ಉಪಸ್ಥಿತರಿದ್ದರು.

**ಮುಖ್ಯಾಂಶಗಳು**

- ಕೈವಾರಕ್ಕೂ ಹಾಗೂ ತಿರುಪತಿಗೂ ಅವಿನಾಭಾವ ಸಂಬಂಧ
- ಸ್ಥಳ: ಸೂಕ್ತ ನಿರ್ಧಾರದ ಭರವಸೆ ನೀಡಿದ ಬಿ.ಆರ್.ನಾಯ್ಡು



ತಿರುಮಲದಲ್ಲಿ ವೆಂಕಟೇಶ್ವರ ಸ್ವಾಮಿ ಧ್ಯಾನ ಮಂದಿರ ನಿರ್ಮಿಸಲು ಸ್ಥಳಾವಕಾಶ ನೀಡುವಂತೆ ಎಂ.ಆರ್. ಜಯರಾಮ್ ಅವರು ಟಿಟಿಡಿ ಅಧ್ಯಕ್ಷ ಬಿ.ಆರ್. ನಾಯ್ಡು ಅವರಿಗೆ ಮನವಿ ಸಲ್ಲಿಸಿದರು. ಎಂ.ಆರ್. ಸೀತಾರಾಮ್, ತಾರಾ ಅನುರಾಧ ಉಪಸ್ಥಿತರಿದ್ದಾರೆ

## ಚಿತ್ರಾವಳಿ



ಗಾಂಧಿನಗರದಲ್ಲಿರುವ ಕರ್ನಾಟಕ ಮಾನವ ಸಂಪನ್ಮೂಲ ಸೇವೆ ಒದಗಿಸುವ ಗುತ್ತಿಗೆದಾರರ ಸಂಘದ ರಾಜ್ಯಮಟ್ಟದ ನೂತನ ಕಚೇರಿಯನ್ನು ತುಮಕೂರಿನ ಸಿದ್ಧಗಂಗಾ ಮಠದ ಪೀಠಾಧ್ಯಕ್ಷ ಸಿದ್ಧಲಿಂಗ ಸ್ವಾಮೀಜಿ ಉದ್ಘಾಟಿಸಿದರು. ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷ ನಿಶ್ಚಲಾನಂದನಾಥ ಸ್ವಾಮೀಜಿ, ಸಂಘದ ರಾಜ್ಯಾಧ್ಯಕ್ಷ ಮಹಾಲಿಂಗೇಗೌಡ ಮುದ್ದನಘಟ್ಟ ಉಪಸ್ಥಿತರಿದ್ದರು




ವಿಶ್ವ ಪರಿಸರ ದಿನದ ಅಂಗವಾಗಿ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ (ಐಎಸ್‌ಇಸಿ) ಆಯೋಜಿಸಿದ್ದ ‘ಪ್ಲಾಸ್ಟಿಕ್ ಬಳಕೆ ಅಂತ್ಯಗೊಳಿಸೋಣ’ ಅಭಿಯಾನಕ್ಕೆ ಸಂಸ್ಥೆಯ ನಿರ್ದೇಶಕ ಸಿ.ಎಂ. ಲಕ್ಷ್ಮಣ, ರಿಜಿಸ್ಟ್ರಾರ್ ಎ.ಎಸ್. ಲಕ್ಷ್ಮಿ ಚಾಲನೆ ನೀಡಿದರು




ರಾಜ್ಯ ಸಾರಿಗೆ ಸಂಸ್ಥೆಯಲ್ಲಿ ಸುದೀರ್ಘ ಸೇವಾ ಅವಧಿಯಲ್ಲಿ ಒಂದೇ ಒಂದು ಅಪಘಾತ ಇಲ್ಲದೇ ಕಾರ್ಯನಿರ್ವಹಿಸಿ ನಿವೃತ್ತರಾದ ಚಾಲಕ ಜಿ.ಎಚ್. ಪ್ರಕಾಶ ಅವರಿಗೆ ‘ರಸ್ತೆ ಸುರಕ್ಷತೆಯಲ್ಲಿ ವೃತ್ತಿಪರ ಕರ್ತವ್ಯ’ ಪ್ರಶಸ್ತಿ ನೀಡಿ ರೋಟರಿ ಬೆಂಗಳೂರು ಸ್ಪಂದನ ಸಂಸ್ಥೆಯು ಗೌರವಿಸಿತು. ಸಂಸ್ಥೆಯ ಪ್ರಮುಖರಾದ ಬಿ.ಟಿ. ಸುಬ್ರಮಣಿ, ಪ್ರಸನ್ನಕುಮಾರಿ ಮತ್ತು ಯೋಗೇಶ್ ಲಕ್ಕಣ್ಣ (ನಿಂತವರು) ಇದ್ದರು



ಬೆಂಗಳೂರು ನಗರ ವಿಶ್ವವಿದ್ಯಾಲಯದ ನೂತನ ಶೈಕ್ಷಣಿಕ ವಿಭಾಗದಲ್ಲಿ ರಷ್ಯನ್ ಭಾಷಾ ಕೇಂದ್ರವನ್ನು ನವದೆಹಲಿಯ ರಷ್ಯನ್ ಹೌಸ್ ನಿರ್ದೇಶಕಿ ಇ.ಎಸ್. ರೆಮಿಜೋವಾ ಉದ್ಘಾಟಿಸಿದರು.

# ಟೆಕಿ, ಉದ್ಯಮಿಗಳಿಗೆ ವಂಚಕರ ಗಾಳ

## ಹೂಡಿಕೆ ಹೆಸರಿನಲ್ಲಿ ₹2 ಕೋಟಿ ವಂಚನೆ ಹಣ ಕಳೆದುಕೊಳ್ಳುತ್ತಿರುವ ಜನರು

• ಆದಿತ್ಯ ಕೆ.ಎ.

**ಬೆಂಗಳೂರು:** ಹೂಡಿಕೆಯ ಆಮಿಷವೊಡ್ಡಿ ಹಣ ದೋಚುತ್ತಿರುವ ಪ್ರಕರಣಗಳು ಬೆಂಗಳೂರಿನಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿವೆ.

ಪಶ್ಚಿಮ ವಿಭಾಗದಲ್ಲಿ ನೆಲಸಿರುವ ಟೆಕಿ, ಎಂಜಿನಿಯರ್, ಕಂಪ್ಯೂಟರ್ ಆಪರೇಟರ್‌ಗೆ ಗಾಳ ಹಾಕಿದ ಸೈಬರ್ ವಂಚಕರು, ₹2 ಕೋಟಿ ದೋಚಿದ್ದಾರೆ.

ಹೂಡಿಕೆಯ ಆಮಿಷಕ್ಕೆ ಒಳಗಾಗಿ ಹಣ ಕಳೆದುಕೊಳ್ಳುತ್ತಿರುವವರ ಸಂಖ್ಯೆ ರಾಜ್ಯದ ಇತರೆ ಭಾಗ ಕ್ಕಿಂತ ಬೆಂಗಳೂರಿನಲ್ಲಿಯೇ ಹೆಚ್ಚಿದೆ. ಅದರಲ್ಲೂ ಪದವೀಧರರು, ನಿವೃತ್ತ ಅಧಿಕಾರಿಗಳು, ಸಾಫ್ಟ್‌ವೇರ್ ಎಂಜಿನಿಯರ್‌ಗಳು, ಉದ್ಯಮಿಗಳೇ ಸೈಬರ್ ವಂಚಕರ ಬಲೆಗೆ ಸುಲಭವಾಗಿ ಬೀಳುತ್ತಿದ್ದಾರೆ ಎಂಬುದು ತನಿಖೆಯಿಂದ ಗೊತ್ತಾಗಿದೆ ಎಂದು ಸೈಬರ್ ಪೊಲೀಸರು ಹೇಳಿದರು.



**ಇಲಾಖೆಯ ಅಧಿಕಾರಿಗಳ ಜತೆಗೆ ಸಭೆ ನಡೆಸಲಾಗಿದೆ. ತಂತ್ರಜ್ಞಾನ ಆಧರಿಸಿ ಸೈಬರ್ ವಂಚಕರನ್ನು ಪತ್ತೆ ಮಾಡಿ ಶಿಕ್ಷೆಗೆ ಒಳಪಡಿಸುವಂತೆ ಸೂಚಿಸಲಾಗಿದೆ**

**ಸೀಮಂತ್ ಕುಮಾರ್ ಸಿಂಗ್**
ನಗರ ಪೊಲೀಸ್ ಕಮಿಷನರ್

ವಿಶೇಷ ವರದಿ

ಆರಂಭದಲ್ಲಿ ಸ್ವಲ್ಪಭಾಗ ಲಾಭಾಂಶ ನೀಡುವ ವಂಚಕರು, ನಂತರ ಹೆಚ್ಚಿನ ಆದಾಯ ಬಂದಿರುವಂತೆ ಆನ್‌ಲೈನ್‌ನಲ್ಲಿ ಮಾಹಿತಿ ತೋರಿಸುತ್ತಾರೆ. ಆ ಹಣ ಪಡೆಯಲು ತೆರಿಗೆ ರೂಪದಲ್ಲಿ ಮತ್ತಷ್ಟು ಹಣ ಪಾವತಿಸುವಂತೆ ಮನವೊಲಿಸುತ್ತಾರೆ. ಅವರ ಮಾತು ನಂಬಿ, ಬ್ಯಾಂಕ್ ಖಾತೆಗಳಿಗೆ ಹಣ ಜಮೆ ಮಾಡಿದ ಬಳಿಕ



ವಂಚಕರು ಸಂಪರ್ಕಕ್ಕೇ ಸಿಗುತ್ತಿಲ್ಲ. ಈ ರೀತಿ ವಂಚನೆಗೆ ಒಳಗಾದ ಹಲವರು, ಪ್ರಕರಣ ದಾಖಲಿಸಲು ನಿತ್ಯವೂ ಸೈಬರ್ ಠಾಣೆಗಳಿಗೆ ಬರುತ್ತಿದ್ದಾರೆ ಎಂದು ತನಿಖಾಧಿಕಾರಿಯೊಬ್ಬರು ತಿಳಿಸಿದರು.

'ವಂಚಕರ ಗಾಳಕ್ಕೆ ಸಿಲುಕಿ, ರಾಜರಾಜೇಶ್ವರಿ ನಗರದ 57 ವರ್ಷದ ಎಂಜಿನಿಯರ್ ಸತ್ಯನಾರಾಯಣ ಎಂಬುವವರು ₹1.44 ಕೋಟಿ ಕಳೆದುಕೊಂಡಿದ್ದಾರೆ. ವಾಟ್ಸ್‌ಆ್ಯಪ್‌ಗೆ ಬಂದ ಜಾಹೀರಾತು ನಂಬಿ ವಂಚನೆಗೆ ಒಳಗಾಗಿದ್ದಾರೆ. ಇದೇ ರೀತಿ ದೊಡ್ಡ ಮೊತ್ತದ ಹಣವನ್ನು ಹಲವರು ಕಳೆದುಕೊಂಡಿದ್ದಾರೆ. ಸಾಮಾಜಿಕ ಜಾಲತಾಣ ಹಾಗೂ ಮಾಧ್ಯಮಗಳ ಮೂಲಕ ಜಾಗೃತಿ ಮೂಡಿಸುತ್ತಿದ್ದರೂ ಜನರು ಎಚ್ಚರಿಕೆ ವಹಿಸುತ್ತಿಲ್ಲ' ಎಂದು ಸೈಬರ್ ಪೊಲೀಸರು ಹೇಳಿದರು.

'ಸತ್ಯನಾರಾಯಣ ಅವರು ತಮ್ಮ ವಾಟ್ಸ್‌ಆ್ಯಪ್ ಪರಿಶೀಲನೆ ನಡೆಸುತ್ತಿದ್ದರು. ಷೇರು ವ್ಯವಹಾರ ಬಗ್ಗೆ ಜಾಹೀರಾತು ಬಂದಿತ್ತು. ಅದರ ಮೇಲೆ ಕ್ಲಿಕ್ ಮಾಡಿದಾಗ ಕ್ಯಾಪಿಟಲ್ ಹಂಟರ್ಸ್ ಎಂಬ ಗ್ರೂಪ್‌ಗೆ ದೂರುದಾರರು ಸೇರ್ಪಡೆ ಆಗಿದ್ದರು. ಆ ಗ್ರೂಪ್‌ನಲ್ಲಿ ಮಿತ್ತಲ್ ಎಂಬಾತ ಪರಿಚಯವಾಗಿ ಕಂಪನಿಯಲ್ಲಿ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭಾಂಶ ಸಿಗುವ ಆಮಿಷವೊಡ್ಡಿದ್ದ. ನಂತರ ಅನಿಲ್ ಕುಮಾರ್ ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ಐಪಿಒ ಷೇರು ಬಗ್ಗೆ ಮಾಹಿತಿ ನೀಡಿ ₹50 ಸಾವಿರ ಹೂಡಿಕೆ ಮಾಡಿಸಿಕೊಂಡಿದ್ದ. ಅದಾದ ಬಳಿಕ ಅಧಿಕ ಹಣ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ಬರಲಿದೆ ಎಂದು ಆಮಿಷವೊಡ್ಡಿದ್ದ' ಎಂದು ಹೇಳಿದರು.

'ದೂರುದಾರರು, ತಮ್ಮ ಬ್ಯಾಂಕ್ ಅಲ್ಲದೇ ಪತ್ನಿ, ಪುತ್ರಿಯ ಖಾತೆಯಲ್ಲಿದ್ದ ಹಣವನ್ನೂ ಹೂಡಿಕೆ ಮಾಡಿದ್ದರು. ಒಟ್ಟು ಏಳು ಖಾತೆಗಳಿಂದ ಆರೋಪಿಗಳು ನೀಡಿದ್ದ ಬ್ಯಾಂಕ್ ಖಾತೆಗಳಿಗೆ ಹಣ ವರ್ಗಾವಣೆ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

### 14 ಬ್ಯಾಂಕ್ ಖಾತೆ; ₹67 ಲಕ್ಷ ಹೂಡಿಕೆ

ಆರ್.ಆರ್. ನಗರದ ಎಂ.ಜಿ.ಲೇಔಟ್‌ನಲ್ಲಿ ನೆಲಸಿರುವ ಕಂಪ್ಯೂಟರ್ ಆಪರೇಟರ್ ನೃತೇಶ್ವರ ಪ್ರಸಾದ್ ಅವರು ₹68.50 ಲಕ್ಷ ಕಳೆದುಕೊಂಡಿದ್ದಾರೆ.

ಸತ್ಯನಾರಾಯಣ ಅವರಿಗೆ ವಂಚಿಸಿದ್ದ ಮಾದರಿಯಲ್ಲೇ ನೃತೇಶ್ವರ ಪ್ರಸಾದ್‌ಗೂ ಮೋಸ ಮಾಡಲಾಗಿದೆ ಎಂಬುದು ತನಿಖೆಯಿಂದ ಗೊತ್ತಾಗಿದೆ.

'ಪ್ರಸಾದ್ ಅವರ ವಾಟ್ಸ್‌ಆ್ಯಪ್‌ಗೆ ಅಪರಿಚಿತ ಸಂಖ್ಯೆಯಿಂದ ಸಂದೇಶ ಬಂದಿತ್ತು. ಆ ಸಂದೇಶದ ಮೇಲೆ ಕ್ಲಿಕ್ ಮಾಡಿದಾಗ 39 ಸ್ಟಾಕ್ ಇನ್ವೆಸ್ಟರ್ ಅಲೈನ್ಸ್ ಎಂಬ ಗ್ರೂಪ್ ಸೇರ್ಪಡೆ ಆಗಿದ್ದರು. ಸುಪ್ರಿಯಾ ಎಂಬಾಕೆ ಹೂಡಿಕೆಯ ಕುರಿತು ಮಾಹಿತಿ ನೀಡಿದ್ದಳು. ಆರಂಭದಲ್ಲಿ ನೃತೇಶ್ವರ ₹50 ಸಾವಿರ ಹಣ ಹೂಡಿಕೆ ಮಾಡಿದ್ದರು. ಹೆಚ್ಚಿನ ಹಣ ಹೂಡಿಕೆ ಮಾಡುವಂತೆ ಸೈಬರ್ ವಂಚಕರು ಆಮಿಷವೊಡ್ಡಿದ್ದರಿಂದ 14 ಬ್ಯಾಂಕ್ ಖಾತೆಗಳಿಂದ ಹಣ ಹೂಡಿಕೆ ಮಾಡಿ ಹಣ ಕಳೆದುಕೊಂಡಿದ್ದಾರೆ' ಎಂದು ಪೊಲೀಸರು ಹೇಳಿದರು.

'ಅಪರಿಚಿತ ಸಂಖ್ಯೆಯಿಂದ ಯಾವುದೇ ಸಂದೇಶ ಬಂದರೂ ಕ್ಲಿಕ್ ಮಾಡಬಾರದು. ಸಂಶಯ ಬಂದರೆ ಸಮೀಪದ ಠಾಣೆಗೆ ಮಾಹಿತಿ ನೀಡಬಹುದು' ಎಂದು ಅಧಿಕಾರಿಯೊಬ್ಬರು ಮನವಿ ಮಾಡಿದರು.

ನಿರ್ಮಾಣ ಹಂತದಲ್ಲಿರುವ ಪುಣೆ–ಬೆಂಗಳೂರು ಹೆದ್ದಾರಿ

# ಬೈಪಾಸ್ ಹೆದ್ದಾರಿ ಕುಸಿತ

• ನಾಗರಾಜ್ ಬಿ.ಎನ್.

**ಹುಬ್ಬಳ್ಳಿ:** ನಿರ್ಮಾಣ ಹಂತದಲ್ಲಿರುವ ಪುಣೆ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ (ಬೈಪಾಸ್) ಅಲ್ಲಲ್ಲಿ ಕುಸಿದಿದ್ದು, ಭವಿಷ್ಯದಲ್ಲಿ ಎದುರಾಗಬಹುದಾದ ಅಪಾಯದ ಮುನ್ಸೂಚನೆ ನೀಡುವಂತಿದೆ.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಡಿ ₹2,400 ಕೋಟಿ ವೆಚ್ಚದಲ್ಲಿ 6 ಪಥದ ಹೆದ್ದಾರಿ ಕಾಮಗಾರಿ ಪ್ರಗತಿಯಲ್ಲಿದೆ. ಹುಬ್ಬಳ್ಳಿ ಗಬ್ಬೂರು ವೃತ್ತದಿಂದ ಧಾರವಾಡದ ನರೇಂದ್ರದವರೆಗೆ 32 ಕಿ.ಮೀ. ರಸ್ತೆ ವಿಸ್ತರಿಸಲಾಗುತ್ತಿದೆ.

ಜೆಸಿಬಿ ಮತ್ತು ಬೃಹತ್ ಯಂತ್ರಗಳಿಂದ ಕಾಮಗಾರಿ ನಡೆದಿದ್ದು, ಕೆಲವೆಡೆ ಗುಡ್ಡ ಕೊರೆಯಲಾಗಿದೆ. ಎರಡು ಸರ್ವಿಸ್ ರಸ್ತೆ ಹೊರತುಪಡಿಸಿ, ಆರು ಪಥ ಹೆದ್ದಾರಿ ನಿರ್ಮಾಣಕ್ಕೆ ಕೆಲವೆಡೆ ಕನಿಷ್ಠ 10 ರಿಂದ 20 ಅಡಿ ಆಳ ಮಣ್ಣು ತೆಗೆಯಲಾಗಿದೆ. ಇಟಗಟ್ಟಿ ಗ್ರಾಮ ಮತ್ತು ಮೈಕ್ರೋಫಿನಿಷ್ ಕಂಪನಿ ಬಳಿ ನಿರ್ಮಾಣ ಹಂತದ ರಸ್ತೆ ಕುಸಿದಿದೆ. ರಾಶಿಗಟ್ಟಲೇ ಮಣ್ಣು, ಪಕ್ಕದ ನಿರ್ಮಾಣ ಹಂತದ ಸರ್ವಿಸ್ ರಸ್ತೆ ಮೇಲೆ ಬಿದ್ದಿದೆ.

ಅಪಾಯದ ಹಿನ್ನೆಲೆಯಲ್ಲಿ ರಸ್ತೆ ಕುಸಿದ ಸ್ಥಳದ ಹೆದ್ದಾರಿಯ ಎರಡೂ ಕಡೆ, ಎಚ್ಚರಿಕೆ ಸಂದೇಶ ನೀಡಿ, ಬ್ಯಾರಿಕೇಡ್ ಹಾಕಲಾಗಿದೆ.

ಕುಸಿತದ ಸ್ಥಳ ಸರಿಪಡಿಸಲು ಜೆಸಿಬಿಯಿಂದ ಹೆಚ್ಚುವರಿಯಾಗಿ ಮಣ್ಣು ಕೊರೆದು, ಕಾಮಗಾರಿ ನಡೆಸುವ ಸಿದ್ಧತೆ ನಡೆದಿದೆ. ಅಲ್ಲದೆ, ನಿರ್ಮಾಣ ಹಂತದಲ್ಲಿರುವ ಹೆದ್ದಾರಿಯ ಕೆಲವು ಕಡೆ ಬಿರುಕು ಸಹ ಬಿಟ್ಟಿದೆ. ಇದು ವಾಹನ ಸವಾರರಲ್ಲಿ ಆತಂಕ ಮೂಡಿಸಿದೆ.

'ಕಾಮಗಾರಿ ಪ್ರಗತಿಯಲ್ಲಿ ಇರುವ ಕಾರಣ, ರಸ್ತೆ ತೀರಾ ಇಕ್ಕಟ್ಟಾಗಿದೆ. ಇದೇ ರಸ್ತೆಯಲ್ಲಿ ವಾಹನಗಳ ದ್ವಿಮುಖ ಸಂಚಾರ ನಡೆಯುತ್ತಿದ್ದು, ಸಾಕಷ್ಟು ಅಪಘಾತ ಸಂಭವಿಸಿವೆ. ಆಮೆಗತಿಯಲ್ಲಿ ಕಾಮಗಾರಿ ನಡೆಯುತ್ತಿದ್ದು, ಅಲ್ಲಲ್ಲಿ, ಮಣ್ಣು ತೆಗೆದು ಹಾಗೆಯೇ ಬಿಡಲಾಗಿದೆ. ಏರು–ಇಳಿತವಿರುವ ಇಕ್ಕಟ್ಟಾದ ರಸ್ತೆಯಲ್ಲಿ ವಾಹನಗಳ ಸಂಚಾರ ಅಪಾಯಕಾರಿ ಆಗಿದೆ. ಹೀಗಿದ್ದಾಗ, ರಸ್ತೆ ಕುಸಿದಿರುವುದು ಅಪಘಾತಕ್ಕೆ ಮತ್ತಷ್ಟು ಕಾರಣವಾಗುವುದಲ್ಲದೆ, ಭವಿಷ್ಯದ ಪ್ರಶ್ನೆಯೂ ಎದುರಾಗಿದೆ' ಎಂದು ಬೆಳಗಾವಿಯ ಕಾರು ಚಾಲಕ ಸಲೀಮ್ ಅಹ್ಮದ್ ರಾಜಾವಾಲೆ ಹೇಳಿದರು.



ಹುಬ್ಬಳ್ಳಿ–ಧಾರವಾಡ ಮಧ್ಯೆ ಮೈಕ್ರೋಫಿನಿಷ್ ಕಂಪನಿ ಬಳಿ ನಿರ್ಮಾಣ ಹಂತದಲ್ಲಿರುವ ರಾಷ್ಟ್ರೀಯ ಹೆದ್ದಾರಿ ಕುಸಿದಿದೆ
ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

ರಸ್ತೆಯಲ್ಲೇ ಜನ್ಮದಿನದ ಆಚರಣೆ

# ಬೀದಿಬದಿ ವ್ಯಾಪಾರಿಗಳ ಸಂಘದ ಅಧ್ಯಕ್ಷ ಬಂಧನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಸ್ತೆ ಮಧ್ಯದಲ್ಲಿ ನಿಂತು ಜನ್ಮದಿನ ಆಚರಿಸಿಕೊಂಡು ಸಾರ್ವಜನಿಕರ ಸಂಚಾರಕ್ಕೆ ಅಡ್ಡಿ ಉಂಟು ಮಾಡಿದ್ದ ಆರೋಪದ ಅಡಿ ಬೀದಿಬದಿ ವ್ಯಾಪಾರಿಗಳ ಸಂಘದ ಅಧ್ಯಕ್ಷ, ವಿದ್ಯಾರಣ್ಯಪುರದ ನಿವಾಸಿ ಭಕ್ತವತ್ಸ(47) ಎಂಬುವವರನ್ನು ವಿದ್ಯಾರಣ್ಯಪುರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಆರೋಪಿ, ತನ್ನ ಸ್ನೇಹಿತರು ಹಾಗೂ ಕುಟುಂಬ ಸದಸ್ಯರ ಜತೆ ಸೇರಿಕೊಂಡು ಜೂನ್ 12ರಂದು ವಿದ್ಯಾರಣ್ಯಪುರದ ನರಸೀಪುರ ಮುಖ್ಯರಸ್ತೆಯಲ್ಲಿ ಕೇಕ್ ಕತ್ತರಿಸಿ, ಪಟಾಕಿ ಸಿಡಿಸಿ ಜನ್ಮದಿನ ಆಚರಿಸಿಕೊಂಡಿದ್ದ. ಈ ಸಂಬಂಧ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.

'ಜನ್ಮದಿನಾಚರಣೆಗೆಂದು ಬ್ಯಾನರ್ ಕಟ್ಟಲಾಗಿತ್ತು. ಪಟಾಕಿ ಸಿಡಿಸಲಾಗಿತ್ತು. ಅಲ್ಲದೆ, ಭಕ್ತವತ್ಸಲನನ್ನು ಮೆಚ್ಚಿಸಲು ಕೆಲವು ಬೆಂಬಲಿಗರು, ತಮ್ಮ ಬೈಕ್‌ಗಳನ್ನು ಸ್ಟಾರ್ಟ್ ಮಾಡಿ, ಮಾರ್ಪಡಿಸಿದ ಸೈಲೆನ್ಸರ್‌ಗಳ ಮೂಲಕ ಜೋರು ಶಬ್ದ ಮಾಡಿದ್ದರು' ಎಂದು ಪೊಲೀಸರು ತಿಳಿಸಿದರು.

ಜನ್ಮದಿನ ಆಚರಣೆಯನ್ನು ಆರೋಪಿಯ ಪತ್ನಿ ಲಲಿತಾ ಹಾಗೂ ಬೆಂಬಲಿಗರು ವಿಡಿಯೊ ಮಾಡಿಕೊಂಡು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದರು.

ಈ ವಿಡಿಯೊಗಳನ್ನು ಗಮನಿಸಿದ್ದ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.



ರಸ್ತೆ ಮಧ್ಯೆದಲ್ಲೇ ಕೇಕ್ ಕತ್ತರಿಸಿ ಜನ್ಮದಿನ ಆಚರಿಸಿಕೊಂಡ ದೃಶ್ಯ

# ಕೈದಿಗಳಿಗೆ ಮೊಬೈಲ್ ಪೂರೈಕೆ ಮನಃಶಾಸ್ತ್ರಜ್ಞೆ ಬಂಧನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ವಿಚಾರಣಾಧೀನ ಹಾಗೂ ಸಜಾ ಕೈದಿಗಳಿಗೆ ಮೊಬೈಲ್ ಪೂರೈಸುತ್ತಿದ್ದ ಆರೋಪದಡಿ ಮನಃಶಾಸ್ತ್ರಜ್ಞೆ ಸೇರಿ ಇಬ್ಬರನ್ನು ಪರಪ್ಪನ ಅಗ್ರಹಾರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ನವ್ಯಶ್ರೀ (33) ಬಂಧಿತೆ. ಕಾರಾಗೃಹದಲ್ಲಿದ್ದ ಕೈದಿಗಳ ಮನಃಪರಿವರ್ತನೆಗಾಗಿ ನವ್ಯಶ್ರೀ ಆಗಾಗ್ಗೆ ಭೇಟಿ ನೀಡುತ್ತಿದ್ದರು. ಎರಡು ದಿನಗಳ ಹಿಂದೆ ಜೈಲಿನ ಬ್ಯಾರಕ್‌ವೊಂದರ ಒಳಕ್ಕೆ ಹೋಗುತ್ತಿದ್ದರು. ಪರಿಶೀಲನೆ ವೇಳೆ ಮೊಬೈಲ್ ಕೊಂಡೊಯ್ಯುತ್ತಿರುವುದು ಪತ್ತೆ ಆಯಿತು. ಅವರನ್ನು ವಶಕ್ಕೆ ಪಡೆದು ಪರಪ್ಪನ ಅಗ್ರಹಾರ ಠಾಣೆಯ ಪೊಲೀಸರ ವಶಕ್ಕೆ ನೀಡಲಾಯಿತು ಎಂದು ಪೊಲೀಸರು ಹೇಳಿದರು.

'ಆರೋಪಿಯನ್ನು ವಿಚಾರಣೆಗೆ ಒಳಪಡಿಸಲಾಗಿದ್ದು, ತನಗೆ ಮತ್ತೊಬ್ಬ ವ್ಯಕ್ತಿ ಮೊಬೈಲ್ ತಂದು ಕೊಡುತ್ತಿದ್ದ. ಆ ಮೊಬೈಲ್ ಅನ್ನು ಕೈದಿಗಳಿಗೆ ನೀಡುತ್ತಿದ್ದೆ ಎಂಬುದಾಗಿ ತಪ್ಪೊಪ್ಪಿಕೊಂಡಿದ್ದಾರೆ. ನವ್ಯಶ್ರೀಗೆ ಮೊಬೈಲ್ ತಂದು ಕೊಡುತ್ತಿದ್ದ ವ್ಯಕ್ತಿಯನ್ನೂ ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಜೈಲಿನ ಅಧೀಕ್ಷಕರು ನೀಡಿದ ದೂರು ಆಧರಿಸಿ ತನಿಖೆ ನಡೆಸಲಾಗುತ್ತಿದೆ ಎಂದು ಪರಪ್ಪನ ಅಗ್ರಹಾರ ಠಾಣೆಯ ಪೊಲೀಸರು ತಿಳಿಸಿದ್ದಾರೆ.



ಕ್ರೀಡಾಕೂಟದಲ್ಲಿ ಭಾಗವಹಿಸಿದ್ದ ಬಿಬಿಎಂಪಿ ಸಿಬ್ಬಂದಿ

# 'ಕ್ರೀಡಾಕೂಟ: ಬಾಂಧವ್ಯ ವೃದ್ಧಿ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಿಬಿಎಂಪಿಯ ಅಧಿಕಾರಿ-ನೌಕರರಿಗೆ ಕ್ರೀಡಾಕೂಟ ಆಯೋಜಿಸುವುದರಿಂದ ಉತ್ತಮ ಬಾಂಧವ್ಯ ಬೆಳೆಯಲಿದೆ ಎಂದು ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಹೇಳಿದರು.

ನಾಡಪ್ರಭು ಕೆಂಪೇಗೌಡ ದಿನಾಚರಣೆ ಅಂಗವಾಗಿ ಜಯನಗರದ ಕಿತ್ತೂರು ರಾಣಿ ಚನ್ನಮ್ಮ ಕ್ರೀಡಾಂಗಣದಲ್ಲಿ ಬಿಬಿಎಂಪಿಯ ಅಧಿಕಾರಿ/ನೌಕರರಿಗೆ ಜೂನ್ 19ರವರೆಗೆ ಆಯೋಜಿಸಿರುವ ಕ್ರೀಡಾಕೂಟವನ್ನು ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದರು.

'ಕ್ರೀಡೆಯಿಂದ ಅಧಿಕಾರಿ-ನೌಕರರಲ್ಲಿ ಬಾಂಧವ್ಯ, ಹುಮ್ಮಸ್ಸು ಮೂಡಲಿದೆ' ಎಂದು ಹೇಳಿದರು.

'ಕ್ರೀಡೆಯಲ್ಲಿ ಆಸಕ್ತಿಯುಳ್ಳವರು ಜತೆಗೆ ಎಲ್ಲ ಅಧಿಕಾರಿ/ನೌಕರರು ಪಾಲ್ಗೊಳ್ಳಬೇಕು. ಕ್ರೀಡಾಕೂಟದಲ್ಲಿ ಪಾಲ್ಗೊಳ್ಳುವ ಅಧಿಕಾರಿಗಳಿಗೆ ಹೆಚ್ಚು ಉತ್ತೇಜನ ನೀಡಬೇಕು. ಅದರ ಜೊತೆಗೆ ಅವರ ಮಕ್ಕಳನ್ನೂ ಪಾಲ್ಗೊಳ್ಳುವಂತೆ ಮಾಡಲು ಯೋಜನೆಗಳನ್ನು ರೂಪಿಸಬೇಕು' ಎಂದರು.

ಶಿಕ್ಷಣ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ಮಾತನಾಡಿ, ಪಾಲಿಕೆಯ ಶಿಕ್ಷಣ ಹಾಗೂ ಕಲ್ಯಾಣ ವಿಭಾಗದಿಂದ ಕ್ರೀಡೆ ಸೇರಿದಂತೆ ಇನ್ನಿತರೆ ವಿಷಯಗಳಲ್ಲಿ ಆಸಕ್ತಿ ಇರುವವರಿಗಾಗಿ ವಿಶೇಷ ಯೋಜನೆಗಳನ್ನು ರೂಪಿಸಲಾಗಿದೆ. ಶಿಕ್ಷಣ ವಿಭಾಗದ ಮೂಲಕ ಶಾಲಾ ಮಕ್ಕಳಲ್ಲಿ ಕ್ರೀಡೆ, ನೃತ್ಯ ಸೇರಿದಂತೆ ಇನ್ನಿತರೆ ಚಟುವಟಿಕೆಗಳಿಗೆ ಸಂಘ-ಸಂಸ್ಥೆಗಳಿಂದ ತರಬೇತಿ ಕೊಡಿಸಲಾಗುತ್ತಿದೆ ಎಂದರು.

ಆಡಳಿತ ವಿಭಾಗದ ವಿಶೇಷ ಆಯುಕ್ತ ನವೀನ್‌ಕುಮಾರ್ ರಾಜು, ದಕ್ಷಿಣ ವಲಯ ಆಯುಕ್ತ ದಿಗ್ವಿಜಯ್ ಬೋಡ್ಕೆ, ಸಹಾಯಕ ಆಯುಕ್ತ ದಿಲೀಪ್, ಉಪ ನಿರ್ದೇಶಕ ಲೋಕೇಶ್, ಹಿರಿಯ ಸಹಾಯಕ ನಿರ್ದೇಶಕ ಮುನಿಶಾಮಪ್ಪ, ಬಿಬಿಎಂಪಿ ಅಧಿಕಾರಿ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಅಮೃತ್ ರಾಜ್ ಉಪಸ್ಥಿತರಿದ್ದರು.

## ಚಿಟಿಕೆ ಸುದ್ದಿ

### ಸುಹಾಸ್ ಶೆಟ್ಟಿ ಕೊಲೆ ಪ್ರಕರಣ: ಎನ್‌ಐಎ ತಂಡ ಭೇಟಿ




ಮಂಗಳೂರು: ಬಜಪೆ ಪೊಲೀಸ್ ಠಾಣೆ ವ್ಯಾಪ್ತಿಯ ಕಿನ್ನಿಪದವಿನಲ್ಲಿ ಮೇ 1ರಂದು ನಡೆದಿದ್ದ ಬಜರಂಗದಳ ಕಾರ್ಯಕರ್ತ ಹಾಗೂ ರೌಡಿ ಶೀಟರ್ ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣದ ತನಿಖೆ ಭಾಗವಾಗಿ ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ಅಧಿಕಾರಿಗಳು ಶನಿವಾರ ನಗರಕ್ಕೆ ಭೇಟಿ ನೀಡಿದರು.

‘ಪ್ರಕರಣವನ್ನು ಎನ್‌ಐಎಗೆ ಹಸ್ತಾಂತರಿಸುವ ಪ್ರಕ್ರಿಯೆ ಪ್ರಾರಂಭವಾಗಿದೆ’ ಎಂದು ಮಂಗಳೂರು ಪೊಲೀಸ್ ಕಮಿಷನರ್ ಸುಧೀರ್ ಕುಮಾರ್ ರೆಡ್ಡಿ ತಿಳಿಸಿದ್ದಾರೆ.

ಸುಹಾಸ್ ಶೆಟ್ಟಿ ಕೊಲೆ ಪ್ರಕರಣವನ್ನು ಎನ್‌ಐಎಗೆ ವಹಿಸಬೇಕು ಎಂದು ಬಿಜೆಪಿ ಮುಖಂಡರು, ಹಿಂದುತ್ವವಾದಿ ಸಂಘಟನೆಗಳು ಒತ್ತಾಯಿಸಿದ್ದವು. ಸ್ಥಳೀಯ ಸಂಸದ ಕ್ಯಾ. ಬ್ರಿಜೇಶ್ ಚೌಟ ಈ ಪ್ರಕರಣವನ್ನು ಎನ್‌ಐಎಗೆ ವಹಿಸುವಂತೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದರು. ಕೇಂದ್ರ ಗೃಹ ಸಚಿವಾಲಯವು ಈ ಪ್ರಕರಣವನ್ನು ಎನ್‌ಐಎ ತನಿಖೆಗೆ ವಹಿಸಿ ಜೂನ್ 7ರಂದು ಆದೇಶ ಹೊರಡಿಸಿತ್ತು.

ಸುಹಾಸ್ ಶೆಟ್ಟಿ ಹತ್ಯೆಗೆ ಸಂಬಂಧಿಸಿದಂತೆ ಈವರೆಗೆ 12 ಜನರನ್ನು ಬಂಧಿಸಲಾಗಿದೆ. ಸುಹಾಸ್ ಶೆಟ್ಟಿ ಸ್ನೇಹಿತರೊಂದಿಗೆ ಕಾರಿನಲ್ಲಿ ತೆರಳುತ್ತಿದ್ದಾಗ, ಅವರ ಮೇಲೆ ದಾಳಿ ನಡೆಸಿ ಕೊಲೆ ಮಾಡಲಾಗಿತ್ತು.

### ನಾರಾಯಣ ನೀಟ್ ಅಕಾಡೆಮಿ ಸಾಧನೆ

ಬೆಂಗಳೂರು: ‘ಈ ಸಾಲಿನ ನೀಟ್ ಪರೀಕ್ಷೆಯಲ್ಲಿ ನಮ್ಮ ಸಂಸ್ಥೆಯ ವಿದ್ಯಾರ್ಥಿ ಕೆ.ಪ್ರಜ್ವಲ್ ಸಿಂಗ್ ರಾಥೋಡ್ ಅವರು ಅಖಿಲ ಭಾರತ ಮಟ್ಟದಲ್ಲಿ, 263ನೇ ರ್‍ಯಾಂಕ್ ಪಡೆದಿದ್ದಾರೆ’ ಎಂದು ನಾರಾಯಣ ನೀಟ್ ಅಕಾಡೆಮಿ ಹೇಳಿದೆ.

‘ಪ್ರಜ್ವಲ್ ಅವರು 630 ಅಂಕಗಳನ್ನು ಪಡೆದಿದ್ದಾರೆ. ಪರಿಶಿಷ್ಟ ಜಾತಿಗಳ ವರ್ಗದಲ್ಲಿ ದೇಶಕ್ಕೆ 10ನೇ ರ್‍ಯಾಂಕ್ ಪಡೆದಿದ್ದಾರೆ. ಮೊದಲ 1,000 ರ್‍ಯಾಂಕ್‌ಗಳಲ್ಲಿ ಸಂಸ್ಥೆಯ 18 ವಿದ್ಯಾರ್ಥಿಗಳು ಸ್ಥಾನ ಪಡೆದಿದ್ದಾರೆ’ ಎಂದು ಸಮಸ್ಥೆಯು ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

### ‘ರಾಯರ ಮಠದ ಹೆಸರಿನಲ್ಲಿ ಮೋಸ: ಜಾಗ್ರತೆ ವಹಿಸಿ’


ಮಂತ್ರಾಲಯ (ರಾಯಚೂರು): ‘ರಾಘವೇಂದ್ರ ಸ್ವಾಮಿ ಮಠ, ಮಂತ್ರಾಲಯದ ಕೊಠಡಿಗಳು ಅಥವಾ ಸೇವೆಗಳನ್ನು ಕಾಯ್ದಿರಿಸಲು ಹಾಗೂ ದೇಣಿಗೆ ಸಂಗ್ರಹಿಸಲು ಮಠವು ಯಾವುದೇ ವ್ಯಕ್ತಿ, ಇಲ್ಲವೆ ಏಜೆನ್ಸಿಗೆ ಅಧಿಕಾರ ನೀಡಿಲ್ಲ’ ಎಂದು ರಾಘವೇಂದ್ರ ಸ್ವಾಮಿ ಮಠದ ವ್ಯವಸ್ಥಾಪಕರು ಸ್ಪಷ್ಟಪಡಿಸಿದ್ದಾರೆ.

‘ಶ್ರೀ ರಾಘವೇಂದ್ರ ಮಂತ್ರ ಮಂದಿರದ ಹೆಸರಿನಲ್ಲಿ, 48 ದಿನಗಳ ಕಾಲ ವಿಶೇಷ ಪೂಜೆ ಅಖಂಡ ಮಂಡಲೋತ್ಸವ ನಡೆಸುವುದಾಗಿ ಮತ್ತು ಫೋನ್‌ಪೇ ಅಥವಾ ಗೂಗಲ್‌ಪೇ ಮೂಲಕ 8861983526ಗೆ ಹಣವನ್ನು ಕಳುಹಿಸುವಂತೆ ಸಾಮಾಜಿಕ ಮಾಧ್ಯಮಗಳಲ್ಲಿ ವಿನಂತಿಸಲಾಗುತ್ತಿದೆ. ಇದನ್ನು ಯಾರೂ ನಂಬಬಾರದು’ ಎಂದು ಹೇಳಿದೆ.

‘ಹಿಂದೆಯೂ ದುಷ್ಕರ್ಮಿಗಳು ಹೀಗೆ ಹಣ ಸಂಗ್ರಹಿಸಲು ಪ್ರಯತ್ನಿಸಿದ್ದಾರೆ. ಈ ಬಗ್ಗೆ ದೂರು ದಾಖಲಿಸಿದೆ. ಭಕ್ತರು ನಕಲಿ ಸಂದೇಶಗಳಿಗೆ ಮರುಳಾಗಬಾರದು. ಯಾವುದೇ ರೀತಿ ಹಣ ಪಾವತಿ ಮಾಡಬಾರದು. ಅಂತಹ ಯಾವುದೇ ಘಟನೆಗಳನ್ನು ಕಂಡು ಬಂದರೆ ತಕ್ಷಣ ದುಷ್ಕರ್ಮಿಗಳ ವಿರುದ್ಧ ದೂರು ದಾಖಲಿಸಬೇಕು’ ಎಂದು ಮಠದ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಸದ್ಯಕ್ಕೆ ಜಾತಿಗಣತಿ ಅಸಾಧ್ಯ: ವಿಶ್ವನಾಥ್

ಮೈಸೂರು: ‘ಶಾಲೆಗಳು ಆರಂಭವಾಗಿದ್ದು, ಶಿಕ್ಷಕರಿಲ್ಲದೇ ಜಾತಿಗಣತಿ ನಡೆಸುವುದು ಅಸಾಧ್ಯ. ಮುಂದಿನ ಏಪ್ರಿಲ್‌ವರೆಗೆ ಯಾವ ಗಣತಿಯೂ ನಡೆಯದು. ನವೆಂಬರ್ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರದಲ್ಲಿರುವುದಿಲ್ಲ’ ಎಂದು ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್ ಹೇಳಿದರು.


ಎಚ್.ವಿಶ್ವನಾಥ್

‘ಕಾಂಗ್ರೆಸ್ ಹೈಕಮಾಂಡ್ ವಿರೋಧವನ್ನು ಲೆಕ್ಕಿಸದೇ ಸಿದ್ದರಾಮಯ್ಯ ಜಾತಿಗಣತಿ ವರದಿ ಜಾರಿಗೊಳಿಸಿದ್ದರೆ ಅಹಿಂದ ಜನರ ಕಣ್ಣಲ್ಲಿ ಹೀರೊ ಆಗುತ್ತಿದ್ದರು. ಆದರೆ ಹೈಕಮಾಂಡ್‌ಗೆ ಹೆದರಿ ಮರು ಸಮೀಕ್ಷೆ ನಡೆಸಲು ಮುಂದಾಗಿದ್ದಾರೆ’ ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ದೂರಿದರು.

‘ಹತ್ತು ವರ್ಷದ ಹಿಂದೆ ಕಾಂತರಾಜು ಅಧ್ಯಕ್ಷತೆಯಲ್ಲಿ ನಡೆದ ಗಣತಿಯಲ್ಲಿ 1.5 ಲಕ್ಷ ಶಿಕ್ಷಕರು ಭಾಗಿಯಾಗಿದ್ದರು. ₹170 ಕೋಟಿ ಖರ್ಚಾಗಿತ್ತು. ಹತ್ತು ವರ್ಷ ವರದಿಯನ್ನು ಹಾಗೆಯೇ ಇರಿಸಿದ್ದ ಸಿದ್ದರಾಮಯ್ಯ, ಅಹಿಂದ ವರ್ಗಗಳಿಗೆ ಪರಮ ಅನ್ಯಾಯ ಮಾಡಿದ್ದಾರೆ’ ಎಂದು ಟೀಕಿಸಿದರು.

# ‘ಕಠಿಣ ಶ್ರಮ ಸಾಧನೆಗೆ ಬುನಾದಿ’

## ಬ್ಯಾಡ್ಮಿಂಟನ್, ಚೆಸ್ ಆಡುವುದು ಹವ್ಯಾಸ ಚೆಸ್‌ನಿಂದ ಏಕಾಗ್ರತೆ ಹೆಚ್ಚಿತು: ನಿಖಿಲ್

ಪ್ರಜಾವಾಣಿ ವಾರ್ತೆ

ಮಂಗಳೂರು: ‘ಕಠಿಣ ಪರಿಶ್ರಮ, ಓದಿನಲ್ಲಿ ಏಕಾಗ್ರತೆ, ಉಪನ್ಯಾಸಕರ ಮಾರ್ಗದರ್ಶನದಿಂದ ಈ ಸಾಧನೆ ಸಾಧ್ಯವಾಯಿತು’ ಎಂದು ವೈದ್ಯಕೀಯ ಪ್ರವೇಶ ಪರೀಕ್ಷೆ ನೀಟ್‌ನಲ್ಲಿ ರಾಷ್ಟ್ರ ಮಟ್ಟದಲ್ಲಿ 17ನೇ ರ್‍ಯಾಂಕ್ ಪಡೆದಿರುವ ಮಂಗಳೂರಿನ ಎಕ್ಸ್‌ಪರ್ಟ್ ಪಿಯು ಕಾಲೇಜಿನ ವಿದ್ಯಾರ್ಥಿ ನಿಖಿಲ್ ಸೊನ್ನದ ಹೇಳಿದರು.

‘ಉತ್ತಮ ರ್‍ಯಾಂಕ್ ಬರಬಹುದು ಎಂಬ ನಿರೀಕ್ಷೆ ಇತ್ತು, ಆದರೆ, ದೇಶ ಮಟ್ಟದಲ್ಲಿ 17ನೇ ರ್‍ಯಾಂಕ್ ಬಂದಿದ್ದು ಸಂತಸ ತಂದಿದೆ. ಪ್ರತಿದಿನದ ತರಗತಿಗಳ ಪುನರ್ ಮನನ, ಹೆಚ್ಚು ಸಮಸ್ಯೆಗಳನ್ನು ಬಿಡಿಸುವುದು, ಕಾಲೇಜಿನಲ್ಲಿ ನಡೆಸುವ ಅಣಕು ಪರೀಕ್ಷೆಗಳು ಉತ್ತಮ ಫಲಿತಾಂಶ ಪಡೆಯಲು ಸಹಕಾರಿಯಾದವು. ಯಾವುದೇ ಗೊಂದಲಗಳಿದ್ದರೆ ಮರುದಿನವೇ ಉಪನ್ಯಾಸಕರನ್ನು ಕೇಳಿ ಪರಿಹರಿಸಿಕೊಂಡು, ಮುಂದಿನ ಚಾಪ್ಟರ್‌ನ ಅಭ್ಯಾಸ ಮುಂದುವರಿಸುತ್ತಿದ್ದೆ’ ಎಂದು ವಿವರಿಸಿದರು.

ನಿಖಿಲ್, ವಿಜಯಪುರದ ನರರೋಗ ತಜ್ಞ ಡಾ.ಸಿದ್ದಪ್ಪ ಸೊನ್ನದ ಮತ್ತು ನೇತ್ರತಜ್ಞೆ ಡಾ.ಮೀನಾಕ್ಷಿ ದಂಪತಿ ಪುತ್ರ. ‘ಪಾಲಕರಿಬ್ಬರೂ ವೈದ್ಯರಾದ ಕಾರಣ ಮೊದಲಿನಿಂದಲೂ ವೈದ್ಯಕೀಯ ಕ್ಷೇತ್ರದ ಬಗ್ಗೆ ಒಲವು ಹೊಂದಿದ್ದೆ. ಬಿಡುವಿನ ವೇಳೆಯಲ್ಲಿ ಬ್ಯಾಡ್ಮಿಂಟನ್, ಚೆಸ್ ಆಡುವುದು, ಕವಿತೆ ಬರೆಯುವುದು ನನ್ನ ಹವ್ಯಾಸ. ಚೆಸ್ ಏಕಾಗ್ರತೆ ಹೆಚ್ಚಿಸಲು ಪೂರಕವಾಯಿತು’ ಎಂದು ನಿಖಿಲ್ ಹೇಳಿದರು.

**‘ನ್ಯೂರೊ ಸರ್ಜನ್ ಆಗುವ ಗುರಿ’ (ವಿಜಯಪುರ ವರದಿ):** ‘ನೀಟ್‌ನಲ್ಲಿ ಉತ್ತಮ ಅಂಕದ ನಿರೀಕ್ಷೆ ಇತ್ತು. ಆದರೆ, ರಾಷ್ಟ್ರ ಮಟ್ಟದಲ್ಲಿ 17ನೇ ಸ್ಥಾನ ಊಹಿಸಿರಲಿಲ್ಲ. ತುಂಬಾ ಖುಷಿಯಾಗಿದೆ. ಏಮ್ಸ್‌ನಲ್ಲಿ ವೈದ್ಯಕೀಯ ಪದವಿ ಓದಲು ಉದ್ದೇಶಿಸಿರುವೆ. ನ್ಯುರೊ ಸರ್ಜನ್ ಆಗಬೇಕು ಎಂಬ ಗುರಿಯಿದೆ’ ಎಂದು ನಿಖಿಲ್ ತಿಳಿಸಿದರು.

‘ಎಕ್ಸ್‌ಪರ್ಟ್ ಕಾಲೇಜಿನಲ್ಲಿ ಪ್ರತಿದಿನ ಬೆಳಿಗ್ಗೆ 7 ರಿಂದ ಸಂಜೆ 7ರವರೆಗೆ ತರಗತಿ ಮತ್ತು ನೀಟ್ ಕೋಚಿಂಗ್ ಮತ್ತು ಪ್ರತಿ ವಾರ ಮಾದರಿ ನೀಟ್ ಪರೀಕ್ಷೆ ಇರುತ್ತಿತ್ತು. ಆತ್ಮವಿಶ್ವಾಸದಿಂದ ಎಲ್ಲವನ್ನೂ ಎದುರಿಸಲು ಕಾಲೇಜು ಪ್ರಾಧ್ಯಾಪಕರು ಮತ್ತು ಸ್ನೇಹಿತರು ಪ್ರೋತ್ಸಾಹಿಸಿದರು’ ಎಂದು ಅವರು ಹೇಳಿದರು.


ನೀಟ್ ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ಮತ್ತು ರಾಷ್ಟ್ರಕ್ಕೆ 17ನೇ ರ್‍ಯಾಂಕ್ ಪಡೆದಿರುವ ನಿಖಿಲ್ ಸೊನ್ನದಗೆ ವಿಜಯಪುರದಲ್ಲಿ ತಂದೆ ಡಾ.ಸಿದ್ದಪ್ಪ ಸೊನ್ನದ ಮತ್ತು ತಾಯಿ ಡಾ.ಮೀನಾಕ್ಷಿ ಸೊನ್ನದ ಸಿಹಿ ತಿನ್ನಿಸಿದರು

## ಸುದ್ದಿ 2 ನಿಮಿಷ

### ನಾಳೆಯಿಂದ ಕೌನ್ಸೆಲಿಂಗ್

ಬೆಂಗಳೂರು: ಕೆಎಸ್‌ಆರ್‌ಟಿಸಿಗೆ ಹೊಸದಾಗಿ ನೇಮಕಗೊಂಡ ಚಾಲಕ-ಕಂ-ನಿರ್ವಾಹಕ ಅಭ್ಯರ್ಥಿಗಳಿಗೆ ಸ್ಥಳ ನಿಯೋಜನೆ ಮಾಡಲ ಶಾಂತಿನಗರದಲ್ಲಿರುವ ಕೇಂದ್ರ ಕಚೇರಿಯಲ್ಲಿ ಜೂನ್ 16ರಿಂದ ಗಣಕೀಕೃತ ಕೌನ್ಸೆಲಿಂಗ್ ನಡೆಯಲಿದೆ.

ಜೂನ್ 16ರಂದು ಬೆಳಿಗ್ಗೆ 8ರಿಂದ ಮಧ್ಯಾಹ್ನ 1ರವರೆಗೆ ಕ್ರಮ ಸಂಖ್ಯೆ 1ರಿಂದ 325ರವರೆಗಿನವರಿಗೆ, ಮಧ್ಯಾಹ್ನ 1.30ರಿಂದ ಕ್ರಮಸಂಖ್ಯೆ 650ರವರೆಗಿನ ಅಭ್ಯರ್ಥಿಗಳಿಗೆ ಕೌನ್ಸೆಲಿಂಗ್ ನಡೆಯಲಿದೆ.

ಜೂನ್ 18ರಂದು ಬೆಳಿಗ್ಗೆ ಕ್ರಮ ಸಂಖ್ಯೆ 651ರಿಂದ 1,050ರವರೆಗೆ, ಮಧ್ಯಾಹ್ನ ಬಳಿಕ 1,350ರವರೆಗೆ ಕೌನ್ಸೆಲಿಂಗ್ ನಡೆಯಲಿದೆ. ಜೂನ್ 19ರಂದು ಬೆಳಿಗ್ಗೆ ಕ್ರಮ ಸಂಖ್ಯೆ 1,351ರಿಂದ 1,700 ಹಾಗೂ ಮಧ್ಯಾಹ್ನ ಬಳಿಕ 1,701–2000 ಕ್ರಮಸಂಖ್ಯೆಯವರಿಗೆ ಕೌನ್ಸೆಲಿಂಗ್ ನಡೆಯಲಿದೆ. ಮಾಹಿತಿಗಾಗಿ ನಿಗಮದ ವೆಬ್‌-ಸೈಟ್ ksrtcjobs.karnataka.gov.in ವೀಕ್ಷಿಸಬಹುದು ಎಂದು ಕೆಎಸ್‌ಆರ್‌ಟಿಸಿ ಪ್ರಕಟಣೆ ತಿಳಿಸಿದೆ.



### ಕಲುಷಿತ ನೀರು ಸೇವನೆ 40 ಜನ ಅಸ್ವಸ್ಥ

ಸಿಂಧನೂರು (ರಾಯಚೂರು ಜಿಲ್ಲೆ): ತಾಲ್ಲೂಕಿನ ಭೂತಲದಿನ್ನಿ ಗ್ರಾಮದಲ್ಲಿ ಕಲುಷಿತ ನೀರು ಸೇವನೆಯಿಂದ ವಾಂತಿ-ಭೇದಿ ಕಾಣಿಸಿಕೊಂಡ ಪರಿಣಾಮ 40 ಜನ ಅಸ್ವಸ್ಥಗೊಂಡಿದ್ದಾರೆ.

‘ಭೂತಲದಿನ್ನಿ ಆರೋಗ್ಯ ಕೇಂದ್ರದಲ್ಲಿ 27 ಜನ ಚಿಕಿತ್ಸೆ ಪಡೆದಿದ್ದಾರೆ. ಹಾರಾಪುರ ಆರೋಗ್ಯ ಕೇಂದ್ರದಲ್ಲಿ 7 ಜನ, ಸಿಂಧನೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಇಬ್ಬರು ಹಾಗೂ ವಿವಿಧ ಖಾಸಗಿ ಆಸ್ಪತ್ರೆಗಳಲ್ಲಿ ನಾಲ್ವರು ಚಿಕಿತ್ಸೆ ಪಡೆಯುತ್ತಿದ್ದಾರೆ. ಕಲುಷಿತ ನೀರಿನ ಸೇವನೆಯಿಂದ ವಾಂತಿ–ಭೇದಿಯಾಗಿದೆ’ ಎಂದು ತಾಲ್ಲೂಕು ಆರೋಗ್ಯ ಅಧಿಕಾರಿ ಡಾ.ನಾಗರಾಜ ಕಾಟವಾ ತಿಳಿಸಿದ್ದಾರೆ.

‘ಕುಡಿಯುವ ನೀರಿನ ಓವರ್ ಹೆಡ್ ಟ್ಯಾಂಕ್ ಅನ್ನು 2 ವರ್ಷಗಳಿಂದ ಸ್ವಚ್ಛಗೊಳಿಸಿಲ್ಲ. ಟ್ಯಾಂಕ್‌ನ ಕಬ್ಬಿಣದ ಮೆಟ್ಟಿಲು ತುಕ್ಕು ಹಿಡಿದಿದ್ದು, ಅದರ ತುಣುಕು ನೀರಿನಲ್ಲಿ ಸೇರಿವೆ. ನೀರು ಕುಡಿಯಲು ಯೋಗ್ಯವೇ ಎಂಬುದನ್ನು ಪರೀಕ್ಷಿಸದೇ ಪೂರೈಸಿರುವುದೇ ಘಟನೆಗೆ ಕಾರಣ’ ಎಂದು ಗ್ರಾಮದ ಮುಖಂಡರಾದ ವೆಂಕನಗೌಡ ಪೊಲೀಸ್ ಪಾಟೀಲ ಹಾಗೂ ಖಾಜಾಹುಸೇನ್ ಆರೋಪಿಸಿದ್ದಾರೆ.

# ನೀಟ್: ನಿಖಿಲ್ ರಾಜ್ಯಕ್ಕೆ ಪ್ರಥಮ

ಒಂದನೇ ಪುಟದಿಂದ...

ವಿಜಯಪುರ ನಗರದ ‘ಸಂಜೀವಿನಿ’ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ವೈದ್ಯ ದಂಪತಿ ಡಾ.ಸಿದ್ದಪ್ಪ ಸೊನ್ನದ ಮತ್ತು ಡಾ.ಮೀನಾಕ್ಷಿ ಸೊನ್ನದ ಅವರ ಪುತ್ರ ನಿಖಿಲ್, ಮಂಗಳೂರಿನ ವಳಚ್ಚಿಲ್‌ನ ಎಕ್ಸ್‌ಫರ್ಟ್ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ.

ದ್ವಿತೀಯ ಪಿಯುಸಿಯಲ್ಲಿ ಶೇ 98.3 ಅಂಕ ಗಳಿಸಿದ್ದರು. ಸಿಇಟಿ ಅಗ್ರಿಯಲ್ಲಿ ರಾಜ್ಯಕ್ಕೆ 8ನೇ ರ್‍ಯಾಂಕ್ ತೆಗೆದು ಕೊಂಡಿದ್ದರು. ‘ಜೆಇಇ ಮೇನ್ಸ್‌ನಲ್ಲಿ 8000ನೇ ರ್‍ಯಾಂಕ್ ಬಂದಿದೆ. ಆದರೆ, ಜೆಇಇ ಅಡ್ವಾನ್ಸ್ ಬರೆದಿಲ್ಲ’ ಎಂದು ನಿಖಿಲ್ ಪ್ರತಿಕ್ರಿಯಿಸಿದರು.

‘ವಿಜಯಪುರ ಸೈನಿಕ್ ಶಾಲೆಯಲ್ಲಿ ಓದಿದ್ದು, ಎಸ್‌ಎಸ್‌ಎಲ್‌ಸಿಯಲ್ಲಿ ಶೇ 93 ಅಂಕ ಬಂದಿತ್ತು’ ಎಂದರು.

### ನಿಧಿ ಕೆ.ಜಿಗೆ 84ನೇ ರ್‍ಯಾಂಕ್


ನಿಧಿ ಕೆ.ಜಿ

‘9ನೇ ತರಗತಿಯಲ್ಲಿದ್ದಾಲೇ ವೈದ್ಯಕೀಯ ಶಿಕ್ಷಣ ಓದಬೇಕೆಂದು ನಿರ್ಧರಿಸಿದ್ದೆ. ದೆಹಲಿಯ ಏಮ್ಸ್ ಅಥವಾ ಬೆಂಗಳೂರು ವೈದ್ಯಕೀಯ ಕಾಲೇಜಿನಲ್ಲಿ ಎಂಬಿಬಿಎಸ್ ಓದುವುದು ನನ್ನ ಕನಸು. ನೀಟ್ ಪರೀಕ್ಷೆ ಕಠಿಣ. ಆದರೆ, ಅರ್ಪಣಾ ಮನೋಭಾವದಿಂದ ಓದಿನಲ್ಲಿ ತೊಡಗಿದರೆ ಕಠಿಣ ಸವಾಲನ್ನೂ ಬೇಧಿಸಬಹುದು. ಎರಡು ವರ್ಷ ನಿರಂತರ ಶ್ರಮವಹಿಸಿದ್ದಕ್ಕೆ ಫಲ ದೊರೆತಿದೆ’ ಎಂದು ನಿಧಿ ಪ್ರತಿಕ್ರಿಯಿಸಿದರು. ಎಕ್ಸ್‌ಪರ್ಟ್ ಕಾಲೇಜಿನ ವಿದ್ಯಾರ್ಥಿನಿ ನಿಧಿ ಕೆ.ಜಿ ಅವರು ಕೊಡಗಿನ ಸೋಮವಾರಪೇಟೆ ಎಎಸ್‌ಐ ಕೆ.ಎಚ್.ಗಣಪತಿ ಮತ್ತು ಶಿಕ್ಷಕಿ ಗುಣವತಿ ದಂಪತಿ ಪುತ್ರಿ.

### ವೇದಾಂತಗೆ 165ನೇ ರ್‍ಯಾಂಕ್


ವೇದಾಂತ

ಭಾಲ್ಕಿ (ಬೀದರ್ ಜಿಲ್ಲೆ): ತಾಲ್ಲೂಕಿನ ಕರಡ್ಯಾಳದ ಚನ್ನಬಸವೇಶ್ವರ ಗುರುಕುಲ ವಸತಿ ವಿಜ್ಞಾನ ಪಿಯು ಕಾಲೇಜಿನ ವಿದ್ಯಾರ್ಥಿ ವೇದಾಂತ ಹಣಮಂತರಾವ್ ಲಕಡೆ ನೀಟ್ ಪರೀಕ್ಷೆಯಲ್ಲಿ ರಾಷ್ಟ್ರ ಮಟ್ಟದಲ್ಲಿ 165ನೇ ರ್‍ಯಾಂಕ್ ಪಡೆದಿದ್ದಾರೆ.

‘ವೇದಾಂತ 720ಕ್ಕೆ 629 (99.98 ಪರ್ಸೆಂಟೈಲ್) ಅಂಕ ಪಡೆದು ಗಡಿಭಾಗದಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ’ ಎಂದು ಕಾಲೇಜಿನ ಪ್ರಾಚಾರ್ಯ ಬಸವರಾಜ ಮೊಳಕೀರೆ ತಿಳಿಸಿದ್ದಾರೆ.

ತಂದೆ ಹಣಮಂತರಾವ್, ತಾಯಿ ಸ್ಮಿತಾ ಉಪನ್ಯಾಸಕರು. ಚನ್ನಬಸವೇಶ್ವರ ಗುರುಕುಲ ಪ್ರತಿವರ್ಷ ನಡೆಸುವ ಗೋಲ್ಡನ್ ಸ್ಕಾಲರ್ ಶಿಪ್ ಯೋಜನೆಯಡಿ ಎರಡು ವರ್ಷ ಉಚಿತ ಊಟ, ವಸತಿ, ಪಿಯು ಶಿಕ್ಷಣ, ಕೋಚಿಂಗ್ ಪಡೆದು ಈ ಸಾಧನೆ ಮಾಡಿದ್ದಾರೆ. ವೇದಾಂತ ಅವರು ಮುಂದೆ ದೆಹಲಿ ಏಮ್ಸ್‌ನಲ್ಲಿ ವೈದ್ಯಕೀಯ ಶಿಕ್ಷಣ ಪಡೆಯುವ ಆಸೆ ಹೊಂದಿದ್ದಾರೆ.

### ಅಂಕಿ ಅಂಶಗಳು

**1.47 ಲಕ್ಷ** ಕರ್ನಾಟಕದಿಂದ ನೀಟ್ ಪರೀಕ್ಷೆಗೆ ನೋಂದಣಿ ಮಾಡಿಕೊಂಡಿದ್ದವರು


**1.42 ಲಕ್ಷ** ನೋಂದಣಿ ಮಾಡಿಕೊಂಡಿದ್ದವರಲ್ಲಿ ಪರೀಕ್ಷೆ ಬರೆದವರು

**83,582** ನೀಟ್ ಪರೀಕ್ಷೆಯಲ್ಲಿ ಅರ್ಹತೆ ಪಡೆದ ಕರ್ನಾಟಕದ ಅಭ್ಯರ್ಥಿಗಳು

* ಅತಿಹೆಚ್ಚು ಅಭ್ಯರ್ಥಿಗಳು ಅರ್ಹತೆ ಪಡೆದ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕವು 17ನೇ ಸ್ಥಾನದಲ್ಲಿದೆ

### ಕನ್ನಡದ ಅಭ್ಯರ್ಥಿಗಳ ಸಂಖ್ಯೆ ಭಾರಿ ಕುಸಿತ

ಈ ಸಾಲಿನ ನೀಟ್ ಪರೀಕ್ಷೆಯನ್ನು ಕನ್ನಡ ಸೇರಿ 13 ಭಾಷೆಗಳಲ್ಲಿ ನಡೆಸಲಾಗಿತ್ತು. ಪ್ರತಿ ವರ್ಷ ಕನ್ನಡದಲ್ಲಿ ಪರೀಕ್ಷೆ ಬರೆಯುವ ಅಭ್ಯರ್ಥಿಗಳ ಸಂಖ್ಯೆ ಕುಗ್ಗುತ್ತಲೇ ಇದೆ.




### ಅಧಿಕ ಅಂಕ ಕೊಡಿಸುವುದಾಗಿ ವಂಚನೆ: ಇಬ್ಬರ ಬಂಧನ



ನವದೆಹಲಿ (ಪಿಟಿಐ): ‘ನೀಟ್ ಪರೀಕ್ಷೆಯಲ್ಲಿ ಅಧಿಕ ಅಂಕ ಕೊಡಿಸುವುದಾಗಿ ಮತ್ತು ರ್‍ಯಾಂಕ್ ಕೊಡಿಸುವುದಾಗಿ ಪೋಷಕರಿಗೆ ವಂಚಿಸುತ್ತಿದ್ದ ಮಹಾರಾಷ್ಟ್ರದ ಇಬ್ಬರನ್ನು ಸಿಬಿಐ ಪೊಲೀಸರು ಬಂಧಿಸಿದ್ದಾರೆ. ಆರೋಪಿಗಳು ಪ್ರತಿ ಅಭ್ಯರ್ಥಿಯಿಂದ ₹90 ಲಕ್ಷ ಪಡೆದುಕೊಳ್ಳುತ್ತಿದ್ದರು’ ಎಂದು ಸಿಬಿಐ ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಸೊಲ್ಲಾಪುರದ ಸಂದೀಪ್ ಶಾ ಮತ್ತು ನವಿ ಮುಂಬೈನ ಸಲೀಮ್ ಪಟೇಲ್ ಬಂಧಿತರು. ವಿಶೇಷ ನ್ಯಾಯಾಲಯದ ಮುಂದೆ ಈ ಇಬ್ಬರನ್ನೂ ಕಳೆದ ವಾರವೇ ಹಾಜರುಪಡಿಸಲಾಗಿದೆ. ಜೂನ್ 16ರವರೆಗೆ ಸಿಬಿಐ ವಶಕ್ಕೆ ನ್ಯಾಯಾಲಯ ನೀಡಿದೆ.

ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯ (ಎನ್‌ಟಿಎ) ಅಧಿಕಾರಿಗಳೊಂದಿಗೆ ಸಂಪರ್ಕವಿದೆ ಎಂಬುದಾಗಿ ಈ ಇಬ್ಬರೂ ತಮ್ಮನ್ನು ಪರಿಚಯಿಸಿಕೊಂಡಿದ್ದರು. ಈ ಅಕ್ರಮಗಳ ಸೂತ್ರಧಾರನೊಬ್ಬ ಕಾಣೆಯಾಗಿದ್ದು, ಆತನಿಗಾಗಿ ಸಿಬಿಐ ಅಧಿಕಾರಿಗಳು ಶೋಧಕಾರ್ಯ ನಡೆಸುತ್ತಿದ್ದಾರೆ.

‘ಪೋಷಕರೊಂದಿಗೆ ಮುಂಬೈನ ಐಟಿಸಿ ಗ್ರ್ಯಾಂಡ್ ಹೋಟೆಲ್‌ನಲ್ಲಿ ಬಂಧಿತರು ಮಾತುಕತೆ ನಡೆಸುತ್ತಿದ್ದರು. ಅಧಿಕೃತವಾಗಿ ಫಲಿತಾಂಶ ಘೋಷಣೆಯಾಗುವ ಆರು ಗಂಟೆ ಮೊದಲೇ ನಿಮ್ಮ ಮಕ್ಕಳ ಫಲಿತಾಂಶವನ್ನು ನೀಡುವುದಾಗಿ ಭರವಸೆ ನೀಡುತ್ತಿದ್ದರು’ ಎಂದು ಪೊಲೀಸರು ಮಾಹಿತಿ ನೀಡಿದರು.

‘ಬಂಧಿತರಿಂದ ಮೊಬೈಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಇದರಲ್ಲಿ ವಾಟ್ಸ್‌ಆ್ಯಪ್ ಚಾಟ್‌ಗಳು, ಕೆಲವು ಅಭ್ಯರ್ಥಿಗಳ ಹೆಸರು, ಅವರ ಪ್ರವೇಶ ಸಂಖ್ಯೆ, ಒಎಂಆರ್ ಶೀಟ್‌ಗಳ ಮಾಹಿತಿಗಳು ದೊರೆತಿವೆ. ಹವಾಲಾ ಜಾಲದ ಮೂಲಕ ಹಣಕಾಸಿನ ವ್ಯವಹಾರ ನಡೆದ ಬಗ್ಗೆಯೂ ಮಾಹಿತಿ ದೊರೆತಿದೆ’ ಎಂದರು.

### ಎನ್‌.ಟಿ ಭಟ್, ಬರಗೂರು ರಾಮಚಂದ್ರಪ್ಪ, ನಾಗತಿಹಳ್ಳಿಗೆ ಶಿವರಾಮ ಕಾರಂತ ಪ್ರಶಸ್ತಿ

ಪ್ರಜಾವಾಣಿ ವಾರ್ತೆ


ಎನ್‌.ಟಿ.ಭಟ್


ಬರಗೂರು ರಾಮಚಂದ್ರಪ್ಪ



ಚಂದ್ರಶೇಖರ

ಮೂಡುಬಿದಿರೆ (ದಕ್ಷಿಣ ಕನ್ನಡ): ಇಲ್ಲಿನ ಶಿವರಾಮ ಕಾರಂತ ಪ್ರತಿಷ್ಠಾನ ನೀಡುವ ಪ್ರಸಕ್ತ ಸಾಲಿನ ಶಿವರಾಮ ಕಾರಂತ ಪ್ರಶಸ್ತಿಗೆ ಹಿರಿಯ ಲೇಖಕ ಪ್ರೊ. ಎನ್‌.ಟಿ.ಭಟ್, ಚಿಂತಕ ಪ್ರೊ.ಬರಗೂರು ರಾಮಚಂದ್ರಪ್ಪ ಮತ್ತು ಸಾಹಿತಿ ನಾಗತಿಹಳ್ಳಿ ಚಂದ್ರಶೇಖರ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಯು ಪ್ರಮಾಣಪತ್ರ, ತಲಾ ₹20 ಸಾವಿರ ನಗದು ಒಳಗೊಂಡಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷೆ ಜಯಶ್ರೀ ಅಮರನಾಥ ಶೆಟ್ಟಿ ಮತ್ತು ಪ್ರಧಾನ ಕಾರ್ಯದರ್ಶಿ ಜಯಪ್ರಕಾಶ್ ಮಾವಿನಕುಳಿ ತಿಳಿಸಿದ್ದಾರೆ.

### ಸಿದ್ದರಾಮಯ್ಯರದ್ದು ಸುಳ್ಳು ಆರೋಪ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ



> ಜಾತಿ ಸಮೀಕ್ಷೆ ವಿಚಾರದಲ್ಲಿ ಸಿದ್ದರಾಮಯ್ಯ ಇಕ್ಕಟ್ಟಿಗೆ ಸಿಲುಕಿದ್ದರು. ಹೊಸದಾಗಿ ಸಮೀಕ್ಷೆ ನಡೆಸಿ ಎಂದು ಹೇಳುವ ಮೂಲಕ ಅವರನ್ನು, ಅವರ ಹೈಕಮಾಂಡ್ ರಕ್ಷಿಸಿದೆ
> **ಬಸವರಾಜ ಬೊಮ್ಮಾಯಿ**
> ಬಿಜೆಪಿ ಸಂಸದ

ಬೆಂಗಳೂರು: ‘14ನೇ ಹಣಕಾಸು ಆಯೋಗಕ್ಕೆ ಹೋಲಿಸಿದರೆ, 15ನೇ ಹಣಕಾಸು ಆಯೋಗದಲ್ಲಿ ಕರ್ನಾಟಕಕ್ಕೆ ಕೇಂದ್ರ ಸರ್ಕಾರದಿಂದ ಹೆಚ್ಚುವರಿಯಾಗಿ ₹1 ಲಕ್ಷ ಕೋಟಿ ಸಿಗಲಿದೆ. ಆದರೆ ಗ್ಯಾರಂಟಿಗಳಿಗೆ ಹಣ ಹೊಂದಿಸಲಾಗದ ಸಿದ್ದರಾಮಯ್ಯ ಅವರು, ಕೇಂದ್ರ ಸರ್ಕಾರದ ವಿರುದ್ಧ ಸುಳ್ಳು ಆರೋಪ ಮಾಡಿದ್ದಾರೆ’ ಎಂದು ಸಂಸದ ಬಸವರಾಜ ಬೊಮ್ಮಾಯಿ ಆರೋಪಿಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಕೇಂದ್ರದ ತೆರಿಗೆ ಆದಾಯದಲ್ಲಿ ಶೇ 50ರಷ್ಟನ್ನು ರಾಜ್ಯಗಳಿಗೆ ಹಂಚಿಕೆ ಮಾಡಬೇಕು ಎಂಬುದು ನಮ್ಮೆಲ್ಲರ ಬೇಡಿಕೆಯಾಗಿದೆ. ನರೇಂದ್ರ ಮೋದಿ ಅವರು ಪ್ರಧಾನಿಯಾದಾಗ, ಕೇಂದ್ರ ಸರ್ಕಾರದ ಒಟ್ಟು ತೆರಿಗೆ ಆದಾಯದಲ್ಲಿ ಶೇ 32ರಷ್ಟು ಮಾತ್ರ ರಾಜ್ಯಗಳಿಗೆ ಹಂಚಿಕೆಯಾಗುತ್ತಿತ್ತು. ಮೋದಿ ರಾಜ್ಯಗಳ ಪಾಲನ್ನು ಶೇ 41ಕ್ಕೆ ಹೆಚ್ಚಿಸಿದರು. ಇದು ಸಿದ್ದರಾಮಯ್ಯ ಅವರಿಗೆ ಗೊತ್ತಿದೆ. ಹೀಗಿದ್ದೂ, ಅದನ್ನು ಮರೆಮಾಚುತ್ತಾರೆ’ ಎಂದರು.

‘ಯುಪಿಎ–2 ಅವಧಿಯಲ್ಲಿ ರಾಜ್ಯದ ರೈಲ್ವೆ ಯೋಜನೆಗಳಿಗೆ ಕೇಂದ್ರವು ₹700 ಕೋಟಿಯಷ್ಟೇ ನೀಡಿತ್ತು. ಮೋದಿ ಅವರ ಸರ್ಕಾರವು ರಾಜ್ಯದ ರೈಲ್ವೆ ಯೋಜನೆಗಳಿಗೆ ₹7,700 ಕೋಟಿ ಕೊಟ್ಟಿದೆ. ಅದಕ್ಕೆ ಸರಿಸಮನಾದ ಹಣವನ್ನು ಒದಗಿಸಲು ರಾಜ್ಯ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಹೆದ್ದಾರಿ, ಗ್ರಾಮೀಣಾಭಿವೃದ್ಧಿ, ಆರೋಗ್ಯ ಕ್ಷೇತ್ರಗಳಿಗೆ ಕೇಂದ್ರವು ದೊಡ್ಡಮಟ್ಟದ ಅನುದಾನ ಒದಗಿಸುತ್ತಿದೆ. ಆದರೆ ರಾಜ್ಯದ ಕಾಂಗ್ರೆಸ್ ಸರ್ಕಾರ ಈ ಬಗ್ಗೆ ಮಾತೇ ಆಡುವುದಿಲ್ಲ’ ಎಂದು ಹೇಳಿದರು.

### ನೀಟ್: ಚೈತನ್ಯ ಸಂಸ್ಥೆಯ ಉತ್ತಮ ಸಾಧನೆ

ಬೆಂಗಳೂರು: ‘ನಮ್ಮ ಸಂಸ್ಥೆಯ ವಿದ್ಯಾರ್ಥಿ, ಕರ್ನಾಟಕದ ತೇಜಸ್ ಘೋಟ್ಗಲ್ಕರ್ ಅವರು 2025ನೇ ಸಾಲಿನ ನೀಟ್ ಪರೀಕ್ಷೆಯಲ್ಲಿ 38ನೇ ರ್‍ಯಾಂಕ್ ಪಡೆದುಕೊಂಡಿದ್ದಾರೆ’ ಎಂದು ಶ್ರೀ ಚೈತನ್ಯ ಶೈಕ್ಷಣಿಕ ಸಂಸ್ಥೆಯು ಹೇಳಿದೆ.

‘ಈ ಸಾಲಿನ ಪರೀಕ್ಷೆಯಲ್ಲಿ ಮೊದಲ 1,000 ರ್‍ಯಾಂಕ್‌ಗಳಲ್ಲಿ ಸಂಸ್ಥೆಯ 19 ವಿದ್ಯಾರ್ಥಿಗಳು ಸ್ಥಾನ ಪಡೆದಿದ್ದಾರೆ. ನಮ್ಮ ವಿದ್ಯಾರ್ಥಿಗಳು 286, 294, 345, 367, 388, 444, 473, 523, 556, 565, 609, 610, 617, 723, 764, 776, 803 ಮತ್ತು 894ನೇ ರ್‍ಯಾಂಕ್ ಪಡೆದಿದ್ದಾರೆ’ ಎಂದು ಸಂಸ್ಥೆಯು ಪ್ರಕಟಣೆಯಲ್ಲಿ ತಿಳಿಸಿದೆ.

### ಬದುಕಿತು ಬಡ ಜೀವ!

ಪ್ರಜಾವಾಣಿ ಚಿತ್ರ
ಅನೂಪ್ ರಾಘ್ ಟಿ


ಬಂಡೀಪುರ ರಾಷ್ಟ್ರೀಯ ಅಭಯಾರಣ್ಯದಲ್ಲಿನ ಕೊಳಕ್ಕೆ ನೀರು ಕುಡಿಯಲು ಬಂದಿದ್ದ ಕಡವೆಯೊಂದು ಹುಲಿಯನ್ನು ಕಂಡೊಡನೆ ಓಡಿದ ಪರಿ ಕ್ಯಾಮೆರಾ ಕಣ್ಣಲ್ಲಿ ಸೆರೆಯಾಗಿದ್ದು ಹೀಗೆ....

### ಎಸ್‌ಎಸ್‌ಎಲ್‌ಸಿ ಪರೀಕ್ಷೆ–2; ಸಂಜನಾಗೆ 625ಕ್ಕೆ 625 ಅಂಕ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಎಸ್‌ಎಸ್‌ಎಲ್‌ಸಿ ಪರೀಕ್ಷೆ-2ರ ಫಲಿತಾಂಶ ಶುಕ್ರವಾರ ಪ್ರಕಟವಾಗಿದೆ. ಇಲ್ಲಿನ ಆದಿಚುಂಚನಗಿರಿ ಪ್ರೌಢಶಾಲೆ ವಿದ್ಯಾರ್ಥಿನಿ ಎಸ್.ಸಂಜನಾ ಮತ್ತೊಮ್ಮೆ ಪರೀಕ್ಷೆ ಬರೆದು 625ಕ್ಕೆ 625 ಅಂಕಗಳ ಪಡೆದು ರಾಜ್ಯ ಮಟ್ಟದಲ್ಲಿ ಮೊದಲ ಸ್ಥಾನ ಪಡೆದಿದ್ದಾರೆ. ಹಿಂದಿನ ಫಲಿತಾಂಶದ ವೇಳೆ ಸಂಜನಾ 625ಕ್ಕೆ 624 ಅಂಕ ಪಡೆದಿದ್ದರು. ವಿಜ್ಞಾನ ವಿಷಯದಲ್ಲಿ ಒಂದು ಅಂಕ ಕಡಿತವಾಗಿತ್ತು.

ಸಂಜನಾ ಪೊಲೀಸ್ ಇಲಾಖೆಯಲ್ಲಿ ಎಎಸ್‌ಐ ಆಗಿ ಸೇವೆ ಸಲ್ಲಿಸುತ್ತಿರುವ ಎಂ.ಸುರೇಶ್ ಹಾಗೂ ಎಸ್.ರೇಖಾ ದಂಪತಿಯ ಪುತ್ರಿ.

### ಆಶಾ ಮಾರ್ಗದರ್ಶಕರ ಬಿಡುಗಡೆಗೆ ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಶಾ ಮಾರ್ಗದರ್ಶಕರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿರುವ ಆರೋಗ್ಯ ಇಲಾಖೆಯ ಕ್ರಮವನ್ನು ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ವೈದ್ಯಕೀಯ ಶಿಕ್ಷಣ ಇಲಾಖೆ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರ ಸಂಘ ಖಂಡಿಸಿದೆ.

ಇಲಾಖೆಯು ಆದೇಶ ಹಿಂಪಡೆಯದಿದ್ದರೆ ಕಾನೂನು ಹೋರಾಟ ನಡೆಸುವ ಎಚ್ಚರಿಕೆ ನೀಡಿದೆ. ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ (ಎನ್‌ಎಚ್‌ಎಂ) ಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ 195 ಆಶಾ ಮಾರ್ಗದರ್ಶಕರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿ 12ರಂದು ಆದೇಶ ಹೊರಡಿಸಿದೆ.

‘ಕರ್ತವ್ಯದಿಂದ ಬಿಡುಗಡೆಗೊಂಡಿರುವ 195 ಮಂದಿಯನ್ನು ಅರ್ಹತೆಯ ಆಧಾರ ಆಯಾ ಜಿಲ್ಲೆಗಳಲ್ಲಿ, ಎನ್‌ಎಚ್‌ಎಂ ಅಡಿ ಖಾಲಿ ಇರುವ ಶುಶ್ರೂಷಕರ ಹುದ್ದೆಗಳಿಗೆ ಗುತ್ತಿಗೆ ಆಧಾರದಲ್ಲಿ ನೇಮಿಸುವುದು ಅವೈಜ್ಞಾನಿಕ ಆದೇಶ‘ ಎಂದು ಸಂಘದ ರಾಜ್ಯಾಧ್ಯಕ್ಷ ಶ್ರೀಕಾಂತಸ್ವಾಮಿ ಟೀಕಿಸಿದ್ದಾರೆ.

‘ಈ ಆದೇಶವನ್ನು ಸರ್ಕಾರ ಕೈಬಿಡದಿದ್ದರೆ ನ್ಯಾಯಾಲಯದ ಮೊರೆ ಹೋಗಬೇಕಾಗುತ್ತದೆ. ಅಗತ್ಯವಿದ್ದರೆ ಬೀದಿಗೆ ಇಳಿದು ಹೋರಾಟ ನಡೆಸಬೇಕಾಗುತ್ತದೆ’ ಎಂದು ಎಚ್ಚರಿಕೆ ನೀಡಿದ್ದಾರೆ.

## ರಾಜಧಾನಿಯಲ್ಲಿ ₹67 ಲಕ್ಷ ನಗದು, 1.5 ಕೆ.ಜಿ ಚಿನ್ನ ಕಳ್ಳತನ

# ಕಳವು: ಮನೆ ಕೆಲಸದಾಕೆ ಸೆರೆ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಕೆಲಸ ಮಾಡುತ್ತಿದ್ದ ಮನೆಯಲ್ಲಿ ₹67 ಲಕ್ಷ ನಗದು ಹಾಗೂ ಚಿನ್ನಾಭರಣ, ಬೆಳ್ಳಿ ಸಾಮಗ್ರಿ ಕಳ್ಳತನ ಮಾಡಿದ್ದ ಕೆಲಸದಾಕೆಯನ್ನು ಚಾಮರಾಜಪೇಟೆ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಚಾಮರಾಜನಗರದ ಗಾಳಿಪುರದ ನಿವಾಸಿ ಉಮಾ (43) ಬಂಧಿತ ಆರೋಪಿ. ಆರೋಪಿಯಿಂದ ₹57.50 ಲಕ್ಷ ನಗದು, ₹12.65 ಲಕ್ಷ ಮೌಲ್ಯದ ಆಭರಣಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಚಾಮರಾಜಪೇಟೆಯ ಮೂರನೇ ಮುಖ್ಯರಸ್ತೆಯ ನಿವಾಸಿ, ಉದ್ಯಮಿ ರಾಧಾ ಅವರು ನೀಡಿದ್ದ ದೂರಿನ ಮೇರೆಗೆ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ನಗರ್ತಪೇಟೆಯಲ್ಲಿ ಸೆಕ್ಯುರಿಟಿ ಏಜೆನ್ಸಿ ನಡೆಸುತ್ತಿರುವ ರಾಧಾ ಅವರು, ಅನಾರೋಗ್ಯದಿಂದ ಬಳಲುತ್ತಿದ್ದ ಸಹೋದರಿ ಸುಜಾತಾ ಅವರ ಆರೈಕೆಗೆಂದು ಮೂರು ತಿಂಗಳ ಹಿಂದೆ ಆರೋಪಿಯನ್ನು ನೇಮಿಸಿ ಕೊಂಡಿದ್ದರು. ತಿಂಗಳಿಗೆ ₹23 ಸಾವಿರ ಸಂಬಳ ನಿಗದಿ ಪಡಿಸಿದ್ದರು. ಎರಡು ತಿಂಗಳ ಹಿಂದೆ ಎಲೆಕ್ಟ್ರಾನಿಕ್ ಸಿಟಿ ಸಮೀಪದಲ್ಲಿರುವ ನಿವೇಶನವನ್ನು ಮಾರಾಟ ಮಾಡಿದ್ದ ರಾಧಾ ಅವರು, ಅದರಿಂದ ಬಂದ ಹಣವನ್ನು ಬೀರುವಿನಲ್ಲಿ ಇಟ್ಟಿದ್ದರು. ನಗದು ಜತೆಗೆ ಒಂದು ಕೆ.ಜಿ 415 ಗ್ರಾಂ ತೂಕದ ಚಿನ್ನಾಭರಣ ಹಾಗೂ ಎರಡು ಕೆ.ಜಿ 445 ಗ್ರಾಂ ತೂಕದ ಬೆಳ್ಳಿಯ ತಟ್ಟೆ, ಚೊಂಬು ಹಾಗೂ ಕಪ್‌ಗಳನ್ನು ಇಟ್ಟಿದ್ದರು ಎಂದು ಪೊಲೀಸರು ಹೇಳಿದರು.


ಜಪ್ತಿ ಮಾಡಿಕೊಂಡ ನಗದು ಹಾಗೂ ಚಿನ್ನಾಭರಣ


ಉಮಾ

ನಿವೇಶನ ಮಾರಾಟದಿಂದ ಬಂದ ಹಣದಿಂದ ರಾಧಾ ಅವರು ಫ್ಲ್ಯಾಟ್ ಖರೀದಿಸುವ ಆಲೋಚನೆಯಲ್ಲಿದ್ದರು. ಜೂನ್ 9ರಂದು ಬೀರುವಿನಲ್ಲಿದ್ದ ಹಣ ತೆಗೆಯಲು ಹೋದಾಗ ಹಣ ಮತ್ತು ಚಿನ್ನಾಭರಣ ಇರಲಿಲ್ಲ. ನಂತರ, ದೂರು ನೀಡಿದ್ದರು ಎಂದು ಮೂಲಗಳು ತಿಳಿಸಿವೆ.

‘ದೂರು ಆಧರಿಸಿ ದೂರುದಾರರ ಮನೆಗೆ ತೆರಳಿ ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿ ಪರಿಶೀಲನೆ ನಡೆಸಲಾಯಿತು. ಮನೆ ಕೆಲಸದಾಕೆ ಜೂನ್ 4ರ ಬೆಳಿಗ್ಗೆ ಬ್ಯಾಗ್‌ವೊಂದನ್ನು ಹಿಡಿದುಕೊಂಡು ತೆರಳುತ್ತಿರುವುದು ಕಂಡುಬಂದಿತ್ತು. ಉಮಾಳನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದಾಗ ಕೆಲಸದಾಕೆಯೇ ಕೃತ್ಯ ಎಸಗಿರುವುದು ಪತ್ತೆ ಆಯಿತು’ ಎಂದು ಪೊಲೀಸರು ಹೇಳಿದರು.

## ತೀವ್ರ ಆಕ್ರೋಶದ ಬೆನ್ನಲ್ಲೇ ರಾಜೀನಾಮೆ ರದ್ದುಪಡಿಸಿದ ಆರ್‌ವಿ ಕಾಲೇಜು

# ಕನ್ನಡದಲ್ಲಿ ಉತ್ತರ: ಉಪನ್ಯಾಸಕನ ಕೆಲಸಕ್ಕೆ ಕುತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಣನಕುಂಟೆಯ ಆರ್‌ವಿ ಪಿಯು ಕಾಲೇಜು, ಪಾಠ ಮಾಡುವಾಗ ಕನ್ನಡದಲ್ಲಿ ಉತ್ತರಿಸಿದ್ದಕ್ಕೆ ಉಪನ್ಯಾಸಕರೊಬ್ಬರ ರಾಜೀನಾಮೆ ಪಡೆದಿತ್ತು. ಇದಕ್ಕೆ ಸಾರ್ವಜನಿಕರಿಂದ ತೀವ್ರ ಆಕ್ಷೇಪ ವ್ಯಕ್ತವಾದ ಬೆನ್ನಲ್ಲೇ ರಾಜೀನಾಮೆಯನ್ನು ರದ್ದುಪಡಿಸಿದೆ.

ಆರ್‌ವಿ ಪಿಯು ಕಾಲೇಜಿನ ಉಪನ್ಯಾಸಕ ರೂಪೇಶ್ ಪುತ್ತೂರು ಅವರು ಶನಿವಾರ ಬೆಳಿಗ್ಗೆ ಫೇಸ್‌ಬುಕ್‌ನಲ್ಲಿ ಒಂದು ವಿಡಿಯೊ ಪೋಸ್ಟ್ ಮಾಡಿದ್ದರು.

‘ನಾನು ಆರ್‌ವಿ ಪಿಯು ಕಾಲೇಜಿನಲ್ಲಿ ರಾಸಾಯನಿಕ ವಿಜ್ಞಾನ ಉಪನ್ಯಾಸಕನಾಗಿದ್ದೆ. ಪಾಠ ಮಾಡುವಾಗ ವಿದ್ಯಾರ್ಥಿನಿಯೊಬ್ಬರು ಕನ್ನಡದಲ್ಲಿ ಪ್ರಶ್ನೆ ಕೇಳಿದ ವಿದ್ಯಾರ್ಥಿಗೆ, ಕನ್ನಡದಲ್ಲೇ ಉತ್ತರಿಸಿದ್ದೆ. ಆಗ ಮತ್ತೊಬ್ಬ ವಿದ್ಯಾರ್ಥಿ ಕನ್ನಡದಲ್ಲಿ ಹೇಳಿದರೆ ನನಗೆ ಅರ್ಥವಾಗುವುದಿಲ್ಲ. ನೀವು ಇಂಗ್ಲಿಷ್‌ನಲ್ಲಿ ಏಕೆ ಹೇಳುವುದಿಲ್ಲ ಎಂದು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು’ ಎಂದು ವಿಡಿಯೊದಲ್ಲಿ ವಿವರಿಸಿದ್ದರು.

‘ಆ ವಿದ್ಯಾರ್ಥಿಯ ಆಕ್ಷೇಪಕ್ಕೆ, ‘ಅವರು ಕನ್ನಡದಲ್ಲಿ ಪ್ರಶ್ನೆ ಕೇಳಿದ್ದಕ್ಕೆ, ಕನ್ನಡದಲ್ಲೇ ಉತ್ತರಿಸಿದೆ. ಇದರಲ್ಲಿ ಸಮಸ್ಯೆ ಏನು? ಇದು ಕನ್ನಡದ ನೆಲ, ಕನ್ನಡವನ್ನು ಗೌರವಿಸಬೇಕು’ ಎಂದು ಆ ವಿದ್ಯಾರ್ಥಿಗೆ ತಿಳಿ ಹೇಳಿದೆ. ಆದರೆ ಮರುದಿನ ನನ್ನನ್ನು ಕರೆಸಿಕೊಂಡಿದ್ದ ಪ್ರಾಂಶುಪಾಲರು ರಾಜೀನಾಮೆ ನೀಡುವಂತೆ ಒತ್ತಾಯಿಸಿದರು’ ಎಂದು ರೂಪೇಶ್ ಆರೋಪಿಸಿದ್ದರು.

‘ರಾಜೀನಾಮೆ ನೀಡಲು ನಾನು ನಿರಾಕರಿಸಿದೆ. ಆಗ ಅವರು, ಆರ್‌ವಿ ಟ್ರಸ್ಟ್‌ನ ಮತ್ತೊಂದು ಕಾಲೇಜಿನಲ್ಲಿ ಓದುತ್ತಿರುವ ನನ್ನ ಮಗಳ ಅಂಕಪಟ್ಟಿ, ವರ್ಗಾವಣೆ ಪ್ರಮಾಣಪತ್ರ ತಡೆ-ಹಿಡಿಯುತ್ತೇವೆ ಎಂದು ಬೆದರಿಕೆ ಹಾಕಿದರು. ಮಗಳ ಭವಿಷ್ಯಕ್ಕೆ ತೊಂದರೆ ಆಗಬಾರದು ಎಂಬ ಕಾರಣಕ್ಕೆ ರಾಜೀನಾಮೆ ನೀಡಿದೆ’ ಎಂದಿದ್ದರು.

‘ಕನ್ನಡದ ನೆಲದಲ್ಲಿ ಕನ್ನಡ ಮಾತನಾಡಿದ್ದಕ್ಕೆ ಯಾರಿಗೂ ಈ ಸ್ಥಿತಿ ಬರಬಾರದು ಎಂದು ಈ ವಿಡಿಯೊ ಹಾಕುತ್ತಿದ್ದೇನೆ’ ಎಂದಿದ್ದರು.

ಈ ವಿಡಿಯೊಗೆ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ಬೆಂಬಲ ಮತ್ತು ಆರ್‌ವಿ ಕಾಲೇಜಿನ ವಿರುದ್ಧ ಆಕ್ರೋಶ ವ್ಯಕ್ತವಾಗಿತ್ತು. ಸಂಜೆಯ ವೇಳೆಗೆ ಕೆಲ ಕನ್ನಡ ಪರ ಹೋರಾಟಗಾರರು ರೂಪೇಶ್ ಪುತ್ತೂರು ಅವರನ್ನು ಸಂಸ್ಥೆಯ ಜಂಟಿ ನಿರ್ದೇಶಕ ಡಿ.ಪಿ.ನಾಗರಾಜ್ ಅವರ ಕಚೇರಿಗೆ ಕರೆದುಕೊಂಡು ಹೋಗಿ, ಆಕ್ಷೇಪ ವ್ಯಕ್ತಪಡಿಸಿದ್ದರು.

ಸಭೆಯ ನಂತರ ಮತ್ತೊಂದು ವಿಡಿಯೊ ಪೋಸ್ಟ್ ಮಾಡಿದ ರೂಪೇಶ್ ಪುತ್ತೂರು, ‘ತಮ್ಮ ಗಮನಕ್ಕೆ ಬರದೆಯೇ ಈ ರೀತಿ ಆಗಿದೆ. ನಿಮ್ಮ ರಾಜೀನಾಮೆಯನ್ನು ರದ್ದುಪಡಿಸುತ್ತೇವೆ ಎಂದು ಸಂಸ್ಥೆಯ ಜಂಟಿ ನಿರ್ದೇಶಕರು ಹೇಳಿದರು. ನನಗೆ ಎದುರಾಗಿದ್ದ ಸಮಸ್ಯೆಯು, ಕನ್ನಡಿಗರ ಬೆಂಬಲದಿಂದಾಗಿ ಬಗೆಹರಿದಿದೆ’ ಎಂದು ಹೇಳಿದ್ದಾರೆ.

### ಕ್ಷಮೆ ಯಾಚಿಸಿದ ಪ್ರಾಂಶುಪಾಲ

‘ಪಾಠ ಮಾಡುವಾಗ ಕನ್ನಡದಲ್ಲಿ ಉತ್ತರಿಸಿದ್ದಕ್ಕೆ ಉಪನ್ಯಾಸಕರೊಬ್ಬರಿಂದ ಪಡೆದಿದ್ದ ರಾಜೀನಾಮೆಯನ್ನು ರದ್ದುಪಡಿಸಲಾಗಿದೆ’ ಎಂದು ಕೋಣನಕುಂಟೆಯಲ್ಲಿರುವ ಆರ್‌ವಿ ಪಿಯು ಕಾಲೇಜಿನ ಪ್ರಾಂಶುಪಾಲ ಎ.ಎಸ್.ಶ್ರೀನಿವಾಸ್ ಹೇಳಿದ್ದಾರೆ.

‘ಕೆಲ ಅಚಾತುರ್ಯದಿಂದ ಹೀಗಾಗಿದೆ. ಕನ್ನಡ ಮತ್ತು ಕನ್ನಡಿಗರ ಬಗ್ಗೆ ಗೌರವವಿದೆ. ಕನ್ನಡಿಗರ ಭಾವನೆಗೆ ಧಕ್ಕೆಯಾಗುವಂತೆ ನಡೆದುಕೊಂಡಿದ್ದಕ್ಕೆ ಕ್ಷಮೆ ಕೇಳುತ್ತೇನೆ’ ಎಂದಿದ್ದಾರೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. 

ಚಿಟಿಕೆ ಸುದ್ದಿ

## ಪೊಲೀಸ್ ವಶಕ್ಕೆ ಡ್ರಗ್ ಪೆಡ್ಲರ್

ಮುಂಬೈ (ಪಿಟಿಐ): ಅರಬ್ ಸಂಯುಕ್ತ ಸಂಸ್ಥಾನದಿಂದ (ಯುಎಇ) ಗಡಿಪಾರಾಗಿದ್ದ ಡ್ರಗ್ ಪೆಡ್ಲರ್‌ನನ್ನು ಮುಂಬೈ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ತಾಹೀರ್ ಸಲೀಂ ಡೋಲಾ ಪೊಲೀಸರ ವಶದಲ್ಲಿರುವಾತ. ಇಂಟರ್‌ಪೋಲ್ ಮೂಲಕ ಈತನ ಗಡಿಪಾರಿಗೆ ಸಿಬಿಐ ಮನವಿ ಮಾಡಿತ್ತು.

ಸಿಂಥೆಟಿಕ್ ಡ್ರಗ್ ತಯಾರಿಕಾ ಕಾರ್ಖಾನೆಯನ್ನು ಸಲೀಂ ಸಾಂಗ್ಲಿಯಲ್ಲಿ ನಿರ್ವಹಿಸುತ್ತಿದ್ದ. ಈ ಕಾರ್ಖಾನೆ ಮೇಲೆ ದಾಳಿ ನಡೆಸಿ ₹252 ಕೋಟಿ ಮೌಲ್ಯದ 126.141 ಕೆ.ಜಿ ಮೆಫೆಡ್ರೋನ್ (ಎಂಡಿ) ವಶಪಡಿಸಿಕೊಳ್ಳಲಾಗಿತ್ತು ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ವಿದೇಶದಿಂದಲೇ ಕಾರ್ಖಾನೆ ನಿರ್ವಹಿಸುತ್ತಿದ್ದ ಡೋಲಾ ಬಂಧನಕ್ಕೆ ಸಹಕರಿಸುವಂತೆ ಸಿಬಿಐ ಇಂಟರ್‌ಪೋಲ್‌ಗೆ ಮನವಿ ಮಾಡಿದ್ದರಿಂದ, ರೆಡ್ ಕಾರ್ನರ್ ನೋಟಿಸ್ ಜಾರಿಯಾಗಿತ್ತು.

ಜ.27ರಂದು ಯುಎಇಯಲ್ಲಿ ಈತನನ್ನು ಬಂಧಿಸಲಾಗಿತ್ತು.

## ಅಯೋಧ್ಯೆಯಲ್ಲಿ ಉರೂಸ್‌ಗೆ ನಿಷೇಧ

ಅಯೋಧ್ಯೆ (ಪಿಟಿಐ): ಶನಿವಾರ ಮತ್ತು ಭಾನುವಾರ ಅಯೋಧ್ಯೆಯಲ್ಲಿ ನಿಗದಿಯಾಗಿದ್ದ ವಾರ್ಷಿಕ ಉರೂಸ್‌ಗೆ ಶಾಂತಿ ಕದಡುವ ಯತ್ನ ನಡೆದು ಕಾನೂನು ಸುವ್ಯವಸ್ಥೆ ಹದಗೆಡಬಹುದು ಎಂಬ ವರದಿಗಳನ್ನು ಆಧರಿಸಿ ಸ್ಥಳೀಯ ಆಡಳಿತ ನಿಷೇಧ ಹೇರಿದೆ.

ಖಾನ್‌ಪುರದ ಮಸೋಧಾ ಪ್ರದೇಶದಲ್ಲಿ ಪ್ರತಿವರ್ಷ ನಡೆಸುತ್ತಿದ್ದ 'ದಾದಾ ಮಿಯಾ ಮಜಾರ್' ಉರೂಸ್‌ಗೆ ನೀಡಿದ್ದ ಅನುಮತಿ ರದ್ದು ಮಾಡುವಂತೆ ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಮುಖಂಡರು ಅಯೋಧ್ಯೆ ಆಡಳಿತಕ್ಕೆ ಮನವಿ ನೀಡಿದ್ದರು.

ದಾದಾ ಮಿಯಾ ಮಜಾರ್ ಹೆಸರಿನಲ್ಲಿ ಅನುಮತಿ ಪಡೆದು 'ಗಾಜಿ ಬಾಬಾ' ಉರೂಸ್ ಆಯೋಜಿಸಿ ಜನರನ್ನು ಸೇರಿಸಲಾಗುತ್ತಿದೆ ಎಂದು ವಿಎಚ್‌ಪಿಯ ಲಾಲ್‌ಜಿ ಶರ್ಮಾ, ಸೂರ್ಯಕಾಂತ್ ಪಾಂಡೆ ಎಂಬುವರು ಆರೋಪಿಸಿದ್ದರು.

'ಗಾಜಿ ಬಾಬಾ ಉರೂಸ್' ಹೆಸರಿನ ಭಿತ್ತಿಪತ್ರ ಮುದ್ರಿಸಿ ದೇಣಿಗೆ ಸಂಗ್ರಹಿಸಿರುವುದು ಪೊಲೀಸ್ ತನಿಖೆಯಲ್ಲೂ ಗೊತ್ತಾಗಿತ್ತು. ಉರೂಸ್ ಸಮಯದಲ್ಲಿ ಸಂಘಟಕರು ಕೆಲ ತಂತ್ರಿಗಳನ್ನು ಕರೆಸಿ 'ಮಾಟಮಂತ್ರ' ನಡೆಸುತ್ತಾರೆ ಎಂದು ವಿಎಚ್‌ಪಿ ದೂರಿನಲ್ಲಿ ಆರೋಪಿಸಿತ್ತು.



ಸಮಾರಂಭದಲ್ಲಿ (ಕುಳಿತವರು ಎಡದಿಂದ) ಉಷಾ ಕಟ್ಟೆಮನೆ (ಪ್ರಥಮ ಬಹುಮಾನ), ಗೌರಿಚಂದ್ರ ಕೇಸರಿ, ಎನ್‌.ಸಿ. ಮಹೇಶ್, ಎನ್‌. ಎಸ್‌. ಶಂಕರ್ (ಮೆಚ್ಚುಗೆ ಬಹುಮಾನ), ಚಾಂದ್ ಪಾಷ (ದ್ವಿತೀಯ ಬಹುಮಾನ) ಮತ್ತು ಜಗದೀಶ್ ಎಚ್‌. ಬಾಗೋಡಿ (ಮೆಚ್ಚುಗೆ ಬಹುಮಾನ) ಅವರಿಗೆ ಬಹುಮಾನ ವಿತರಿಸಲಾಯಿತು. ವೀರಕಪುತ್ರ ಶ್ರೀನಿವಾಸ್, ಲಕ್ಷ್ಮಿ ಚಂದ್ರಶೇಖರ್, ಜಯಮಾಲಾ, ಎಸ್‌.ವಿ. ರಾಜೇಂದ್ರ ಸಿಂಗ್ ಬಾಬು, ಮಂಡ್ಯ ರಮೇಶ್, ಬಿ. ಸುರೇಶ್ ಮತ್ತು ರವೀಂದ್ರ ಭಟ್ಟ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

# 'ಕಾದಂಬರಿ ಆಧಾರಿತ ಸಿನಿಮಾ ಬರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾದಂಬರಿ ಆಧಾರಿತ ಚಲನಚಿತ್ರಗಳು ಈ ಹಿಂದೆ ಯಶಸ್ಸು ಕಂಡಿದ್ದವು. ಕನ್ನಡ ಚಿತ್ರರಂಗವು ಸುವರ್ಣಯುಗಕ್ಕೆ ಮತ್ತೆ ಮರಳಬೇಕಾದರೆ ಕಾದಂಬರಿ ಆಧಾರಿತ ಸಿನಿಮಾಗಳು ಹೆಚ್ಚು ಬರಬೇಕು' ಎಂದು ಚಲನಚಿತ್ರ ನಿರ್ದೇಶಕ ಎಸ್‌.ವಿ. ರಾಜೇಂದ್ರಸಿಂಗ್ ಬಾಬು ಅಭಿಪ್ರಾಯ ವ್ಯಕ್ತಪಡಿಸಿದರು.

'ಪ್ರಜಾವಾಣಿ'ಯು ವೀರಲೋಕ ಪ್ರಕಾಶನದ ಸಹಯೋಗದಲ್ಲಿ ನಗರದಲ್ಲಿ ಶನಿವಾರ ಆಯೋಜಿಸಿದ್ದ ಸಮಾರಂಭದಲ್ಲಿ 'ಯುಗಾದಿ ನಾಟಕ ರಚನಾ ಸ್ಪರ್ಧೆ'ಯ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಈ ವೇಳೆ ಮಾತನಾಡಿದ ರಾಜೇಂದ್ರಸಿಂಗ್ ಬಾಬು, 'ಕನ್ನಡ ಚಿತ್ರರಂಗಕ್ಕೆ ಉತ್ತಮ ಕಥೆಗಳ ಅಗತ್ಯವಿದೆ. 'ಪ್ರಜಾವಾಣಿ' ಕನ್ನಡಕ್ಕೆ ನೀಡಿದ ಕಥೆಗಳನ್ನು ಯಾರಿಂದಲೂ ನೀಡಲು ಸಾಧ್ಯವಿಲ್ಲ. 'ಗೆಜ್ಜೆ ಪೂಜೆ', 'ಎಡಕಲ್ಲು ಗುಡ್ಡದ ಮೇಲೆ', 'ಅಂತ', 'ಹೊಂಬಿಸಲು' ಸೇರಿ ಅನೇಕ ಚಿತ್ರಗಳು 'ಪ್ರಜಾವಾಣಿ' ಮತ್ತು 'ಸುಧಾ'ದಲ್ಲಿ ಪ್ರಕಟಗೊಂಡ ಕಥೆಗಳನ್ನೇ ಆಧರಿಸಿವೆ. ಈಗ ತಂತ್ರಜ್ಞಾನ ಸಾಕಷ್ಟು ಮುಂದುವರಿದಿದೆ. ಆದರೆ, ಚಿತ್ರರಂಗವು ಉತ್ತಮ ಕಥೆಗಳ ಕೊರತೆ ಎದುರಿಸುತ್ತಿದೆ' ಎಂದು ಕಳವಳ ವ್ಯಕ್ತಪಡಿಸಿದರು.

'ಒಂದು ಕಾಲದಲ್ಲಿ ಕನ್ನಡ ಚಿತ್ರರಂಗ ಶ್ರೀಮಂತವಾಗಿತ್ತು. ಇಲ್ಲಿನ ಚಿತ್ರಕಥೆಗಳ ಹಕ್ಕುಸ್ವಾಮ್ಯ ಪಡೆಯಲು ಭಾರತೀಯ ಚಿತ್ರರಂಗ ಕಾಯುತ್ತಿತ್ತು. 'ಅಂತ' ಚಿತ್ರ ಬಿಡುಗಡೆಯಾದಾಗ 17 ಜನ ನಿರ್ಮಾಪಕರು ಹಕ್ಕುಸ್ವಾಮ್ಯಕ್ಕೆ ಕಾದು ಕುಳಿತಿದ್ದರು. ಆ ಚಿತ್ರವು 'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾದ ಕಥೆಯನ್ನು ಆಧರಿಸಿತ್ತು' ಎಂದು ಸ್ಮರಿಸಿ ಕೊಂಡರು. 'ಕನ್ನಡ ಚಿತ್ರರಂಗವು ತೀವ್ರ ನಿಗಾ ಘಟಕದಲ್ಲಿ ಬದುಕುತ್ತಿದೆ. ಚಿತ್ರಕ್ಕೆ ಕಥೆಯೇ ಜೀವಾಳ. ಕಾದಂಬರಿ ಆಧಾರಿತ ಶೇ 85 ರಷ್ಟು ಚಿತ್ರಗಳು ಯಶಸ್ವಿಯಾಗಿವೆ. ಆದ್ದರಿಂದ ಮತ್ತೆ ಕಾದಂಬರಿ ಲೋಕಕ್ಕೆ ಕನ್ನಡ ಚಿತ್ರರಂಗ ಮರಳಬೇಕು' ಎಂದು ಹೇಳಿದರು.

ನಟಿ ಜಯಮಾಲಾ, 'ಪಾರ್ವತಮ್ಮ ರಾಜ್‌ಕುಮಾರ್ ಅವರು ಕಾದಂಬರಿಗಳನ್ನು ಓದಿ, ಅದನ್ನು ಸಿನಿಮಾ ಮಾಡುತ್ತಿದ್ದರು. ರಾಜ್‌ಕುಮಾರ್ ಅವರ ಚಿತ್ರಗಳು ಯಶಸ್ವಿಯಾಗಿದ್ದರ ಹಿಂದೆ ಕಾದಂಬರಿಗಳ ಕೊಡುಗೆಯೂ ಇದೆ. 'ಪ್ರಜಾವಾಣಿ' ಪತ್ರಿಕೆಯು ಪ್ರಜೆಗಳ ಧ್ವನಿಯಾಗಿದ್ದು, ಸಾಂಸ್ಕೃತಿಕ ಲೋಕದ ರಾಯಭಾರಿಯಾಗಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸ್ಪರ್ಧೆಯ ತೀರ್ಪುಗಾರರೂ ಆಗಿದ್ದ ರಂಗಕರ್ಮಿ ಬಿ. ಸುರೇಶ್, ರಂಗ ನಟಿ ಲಕ್ಷ್ಮಿ ಚಂದ್ರಶೇಖರ್, ವೀರಲೋಕ ಪ್ರಕಾಶನದ ಮುಖ್ಯಸ್ಥ ವೀರಕಪುತ್ರ ಶ್ರೀನಿವಾಸ್ ಹಾಗೂ 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಅವರು ಉಪಸ್ಥಿತರಿದ್ದರು. ಬಳಿಕ, ಮೈಸೂರಿನ ನಟನ ರಂಗಶಾಲೆ ತಂಡವು 'ಸ್ಥಾವರವೂ ಜಂಗಮ' ನಾಟಕ ಪ್ರಸ್ತುತಪಡಿಸಿತು.

> ಜನರ ಆಲೋಚನಾ ಕ್ರಮಗಳನ್ನು ತಿದ್ದುವ, ಮರಳಿ ಅವರನ್ನು ಮನುಷ್ಯರನ್ನಾಗಿಸುವ ನಾಟಕಗಳು ಬರಬೇಕು. ಸ್ಪರ್ಧೆಗೆ ಅತ್ಯುತ್ತಮ ನಾಟಕಗಳು ಬಂದಿದ್ದವು
> **ಬಿ.ಸುರೇಶ್,** ರಂಗಕರ್ಮಿ

> ನಾಟಕ ಬರೆಯುವುದು ಕಥೆ, ಕವಿತೆ ಬರೆದಷ್ಟು ಸುಲಭವಲ್ಲ. ರಂಗದ ಮೇಲಿನ ಮಿತಿ, ಸವಾಲುಗಳನ್ನು ಅರಿತಿರಬೇಕು. ಸ್ತ್ರೀಯರಿಂದ ನಾಟಕ ರಚನೆ ಉತ್ತಮ ಬೆಳವಣಿಗೆ
> **ಲಕ್ಷ್ಮಿ ಚಂದ್ರಶೇಖರ್,** ರಂಗ ನಟಿ

ಪ್ರಜಾವಾಣಿ–ವೀರಲೋಕ ನಾಟಕ ರಚನಾ ಸ್ಪರ್ಧೆ: ವಿಜೇತರಿಗೆ ಬಹುಮಾನ

### ಸ್ಪರ್ಧೆಯ ವಿಜೇತರು

ಉಷಾ ಕಟ್ಟೆಮನೆ ಅವರ 'ಸಲಾಂ ತಕ್ಕೋ ಕಡಲೂರ ದೊರೆಯೇ' ನಾಟಕ ಪ್ರಥಮ ಬಹುಮಾನ, ಚಾಂದ್ ಪಾಷ ಎನ್‌.ಎಸ್‌.ಅವರ 'ಮಸೀದಿಯೊಳಗೊಂದು ಹಣ್ಣು ದೀಪ' ಎರಡನೇ ಬಹುಮಾನ ಹಾಗೂ ರಮೇಶ ಅರೋಲಿ ಅವರ 'ತೀನ್ ಕಂದಿಲ್' ಮೂರನೇ ಬಹುಮಾನ ಪಡೆದುಕೊಂಡಿದ್ದವು. ಈ ಬಹುಮಾನಗಳು ಕ್ರಮವಾಗಿ ₹25 ಸಾವಿರ, ₹15 ಸಾವಿರ ಹಾಗೂ ₹10 ಸಾವಿರ ನಗದು ಬಹುಮಾನ ಒಳಗೊಂಡಿದ್ದವು.

ಗೌರಿ ಚಂದ್ರಕೇಸರಿ ಅವರ 'ಕತ್ತಲು ಕುಡಿದವಳು', ಎನ್‌.ಎಸ್‌.ಶಂಕರ್ ಅವರ 'ಬಾಪೂ', ಜಗದೀಶ ಎಚ್‌. ಬಾಗೋಡಿ ಅವರ 'ಪ್ರತ್ಯೇಕ ಬುದ್ಧ', ಕಾವ್ಯಾ ಕಡಮೆ ಅವರ 'ಶಾಲುಮತಿ ಸಂಸ್ಥಾನ' ಹಾಗೂ ಎನ್‌.ಸಿ.ಮಹೇಶ್ ಅವರ 'ಅದು ಬೆಟ್ಟ ಇದು ಬೆಟ್ಟವೇ' ನಾಟಕಗಳು ತೀರ್ಪುಗಾರರ ಮೆಚ್ಚುಗೆ ಪಡೆದಿದ್ದವು. ಈ ಬಹುಮಾನ ತಲಾ ₹5 ಸಾವಿರ ನಗದು ಒಳಗೊಂಡಿತ್ತು.

# 'ಬೇಡ, ಬೇಡುವ ಜಂಗಮ ಬೇರೆ'

## 'ಬುಡ್ಗ ಜಂಗಮ, ಬೇಡ ಜಂಗಮ, ಬೇಡುವ ಜಂಗಮ' ಸಭೆಯಲ್ಲಿ ಜಾಮದಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಿಂಗಾಯತರಲ್ಲಿಯೂ ಚಾತುರ್ವರ್ಣ ಪದ್ಧತಿ ಇದೆ ಎಂದು ಶತಮಾನದ ಹಿಂದೆ ಪ್ರತಿಪಾದಿಸಿದವರೇ ಇಂದು ಬೇಡುವ ಜಂಗಮ ಹೆಸರಲ್ಲಿ ಪರಿಶಿಷ್ಟ ಜಾತಿ ಮೀಸಲಾತಿ ಪಡೆಯಲು ಹೊರಟಿದ್ದಾರೆ. ಬೇಡುವ ಜಂಗಮ ಮತ್ತು ಬೇಡ ಜಂಗಮ ಒಂದೇ ಅಲ್ಲ ಎಂದು ಜಾಗತಿಕ ಲಿಂಗಾಯತ ಮಹಾಸಭಾದ ಪ್ರಧಾನ ಕಾರ್ಯದರ್ಶಿ ಎಸ್‌.ಎಂ.ಜಾಮದಾರ ಹೇಳಿದರು.

ಅಲೆಮಾರಿ ಬುಡಕಟ್ಟು ಮಹಾಸಭಾ ಶನಿವಾರ ಹಮ್ಮಿಕೊಂಡಿದ್ದ 'ಬುಡ್ಗಜಂಗಮ, ಬೇಡ ಜಂಗಮ, ಬೇಡುವ ಜಂಗಮ' ದುಂಡು ಮೇಜಿನ ಸಭೆಯಲ್ಲಿ ಅವರು ಮಾತನಾಡಿದರು.

ವೀರಶೈವ ಲಿಂಗಾಯತರಲ್ಲಿಯೂ ವರ್ಣಾಶ್ರಮ ವ್ಯವಸ್ಥೆ ಇದೆ. ಆರಾಧ್ಯರು, ಐನೋರು, ಜಂಗಮರೆಲ್ಲ ವೀರಶೈವರ ಬ್ರಾಹ್ಮಣರು. ಕೆಳದಿ, ಇಕ್ಕೇರಿ ಸಹಿತ ವಿವಿಧ ರಾಜರ ಮನೆತನಗಳು ಕ್ಷತ್ರಿಯರು, ಬಣಜಿಗ ಸಹಿತ ಕೆಲವು ಪಂಗಡಗಳು ವೈಶ್ಯರು, ಉಳಿದವರು ಶೂದ್ರರು ಎಂದು 1906ರಲ್ಲಿ ಮಹಾರಾಜರಿಗೆ ಅರ್ಜಿ ಸಲ್ಲಿಸಿ, ಅದೇ ರೀತಿ ಗುರುತಿಸಬೇಕೆಂದು ಒತ್ತಾಯಿಸಿದ್ದರು ಎಂದು ವಿವರಿಸಿದರು.

ಬುಡ್ಗ ಜಂಗಮ, ಬೇಡ ಜಂಗಮರು ಮಾಂಸಾಹಾರಿಗಳು, ವೀರಶೈವ ಜಂಗಮರು ಸಸ್ಯಾಹಾರಿಗಳು. ವೀರಶೈವ ಜಂಗಮರು ಭಕ್ತರ ಮನೆಯಲ್ಲಷ್ಟೇ ಬೇಡುತ್ತಾರೆ. ಅದೂ ಸ್ವಯಂ ಪಾಕ ಭಿಕ್ಷೆ (ಅಡುಗೆಗೆ ಬೇಕಾದ ವಸ್ತುಗಳನ್ನು ನೀಡುವುದು), ಕಜ್ಜಾಯದಲ್ಲಿ ಭಿಕ್ಷೆ (ಅಡುಗೆ ಮಾಡಿ ನೀಡುವುದು) ಈ ಎರಡೇ ಭಿಕ್ಷೆಗಳು ಅವರಲ್ಲಿರುವುದು ಎಂದರು.

ಪರಿಶಿಷ್ಟ ಜಾತಿಯಲ್ಲಿ ಇರುವವರು ಯಾರು? ಪಂಗಡಗಳು ಯಾರು ಎಂಬುದೆಲ್ಲ ನಮ್ಮ ಸಂವಿಧಾನದಲ್ಲಿ ಸ್ಪಷ್ಟವಾಗಿದೆ. ಬ್ರಿಟಿಷರ ಆಳ್ವಿಕೆಯ ಸಂದರ್ಭದ ಕಾನೂನುಗಳನ್ನು ನೋಡಿದರೂ ಯಾರು ಎಸ್‌ಸಿ–ಎಸ್‌ಟಿ ಎಂಬುದು ಗೊತ್ತಾಗುತ್ತದೆ. ಎಲ್ಲ ದಾಖಲೆಗಳನ್ನು ನ್ಯಾ.ನಾಗಮೋಹನದಾಸ್ ಆಯೋಗದ ಮುಂದೆ ಇಡಬೇಕು ಎಂದರು.

ಅಲೆಮಾರಿ ಬುಡಕಟ್ಟು ಮಹಾಸಭಾ ಗೌರವಾಧ್ಯಕ್ಷ ಸಿ.ಎಸ್‌. ದ್ವಾರಕಾನಾಥ್ ಮಾತನಾಡಿ, 'ಜಿಲ್ಲಾಧಿಕಾರಿಗಳು ಎಲ್ಲ ಜಾತಿ ಪ್ರಮಾಣಪತ್ರಗಳನ್ನು ಮರು ಪರಿಶೀಲನೆ ಮಾಡಬೇಕು. ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದು ಸರ್ಕಾರಿ ಹುದ್ದೆಗಳನ್ನು ಪಡೆದವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಬೇಕು. ಅವರಿಗೆ ಶಿಕ್ಷೆಯಾದರೆ ಮುಂದೆ ಸುಳ್ಳು ಜಾತಿ ಪ್ರಮಾಣಪತ್ರ ಪಡೆಯುವುದು ಕಡಿಮೆಯಾಗಲಿದೆ' ಎಂದು ಹೇಳಿದರು.

ಶರಣ ತತ್ವ ಚಿಂತಕ ಶಿವಶರಣಪ್ಪ ಮಾತನಾಡಿ, 'ಲಿಂಗಾಯತ ಧರ್ಮ ಸ್ವತಂತ್ರ ಧರ್ಮ. ಅದಕ್ಕೆ ಮಾನ್ಯತೆ ಪಡೆಯಲು ಹೊರಟರೆ ಅಡ್ಡಗಾಲು ಇಡುವವರೇ ಇಲ್ಲಿ ನಾವು ಬೇಡುವ ಜಂಗಮರು ಪರಿಶಿಷ್ಟ ಜಾತಿಯವರು ಎಂದು ಹೇಳಿಕೊಂಡು ದಲಿತರ ಹಕ್ಕುಗಳನ್ನು ಕಿತ್ತುಕೊಳ್ಳುತ್ತಿದ್ದಾರೆ' ಎಂದರು.



'ಬುಡ್ಗಜಂಗಮ, ಬೇಡಜಂಗಮ ಮತ್ತು ಬೇಡುವ ಜಂಗಮ' ದುಂಡು ಮೇಜಿನ ಸಭೆಯಲ್ಲಿ ಎಸ್‌.ಎಂ. ಜಾಮದಾರ, ಸಿ.ಎಸ್‌. ದ್ವಾರಕಾನಾಥ್, ಶಿವಶರಣಪ್ಪ ಅವರು ಬಿ.ಆರ್‌. ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ

### 'ಮಾಂಸಾಹಾರ ಸೇವಿಸುವ ಸವಾಲು'

ದುಂಡುಮೇಜಿನ ಸಭೆಯಲ್ಲಿ ಭಾಗವಹಿಸಿದ್ದ 'ಒಡೆಯರ್' ಎಂಬ ವೀರಶೈವ ಜಂಗಮರೊಬ್ಬರು ಮಾತನಾಡಿ, 'ನಮ್ಮನ್ನೂ ಬ್ರಾಹ್ಮಣರು ಹೊರಗಿಟ್ಟಿದ್ದಾರೆ. ನಾವು ಊಟ ಮಾಡಿದರೆ ಸೆಗಣಿ ಸಾರಿಸಿ ಬರಬೇಕು. ಹಾಗಾಗಿ ಬ್ರಾಹ್ಮಣರನ್ನು ಹೊರತುಪಡಿಸಿ ಎಲ್ಲರೂ ಅಸ್ಪೃಶ್ಯರೇ ಆಗಿದ್ದಾರೆ. ಬೇಡ ಜಂಗಮರು ಬೇರೆಯಲ್ಲ, ಬೇಡುವ ಜಂಗಮ ಬೇರೆಯಲ್ಲ. ಎಲ್ಲರೂ ಒಂದೇ' ಎಂದು ಪ್ರತಿಪಾದಿಸಿದರು.

ಸರ್ಕಾರದ ಆದೇಶ, ಹೈಕೋರ್ಟ್ ಆದೇಶ, ಅಂಬೇಡ್ಕರ್ ಬರಹಗಳನ್ನೆಲ್ಲ ಅವರು ಉಲ್ಲೇಖ ಮಾಡಿದರು. ಅದೆಲ್ಲ ಕೆಲವು ಅರ್ಧ ಮಾಹಿತಿ, ಕೆಲವು ತಪ್ಪು ಮಾಹಿತಿ ಎಂಬುದನ್ನು ಎಸ್‌.ಎಂ. ಜಾಮದಾರ, ಸಿ.ಎಸ್‌. ದ್ವಾರಕಾನಾಥ್ ವಿವರಿಸಿದರು.

'ಬುಡ್ಗ, ಬೇಡ ಜಂಗಮರು ಮಾಂಸಾಹಾರಿಗಳು. ಅವರು ಬೆಕ್ಕು, ನರಿ, ಅಳಿಲುಗಳನ್ನೆಲ್ಲ ತಿನ್ನುತ್ತಾರೆ. ಈಗಲೇ ಮಾಂಸಾಹಾರ ತರಿಸುವ ವ್ಯವಸ್ಥೆ ಮಾಡುತ್ತೇವೆ. ಅವರೊಂದಿಗೆ ಕುಳಿತು ನೀವೂ ಅದನ್ನು ಸೇವಿಸಬೇಕು. ಆಗ ಬೇಡುವ ಜಂಗಮ ಮತ್ತು ಬೇಡ ಜಂಗಮ ಒಂದೇ ಎಂದು ಒಪ್ಪಿಕೊಳ್ಳುತ್ತೇವೆ' ಎಂದು ದ್ವಾರಕಾನಾಥ್ ಸವಾಲು ಹಾಕಿದರು.

'ಅಳಿಲಿನಂತೆ ಸದ್ದು ಮಾಡಿಕೊಂಡು ಮರ ಏರಿ ಅಳಿಲು ಹಿಡಿಯುವ ಕಲೆ ನಮಗೆ ಗೊತ್ತು. ನೀವು ನಮ್ಮವರೇ ಆಗಿದ್ದರೆ ಬನ್ನಿ. ನಮ್ಮ ಹಾಗೇ ಅಳಿಲು ಹಿಡಿದು ತೋರಿಸಿ' ಎಂದು ಸಭೆಯಲ್ಲಿದ್ದ ಬೇಡ ಜಂಗಮರು ಸವಾಲೊಡ್ಡಿದರು. ಆಗ ವೀರಶೈವ ಜಂಗಮರು ಸಭೆಯಿಂದ ಹೊರನಡೆದರು.

# ಪಕ್ಷ ಸಂಘಟನೆ: ನಿಖಿಲ್ ರಾಜ್ಯ ಪ್ರವಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಕ್ಷವನ್ನು ಸಂಘಟಿಸುವ ಉದ್ದೇಶದಿಂದ ರಾಜ್ಯದಾದ್ಯಂತ ಪ್ರವಾಸ ನಡೆಸಲಿದ್ದೇನೆ. ಎಲ್ಲ ಜಿಲ್ಲೆಗಳ ನಾಯಕರು ಮತ್ತು ಕಾರ್ಯಕರ್ತರನ್ನು ಸ್ವತಃ ಭೇಟಿ ಮಾಡಿ, ಪಕ್ಷಕ್ಕೆ ಬಲ ತುಂಬಲಾಗುತ್ತದೆ' ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ತಿಳಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಪಕ್ಷವನ್ನು ಜನರ ಬಳಿಗೆ ಕರೆದೊಯ್ಯುವ ಉದ್ದೇಶದಿಂದ 'ಜನರೊಂದಿಗೆ ಜನತಾದಳ' ಎಂಬ ಕಾರ್ಯಕ್ರಮ ರೂಪಿಸಲಾಗಿದೆ. ಇದರ ಭಾಗವಾಗಿಯೇ 'ರಾಜ್ಯ ಸಂಘಟನಾ ಪ್ರವಾಸ' ಮತ್ತು 'ಮಿಸ್ಡ್ ಕಾಲ್ ಅಭಿಯಾನ' ನಡೆಸಲಾಗುತ್ತದೆ' ಎಂದರು.

'ಹಿರಿಯರೂ ಸೇರಿ ಪಕ್ಷದ ಎಲ್ಲ ನಾಯಕರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು, ಪ್ರವಾಸ ಕಾರ್ಯಕ್ರಮ ರೂಪಿಸಲಾಗಿದೆ. ಎಲ್ಲ ಶಾಸಕರು ಮತ್ತು ಜಿಲ್ಲಾಧ್ಯಕ್ಷರೊಂದಿಗೆ ಚರ್ಚಿಸಿ ಪ್ರವಾಸದ ರೂಪುರೇಷೆಯನ್ನು ಸಿದ್ಧಪಡಿಸಲಾಗಿದೆ. ಪ್ರತಿಯೊಬ್ಬರನ್ನೂ ಒಟ್ಟಿಗೇ ಕರೆದೊಯ್ಯುತ್ತೇನೆ ಎಂಬ ವಿಶ್ವಾಸ ಇದೆ' ಎಂದರು.

'ಪ್ರತೀ ಕಾರ್ಯಕರ್ತರನ್ನು ಭೇಟಿ ಮಾಡಿ, ಪಕ್ಷಕ್ಕಾಗಿ ದುಡಿಯುವ ಅಗತ್ಯವನ್ನು ಮನವರಿಕೆ ಮಾಡಿಕೊಡಲಾಗುತ್ತದೆ. ಮಿಸ್ಡ್ ಕಾಲ್ ಅಭಿಯಾನದ ಅಡಿ ನಮ್ಮ ಕಾರ್ಯಕರ್ತರು ಜನರ ಬಳಿಗೆ ಹೋಗಿ, ಅವರ ನಂಬರ್‌ನಿಂದ ಮಿಸ್ಡ್ ಕಾಲ್ ಮಾಡಿಸಿಕೊಳ್ಳಲಿದ್ದಾರೆ. ಜತೆಗೆ ಪಕ್ಷದ ಸಿದ್ಧಾಂತ ಮತ್ತು ಹೋರಾಟಗಳ ಕುರಿತು ಜನರಿಗೆ ತಿಳಿಸಲಿದ್ದಾರೆ' ಎಂದರು.

ಪಕ್ಷದ ಕೇಂದ್ರ ಕಚೇರಿ ಜೆ.ಪಿ. ಭವನದಲ್ಲಿ ಭಾನುವಾರ ನಡೆಯಲಿರುವ ಕಾರ್ಯಕ್ರಮದಲ್ಲಿ 'ಜನರೊಂದಿಗೆ ಜನತಾದಳ'ಕ್ಕೆ ಪಕ್ಷದ ಮುಖ್ಯಸ್ಥ ಎಚ್‌.ಡಿ.ದೇವೇಗೌಡ ಅವರು ಚಾಲನೆ ನೀಡಲಿದ್ದಾರೆ. ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಹಾಗೂ ಪಕ್ಷದ ಹಲವು ಮುಖಂಡರು ಉಪಸ್ಥಿತರಿರಲಿದ್ದಾರೆ.

### 'ಜಾತಿವಾರು ಸಮೀಕ್ಷೆ ಹೆಸರಿನಲ್ಲಿ ಹಣಪೋಲು'

'ಸಿದ್ದರಾಮಯ್ಯ ಅವರ ಸರ್ಕಾರವು ಈ ಹಿಂದೆ ₹165 ಕೋಟಿ ವೆಚ್ಚದಲ್ಲಿ ಸಮೀಕ್ಷೆ ನಡೆಸಿತ್ತು. ಅದನ್ನು ಮೂಲೆಗೆ ಬಿಸಾಡಿ, ಮತ್ತೆ ಹೊಸದಾಗಿ ಸಮೀಕ್ಷೆ ನಡೆಸಲು ಸಿದ್ದರಾಮಯ್ಯ ಹೊರಟಿದ್ದಾರೆ. ಇದು ಜನರ ತೆರಿಗೆ ಹಣದ ಪೋಲು ಅಲ್ಲದೆ, ಮತ್ತೇನಲ್ಲ' ಎಂದು ನಿಖಿಲ್ ಕುಮಾರಸ್ವಾಮಿ ಅವರು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

'10 ವರ್ಷಗಳಷ್ಟು ಹಳೆಯ ವರದಿಯನ್ನು ಕಾಂಗ್ರೆಸ್ ಹೈಕಮಾಂಡ್ ತಿರಸ್ಕರಿಸಿದೆ. ಹೀಗಾಗಿ ಮತ್ತೆ ಹೊಸ ಗಣತಿ ಮಾಡಲು ಹೊರಟಿದ್ದಾರೆ. ಆದರೆ ಇದು ಅನವಶ್ಯ. ಏಕೆಂದರೆ ಕೇಂದ್ರ ಸರ್ಕಾರವೇ ಜನಗಣತಿ ಜತೆಗೆ ಜಾತಿಗಣತಿಯನ್ನೂ ನಡೆಸಲಿದೆ. ಹೀಗಿರುವಾಗ ರಾಜ್ಯ ಸರ್ಕಾರ ಮತ್ತೆ ಹಣ ಪೋಲು ಮಾಡುವುದು ಬೇಡ' ಎಂದರು.

| ಮುಂಬೈ ಧಾರಣೆ (ಶೇಂಗಾ) | |
|---|---|
| 14-06-2025 | |
| ಜಾವಾ 70/80(ಹೊಸ) | 9700-9800 |
| ಜಾವಾ 80/90(ಹೊಸ) | 9200-9300 |
| ದಪ್ಪ ಮಧ್ಯಪ್ರದೇಶ (ಹೊಸ) | 7700-7800 |
| ದಪ್ಪ ಗುಜರಾತ್ (ಹೊಸ) | 8000-8100 |
| ಶೇಂಗಾ ಎಣ್ಣೆ (10 ಕೆಜಿಗೆ) | |
| ಕಚ್ಚಾ (ತೆರಿಗೆ ಬಿಟ್ಟು) | 1375(1380) |
| ಒಂದು ವಾರದ ಡೆಲಿವರಿ | 1380 (1375) |
| ಪಾಮ್ ವಾರದ ಡೆಲಿವರಿ | 1153 (1148) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1255 (1250) |
| ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ) | |
| ಅಪರಂಜಿ ಚಿನ್ನ 10 ಗ್ರಾಂ | 99200 (99250) |
| ಬೆಳ್ಳಿ ಕೆ.ಜಿಗೆ | 1,06,300 (1,06,300) |

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

| ಮೊಟ್ಟೆ ಧಾರಣೆ (ಎನ್‌ಇಸಿಸಿ) | |
|---|---|
| ಬೆಂಗಳೂರು 100 ಕ್ಕೆ | ₹605 |
| 12 ಕ್ಕೆ | ₹80 |
| ಮೈಸೂರು: 100 ಕ್ಕೆ | ₹610 |

| ರಾಮನಗರ ರೇಷ್ಮೆಗೂಡು | |
|---|---|
| ಮಿಶ್ರತಳಿ(ಸಿ.ಬಿ) | ₹263;544 |
| ದ್ವಿತಳಿ (ಬಿ.ವಿ) | ₹358;653 |

| ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ) | |
|---|---|
| ಆರ್‌ಎಸ್‌ಎಸ್-4 | ₹193.50 |
| ಆರ್‌ಎಸ್‌ಎಸ್-5 | ₹188 |
| ಗುಡ್ ಲಾಟ್ | ₹177 |

| ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ) | |
|---|---|
| ಶೇಂಗಾ (ರಿಫೈನ್ಡ್) | ₹1375 (1370) |
| ಸೋಯಾ (ರಿಫೈನ್ಡ್) | ₹1175 (1170) |
| ಸೂರ್ಯಕಾಂತಿ (ರಿಫೈನ್ಡ್) | ₹1340 (1335) |
| ಪಾಮೋಲಿನ್ | ₹1155 (1150) |


# ವಿಡಿಎ ಆದಾಯ: ಸಿಬಿಡಿಟಿ ಕಣ್ಣು

## ಕಾಯ್ದೆ ಉಲ್ಲಂಘನೆ ಬಗ್ಗೆ ದತ್ತಾಂಶ ವಿಶ್ಲೇಷಣೆ ಮೂಲಕ ಪತ್ತೆ

**ಮುಖ್ಯಾಂಶಗಳು**
- ವಿವರ ಸರಿಯಾಗಿ ಕೊಡದವರಿಗೆ ಇ-ಮೇಲ್ ರವಾನೆ
- ಐಟಿಆರ್ ಮತ್ತು ಟಿಡಿಎಸ್ ವಿವರ ತಾಳೆ
- ವಿಡಿಎ ವಹಿವಾಟಿನಿಂದ ಬಂದ ಲಾಭಕ್ಕೆ ತೆರಿಗೆ

ನವದೆಹಲಿ (ಪಿಟಿಐ): ಕ್ರಿಪ್ಟೊ ಕರೆನ್ಸಿಗಳಲ್ಲಿ ಹಣ ಹೂಡಿಕೆ ಮಾಡಿ ತೆರಿಗೆ ವಂಚನೆ ಮಾಡಿರುವುದು ಹಾಗೂ ಲೆಕ್ಕಕ್ಕೆ ಸಿಗದಿರುವ ಹಣವನ್ನು ಅಕ್ರಮವಾಗಿ ವರ್ಗಾವಣೆ ಮಾಡಿರುವ ಪ್ರಕರಣಗಳ ಬಗ್ಗೆ ಕೇಂದ್ರ ನೇರ ತೆರಿಗೆಗಳ ಮಂಡಳಿಯು (ಸಿಬಿಡಿಟಿ) ತನಿಖೆ ನಡೆಸುತ್ತಿದೆ.

ವರ್ಚುವಲ್ ಡಿಜಿಟಲ್ ಆಸ್ತಿ (ವಿಡಿಎ) ವಹಿವಾಟುಗಳಲ್ಲಿ ತೊಡಗಿದ್ದು, ಆದಾಯ ತೆರಿಗೆ ಕಾಯ್ದೆಗೆ ಅನುಗುಣವಾಗಿ ನಡೆದುಕೊಳ್ಳದೆ ಇರುವ ವ್ಯಕ್ತಿಗಳು ಹಾಗೂ ಸಂಸ್ಥೆಗಳನ್ನು ಗುರುತಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.



ಆದಾಯ ತೆರಿಗೆ ಕಾಯ್ದೆ – 1961ರ ಸೆಕ್ಷನ್ 115ಬಿಬಿಎಚ್ ಪ್ರಕಾರ, ವಿಡಿಎ ವರ್ಗಾವಣೆಯಿಂದ ಸಿಗುವ ಆದಾಯಕ್ಕೆ ಶೇಕಡ 30ರಷ್ಟು ತೆರಿಗೆ (ಮತ್ತು ಅನ್ವಯವಾಗುವ ಸರ್ಚಾರ್ಜ್ ಹಾಗೂ ಸೆಸ್) ಪಾವತಿ ಮಾಡಬೇಕು. ಇಂತಹ ಆಸ್ತಿಗಳ ಖರೀದಿಗೆ ಆಗುವ ವೆಚ್ಚ ಹೊರತುಪಡಿಸಿದರೆ ಬೇರೆ ಯಾವುದೇ ವೆಚ್ಚವನ್ನು ಕಡಿತ ಮಾಡಿಕೊಂಡು ತೆರಿಗೆ ಪಾವತಿಸುವುದಕ್ಕೆ ಅವಕಾಶ ಇಲ್ಲ. ಅಲ್ಲದೆ, ವಿಡಿಎ ಹೂಡಿಕೆಯಿಂದ ಆಗಬಹುದಾದ ನಷ್ಟವನ್ನು ಬೇರೆ ಯಾವುದೇ ವರಮಾನದ ಜೊತೆ ಹೊಂದಾಣಿಕೆ ಮಾಡಿಕೊಳ್ಳಲು, ಮುಂದಿನ ವರ್ಷಗಳಿಗೆ ವರ್ಗಾಯಿಸಿಕೊಳ್ಳಲು ಕೂಡ ಅವಕಾಶ ಇಲ್ಲ.

ವಿಡಿಎಗಳಿಂದ ಪಡೆದಿರುವ ಆದಾಯವನ್ನು ವೈಯಕ್ತಿಕ ತೆರಿಗೆ ವಿವರದ ಜೊತೆ ಸಲ್ಲಿಸದೆ ಇರುವ ಮೂಲಕ ಹಲವರು ಕಾಯ್ದೆಯನ್ನು ಉಲ್ಲಂಘಿಸಿರುವುದು ದತ್ತಾಂಶ ವಿಶ್ಲೇಷಣೆಯಿಂದ ಗೊತ್ತಾಗಿದೆ ಎಂದು ಮೂಲಗಳು ಹೇಳಿವೆ.

ತೆರಿಗೆ ಪಾವತಿದಾರರು ಸಲ್ಲಿಸಿದ ಆದಾಯ ತೆರಿಗೆ ವಿವರವನ್ನು ವರ್ಚುವಲ್ ಆಸ್ತಿ ಸೇವಾದಾತರು (ಇವರನ್ನು ಕ್ರಿಪ್ಟೊ ವಿನಿಮಯ ಸೇವಾದಾತರು ಎಂದೂ ಗುರುತಿಸಲಾಗುತ್ತದೆ) ಸಲ್ಲಿಸಿರುವ ಟಿಡಿಎಸ್ ವಿವರಗಳ ಜೊತೆ ತಾಳೆ ಮಾಡಲಾಗುತ್ತಿದೆ. ವಿವರ ನೀಡುವಲ್ಲಿ ವಿಫಲರಾಗಿರುವವರನ್ನು ಗುರುತಿಸಿ, ಅವರನ್ನು ಇನ್ನಷ್ಟು ಪರಿಶೀಲನೆಗೆ ಗುರಿಪಡಿಸಬಹುದು ಎಂದು ಮೂಲಗಳು ಮಾಹಿತಿ ನೀಡಿವೆ.

ವಿವರವನ್ನು ಸರಿಯಾಗಿ ನೀಡದೆ ಇರುವ ಸಹಸ್ರಾರು ಮಂದಿಗೆ ಸಿಬಿಡಿಟಿ ಈಚೆಗೆ ಇ-ಮೇಲ್ ಕಳುಹಿಸಿದೆ. ತಾವು ಸಲ್ಲಿಸಿರುವ ಆದಾಯ ತೆರಿಗೆ ವಿವರಗಳನ್ನು ಪರಿಶೀಲಿಸುವಂತೆ ಹೇಳಿದೆ. ವಿಡಿಎ ವಹಿವಾಟಿನಿಂದ ಬಂದ ಯಾವುದೇ ಆದಾಯವನ್ನು ತಿಳಿಸಬೇಕು ಎಂದು ಸೂಚಿಸಿದೆ ಎಂದು ಗೊತ್ತಾಗಿದೆ.

## ಐಟಿಸಿ ತೆಕ್ಕೆಗೆ ‘ಶ್ರೇಷ್ಠ ನ್ಯಾಚುರಲ್ ಬಯೋಪ್ರಾಡಕ್ಟ್ಸ್’

ನವದೆಹಲಿ (ಪಿಟಿಐ): ‘24 ಮಂತ್ರ ಆರ್ಗ್ಯಾನಿಕ್’ ಬ್ರ್ಯಾಂಡ್‌ನ ಮಾಲೀಕತ್ವ ಹೊಂದಿರುವ ‘ಶ್ರೇಷ್ಠ ನ್ಯಾಚುರಲ್ ಬಯೋ ಪ್ರಾಡಕ್ಟ್ಸ್’ ಕಂಪನಿಯ ಸ್ವಾಧೀನವನ್ನು ಐಟಿಸಿ ಪೂರ್ಣಗೊಳಿಸಿದೆ. ಐಟಿಸಿ ಈ ಕಂಪನಿಯನ್ನು ₹472.5 ಕೋಟಿಗೆ ಖರೀದಿಸಿದೆ.

ಬಹಳ ವೇಗವಾಗಿ ಬೆಳವಣಿಗೆ ಕಾಣುತ್ತಿರುವ ಸಾವಯವ ಆಹಾರ ಉತ್ಪನ್ನಗಳ ಮಾರುಕಟ್ಟೆಯಲ್ಲಿ ಬಲ ಹೆಚ್ಚಿಸಿಕೊಳ್ಳಲು ಈ ಸ್ವಾಧೀನವು ಐಟಿಸಿಗೆ ನೆರವಾಗಲಿದೆ.

ಶ್ರೇಷ್ಠ ನ್ಯಾಚುರಲ್ ಬಯೋ ಪ್ರಾಡಕ್ಟ್ಸ್ ಕಂಪನಿಯು 100ಕ್ಕೂ ಹೆಚ್ಚಿನ ಸಾವಯವ ಉತ್ಪನ್ನಗಳನ್ನು ಮಾರಾಟ ಮಾಡುತ್ತಿದೆ. ದಿನಸಿ, ಸಂಬಾರ ಪದಾರ್ಥಗಳು, ಖಾದ್ಯ ತೈಲ, ಪಾನೀಯಗಳು ಈ ಉತ್ಪನ್ನಗಳ ಸಾಲಿಗೆ ಸೇರಿವೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಗಟ್ಟಿ ಸ್ಥಾನವೊಂದನ್ನು ಕಂಡುಕೊಂಡಿದೆ.

2004ರಲ್ಲಿ ಆರಂಭವಾದ ಶ್ರೇಷ್ಠ ನ್ಯಾಚುರಲ್ ಬಯೋಪ್ರಾಡಕ್ಟ್ಸ್ ಕಂಪನಿಯು 2023–24ರಲ್ಲಿ ₹306 ಕೋಟಿ ವರಮಾನ ದಾಖಲಿಸಿದೆ.

## ಸುದ್ದಿ 2 ನಿಮಿಷ

### ‘787 ಡ್ರೀಮ್‌ಲೈನರ್ ಸುರಕ್ಷತಾ ತಪಾಸಣೆ’

ನವದೆಹಲಿ (ಪಿಟಿಐ): ಬೋಯಿಂಗ್ 787 ಡ್ರೀಮ್‌ಲೈನರ್ ಮಾದರಿಯ ಏಳು ವಿಮಾನಗಳ ಸುರಕ್ಷತಾ ತಪಾಸಣೆ ನಡೆಸಲಾಗಿದೆ ಎಂದು ಏರ್ ಇಂಡಿಯಾ ಶನಿವಾರ ತಿಳಿಸಿದೆ. ಈ ಮಾದರಿಯ ಇನ್ನೂ 24 ವಿಮಾನಗಳ ಸುರಕ್ಷತಾ ತಪಾಸಣೆಯ ಕಾರ್ಯವು ಅಂದುಕೊಂಡ ಬಗೆಯಲ್ಲಿ ನಡೆಯುತ್ತಿದೆ ಎಂದು ಹೇಳಿದೆ.

ಈ ಮಾದರಿಯ ವಿಮಾನಗಳ ಸುರಕ್ಷತಾ ತಪಾಸಣೆ ನಡೆಸುವಂತೆ ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯವು (ಡಿಜಿಸಿಎ) ಸೂಚನೆ ನೀಡಿದೆ. ಏರ್ ಇಂಡಿಯಾ ವಿಮಾನಯಾನ ಕಂಪನಿಯ ಬೋಯಿಂಗ್ 787–8 ವಿಮಾನವು ದುರಂತಕ್ಕೆ ತುತ್ತಾದ ನಂತರ ಈ ಮಾದರಿಯ ವಿಮಾನಗಳ ಸುರಕ್ಷತೆಯನ್ನು ತಪಾಸಣೆಗೆ ಒಳಪಡಿಸುವಂತೆ ಡಿಜಿಸಿಎ ಸೂಚನೆ ನೀಡಿತ್ತು.

ಏರ್ ಇಂಡಿಯಾ ಕಂಪನಿಯ ಬಳಿ ಈ ಮಾದರಿಯ (ಬೋಯಿಂಗ್ 787–8/9) ಒಟ್ಟು 33 ವಿಮಾನಗಳು ಇವೆ.

‘ಈ ತಪಾಸಣೆಯ ಕಾರಣದಿಂದಾಗಿ ಕೆಲವು ಮಾರ್ಗಗಳ ವಿಮಾನ ಸಂಚಾರದಲ್ಲಿ ವಿಳಂಬ ಆಗಬಹುದು. ವಿಳಂಬದ ಬಗ್ಗೆ ಪ್ರಯಾಣಿಕರಿಗೆ ಮಾಹಿತಿ ನೀಡಲಾಗುತ್ತದೆ’ ಎಂದು ಏರ್ ಇಂಡಿಯಾ ಕಂಪನಿಯು ಎಕ್ಸ್ ಮೂಲಕ ತಿಳಿಸಿದೆ.



ಬೋಯಿಂಗ್ 787 ಮಾದರಿಯ ವಿಮಾನಗಳು ಭಾರತಕ್ಕೆ ಮರಳಿದಾಗ ಅವುಗಳನ್ನು ಸುರಕ್ಷತಾ ತಪಾಸಣೆಗೆ ಒಳಪಡಿಸಲಾಗುತ್ತದೆ. ನಂತರ ಅವುಗಳಿಗೆ ಮುಂದಿನ ಪ್ರಯಾಣಕ್ಕೆ ಅನುವು ಮಾಡಿಕೊಡಲಾಗುತ್ತದೆ ಎಂದು ಏರ್ ಇಂಡಿಯಾ ಹೇಳಿದೆ.

### ವಿಮಾನ ಸಂಖ್ಯೆ ಕೈಬಿಟ್ಟ ಏರ್ ಇಂಡಿಯಾ

ನವದೆಹಲಿ (ಪಿಟಿಐ): ಅಹಮದಾಬಾದ್‌ನಿಂದ ಲಂಡನ್‌ಗೆ ಹೊರಟಿದ್ದ ಏರ್ ಇಂಡಿಯಾ ವಿಮಾನವು ದುರಂತ ಅಂತ್ಯ ಕಂಡ ನಂತರ, ‘ವಿಮಾನ ಸಂಖ್ಯೆ 171’ನ್ನು ಇನ್ನಿಲ್ಲವಾಗಿಸಲು ಏರ್ ಇಂಡಿಯಾ ಮತ್ತು ಏರ್ ಇಂಡಿಯಾ ಎಕ್ಸ್‌ಪ್ರೆಸ್ ತೀರ್ಮಾನಿಸಿವೆ ಎಂದು ಮೂಲಗಳು ಹೇಳಿವೆ. ಅಪಘಾತಕ್ಕೆ ತುತ್ತಾದ ವಿಮಾನವು ಈ ಸಂಖ್ಯೆಯನ್ನು ಬಳಸುತ್ತಿತ್ತು. ಈ ಬಗೆಯ ದುರಂತ ನಡೆದ ನಂತರದಲ್ಲಿ ವಿಮಾನಯಾನ ಕಂಪನಿಗಳು ಅಂತಹ ವಿಮಾನ ಸಂಖ್ಯೆಯ ಬಳಕೆ ಕೈಬಿಡುವ ಪದ್ಧತಿ ಇದೆ ಎಂದು ಮೂಲಗಳು ವಿವರಿಸಿವೆ.

ಜೂನ್ 17ರಿಂದ ಅಹಮದಾಬಾದ್ – ಲಂಡನ್ ಗಟ್ವಿಕ್ ವಿಮಾನದ ಸಂಖ್ಯೆ ‘ಎಐ 159’ ಎಂದಾಗಲಿದೆ. ಈ ವಿಮಾನದ ಟಿಕೆಟ್ ಕಾಯ್ದಿರಿಸುವ ವ್ಯವಸ್ಥೆಯಲ್ಲಿಯೂ ಅಗತ್ಯ ಬದಲಾವಣೆಗಳನ್ನು ಮಾಡಲಾಗಿದೆ.

## ಚಿಟಿಕೆ ಸುದ್ದಿ

### ಉಗ್ರರ ಅಡಗುತಾಣ ಸ್ಫೋಟಿಸಿದ ಭದ್ರತಾ ಪಡೆಗಳು



ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ರಜೌರಿ ಜಿಲ್ಲೆಯ ಪ್ರದೇಶವೊಂದರಲ್ಲಿದ್ದ ಭಯೋತ್ಪಾದಕರ ಅಡಗುತಾಣವೊಂದನ್ನು ಭದ್ರತಾ ಪಡೆಗಳು ಶನಿವಾರ ಸ್ಫೋಟಿಸಿವೆ. ರಾಷ್ಟ್ರೀಯ ರೈಫಲ್ಸ್ ಮತ್ತು ವಿಶೇಷ ಕಾರ್ಯಪಡೆಗಳು ಜಂಟಿ ಕಾರ್ಯಾಚರಣೆ ನಡೆಸಿದ್ದವು.

‘ಅಡಗುತಾಣದಿಂದ 400 ಗ್ರಾಂನಷ್ಟು ಸ್ಫೋಟಕ ವಸ್ತುಗಳು, ಮಷಿನ್ ಗನ್‌ನಲ್ಲಿ ಬಳಸುವ 48 ಸುತ್ತಿನ ಗುಂಡು, ಪಿಸ್ತೂಲ್‌ನಲ್ಲಿ ಬಳಸುವ ಐದು ಸುತ್ತು ಗುಂಡು, ಒಂದು ಎಕೆ–47, ಒಂದು ಅಶ್ರುವಾಯುವನ್ನು ವಶಪಡಿಸಿಕೊಳ್ಳಲಾಗಿದೆ. ಕಾರ್ಯಾಚರಣೆ ವೇಳೆ ಯಾರನ್ನೂ ಬಂಧಿಸಲಾಗಿಲ್ಲ’ ಎಂದು ಅಧಿಕಾರಿಗಳು ತಿಳಿಸಿದರು.

## ನಿಷೇಧಿತ ವಲಯ ಪ್ರವೇಶ: ತನಿಖೆ

ವಾರಾಣಸಿ (ಪಿಟಿಐ): ಬಿಹಾರದ ಮಾಜಿ ಮುಖ್ಯಮಂತ್ರಿ ಲಾಲು ಪ್ರಸಾದ್ ಅವರ ಪುತ್ರ , ಮಾಜಿ ಸಚಿವ ತೇಜ್ ಪ್ರತಾಪ್ ಯಾದವ್ ಅವರು ಕಾಶಿಯ ವಿಶ್ವನಾಥ ದೇಗುಲದ ನಿಷೇಧಿತ ವಲಯ ಪ್ರವೇಶಿಸಿರುವ ವಿಡಿಯೋ ಜಾಲತಾಣಗಳಲ್ಲಿ ವೈರಲ್ ಆಗಿದೆ. ಈ ಘಟನೆಗೆ ಸಂಬಂಧಿಸಿದಂತೆ ದೇವಾಲಯದ ಆಡಳಿತವು ತನಿಖೆಗೆ ಆದೇಶಿಸಿದೆ.

ಕಾಶಿ ವಿಶ್ವನಾಥ ದೇಗುಲದ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ವಿಶ್ವಭೂಷಣ್ ಮಿಶ್ರಾ ಈ ಬಗ್ಗೆ ಮಾಹಿತಿ ನೀಡಿದ್ದು, ‘ವಿಡಿಯೊ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾದ ಬಳಿಕ ಈ ವಿಚಾರ ದೇವಾಲಯದ ಆಡಳಿತದ ಗಮನಕ್ಕೆ ಬಂದಿದೆ. ದೇಗುಲದ ಭದ್ರತೆಯ ಹೊಣೆ ಹೊತ್ತಿರುವ ಸಿಆರ್‌ಪಿಎಫ್ ಹಾಗೂ ಸ್ಥಳೀಯ ಪೊಲೀಸರಿಗೂ ಈ ಬಗ್ಗೆ ಮಾಹಿತಿ ನೀಡಿ, ತನಿಖೆಗೆ ಆದೇಶಿಸಲಾಗಿದೆ. ಜತೆಗೆ ಸೂಕ್ತ ಕ್ರಮ ಕೈಗೊಳ್ಳುವಂತೆಯೂ ಸೂಚಿಸಿದ್ದೇವೆ’ ಎಂದಿದ್ದಾರೆ.

ಜತೆಗೆ ನಿಷೇಧಿತ ವಲಯದಲ್ಲಿ ಮೊಬೈಲ್ ಬಳಕೆಯನ್ನೂ ನಿರ್ಬಂಧಿಸಲಾಗಿದೆ. ಆದಾಗ್ಯೂ ವಿಡಿಯೊ ಚಿತ್ರೀಕರಿಸಲಾಗಿದ್ದು, ಭದ್ರತಾ ಏಜೆನ್ಸಿಗಳಿಗೆ ಹೆಚ್ಚಿನ ನಿಗಾವಹಿಸಲು ಸೂಚಿಸಿರುವುದಾಗಿಯೂ ಮಿಶ್ರಾ ಹೇಳಿದ್ದಾರೆ.

## ಕದನ ವಿರಾಮ: ಕೇಂದ್ರದ ವಿರುದ್ಧ ‘ಕೈ’ ಕಿಡಿ

### ‘ನ್ಯಾಯದ ಪರ ನಿಲುವನ್ನು ಭಾರತ ಕೈಬಿಟ್ಟಿದೆಯೇ?’

ನವದೆಹಲಿ (ಪಿಟಿಐ): ಗಾಜಾದಲ್ಲಿ ಕದನ ವಿರಾಮ ಘೋಷಣೆಗೆ ಸಂಬಂಧಿಸಿದ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ನಿರ್ಣಯದ ಕುರಿತ ಮತದಾನದಿಂದ ದೂರ ಉಳಿದ ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ಶನಿವಾರ ವಾಗ್ದಾಳಿ ನಡೆಸಿದೆ. ಭಾರತದ ವಿದೇಶಾಂಗ ನೀತಿಯು ಅಧಃಪತನ ಹೊಂದುತ್ತಿದೆ ಎಂದು ಅದು ಆರೋಪಿಸಿದೆ.



ಮಲ್ಲಿಕಾರ್ಜುನ ಖರ್ಗೆ

ಯುದ್ಧ, ಜನಾಂಗೀಯ ಹತ್ಯೆ ವಿರುದ್ಧದ ಮತ್ತು ನ್ಯಾಯದ ಪರವಾದ ತನ್ನ ತಾತ್ವಿಕ ನಿಲುವುಗಳನ್ನ ಭಾರತವು ಕೈಬಿಟ್ಟಿದೆಯೇ? ಈ ಬಗ್ಗೆ ಸರ್ಕಾರ ಉತ್ತರ ನೀಡಬೇಕು ಎಂದು ಪಕ್ಷವು ಆಗ್ರಹಿಸಿದೆ.

‘ಭಾರತದ ವಿದೇಶಾಂಗ ನೀತಿಯು ದಿನದಿಂದ ದಿನಕ್ಕೆ ಅಧಃಪತನದ ಹಾದಿಯಲ್ಲಿದೆ. ಆದ್ದರಿಂದ, ಪ್ರಧಾನಿ ನರೇಂದ್ರ ಮೋದಿ ಅವರು ವಿದೇಶಾಂಗ ಸಚಿವರನ್ನು ಕರೆದು, ಅವರನ್ನು ಹೊಣೆಗಾರರನ್ನಾಗಿಸಬೇಕು’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಒತ್ತಾಯಿಸಿದ್ದಾರೆ.

‘ಗಾಜಾದಲ್ಲಿ ಕದನವಿರಾಮ ಘೋಷಿಸುವ ವಿಶ್ವಸಂಸ್ಥೆಯ ನಿರ್ಣಯದ ಪರವಾಗಿ 149 ರಾಷ್ಟ್ರಗಳು ಮತ್ತು ನಿರ್ಣಯದ ವಿರುದ್ಧ 12 ದೇಶಗಳು ಸಹಿ ಮಾಡಿವೆ. ಮತದಾನದಿಂದ ಹೊರಗುಳಿದ 19 ರಾಷ್ಟ್ರಗಳ ಪೈಕಿ ಭಾರತವೂ ಒಂದು’ ಎಂದು ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

### ಈಡಿಗ, ಬಿಲ್ಲವ ಸಮುದಾಯದ ಮುಖಂಡರಿಂದ ಸಿ.ಎಂ ಭೇಟಿ

# ಮದ್ಯದಂಗಡಿ: ರಿಯಾಯಿತಿಗೆ ಮನವಿ

ಪ್ರಜಾವಾಣಿ ವಾರ್ತೆ


**ಮುಖ್ಯಾಂಶಗಳು**
- ಆಂಧ್ರಪ್ರದೇಶದ ಮಾದರಿಯಲ್ಲಿ ಮೀಸಲು, ವಿನಾಯಿತಿ ನೀಡಲು ಮನವಿ
- ತೆಲಂಗಾಣದಲ್ಲಿ ಇರುವಂತೆ ಪ್ರೋತ್ಸಾಹದ ಲಾಭಾಂಶ ಕೊಡಬೇಕು

ಬೆಂಗಳೂರು: ‘ಮದ್ಯದಂಗಡಿ ಪರವಾನಗಿ ಶುಲ್ಕದಲ್ಲಿ ಈಡಿಗ, ಬಿಲ್ಲವ ಸಮುದಾಯದವರಿಗೆ ಶೇ 50ರಷ್ಟು ರಿಯಾಯಿತಿ ನೀಡಬೇಕು’ ಎಂದು ಆಗ್ರಹಿಸಿ ಈ ಸಮುದಾಯಗಳ ಮುಖಂಡರ ನಿಯೋಗವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದೆ.

ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ನೇತೃತ್ವದಲ್ಲಿ ನಿಯೋಗವು ದೆಹಲಿಯಲ್ಲಿ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿದೆ.

‘ಆಂಧ್ರ ಪ್ರದೇಶ ಸರ್ಕಾರವು ಅಲ್ಲಿನ ಒಟ್ಟು ಮದ್ಯದಂಗಡಿಗಳ ಪರವಾನಗಿಗಳಲ್ಲಿ ಶೇಕಡ 10ರಷ್ಟನ್ನು ಈಡಿಗ ಸಮುದಾಯಕ್ಕೆ ಮೀಸಲಿರಿಸಿದೆ. ಅಲ್ಲದೆ, ಮದ್ಯದಂಗಡಿಗಳ ಮಾಲೀಕರು ಈಡಿಗ ಸಮುದಾಯದವರಾಗಿದ್ದರೆ ಪರವಾನಗಿ ಶುಲ್ಕದಲ್ಲಿ ಶೇ 50ರಷ್ಟು ರಿಯಾಯಿತಿಯನ್ನೂ ನೀಡಿದೆ. ಈ ಎರಡೂ ವಿಷಯಗಳ ಕುರಿತು ಅಧ್ಯಯನ ನಡೆಸಿ, ರಾಜ್ಯದಲ್ಲೂ ಅದೇ ರೀತಿಯ ಸೌಲಭ್ಯವನ್ನು ನೀಡಬೇಕು’ ಎಂದು ನಿಯೋಗ ಒತ್ತಾಯಿಸಿದೆ.

‘ಮದ್ಯ ಮಾರಾಟದ ಲಾಭಾಂಶದಲ್ಲಿ ಶೇ 20ರಷ್ಟನ್ನು ಮದ್ಯ ಮಾರಾಟಗಾರರಿಗೆ ನೀಡಬೇಕು, ಮದ್ಯ ಮಾರಾಟದಿಂದ ಆದಾಯವನ್ನು ಹೆಚ್ಚಿಸಿಕೊಳ್ಳಲು ರಾಜ್ಯ ಫೆಡರೇಷನ್ ಆಫ್ ವೈನ್ ಮರ್ಚಂಟ್ಸ್ ಅಸೋಸಿಯೇಷನ್ ಮೂಲಕ ನೀಡಿರುವ ಸಲಹೆಯನ್ನು ಪರಿಗಣಿಸಬೇಕು, ತೆಲಂಗಾಣದಲ್ಲಿ ಮದ್ಯ ಮಾರಾಟದಲ್ಲಿ ತೊಡಗಿರುವ ಈಡಿಗರೇ ಆಗಿರುವ ಗೌಡ್ ಸಮುದಾಯದ ಮದ್ಯ ವ್ಯಾಪಾರಿಗಳಿಗೆ ವ್ಯಾವಹಾರಿಕ ಲಾಭಾಂಶ ನೀಡುವ ಮೂಲಕ ಕುಲ ಕಸುಬುದಾರರಿಗೆ ಪ್ರೋತ್ಸಾಹ ನೀಡಲಾಗುತ್ತಿದ್ದು, ಆ ಯೋಜನೆಯನ್ನು ಕರ್ನಾಟಕದಲ್ಲಿಯೂ ಜಾರಿಗೆ ತರಬೇಕು’ ಎಂದೂ ನಿಯೋಗ ಒತ್ತಾಯಿಸಿದೆ.



ಸಮುದಾಯದ ಮುಖಂಡರಾದ ಕೆ. ಗೋಪಿ, ಗುರುರಾಜ್ (ಮೈಸೂರು), ಮೋಹನ್ ರಾಜ್, ಶಿವಕುಮಾರ್ (ಚಾಮರಾಜನಗರ), ಓಂಪ್ರಸಾದ್ (ಮಂಗಳೂರು), ಅಶೋಕ್ ಗುತ್ತೇದಾರ್ (ಕಲಬುರಗಿ) ಇದ್ದರು.

## ದೋಣಿ ವಿಹಾರ

ಪಿಟಿಐ ಚಿತ್ರ



ಶ್ರೀನಗರದ ದಾಲ್ ಸರೋವರದಲ್ಲಿ ಪ್ರವಾಸಿಗರು ದೋಣಿ ವಿಹಾರ ನಡೆಸಿದರು. ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯ ನಂತರ ಜಮ್ಮು ಮತ್ತು ಕಾಶ್ಮೀರಕ್ಕೆ ಬರುವ ಪ್ರವಾಸಿಗರ ಸಂಖ್ಯೆ ಕಡಿಮೆ ಆಗಿದೆ

# ಶಿಥಿಲಾವಸ್ಥೆಯಲ್ಲಿದ್ದ ಶಾಲೆಗೆ ಹೊಸ ರೂಪ

ಒಂದನೇ ಪುಟದಿಂದ...

ನಂತರ ವಾಟ್ಸ್‌ಆ್ಯಪ್ ಗ್ರೂಪ್ ಮೂಲಕ ಪರಸ್ಪರ ಸಂಪರ್ಕಕ್ಕೆ ಬಂದ ಹಳೆಯ ವಿದ್ಯಾರ್ಥಿಗಳು ಶಾಲೆಗೆ ಭೇಟಿ ನೀಡಿ ಶಿಕ್ಷಕರು, ಊರಿನ ಹಿರಿಯರನ್ನು ಸೇರಿಸಿ ಸಭೆ ನಡೆಸಿದ್ದಾರೆ. ಆಗ ನಿವೃತ್ತ ಶಿಕ್ಷಕ ಪ್ರಕಾಶಪ್ಪ ಅಧ್ಯಕ್ಷತೆಯಲ್ಲಿ ಹಳೆಯ ವಿದ್ಯಾರ್ಥಿಗಳ ಸಂಘ ಸ್ಥಾಪಿಸಿ, ಅಭಿವೃದ್ಧಿಗೆ ಕೈಜೋಡಿಸಿದ್ದಾರೆ.

‘ಸಂಘದ ಮೇಲ್ವಿಚಾರಣೆಯಲ್ಲೇ ಅಭಿವೃದ್ಧಿ ಕಾರ್ಯ ಕೈಗೆತ್ತಿಕೊಳ್ಳಲಾಯಿತು. ಗೋಡೆಗಳ ಸಿಮೆಂಟ್ ಪ್ಲಾಸ್ಟರಿಂಗ್, ಸುಣ್ಣ-ಬಣ್ಣದೊಂದಿಗೆ ಶಾಲೆಯ ಆರು ಕೊಠಡಿಗಳು ನವೀಕರಣಗೊಂಡಿವೆ. ಹೊಸದಾಗಿ ಬಾಗಿಲು, ಕಿಟಕಿ ಹಾಗೂ ಹೆಂಚುಗಳನ್ನು ಜೋಡಿಸಲಾಯಿತು. ನೆಲಕ್ಕೆ ಗ್ರಾನೈಟ್ ಹಾಕಿಸಿ, ಕಾಂಪೌಂಡ್ ದುರಸ್ತಿ ಮಾಡಿ, ಗೇಟ್, ನಾಲ್ಕು ಓವರ್ ಹೆಡ್ ಟ್ಯಾಂಕ್, ಸಭಾಂಗಣ, ಕೈತೋಟ ನಿರ್ಮಿಸಲಾಯಿತು’ ಎಂದು ಶಾಲೆಯ ಮುಖ್ಯಶಿಕ್ಷಕಿ ಗಾಯತ್ರಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ಮನವಿಗೆ ಸ್ಪಂದಿಸಿ ಶಾಲೆ ಅಭಿವೃದ್ಧಿಗೆ ಕೆಲವರು ಹಣ, ಇನ್ನೂ ಕೆಲವರು ವಸ್ತುಗಳನ್ನು ದೇಣಿಗೆ ಕೊಟ್ಟರು. ₹ 100ರಿಂದ ₹ 50,000ದವರೆಗೆ ನೆರವು ಕೊಟ್ಟರು’ ಎಂದು ಸ್ಮರಿಸಿದರು.



ಹರಮಘಟ್ಟದ ಸರ್ಕಾರಿ ಶಾಲೆಯಲ್ಲಿ ಹಳೆಯ ವಿದ್ಯಾರ್ಥಿಗಳು ಕಟ್ಟಿಸಿಕೊಟ್ಟ ಸಭಾಂಗಣ

ಶಾಲೆಯಲ್ಲಿ 1ರಿಂದ 7ನೇ ತರಗತಿವರೆಗೆ ಸದ್ಯ 160 ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಈ ಶೈಕ್ಷಣಿಕ ವರ್ಷದಿಂದ ಎಲ್‌ಕೆಜಿ, ಯುಕೆಜಿ ಕೂಡ ಆರಂಭಿಸಲಾಗಿದೆ.

**ಶಾಲೆಯ ಶಿಥಿಲ ಕಟ್ಟಡ ನವೀಕರಿಸಲು ಹಳೆಯ ವಿದ್ಯಾರ್ಥಿಗಳು ಕೈಜೋಡಿಸಿದ್ದಾರೆ. ಊರಿನವರು ಮಾತ್ರವಲ್ಲ ಬೆಂಗಳೂರಿನಲ್ಲಿ ನೆಲೆಸಿರುವವರೂ ಕೈಜೋಡಿಸಿದ್ದಾರೆ.**
**ಕೆ.ಎಸ್.ಗಾಯತ್ರಿ**
ಹರಮಘಟ್ಟ ಸರ್ಕಾರಿ ಶಾಲೆ ಮುಖ್ಯ ಶಿಕ್ಷಕಿ

**ಖಾಸಗಿ ಶಾಲೆಗೂ ಕಡಿಮೆ ಇಲ್ಲದಂತೆ ನಮ್ಮೂರ ಶಾಲೆ ಅಭಿವೃದ್ಧಿಪಡಿಸಿದ್ದೇವೆ. ಮಕ್ಕಳೇ ದೇವರು. ದೇವಸ್ಥಾನಕ್ಕೆ ಕೊಡುವ ಹಣವನ್ನು ಶಾಲೆಗೆ ಕೊಟ್ಟರೆ ದೇವರಿಗೆ ಕೊಟ್ಟಂತೆ ಆಗಲಿದೆ**
**ಎನ್.ಜಿ.ಪ್ರಕಾಶಪ್ಪ**
ಶಾಲೆಯ ಹಳೆ ವಿದ್ಯಾರ್ಥಿ

**ಹರಮಘಟ್ಟ ಶಾಲೆಯ ಹಳೆಯ ವಿದ್ಯಾರ್ಥಿಗಳ ಕಾರ್ಯದಿಂದ ಪ್ರೇರಿತರಾಗಿ ತಾಲ್ಲೂಕಿನ ಹಲವೆಡೆ ಹಳೆಯ ವಿದ್ಯಾರ್ಥಿಗಳು ಓದಿದ ಶಾಲೆಗಳ ಅಭಿವೃದ್ಧಿಗೆ ನೆರವಾಗುತ್ತಿದ್ದಾರೆ**
**ರಮೇಶ್ ನಾಯ್ಕ**
ಶಿವಮೊಗ್ಗ ನಗರ ಬಿಇಒ

### ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ

# ‘ವಿದೇಶಿಯರ ವಿವರ ಕಲೆ ಹಾಕಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿದೇಶಿಯರನ್ನು ಹೊಂದಿರುವ ಸರ್ಕಾರಿ ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳು, ಅಂತಹವರ ಬಗ್ಗೆ, ವಿದೇಶಿಯರ ನೋಂದಣಿ ಕಚೇರಿಗೆ (ಎಫ್‌ಆರ್‌ಆರ್‌ಒ) ಸೂಕ್ತ ಮಾಹಿತಿ ಒದಗಿಸುವ ನಿಟ್ಟಿನಲ್ಲಿ ಸುತ್ತೋಲೆಯೊಂದನ್ನು ಹೊರಡಿಸಬೇಕು’ ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಆದೇಶಿಸಿದೆ.

ವೀಸಾ ವಿಸ್ತರಣೆ ಕೋರಿ ಸಿರಿಯಾದ ಪ್ರಜೆ ಮೌಝುಲ್ ಖ್ವಾಮ್ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಈ ಸಂಬಂಧ ಎರಡು ವಾರಗಳಲ್ಲಿ ಸುತ್ತೋಲೆ ಹೊರಡಿಸಿ, ಅದರ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು’ ಎಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ತಾಕೀತು ಮಾಡಿದೆ.

ವಿಚಾರಣೆ ವೇಳೆ ಕೇಂದ್ರ ಸರ್ಕಾರದ ಪರ ವಾದ ಮಂಡಿಸಿದ ಡೆಪ್ಯುಟಿ ಸಾಲಿಸಿಟರ್ ಜನರಲ್ ಎಚ್. ಶಾಂತಿಭೂಷಣ್ ಅವರು, ‘ರಾಜ್ಯದಲ್ಲಿ ವೀಸಾ ಅವಧಿ ಮುಗಿದರೂ ಅನಧಿಕೃತವಾಗಿ ನೆಲೆಯೂರಿರುವ ವಿದೇಶಿಯರು ಅನಗತ್ಯ ಮತ್ತು ಅನಪೇಕ್ಷಿತ ನೆಪಗಳನ್ನೊಡ್ಡಿ ವೀಸಾ ಅವಧಿ ವಿಸ್ತರಣೆ ಕೋರುತ್ತಿರುವ ಪ್ರಕರಣಗಳು ಹೆಚ್ಚುತ್ತಿವೆ. ಅರ್ಜಿದಾರರ ವೀಸಾ ಅವಧಿ 2015ರಲ್ಲೇ ಮುಗಿದಿರುವುದು ಇದಕ್ಕೆ ಜ್ವಲಂತ ನಿದರ್ಶನ. ಇಂತಹ ಪ್ರಕರಣಗಳಿಂದ ಹಲವು ಸಮಸ್ಯೆಗಳು ಸೃಷ್ಟಿಯಾಗುತ್ತಿವೆ’ ಎಂದು ಆತಂಕ ವ್ಯಕ್ತಪಡಿಸಿದರು.

ಇದನ್ನು ಗಂಭೀರವಾಗಿ ಪರಿಗಣಿಸಿದ ನ್ಯಾಯಪೀಠ, ‘ಸರ್ಕಾರ ಮತ್ತು ಖಾಸಗಿ ಸೇರಿದಂತೆ ಎಲ್ಲಾ ವಿಶ್ವವಿದ್ಯಾಲಯಗಳು, ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳು, ಡಯಾಗ್ನಾಸ್ಟಿಕ್ ಕೇಂದ್ರಗಳು, ಸೌಖ್ಯ ಕೇಂದ್ರಗಳೂ ಸೇರಿದಂತೆ ಎಲ್ಲಾ ವೈದ್ಯಕೀಯ ಸಂಸ್ಥೆಗಳು, ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳು, ವಾಣಿಜ್ಯ ಕಂಪನಿಗಳು, ಎಲ್ಲಾ ಸಂಸ್ಥೆಗಳು ತಮ್ಮಲ್ಲಿರುವ ವಿದೇಶಿಯರು ಯಾವ ಉದ್ದೇಶಕ್ಕಾಗಿ ಇದ್ದಾರೆ? ಅವರ ಕೆಲಸವೇನು? ಅಧ್ಯಯನ, ಸಂಶೋಧನೆ ಅಥವಾ ಚಿಕಿತ್ಸೆ ಪಡೆಯುತ್ತಿದ್ದರೆ ಅಂತಹ ಸಂಸ್ಥೆಗಳು ವಿದೇಶಿಯರ ನೋಂದಣಿ ಕಚೇರಿಗೆ (ಎಫ್‌ಆರ್‌ಆರ್‌ಒ) ಸೂಕ್ತ ಮಾಹಿತಿ ಒದಗಿಸಬೇಕು. ಇದಕ್ಕಾಗಿ ಸ್ಥಳೀಯ ಪೊಲೀಸರು ನಿರ್ದಿಷ್ಟ ನಮೂನೆಯೊಂದನ್ನು ಸಿದ್ಧಪಡಿಸಬೇಕು’ ಎಂದು ಆದೇಶಿಸಿದೆ.

‘ಎಲ್ಲಾ ಸಂಸ್ಥೆಗಳು ಕಾಲಕಾಲಕ್ಕೆ ವಿದೇಶಿಯರ ವಿವರಗಳನ್ನು ಒದಗಿಸಬೇಕು. ಒಂದು ವೇಳೆ ಒದಗಿಸದೇ ಇದ್ದರೆ ಅಂತಹ ಸಂಸ್ಥೆಗಳ ವಿರುದ್ಧ ಕ್ರಮ ಜರುಗಿಸತಕ್ಕದ್ದು’ ಎಂದು ನ್ಯಾಯಪೀಠ ತಾಕೀತು ಮಾಡಿದೆ.

**ನ್ಯಾಯಪೀಠದ ನಿರ್ದೇಶನಗಳು**
- ಕಳೆದ ಐದು ವರ್ಷಗಳಲ್ಲಿ ವಿದೇಶಗಳಿಂದ ಭಾರತಕ್ಕೆ ಆಗಮಿಸಿರುವ ವಿದೇಶಿಯರ ಸಂಖ್ಯೆ ಎಷ್ಟು?
- ಪ್ರವಾಸಿ, ವೈದ್ಯಕೀಯ, ಶಿಕ್ಷಣ, ಉದ್ಯೋಗ, ರಾಜತಾಂತ್ರಿಕ ಇತರೆ ಆಧಾರಗಳ ಅಡಿಯಲ್ಲಿ ವೀಸಾ ಪಡೆದು ಬಂದಿರುವವರ ಸಂಖ್ಯೆ ಎಷ್ಟು?
- ವೀಸಾ ಅವಧಿ ಮುಗಿದ ನಂತರವೂ ತಮ್ಮ ದೇಶಗಳಿಗೆ ವಾಪಸಾಗದ ವಿದೇಶಿಯರ ಸಂಖ್ಯೆ ಎಷ್ಟು ಮತ್ತು ಅವರ ಪೂರ್ಣ ವಿವರಗಳನ್ನು ಒದಗಿಸಿ.
- ಎಫ್‌ಆರ್‌ಆರ್‌ಒದಲ್ಲಿ ನೋಂದಣಿ ಮಾಡಿಸಿರುವ ವಿದೇಶಿಯರ ಸಂಖ್ಯೆ ಎಷ್ಟು?
- ಕರ್ನಾಟಕದಲ್ಲಿ ಅವಧಿ ಮುಗಿದ ನಂತರವೂ ವಾಪಸಾಗದ ವಿದೇಶಿಯರು ಎಷ್ಟಿದ್ದಾರೆ?
- ರಾಜ್ಯದಲ್ಲಿ ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾದ ವಿದೇಶಿಯರ ಸಂಖ್ಯೆ ಎಷ್ಟು?






## ಜೂನ್ 19ಕ್ಕೆ ಶುಭಾಂಶು ಶುಕ್ಲಾ ಅಂತರಿಕ್ಷಯಾನ ನಿಗದಿ

ನವದೆಹಲಿ (ಪಿಟಿಐ): ಭಾರತೀಯ ಗಗನಯಾತ್ರಿ ಶುಭಾಂಶು ಶುಕ್ಲಾ ಮತ್ತು ಇತರ ಮೂವರನ್ನು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ (ಐಎಸ್‌ಎಸ್) ಕಳುಹಿಸುವ ಮಹತ್ವಾಕಾಂಕ್ಷೆಯ ‘ಆ್ಯಕ್ಸಿಯಂ–4’ ಮಿಷನ್ ಉಡಾವಣೆಗೆ ಜೂನ್ 19ರಂದು ದಿನಾಂಕ ನಿಗದಿಪಡಿಸಲಾಗಿದೆ ಎಂದು ಇಸ್ರೊ ಶನಿವಾರ ಘೋಷಿಸಿದೆ.

ಜೂನ್ 11ರಂದು ಫ್ಲಾರಿಡಾದಲ್ಲಿರುವ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಸ್ಪೇಸ್‌ಎಕ್ಸ್‌ನ ಫಾಲ್ಕನ್–9 ರಾಕೆಟ್ ಅನ್ನು ಉಡಾವಣೆ ಮಾಡಬೇಕಿತ್ತು. ಆದರೆ ರಾಕೆಟ್‌ನಲ್ಲಿ ಇಂಧನ ಸೋರುತ್ತಿದ್ದ ಕಾರಣ ಕೊನೆಯ ಕ್ಷಣದಲ್ಲಿ ಉಡಾವಣೆಯನ್ನು ರದ್ದು ಮಾಡಲಾಯಿತು.



ಶುಭಾಂಶು ಶುಕ್ಲಾ

ಮೇ 29, ಜೂನ್ 8 ಮತ್ತು ಜೂನ್ 10ರಂದು ಸಹ ರಾಕೆಟ್ ಉಡಾವಣೆಗೆ ದಿನಾಂಕ ನಿಗದಿ ಮಾಡಿ ಆನಂತರ ಮುಂದೂಡಲಾಗಿತ್ತು.

‘ರಾಕೆಟ್‌ನಲ್ಲಿನ ಆಮ್ಲಜನಕ ಸೋರಿಕೆ ದೋಷವನ್ನು ಸಂಪೂರ್ಣವಾಗಿ ಸರಿಪಡಿಸಲಾಗಿದೆ ಎಂಬುದು ಇಸ್ರೊ, ಆ್ಯಕ್ಸಿಯಂ, ಸ್ಪೇಸ್ ಎಕ್ಸ್‌ನೊಂದಿಗೆ ನಡೆದ ಸಭೆಯಲ್ಲಿ ಖಚಿತವಾಗಿದೆ’ ಎಂದು ಇಸ್ರೊ ಹೇಳಿಕೆಯಲ್ಲಿ ತಿಳಿಸಿದೆ.

# ‘ಅಂಬೇಡ್ಕರ್‌ಗೆ ಲಾಲು ಅವಮಾನ’

### ಬಿಹಾರದ ಉಪಮುಖ್ಯಮಂತ್ರಿ ಸಮರ್ಥ್ ಚೌಧರಿ ಆರೋಪ

ಪಾಟ್ನಾ (ಪಿಟಿಐ): ‘ರಾಷ್ಟ್ರೀಯ ಜನತಾದಳದ ಅಧ್ಯಕ್ಷ ಲಾಲು ಪ್ರಸಾದ್ ಅವರು ತಮ್ಮ ಪಾದಗಳ ಕೆಳಗಡೆ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಭಾವಚಿತ್ರ ಇಡುವ ಮೂಲಕ ಅವಮಾನವೆಸಗಿದ್ದಾರೆ’ ಎಂದು ಬಿಹಾರದ ಉಪ ಮುಖ್ಯಮಂತ್ರಿ ಸಮರ್ಥ್ ಚೌಧರಿ ಆರೋಪಿಸಿದ್ದಾರೆ.

‘ಲಾಲು ಪ್ರಸಾದ್ ಈ ವಾರ ತಮ್ಮ 78ನೇ ಹುಟ್ಟುಹಬ್ಬದ ಕಾರ್ಯಕ್ರಮದಲ್ಲಿ ಈ ರೀತಿ ನಡೆದುಕೊಂಡಿದ್ದಾರೆ’ ಎಂದು ವಿಡಿಯೊ ದೃಶ್ಯಾವಳಿ ಸಮೇತ ಶನಿವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದ್ದಾರೆ.

ಲಾಲು ಅವರು ಸೋಫಾದ ಮೇಲೆ ಕೂತಿದ್ದು, ಅವರ ಬೆಂಬಲಿಗರು ಅಂಬೇಡ್ಕರ್ ಭಾವಚಿತ್ರ ಹಿಡಿದುಕೊಂಡು ಬಂದು ಅವರ ಪಾದದ ಕೆಳಗಡೆ ಇಡುತ್ತಾರೆ. ನಂತರ ಲಾಲು ಅವರ ಆಶೀರ್ವಾದವನ್ನು ಪಡೆದುಕೊಳ್ಳುತ್ತಿರುವುದು ವಿಡಿಯೊದಲ್ಲಿ ದಾಖಲಾಗಿದೆ.



ಲಾಲು ಪ್ರಸಾದ್

‘ಲಾಲು ಪ್ರಸಾದ್ ಅವರು ದಲಿತರನ್ನು ಹೇಗೆ ನಡೆಸಿಕೊಳ್ಳುತ್ತಾರೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ. ಅವರು ಬೇಕಾದರೆ, ದೇವರ ಚಿತ್ರವನ್ನು ಕೂಡ ಕಾಲಿನ ಕೆಳಗಡೆ ಇಟ್ಟುಕೊಳ್ಳಬಹುದು’ ಎಂದು ಚೌಧರಿ ಅವರು ಆರೋಪಿಸಿದ್ದಾರೆ.

ಸಮರ್ಥ್ ಚೌಧರಿ ಬಿಜೆಪಿ ರಾಜ್ಯ ಘಟಕದ ಮಾಜಿ ಅಧ್ಯಕ್ಷರಾಗಿದ್ದು, ತಮ್ಮ ರಾಜಕೀಯ ಜೀವನವನ್ನು ಆರ್‌ಜೆಡಿಯಿಂದಲೇ ಆರಂಭಿಸಿದ್ದರು.

ಬಿಜೆಪಿಯ ದಲಿತ ನಾಯಕ ಜಾನಕ್ ರಾಮ್ ಹಾಗೂ ರಾಜ್ಯ ಘಟಕದ ಅಧ್ಯಕ್ಷ ಅನಾಮಿಕ ಪಾಸ್ವಾನ್ ಕೂಡ ಲಾಲು ಅವರ ನಡೆಯನ್ನು ಕಟು ಶಬ್ದಗಳಲ್ಲಿ ಖಂಡಿಸಿದ್ದಾರೆ.

‘ಲಾಲು ವರ್ತನೆಯಿಂದ ರಾಜ್ಯದ 14 ಕೋಟಿ ಜನತೆ ನಾಚಿಕೆಪಡುವಂತಾಗಿದ್ದು, ಲಾಲು ಅವರ ಇಡೀ ಕುಟುಂಬವು ಕ್ಷಮೆ ಯಾಚಿಸಬೇಕು’ ಎಂದು ಒತ್ತಾಯಿಸಿದ್ದಾರೆ.

‘ಈ ಘಟನೆಯು ಉದ್ದೇಶಪೂರ್ವಕವಾಗಿ ನಡೆದಿಲ್ಲ. ಕೆಲವೇ ತಿಂಗಳಲ್ಲಿ ರಾಜ್ಯ ವಿಧಾನಸಭೆಗೆ ಚುನಾವಣೆ ನಡೆಯಲಿದ್ದು, ಈ ಘಟನೆಯು ಪಕ್ಷದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ’ ಎಂದು ಆರ್‌ಜೆಡಿ ನಾಯಕರು ತಿಳಿಸಿದ್ದಾರೆ.

# ₹25 ಲಕ್ಷ ಮಧ್ಯಂತರ ಪರಿಹಾರ

## ಪರಿಹಾರ ಕೊಡಿ, ಉತ್ತರದಾಯಿತ್ವ ತೋರಿ: ಮಲ್ಲಿಕಾರ್ಜುನ ಖರ್ಗೆ ಒತ್ತಾಯ

ಮುಂಬೈ/ ಅಹಮದಾಬಾದ್ (ಪಿಟಿಐ): ಅಹಮದಾಬಾದ್‌ನ ವಿಮಾನ ದುರಂತದಲ್ಲಿ ಮೃತಪಟ್ಟವರ ಕುಟುಂಬಸ್ಥರಿಗೆ ಹಾಗೂ ಬದುಕುಳಿದ ವರಿಗೆ ಮಧ್ಯಂತರ ಪರಿಹಾರವಾಗಿ ₹25 ಲಕ್ಷ ನೀಡುವುದಾಗಿ ಏರ್ ಇಂಡಿಯಾ ಶನಿವಾರ ಘೋಷಿಸಿದೆ.

ಏರ್ ಇಂಡಿಯಾದ ಮಾತೃಸಂಸ್ಥೆ ಟಾಟಾ ಸನ್ಸ್ ಈಗಾಗಲೇ ಘೋಷಿಸಿರುವ ₹1 ಕೋಟಿ ಪರಿಹಾರದ ಜತೆಗೆ ಹೆಚ್ಚುವರಿಯಾಗಿ ಈ ಮೊತ್ತವನ್ನು ನೀಡಲಾಗುತ್ತಿದೆ ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ವಿಮಾನ ದುರಂತದಲ್ಲಿ 241 ಪ್ರಯಾಣಿಕರು ಸೇರಿದಂತೆ ಒಟ್ಟು 270 ಮಂದಿ ಮೃತಪಟ್ಟಿದ್ದರು.

**ಖರ್ಗೆ ಒತ್ತಾಯ:** 'ಏರ್ ಇಂಡಿಯಾ ವಿಮಾನ ದುರಂತದ ಉತ್ತರದಾಯಿತ್ವವನ್ನು ಕೇಂದ್ರ ಸರ್ಕಾರ ಪ್ರಕಟಿಸಬೇಕು' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಒತ್ತಾಯಿಸಿದರು.

ಇಲ್ಲಿನ ಸಿವಿಲ್ ಆಸ್ಪತ್ರೆಯಲ್ಲಿ ಗಾಯಾಳುಗಳನ್ನು ಶನಿವಾರ ಭೇಟಿ ಮಾಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ದುರಂತದಲ್ಲಿ ಮೃತಪಟ್ಟವರ ಕುಟುಂಬಸ್ಥರಿಗೆ ಹಾಗೂ ಗಾಯಾಳುಗಳಿಗೆ ಪರಿಹಾರ ನೀಡಬೇಕು ಹಾಗೂ ಉತ್ತರದಾಯಿತ್ವ ತೋರಬೇಕು' ಎಂದರು.

**ಯುವಕನ ಹೇಳಿಕೆ ದಾಖಲು:** ಏರ್ ಇಂಡಿಯಾ ವಿಮಾನ ಪತನದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿ, ವಿವಿಧ ಊಹಾಪೋಹಗಳಿಗೆ ಕಾರಣವಾಗಿದ್ದ ಬೆನ್ನಲ್ಲೇ ಆ ವಿಡಿಯೊ ಚಿತ್ರೀಕರಿಸಿದ್ದ 17 ವರ್ಷದ ಯುವಕ ಆರ್ಯನ್, ಅಹಮದಾಬಾದ್ ಪೊಲೀಸರ ಮುಂದೆ ಸಾಕ್ಷಿದಾರನಾಗಿ ಹೇಳಿಕೆ ದಾಖಲಿಸಿದ್ದಾನೆ. ಪೊಲೀಸರು ಈ ಬಗ್ಗೆ ಮಾಹಿತಿ ನೀಡಿದ್ದಾರೆ.

ವಿಮಾನ ಹಾರುತ್ತಿರುವುದನ್ನು ಮನೆಯ ಮಹಡಿಯಲ್ಲಿ ನಿಂತು ಆರ್ಯನ್ ಚಿತ್ರೀಕರಿಸುತ್ತಿದ್ದ ವೇಳೆಯಲ್ಲೇ ವಿಮಾನ ಪತನಗೊಂಡಿದೆ. ಈ ವಿಡಿಯೊ ಜಾಲ ತಾಣಗಳಲ್ಲಿ ವೈರಲ್ ಆದ ಬಳಿಕ ವಿವಿಧ ಊಹಾಪೋಹಗಳು ಸೃಷ್ಟಿಯಾಗಿದ್ದವು. ಅಲ್ಲದೇ, ಪೊಲೀಸರು ಆರ್ಯನ್‌ನನ್ನು ಬಂಧಿಸಿ, ವಿಚಾರಣೆ ನಡೆಸುತ್ತಿದ್ದಾರೆ ಎಂದೂ ಹೇಳಲಾಗಿತ್ತು.

ಈ ಹಿನ್ನೆಲೆಯಲ್ಲಿ ಪೊಲೀಸರು ಮಾಹಿತಿ ನೀಡಿ, 'ಯಾರನ್ನೂ ಬಂಧಿಸಲಾಗಿಲ್ಲ. ಯುವಕ ಆರ್ಯನ್ ತನ್ನ ತಂದೆಯ ಜತೆಗೆ ಬಂದು ಸಾಕ್ಷಿದಾರನಾಗಿ ಹೇಳಿಕೆ ನೀಡಿದ್ದಾನೆ.' ಎಂದಿದ್ದಾರೆ. ಮಾಧ್ಯಮಗಳೊಂದಿಗೆ ಆರ್ಯನ್ ಕೂಡ ಮಾತನಾಡಿ, 'ನಾನು ವಿಡಿಯೊ ಚಿತ್ರೀಕರಿಸಲು ಆರಂಭಿಸಿದ 24 ಸೆಕೆಂಡ್‌ಗಳಲ್ಲೇ ವಿಮಾನ ಪತನಗೊಂಡಿತು. ಅದು ಅಪಘಾತಕ್ಕೀಡಾಗುತ್ತದೆ ಎಂಬ ಊಹೆಯೂ ನನಗೆ ಇರಲಿಲ್ಲ. ಆ ದೃಶ್ಯ ನೋಡಿ ನಾನೇ ಆಘಾತಕ್ಕೀಡಾದೆ' ಎಂದಿದ್ದಾನೆ.

### 'ಭಾರತಕ್ಕೆ ಬಂದು ಅಚ್ಚರಿ ನೀಡಿದ್ದರು'

ಅಹಮದಾಬಾದ್ (ಪಿಟಿಐ): 'ಲಂಡನ್‌ನಲ್ಲಿದ್ದ ಮಗ, ಸೊಸೆ ಎರಡು ವರ್ಷಗಳ ಬಳಿಕ ನನಗೆ ಹೇಳದೇ ಭಾರತಕ್ಕೆ ಬಂದು ಅಚ್ಚರಿ ನೀಡಿದ್ದರು. ನನ್ನೊಂದಿಗೆ ಸಂತಸದಿಂದ ಕಾಲ ಕಳೆದ ಬಳಿಕ ಮತ್ತೆ ಹಿಂದಿರುಗುತ್ತಿದ್ದ ಅವರನ್ನು ವಿಮಾನ ನಿಲ್ದಾಣದಲ್ಲಿ ಗುರುವಾರ ಬಿಟ್ಟು ಬಂದೆ. ತಕ್ಷಣವೇ ಅವರಿದ್ದ ವಿಮಾನ ಪತನಗೊಂಡ ಸುದ್ದಿ ತಿಳಿಯಿತು' ವಿಮಾನ ದುರಂತದಲ್ಲಿ ಮಗ–ಸೊಸೆಯನ್ನು ಕಳೆದುಕೊಂಡಿರುವ ಅನೀಲ್ ಪಟೇಲ್, ತಮ್ಮ ನೋವು ತೋಡಿಕೊಂಡಿದ್ದು ಹೀಗೆ.

ಅಹಮದಾಬಾದ್‌ನಲ್ಲಿ ನಡೆದ ಏರ್ ಇಂಡಿಯಾ ವಿಮಾನ ಪತನ ದುರಂತದಲ್ಲಿ ಪಟೇಲ್ ಅವರ ಪುತ್ರ ಹರ್ಷಿತ್ ಹಾಗೂ ಅವರ ಪತ್ನಿ ಪೂಜಾ ಸಾವಿಗೀಡಾಗಿದ್ದಾರೆ. ಡಿಎನ್‌ಎ ಮಾದರಿ ನೀಡಿರುವ ಪಟೇಲ್ ಆಸ್ಪತ್ರೆಯಲ್ಲಿ ಮಗ–ಸೊಸೆಯ ಶವಗಳ ಹಸ್ತಾಂತರಕ್ಕೆ ಕಾಯುತ್ತಿದ್ದಾರೆ.



ಅಹಮದಾಬಾದ್‌ನಲ್ಲಿ ವಿಮಾನ ದುರಂತ ಸಂಭವಿಸಿದ ಸ್ಥಳಕ್ಕೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಕರ್ನಾಟಕದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭೇಟಿ ನೀಡಿದರು –ಪಿಟಿಐ ಚಿತ್ರ

### ಇನ್ನೂ ದಾಖಲಿಸದ ಎಫ್‌ಐಆರ್

ಅಹಮದಾಬಾದ್: ಇಲ್ಲಿ ಗುರುವಾರ ನಡೆದ ಏರ್ ಇಂಡಿಯಾ ವಿಮಾನ ದುರಂತಕ್ಕೆ ಸಂಬಂಧಿಸಿ ಅಸಾಧಾರಣ ಸಾವು ಎಂಬ ಹೆಸರಿನಲ್ಲಿ ಪೊಲೀಸರು ಪ್ರಕರಣವನ್ನು ದಾಖಲಿಸಿಕೊಂಡಿದ್ದಾರೆ. 241 ಪ್ರಯಾಣಿಕರು ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿ ಪೊಲೀಸರು ಇನ್ನೂವರೆಗೂ ಎಫ್‌ಐಆರ್ ದಾಖಲಿಸಿಲ್ಲ. ಬದಲಿಗೆ ಪೊಲೀಸ್ ಠಾಣೆಯಲ್ಲಿ ಘಟನಾವಳಿಗಳನ್ನು ದಾಖಲಿಸಿಕೊಳ್ಳಲಾಗಿದೆಯಷ್ಟೆ.

ತನಿಖೆ ಪೂರ್ಣಗೊಂಡ ಬಳಿಕ ಈ ಘಟನಾವಳಿಗಳ ದಾಖಲೆಯನ್ನೇ ಎಫ್‌ಐಆರ್ ಆಗಿ ಮಾರ್ಪಾಡು ಮಾಡಬಹುದು. ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ (ಬಿಎನ್‌ಎಸ್‌ಎಸ್) ಸೆಕ್ಷನ್ 194ರ ಅಡಿಯಲ್ಲಿ ಇದಕ್ಕೆ ಅವಕಾಶವಿದೆ.

'ಗುರುತು ಪತ್ತೆಯಾಗದ ಸಾವು ಸ್ಥಿತಿಗತಿ ವರದಿ' ಎಂಬ ತಲೆಬರಹದೊಂದಿಗೆ ಪೊಲೀಸ್ ವರದಿ ಆರಂಭಗೊಳ್ಳುತ್ತದೆ. ಅಹಮದಾಬಾದ್ ನಗರ ಪೊಲೀಸ್ ನಿಯಂತ್ರಣ ಕೊಠಡಿಗೆ ಘಟನೆ ಕುರಿತು ಬಂದ ಕರೆಯಿಂದ ಆರಂಭಗೊಂಡು ಘಟನೆಯ ಎಲ್ಲ ವಿವರಗಳನ್ನು ಈ ವರದಿ ಒಳಗೊಂಡಿದೆ.

### ಪತ್ನಿ ಅಸ್ಥಿ ವಿಸರ್ಜನೆಗೆ ಬಂದಿದ್ದ ಪತಿ ಸಾವು

ಅಮರೇಲಿ (ಪಿಟಿಐ): ಮೃತ ಹೆಂಡತಿಯ ಅಸ್ಥಿಯನ್ನು ಆಕೆಯ ಇಚ್ಛೆಯಂತೆಯೇ ನರ್ಮದಾ ನದಿಯಲ್ಲಿ ವಿಸರ್ಜಿಸಲು ಬಂದಿದ್ದ ಅರ್ಜುನ್ ಪಟೋಲಿಯಾ ಅವರು ವಿಮಾನ ದುರಂತದಲ್ಲಿ ಸುಟ್ಟು ಬೂದಿಯಾದ ಕರುಣಾಜನಕ ಘಟನೆ ನಡೆದಿದೆ. ದಂಪತಿಯ 4 ಮತ್ತು 8 ವರ್ಷದ ಹೆಣ್ಣುಮಕ್ಕಳು ಈಗ ಅನಾಥರಾಗಿದ್ದಾರೆ.

'ಅನಾರೋಗ್ಯದ ಕಾರಣ ಎರಡು ವಾರಗಳ ಹಿಂದಷ್ಟೇ ಅರ್ಜುನ್ ಅವರ ಪತ್ನಿ ಭಾರತಿ ಲಂಡನ್‌ನಲ್ಲಿ ಮೃತಪಟ್ಟಿದ್ದರು. 36 ವರ್ಷದ ಅರ್ಜುನ್, ಅಮರೇಲಿ ಜಿಲ್ಲೆಯವರು. ಹಲವು ವರ್ಷಗಳಿಂದ ಅರ್ಜುನ್ ಅವರು ಲಂಡನ್‌ನಲ್ಲಿ ವಾಸವಿದ್ದರು ಎಂದು ಅರ್ಜುನ್ ಸಹೋದರ ತಿಳಿಸಿದರು.

### ಅಹಮದಾಬಾದ್‌ನಿಂದ ಲಂಡನ್ ತಲುಪುವ ನಿರ್ಣಯವೇ ಮುಳುವಾಯಿತು

ಮುಂಬೈ (ಪಿಟಿಐ): ಅನಾರೋಗ್ಯ-ಪೀಡಿತ ತಾಯಿಯನ್ನು ನೋಡಲು ಕುಟುಂಬ ಸಮೇತರಾಗಿ ಮುಂಬೈಗೆ ಬಂದಿದ್ದ ಜಾವೇದ್ ಅಲಿ ಸೈಯದ್ ಅವರು, ವಾಪಸ್ ಲಂಡನ್‌ಗೆ ತೆರಳಲು ಮುಂಬೈನಿಂದ ವಿಮಾನವು ಲಭ್ಯವಾಗದ ಕಾರಣ ಅಹಮದಾಬಾದ್‌ನಿಂದ ಪ್ರಯಾಣಿಸುವ ನಿರ್ಧಾರ ಕೈಗೊಂಡಿದ್ದರು. ದುರದೃಷ್ಟ-ವಶಾತ್ ಈ ನಿರ್ಧಾರವೇ ಇಡೀ ಕುಟುಂಬವನ್ನು ಸರ್ವನಾಶ ಮಾಡಿತು.

ಮುಂಬೈನ ಮಾಲಾಡ್ ಪೂರ್ವದ ಜಾವೇದ್ ಅಲಿ ಅವರು ಬ್ರಿಟನ್‌ಗೆ ತೆರಳಿ ಅಲ್ಲಿಯೇ ನೆಲಸಿದ್ದರು. ಅವರು ಪತ್ನಿ ಮರಿಯಂ ಮತ್ತು ಇಬ್ಬರು ಮಕ್ಕಳೊಂದಿಗೆ ಭಾರತಕ್ಕೆ ಬಂದಿದ್ದರು. ಒಂದು ವಾರ ಮುಂಬೈನಲ್ಲಿದ್ದ ಅವರು ನತದೃಷ್ಟ ಏರ್‌ಇಂಡಿಯಾ ವಿಮಾನದ ಮೂಲಕ ವಾಪಸ್ ಲಂಡನ್‌ಗೆ ಹೊರಟಿದ್ದರು.

'ಜಾವೇದ್ 11 ವರ್ಷಗಳ ಹಿಂದೆ ಬ್ರಿಟನ್‌ಗೆ ತೆರಳಿ, ಅಲ್ಲಿಯ ಪ್ರಜೆಯಾದ ಮರಿಯಂ ಅವರನ್ನು ವಿವಾಹವಾಗಿದ್ದರು. ಲಂಡನ್‌ನಲ್ಲಿ ಸುಖವಾಗಿ ಸಂಸಾರ ಸಾಗಿಸುತ್ತಿ-ದ್ದರು. ತಾಯಿಯನ್ನು ನೋಡಲು ಮತ್ತು ಕುಟುಂಬದೊಂದಿಗೆ ಈದ್ ಆಚರಿಸಲು ತವರಿಗೆ ಬಂದಿದ್ದರು' ಎಂದು ಜಾವೇದ್ ಅವರ ಸಹೋದರ ಇಮ್ತಿಯಾಜ್ ಅಲಿ ತಿಳಿಸಿದರು.

'ಸುದೀರ್ಘ ಸಮಯದ ನಂತರ ಜಾವೇದ್ ಅವರ ಕುಟುಂಬವು ಭಾರತಕ್ಕೆ ಬಂದಿತ್ತು. ಆದರೆ ಇದು ಅವರ ಕೊನೆಯ ಪಯಣವಾಗಿತ್ತು ಎಂಬುದು ನೋವಿನ ಸಂಗತಿ. ಅಹಮದಾಬಾದ್ ಮೂಲಕ ಲಂಡನ್ ತಲುಪುವ ನಿರ್ಧಾರ ಕೈಗೊಂಡಿದ್ದಕ್ಕೆ ವಿಷಾದಿಸುತ್ತೇವೆ' ಎಂದರು.

## 'ಎಂಜಿನ್ ಶಕ್ತಿ ಕಳೆದುಕೊಂಡಿದ್ದೇ ವಿಮಾನ ದುರಂತಕ್ಕೆ ಕಾರಣ'

ಕೋಲ್ಕತ್ತ (ಪಿಟಿಐ): 'ಟೇಕಾಫ್ ನಂತರದ ನಿರ್ಣಾಯಕ ಹಂತದಲ್ಲಿ ಏರ್ ಇಂಡಿಯಾ ಬೋಯಿಂಗ್ ಡ್ರೀಮ್‌ಲೈನರ್ 787–8 ವಿಮಾನದ ಎಂಜಿನ್ ಶಕ್ತಿ ಕಳೆದುಕೊಂಡಿದ್ದೇ ದುರಂತಕ್ಕೆ ಕಾರಣ' ಎಂದು ಮಾಜಿ ಏರ್ ಚೀಫ್ ಮಾರ್ಷಲ್ ಅರೂಪ್ ರಾಹಾ ಅಭಿಪ್ರಾಯಪಟ್ಟಿದ್ದಾರೆ.

'ವಿಮಾನದ ಇಂಧನ ಮಾಲಿನ್ಯ, ಸಾಫ್ಟ್‌ವೇರ್ ದೋಷ, ವಿಮಾನದ ನಿಯಂತ್ರಣ ವ್ಯವಸ್ಥೆಯಲ್ಲಿನ ತಾಂತ್ರಿಕ ಲೋಪಗಳು ಸೇರಿ ಹಲವು ಸಂಗತಿಗಳು ದುರಂತಕ್ಕೆ ಕಾರಣವಾಗಬಲ್ಲವು' ಎಂದ ಅವರು, 'ವಿಮಾನವು ನೆಲದಿಂದ ಆಗಸಕ್ಕೇರುವ ನಿರ್ಣಾಯಕ ಹಂತದಲ್ಲಿ ಎಂಜಿನ್ ಶಕ್ತಿ ಕಳೆದುಕೊಂಡಿತು. ಅದರ ಮರುಸ್ಥಾಪನೆಗೆ ಸಮಯವೇ ಇರಲಿಲ್ಲ. ಕೆಲವೇ ಸೆಕೆಂಡ್‌ಗಳಲ್ಲಿ ವಿಮಾನ ಪತನಗೊಂಡಿತು' ಎಂದರು.

ವಿಮಾನ ಪತನಕ್ಕೆ ಸಂಬಂಧಿಸಿದಂತೆ ಕೇಳಿಬರುತ್ತಿರುವ ವಿಧ್ವಂಸಕ ಕೃತ್ಯದ ಆರೋಪವನ್ನು ರಾಹಾ ಅಲ್ಲಗಳೆದರು. 'ಇಂತಹ ಸುದ್ದಿಗಳನ್ನು ಹರಡಬೇಡಿ. ಡಿಜಿಸಿಎ ತನಿಖೆ ಪೂರ್ಣಗೊಳಿಸುವ ತನಕ ಕಾಯಿರಿ' ಎಂದು ಮನವಿ ಮಾಡಿದರು.

ಹಕ್ಕಿ ಡಿಕ್ಕಿ ಹೊಡೆದಿರಬಹುದು ಎಂಬುದನ್ನೂ ಅಲ್ಲಗಳೆದ ಅವರು, 'ಇದು ಹೃದಯವಿದ್ರಾವಕ ಘಟನೆ. ದೊಡ್ಡ ದುರಂತ. ಈಗಲೇ ಎಲ್ಲಿ ಲೋಪವಾಗಿದೆ ಎನ್ನುವುದನ್ನು ಹೇಳುವುದು ಕಷ್ಟ. ಸಾಮಾನ್ಯವಾಗಿ ಬೋಯಿಂಗ್ 787–8 ಡ್ರೀಮ್‌ಲೈನರ್ ಸರಣಿಯ ವಿಮಾನಗಳ ಎರಡೂ ಎಂಜಿನ್‌ಗಳ ಶಕ್ತಿ ಏಕಕಾಲದಲ್ಲಿ ಕಡಿಮೆಯಾಗುವುದು ಅಪರೂಪದಲ್ಲೇ ಅಪರೂಪದ ಸಂಗತಿ' ಎಂದರು.

### ಚಿಟಿಕೆ ಸುದ್ದಿ

#### ದೆಹಲಿ ಸಿಸಿಎಸ್ ಭವನದಲ್ಲಿ ಆಕಸ್ಮಿಕ ಅಗ್ನಿ ಅವಘಡ



ನವದೆಹಲಿಯ ಕಾಮನ್ ಸೆಂಟ್ರಲ್ ಸೆಕ್ರಟರಿಯೇಟ್ ಭವನದಲ್ಲಿ ಅಗ್ನಿ ಅವಘಡ ಸಂಭವಿಸಿದ ಸ್ಥಳಕ್ಕೆ ಅಗ್ನಿಶಾಮಕ ವಾಹನ ಧಾವಿಸಿತು

ನವದೆಹಲಿ (ಪಿಟಿಐ): ಇಲ್ಲಿನ ಜನಪಥ್ ರಸ್ತೆಯಲ್ಲಿರುವ ಕಾಮನ್ ಸೆಂಟ್ರಲ್ ಸೆಕ್ರಟರಿಯೇಟ್ ಭವನದಲ್ಲಿ (ಸಿಸಿಎಸ್) ಶನಿವಾರ ಬೆಳಿಗ್ಗೆ ಆಕಸ್ಮಿಕ ಅಗ್ನಿ ಅವಘಡ ಸಂಭವಿಸಿದೆ.

'ಬೆಳಿಗ್ಗೆ 11.13ರ ಸುಮಾರಿಗೆ, ಸಿಸಿಎಸ್ ಭವನದ ಮೂರನೆಯ ಮಹಡಿಯಲ್ಲಿ ಅಗ್ನಿ ಅವಘಡ ಸಂಭವಿಸಿರುವ ಕುರಿತು ಮಾಹಿತಿ ಬಂತು. ತಕ್ಷಣ 15 ಅಗ್ನಿಶಾಮಕ ವಾಹನಗಳೊಂದಿಗೆ ಅಲ್ಲಿಗೆ ಧಾವಿಸಿ ರಕ್ಷಣಾ ಕಾರ್ಯಾಚರಣೆ ಕೈಗೊಂಡೆವು. ಘಟನೆಯಲ್ಲಿ ಯಾರೂ ಗಾಯಗೊಂಡಿಲ್ಲ, ಯಾವುದೇ ಜೀವಹಾನಿ ಸಂಭವಿಸಿಲ್ಲ. ಪೀಠೋಪಕರಣ, ಇತರೆ ವಸ್ತುಗಳಿಗೆ ಹಾನಿಯಾಗಿದೆ' ಎಂದು ದೆಹಲಿ ಅಗ್ನಿಶಾಮಕ ಅಧಿಕಾರಿ ಹೇಳಿದರು.

#### ಧುಬ್ರಿ: 38 ಜನರ ಬಂಧನ



ಹಿಮಂತ ಬಿಸ್ವ ಶರ್ಮ

ಗುವಾಹಟಿ (ಪಿಟಿಐ): ಅಶಾಂತಿ ಸೃಷ್ಟಿಸು-ವವರಿಗೆ ಕಂಡಲ್ಲಿ ಗುಂಡಿಕ್ಕುವಂತೆ ಆದೇಶಿಸಿದ್ದ ಧುಬ್ರಿಯಲ್ಲಿ 38 ಜನರನ್ನು ಶುಕ್ರವಾರ ರಾತ್ರಿ ಬಂಧಿಸಲಾಗಿದೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ಶನಿವಾರ ತಿಳಿಸಿದ್ದಾರೆ.

'ಬಕ್ರೀದ್ (ಜೂನ್ 7) ಹಬ್ಬದಂದು ಧುಬ್ರಿ ಪಟ್ಟಣದ ಹನುಮಾನ್ ದೇಗುಲದ ಮುಂದೆ ಹಸುವಿನ ರುಂಡ ಪತ್ತೆಯಾಗಿತ್ತು. ಮರುದಿನವೂ ಮತ್ತೆ ಅದೇ ಸ್ಥಳದಲ್ಲಿ ಕಂಡುಬಂದಿತು. ಈ ವಿದ್ಯಮಾನದ ನಂತರ ಕೋಮು ಘರ್ಷಣೆ ನಡೆದಿದೆ' ಎಂದು ಶುಕ್ರವಾರ ಗಲಭೆ ಪೀಡಿತ ಪ್ರದೇಶಕ್ಕೆ ಭೇಟಿ ನೀಡಿದ್ದ ಮುಖ್ಯಮಂತ್ರಿ 'ಎಕ್ಸ್'ನಲ್ಲಿ ಪ್ರಕಟಿಸಿದ್ದಾರೆ.

'ನಬಿನ್ ಬಾಂಗ್ಲಾ' ಹೆಸರಿನ ಗುಂಪೊಂದು ಬಾಂಗ್ಲಾದೇಶದ ಗಡಿಯಲ್ಲಿರುವ ಜಿಲ್ಲೆಯಲ್ಲಿ ಅಶಾಂತಿ ಸೃಷ್ಟಿಸಲು ಯತ್ನಿ-ಸುತ್ತಿರುವುದು ಗಮನಕ್ಕೆ ಬಂದಿದ್ದು, ಕಾನೂನು ಸುವ್ಯವಸ್ಥೆಗೆ ಧಕ್ಕೆ ತರುವವರಿಗೆ ಕಂಡಲ್ಲಿ ಗುಂಡಿಕ್ಕುವಂತೆ ಶರ್ಮ ಇದೇ ಸಂದರ್ಭ ಆದೇಶಿಸಿದ್ದರು.

#### 17 ಜನರ ವಿರುದ್ಧ ಎನ್‌ಐಎ ದೋಷಾರೋಪ





ನವದೆಹಲಿ (ಪಿಟಿಐ): ಛತ್ತೀಸಗಢದಲ್ಲಿನ ಸಿಆರ್‌ಪಿಎಫ್ ಶಿಬಿರಗಳ ಮೇಲೆ 2024ರಲ್ಲಿ ನಕ್ಸಲರು ನಡೆಸಿದ್ದ ದಾಳಿಗೆ ಸಂಬಂಧಿಸಿದಂತೆ, ನಾಪತ್ತೆಯಾಗಿರುವ 16 ಮಂದಿಯೂ ಸೇರಿದಂತೆ 17 ಜನರ ವಿರುದ್ಧ ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ದೋಷಾರೋಪ ಹೊರಿಸಿದೆ.

ಸೋಡಿ ಬಾಮನ್ ಅಲಿಯಾಸ್ ದೇವಲ್ ಎಂಬಾತನನ್ನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿಸಲಾಗಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ನಾಪತ್ತೆ ಆಗಿರುವವರಲ್ಲಿ ನಕ್ಸಲರ ಕೇಂದ್ರ ಸಮಿತಿ ಮತ್ತು ವಿಶೇಷ ವಲಯ/ ರಾಜ್ಯ ಸಮಿತಿಯ ತಲಾ ಇಬ್ಬರು ಸದಸ್ಯರು ಹಾಗೂ ಪೀಪಲ್ಸ್ ಲಿಬರೇಶನ್ ಗೆರಿಲ್ಲಾ ಆರ್ಮಿ (ಪಿಎಲ್‌ಜಿಎ) ಬೆಟಾಲಿಯನ್ 1, ತೆಲಂಗಾಣ ರಾಜ್ಯ ಸಮಿತಿ, ಸಿಪಿಐನ ಪಾಮೆಡ್ ಪ್ರದೇಶ ಸಮಿತಿಯ ಹಿರಿಯ ಕಾರ್ಯಕರ್ತರಿದ್ದಾರೆ ಎಂದು ಆರೋಪಪಟ್ಟಿಯಲ್ಲಿ ತಿಳಿಸಲಾಗಿದೆ. ಜಗದಲ್ಪುರದಲ್ಲಿರುವ ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಶುಕ್ರವಾರ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ.

#### ಲಂಚ: ಇಪಿಎಫ್‌ಒ ಅಧಿಕಾರಿ ಬಂಧನ

ಭುವನೇಶ್ವರ (ಪಿಟಿಐ): ವ್ಯಕ್ತಿಯೊಬ್ಬರಿಂದ ₹10 ಸಾವಿರ ಲಂಚ ಪಡೆದ ಆರೋಪದಲ್ಲಿ ನೌಕರರ ಭವಿಷ್ಯ ನಿಧಿ ಸಂಘಟನೆಯ (ಇಪಿಎಫ್‌ಒ) ಬೆಹ್ರಾಂಪುರ ಪ್ರಾದೇಶಿಕ ಕಚೇರಿಯ ಹಿರಿಯ ಸಾಮಾಜಿಕ ಭದ್ರತಾ ಅಧಿಕಾರಿಯನ್ನು ಸಿಬಿಐ ಬಂಧಿಸಿದೆ.

'ಅಧಿಕೃತ ಸಹಿಯ ಅರ್ಜಿಯನ್ನು ಅನುಮೋದಿಸಲು, ಖಾಸಗಿ ಕಂಪನಿ ಉದ್ಯೋಗಿಯೊಬ್ಬರಿಂದ ಈ ಅಧಿಕಾರಿ ಲಂಚಕ್ಕಾಗಿ ಬೇಡಿಕೆ ಇರಿಸಿದ್ದರು. ಅಧಿಕಾರಿ ಶನಿವಾರ ತಮ್ಮ ಕಚೇರಿಯಲ್ಲಿ ಲಂಚ ಪಡೆಯುತ್ತಿದ್ದಾಗ ಅವರನ್ನು ಬಂಧಿಸಲಾಗಿದೆ' ಎಂದು ಸಿಬಿಐ ಪ್ರಕಟಣೆ ತಿಳಿಸಿದೆ.

## ನಿರ್ಗಮನ ಪಥಸಂಚಲನ



ಪಿಟಿಐ ಚಿತ್ರ

ಸೇನೆಗೆ ಹೊಸದಾಗಿ ಸೇರ್ಪಡೆಗೊಂಡ ಅಧಿಕಾರಿಗಳು ಡೆಹ್ರಾಡೂನ್‌ನ ಇಂಡಿಯನ್ ಮಿಲಿಟರಿ ಅಕಾಡೆಮಿಯಲ್ಲಿ (ಐಎಂಎ) ನಡೆದ ನಿರ್ಗಮನ ಪಥಸಂಚಲನದಲ್ಲಿ ಸಂಭ್ರಮಿಸಿದರು

## ಅಪಘಾತ ಕಾರಣ ಪತ್ತೆಗೆ ಸಮಿತಿ

ಒಂದನೇ ಪುಟದಿಂದ...

**ಮತ್ತೊಂದು ಮೃತದೇಹ ಪತ್ತೆ:** 'ವಿಮಾನ ದುರಂತದ ಸ್ಥಳದಲ್ಲಿ ಕಳೆದ 24 ಗಂಟೆಗಳಲ್ಲಿ ಒಂದು ಮೃತದೇಹ ಮತ್ತು ಮಾನವ ದೇಹದ ಕೆಲವು ಭಾಗಗಳು ದೊರೆತಿವೆ' ಎಂದು ಅಹಮದಾಬಾದ್ ಅಗ್ನಿಶಾಮಕ ಮತ್ತು ತುರ್ತು ಸೇವೆ ಅಧಿಕಾರಿಗಳು ತಿಳಿಸಿದ್ದಾರೆ.

'ಅವಘಡ ನಡೆದ ದಿನದಿಂದ ಶನಿವಾರದವರೆಗೆ ಅಹಮದಾಬಾದ್ ಸರ್ಕಾರಿ ಆಸ್ಪತ್ರೆಗೆ ಒಟ್ಟು 270 ಮೃತದೇಹಗಳನ್ನು ತರಲಾಗಿದೆ' ಎಂದು ವೈದ್ಯರು ತಿಳಿಸಿದ್ದಾರೆ. ದುರಂತದಲ್ಲಿ 265 ಮಂದಿ ಮೃತಪಟ್ಟಿರುವುದಾಗಿ ಅಧಿಕಾರಿಗಳು ಈ ಮೊದಲು ಹೇಳಿದ್ದರು.

'ಡಿಎನ್‌ಎ ಪರೀಕ್ಷೆ ಮೂಲಕ ಶವಗಳ ಗುರುತು ಪತ್ತೆಮಾಡುವ ಪ್ರಕ್ರಿಯೆ ನಡೆಯುತ್ತಿದೆ. ಪ್ರಕ್ರಿಯೆ ಪೂರ್ಣಗೊಂಡ ನಂತರ ಶವಗಳನ್ನು ಅವರ ಸಂಬಂಧಿಕರಿಗೆ ಹಸ್ತಾಂತರಿಸ-ಲಾಗುವುದು' ಎಂದು ಬಿ.ಜೆ ವೈದ್ಯಕೀಯ ಕಾಲೇಜಿನ ಕಿರಿಯ ವೈದ್ಯರ ಸಂಘದ ಅಧ್ಯಕ್ಷ ಡಾ.ಧವಳ್ ಗಮೇತಿ ಹೇಳಿದ್ದಾರೆ.

**2023ರಲ್ಲಿ ಸಮಗ್ರ ತಪಾಸಣೆ:** ದುರಂತಕ್ಕೀಡಾದ ವಿಮಾನದ ನಿರ್ವಹಣೆಗೆ ಸಂಬಂಧಿಸಿದ ಸಮಗ್ರ ತಪಾಸಣೆ 2023ರ ಜೂನ್‌ನಲ್ಲಿ ನಡೆದಿತ್ತು. ಮುಂದಿನ ನಿಗದಿತ ತಪಾಸಣೆ ಈ ವರ್ಷದ ಡಿಸೆಂಬರ್‌ನಲ್ಲಿ ನಡೆಯಬೇಕಿತ್ತು ಎಂದು ಏರ್ ಇಂಡಿಯಾದ ಅಧಿಕಾರಿಗಳು ತಿಳಿಸಿದ್ದಾರೆ.

**ಆಪ್ತ ಸಮಾಲೋಚಕರ ನೇಮಕ:** ದುರಂತದಲ್ಲಿ ತಮ್ಮವರನ್ನು ಕಳೆದುಕೊಂಡು ಮಾನಸಿಕ ಆಘಾತ ಎದುರಿಸುತ್ತಿರುವ ಕುಟುಂಬದ ಸದಸ್ಯರಿಗೆ ಆತ್ಮಸ್ಥೈರ್ಯ ತುಂಬಲು ಗುಜರಾತ್ ಸರ್ಕಾರ ಆಪ್ತ ಸಮಾಲೋ-ಚಕರನ್ನು ನೇಮಿಸಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಸಂತ್ರಸ್ತರ ಕುಟುಂಬದ ಜತೆ ಸಮನ್ವಯ ಸಾಧಿಸಲು 230 ತಂಡಗಳನ್ನು ರಚಿಸಲಾಗಿದೆ' ಎಂದು ಗುಜರಾತ್‌ನ ಕಂದಾಯ ಕಾರ್ಯದರ್ಶಿ ಅಲೋಕ್ ಪಾಂಡೆ ಅವರು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

### ಜಂಟಿ ಕಾರ್ಯಾಚರಣೆ; 300 ಬಂದೂಕು ಸೇರಿ ಅಪಾರ ಶಸ್ತ್ರಾಸ್ತ್ರ ವಶ

## ಮಣಿಪುರ: ಐವರು ಬಂಡುಕೋರರ ಸೆರೆ

ಇಂಫಾಲ್ (ಪಿಟಿಐ): ಸುಲಿಗೆ ಆರೋಪದ ಮೇಲೆ ಮಣಿಪುರದ ವಿವಿಧೆಡೆ ಐವರು ಬಂಡುಕೋರರನ್ನು ಬಂಧಿಸಲಾಗಿದೆ. ಮತ್ತೊಂದೆಡೆ ಭದ್ರತಾ ಪಡೆಗಳು ಮತ್ತು ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ಅಪಾರ ಪ್ರಮಾಣದ ಶಸ್ತ್ರಾಸ್ತ್ರ ವಶಕ್ಕೆ ಪಡೆದಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ತೌಬಾಲ್, ಕಾಕ್‌ಚಿಂಗ್, ಪಶ್ಚಿಮ ಇಂಫಾಲ್, ಟೆಂಗ್ನೌಪಾಲ್ ಜಿಲ್ಲೆಗಳಲ್ಲಿ ಶುಕ್ರವಾರ ಬಂಡುಕೋರರ ಬಂಧನ ಮಾಡಲಾಗಿದೆ. ಶಾಲೆಗಳಲ್ಲಿ ಸುಲಿಗೆ ಮಾಡಿದ್ದ ಯುನೈಟೆಡ್ ಪೀಪಲ್ಸ್ ಪಾರ್ಟಿ ಆಫ್ ಕಂಗ್ಲೀಪಾಕ್‌ನ ಸದಸ್ಯ ಅಕೋಯಿಜಮ್ ರಾಬಿನ್‌ಸನ್ ಬಳಿ ಪಿಸ್ತೂಲ್ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದರು.

ಕಂಗ್ಲೀಪಾಕ್ ಕಮ್ಯುನಿಸ್ಟ್ ಪಕ್ಷ (ನೊಯೋನ್), ಪ್ರಿಪಾಕ್ (ಪಿಆರ್‌ಇಪಿಎಕೆ) ಸದಸ್ಯರನ್ನು ಭಾರತ–ಮ್ಯಾನ್ಮಾರ್ ಗಡಿಯ ಶಾಂಗ್‌ಟಾಂಗ್‌ನಲ್ಲಿ ಬಂಧಿಸಲಾಗಿದೆ. ಇಂಫಾಲ್ ಉತ್ತರ ಜಿಲ್ಲೆಯಲ್ಲಿ ಪ್ರತ್ಯೇಕ ಕಾರ್ಯಾಚರಣೆ ನಡೆಸಿ ಭದ್ರತಾ ಪಡೆಗಳು ಮೂರು ವೆಹಿಕ್ಯುಲರ್ ರೇಡಿಯೋ ಸಲಕರಣೆ, 13 ವೈರ್‌ಲೆಸ್, ಏಳು ವೈರ್‌ಲೆಸ್ ಆ್ಯಂಟೆನಾ ಮತ್ತಿತರ ಸಾಧನಗಳನ್ನು ವಶಕ್ಕೆ ಪಡೆದಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**ಅಪಾರ ಶಸ್ತ್ರಾಸ್ತ್ರ ವಶ:** ಇಂಫಾಲ್ ಕಣಿವೆಯ ಐದು ಜಿಲ್ಲೆಗಳಲ್ಲಿ ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆ (ಸಿಆರ್‌ಪಿಎಫ್) ಸಿಬ್ಬಂದಿ ಮತ್ತು ಸೇನಾ ಯೋಧರು ಶನಿವಾರ 300 ಬಂದೂಕುಗಳು ಸೇರಿದಂತೆ ಅಪಾರ ಪ್ರಮಾಣದ ಶಸ್ತ್ರಾಸ್ತ್ರ, ಸ್ಫೋಟಕಗಳನ್ನು ವಶಕ್ಕೆ ಪಡೆದಿದ್ದಾರೆ.

ಮಣಿಪುರ ಪೊಲೀಸರು, ಸಿಆರ್‌ಪಿಎಫ್ ಮತ್ತು ಯೋಧರು ಗುಪ್ತಚರ ಮಾಹಿತಿ ಆಧರಿಸಿ ಶುಕ್ರವಾರ ರಾತ್ರಿ ಮತ್ತು ಶನಿವಾರ ಬೆಳಗ್ಗೆ ಜಂಟಿ ಕಾರ್ಯಾಚರಣೆ ನಡೆಸಿದ್ದರು.

151 ಎಸ್‌ಎಲ್‌ಆರ್ ಬಂದೂಕು, 65 ಐಎನ್‌ಎಸ್‌ಎಎಸ್ ಪಿಸ್ತೂಲ್, ಐದು ಕಾರ್ಬೈನ್ ಗನ್, ಎರಡು ಎಂಪಿ–5 ಗನ್‌ಗಳು, 12 ಲಘು ಮೆಷಿನ್ ಗನ್‌ಗಳು, ಆರು ಎಕೆ ಮಾದರಿ ಪಿಸ್ತೂಲುಗಳು, ಸಣ್ಣ ಫಿರಂಗಿ (ಮಾರ್ಟರ್), ಸಾವಿರಾರು ಮದ್ದುಗುಂಡು, 10 ಗ್ರನೇಡ್, ಗ್ರನೇಡ್ ಲಾಂಚರ್, ಏಳು ಡೆಟೊನೇಟರ್‌ಗಳು ಸೇರಿ ಅಪಾರ ಶಸ್ತ್ರಾಸ್ತ್ರಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಹಿರಿಯ ಅಧಿಕಾ-ರಿಯೊಬ್ಬರು ಮಾಹಿತಿ ನೀಡಿದರು.

ಪೂರ್ವ ಮತ್ತು ಪಶ್ಚಿಮ ಇಂಫಾಲ್, ಬಿಷ್ಣುಪುರ, ಕಾಕ್‌ಚಿಂಗ್, ತೌಬಾಲ್ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಕಾರ್ಯಾಚರಣೆ ನಡೆದಿದೆ. ರಾಜ್ಯದಲ್ಲಿ ಸಾರ್ವಜನಿಕ ಜನಜೀವನ ಸಹಜ ಸ್ಥಿತಿಗೆ ತರಲು ನಡೆಸಿದ ದೊಡ್ಡ ಕಾರ್ಯಾಚರಣೆ ಇದು ಎಂದು ಅಧಿಕಾರಿ ತಿಳಿಸಿದರು.



ಮಣಿಪುರದ ಐದು ಕಣಿವೆ ಜಿಲ್ಲೆಗಳಲ್ಲಿ ಭದ್ರತಾ ಪಡೆಗಳು ಶುಕ್ರವಾರ ಮತ್ತು ಶನಿವಾರ ನಡೆಸಿದ ಕಾರ್ಯಾಚರಣೆಯಲ್ಲಿ ವಶಕ್ಕೆ ಪಡೆದಿರುವ ಶಸ್ತ್ರಾಸ್ತ್ರಗಳು

## ಐಇಡಿ ಸ್ಫೋಟ ಸಿಆರ್‌ಪಿಎಫ್ ಅಧಿಕಾರಿ ಸಾವು

ಭುವನೇಶ್ವರ/ಚೈಬಾಸಾ/ ರಾಂಚಿ (ಪಿಟಿಐ): ಒಡಿಶಾ, ಜಾರ್ಖಂಡ್‌ನ ಗಡಿ ಭಾಗದಲ್ಲಿ ಶನಿವಾರ ನಕ್ಸಲ್ ವಿರೋಧಿ ಕಾರ್ಯಾಚರಣೆ ನಡೆಸುತ್ತಿದ್ದ ವೇಳೆ ಸುಧಾರಿತ ಕಚ್ಚಾ ಬಾಂಬ್ ಸ್ಫೋಟಿಸಿ (ಐಇಡಿ) ಸಿಆರ್‌ಪಿಎಫ್ ಅಧಿಕಾರಿಯೊಬ್ಬರು ಮೃತಪಟ್ಟಿದ್ದಾರೆ.

'ಸುಂದರಗಢ ಜಿಲ್ಲೆಯ ಸರಾಂದಾ ಅರಣ್ಯ ಪ್ರದೇಶದಲ್ಲಿ ಶೋಧ ಕಾರ್ಯ ನಡೆಸುತ್ತಿದ್ದ ವೇಳೆ ಕೇಂದ್ರಿಯ ಮೀಸಲು ಪೊಲೀಸ್ ಪಡೆ 134ನೇ ಬೆಟಾಲಿಯನ್‌ನ ಎಎಸ್‌ಐ ಸತ್ಯಬನ್ ಕುಮಾರ್ ಸಿಂಗ್ (34) ಮೃತಪಟ್ಟರು. ಮೇ 27ರಂದು ಕಲ್ಲು ಕ್ವಾರಿಯಿಂದ ಮಾವೋವಾದಿಗಳು ಈ ಸ್ಫೋಟಕವನ್ನು ಅಪಹರಿಸಿದ್ದರು' ಎಂದು ಅಧಿ-ಕಾರಿಯೊಬ್ಬರು ತಿಳಿಸಿದ್ದಾರೆ.

'ಸುಂದರಗಢ ಜಿಲ್ಲೆಯ ಕೆ. ಬಲಾಂಗ್ ಗ್ರಾಮದಲ್ಲಿ ಬೆಳಿಗ್ಗೆ 6 ಗಂಟೆ ಸುಮಾರಿಗೆ ಸ್ಫೋಟ ಸಂಭವಿಸುತ್ತಿದ್ದಂ-ತೆಯೇ, ಅವರ ಎಡಗಾಲಿಗೆ ತೀವ್ರವಾಗಿ ಗಾಯವಾಗಿತ್ತು. ಅವರನ್ನು ರೂರ್ಕೆಲಾ ಆಸ್ಪತ್ರೆಗೆ ದಾಖಲಿಸಲಾಗಿತ್ತು.

### ಬಂಗಾಳದ ಟಿಎಂಸಿ ಸರ್ಕಾರದ ವಿರುದ್ಧ ಬಿಜೆಪಿ ಆರೋಪ

## ಒಬಿಸಿ ಪಟ್ಟಿ ಮಾಹಿತಿ ಕೇಳಿದ ಎನ್‌ಸಿಬಿಸಿ

ನವದೆಹಲಿ (ಪಿಟಿಐ): ರಾಜ್ಯದ ಹಿಂದುಳಿದ ವರ್ಗಗಳ (ಒಬಿಸಿ) ಪಟ್ಟಿ ಸಿದ್ಧತೆಗೆ ಸಂಬಂಧಿಸಿದ ಶಿಫಾರಸು, ಸಮೀಕ್ಷೆಗೆ ಸಂಬಂಧಿಸಿದ ಅಧಿಸೂಚನೆ ಮಾಹಿತಿ ಹಂಚಿಕೊಳ್ಳು ವಂತೆ ಪಶ್ಚಿಮ ಬಂಗಾಳ ಸರ್ಕಾರಕ್ಕೆ ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗ (ಎನ್‌ಸಿಬಿಸಿ) ಸೂಚನೆ ನೀಡಿದೆ.

ಒಬಿಸಿ ಪಟ್ಟಿ ವಿಚಾರ ಪಶ್ಚಿಮ ಬಂಗಾಳದಲ್ಲಿ ಆಡಳಿತರೂಢ ತೃಣಮೂಲ ಕಾಂಗ್ರೆಸ್ ಪಕ್ಷ (ಟಿಎಂಸಿ) ಹಾಗೂ ಬಿಜೆಪಿ ನಡುವೆ ಕೆಸರೆರಚಾಟಕ್ಕೂ ಕಾರಣವಾಗಿದೆ.

'ಈ ಹಿಂದೆ ತಯಾರಿಸಿದ್ದ ಪಟ್ಟಿಯನ್ನು ಕಲ್ಕತ್ತಾ ಹೈಕೋರ್ಟ್ ರದ್ದುಪಡಿಸಿತ್ತು. ಆ ವೇಳೆ ಈ ಪಟ್ಟಿಯನ್ನು ಕೇಳಿದಾಗ ರಾಜ್ಯ ಸರ್ಕಾರ ಹಂಚಿಕೊಂಡಿರಲಿಲ್ಲ' ಎಂದು ಎನ್‌ಸಿಬಿಸಿ ಅಧ್ಯಕ್ಷ ಹಂಸರಾಜ್ ಅಹೀರ್ ತಿಳಿಸಿದ್ದಾರೆ.

'ನಾವು ಮತ್ತೆ ಅವರಿಗೆ ಈ ಸಂಬಂಧ ಪತ್ರ ಬರೆದಿದ್ದೇವೆ' ಎಂದು ಅಹೀರ್ ಹೇಳಿದ್ದಾರೆ.

'ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನೇತೃತ್ವದ ಸರ್ಕಾರವು ಒಬಿಸಿ ಪಟ್ಟಿಯಲ್ಲಿ ಮುಸಲ್ಮಾನರಿಗೆ ಹೆಚ್ಚಿನ ಒಲವು ತೋರಿದ್ದು, ಹಿಂದೂಗಳಲ್ಲಿನ ಜಾತಿಗಳನ್ನು ಕಡೆಗಣಿಸಲಾಗಿದೆ' ಎಂದು ಬಿಜೆಪಿ ಆರೋಪಿಸಿತ್ತು.

### ಆರೋಪ ನಿರಾಕರಣೆ

'ಒಬಿಸಿ ಪಟ್ಟಿ ಸಿದ್ಧಪಡಿಸುವಲ್ಲಿ ಯಾವುದೇ ಧರ್ಮವೂ ಪಾತ್ರ ವಹಿಸಿಲ್ಲ' ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ರಾಜ್ಯ ವಿಧಾನಸಭೆಯಲ್ಲಿ ಸ್ಪಷ್ಟಪಡಿಸಿದ್ದರು.

ಇದಕ್ಕೆ ತಿರುಗೇಟು ನೀಡಿದ್ದ ಬಿಜೆಪಿ ಪಶ್ಚಿಮ ಬಂಗಾಳದ ಸಹ ಉಸ್ತುವಾರಿ ಅಮಿತ್ ಮಾಳವೀಯ, '2010ರ ಒಬಿಸಿ ಪಟ್ಟಿ ಪ್ರಕಾರ, 66ರಲ್ಲಿ 11 ಮುಸಲ್ಮಾನ ಜಾತಿಗಳಿದ್ದವು. ಈಗಿನ ಹೊಸ ಪಟ್ಟಿಯಲ್ಲಿ 51ರಲ್ಲಿ 46 ಮುಸಲ್ಮಾನ ಜಾತಿಗಳಿವೆ. ಹಾಗಿದ್ದರೆ, ಇದು ಧರ್ಮ ಆಧಾರಿತ ತುಷ್ಟೀಕರಣ ಅಲ್ಲವೇ. ಮತ್ತೇನು' ಎಂದು ಪ್ರಶ್ನಿಸಿದ್ದಾರೆ.

## ಬೇಡಿಕೆ ಈಡೇರಿಕೆಗೆ ಒಪ್ಪಿಗೆ: ಉಪವಾಸ ಹಿಂದಕ್ಕೆ

ಅಮರಾವತಿ (ಪಿಟಿಐ): ರೈತರ ಸಂಪೂರ್ಣ ಸಾಲಮನ್ನಾ ಹಾಗೂ ಅಂಗವಿಕಲರ ಗೌರವಧನವನ್ನು ಏರಿಕೆ ಮಾಡುವಂತೆ ಒತ್ತಾಯಿಸಿ ಆಮರಣಾಂತ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದ ಪ್ರಹಾರ್ ಜನಶಕ್ತಿಯ ಪಕ್ಷದ ಸಂಸ್ಥಾಪಕ ಬಚ್ಚು ಕಡೂ ಅವರು ಸರ್ಕಾರದ ಭರವಸೆ ಬಳಿಕ ಶನಿವಾರ ಹೋರಾಟ ಕೈಬಿಟ್ಟಿದ್ದಾರೆ.

ಕಡೂ ಅವರ 7 ದಿನಗಳಿಂದ ತಿವಾಸ ತಾಲ್ಲೂಕಿನ ಗುರುಕುಂಜ್ ಮೊಜಾರಿ ಪ್ರದೇಶದಲ್ಲಿ ಉಪವಾಸ ಸತ್ಯಾಗ್ರಹ ಆರಂಭಿಸಿದ್ದರು. ಇದರ ಬೆನ್ನಲ್ಲೇ ಸಚಿವ ಉದಯ್ ಸಾಮಂತ್ ಅವರು ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ, 'ರೈತರ ಸಾಲ ಮನ್ನಾ ಸಂಬಂಧ 15 ದಿನಗಳ ಒಳಗಾಗಿ ಉನ್ನತ ಮಟ್ಟದ ಸಮಿತಿ ರಚನೆ ಮಾಡುವುದಾಗಿ ಕಂದಾಯ ಸಚಿವ ಚಂದ್ರಶೇಖರ್ ಬಾವಂಕುಲೆ ತಿಳಿಸಿದ ಪತ್ರವನ್ನು ಬಚ್ಚು ಅವರಿಗೆ ಹಸ್ತಾಂತರಿಸಿದರು.

## ಹಡಗಿನಲ್ಲಿ ಬೆಂಕಿ ಮುಂದುವರಿದ ಕಾರ್ಯಾಚರಣೆ

ಕೊಚ್ಚಿ (ಪಿಟಿಐ): ಕೇರಳದ ಕರಾವಳಿಯಲ್ಲಿ 'ಎಂವಿ ವಾನ್ ಹೈ 503' ಸರಕು ಸಾಗಣೆ ಹಡಗಿನಲ್ಲಿ ಕಾಣಿಸಿಕೊಂಡ ಬೆಂಕಿ ನಿಯಂತ್ರಣಕ್ಕೆ ಕಾರ್ಯಾಚರಣೆ ಮುಂದುವರಿದಿದ್ದು, ಶನಿವಾರ ಟೋಯಿಂಗ್ ಮೂಲಕ ಹಡಗನ್ನು ಸಮುದ್ರದಲ್ಲಿ 40 ನಾಟಿಕಲ್ ಮೈಲು ದೂರದವರೆಗೆ ಸಾಗಿಸಲಾಯಿತು' ಎಂದು ಕರಾವಳಿ ಕಾವಲು ಪಡೆ ತಿಳಿಸಿದೆ.

ಸಿಂಗಪುರ ಧ್ವಜ ಹೊಂದಿದ್ದ ಈ ಹಡಗು, ಕೊಲಂಬೊದಿಂದ ಮುಂಬೈಗೆ ಬರುವ ದಾರಿಯಲ್ಲಿ ಕೇರಳದ ಕರಾವಳಿಯಲ್ಲಿ ಕಂಟೇನರ್ ಸ್ಫೋಟಗೊಂಡು ಬೆಂಕಿ ಅವಘಡಕ್ಕೆ ಸಿಲುಕಿತ್ತು. ಕೇರಳ ಕರಾವಳಿಯಿಂದ 27 ನಾಟಿಕಲ್ ಮೈಲು ದೂರದಲ್ಲಿದ್ದ ಈ ಹಡಗನ್ನು ಟೋಯಿಂಗ್ ಕಾರ್ಯಾಚರಣೆ ನಡೆಸಿ ಇನ್ನಷ್ಟು ದೂರಕ್ಕೆ ಸಾಗಿಸಲಾಯಿತು.

'ಪ್ರತಿಕೂಲ ಹವಾಮಾನ ಪರಿಸ್ಥಿತಿಯ ನಡುವೆಯೇ ಟೋಯಿಂಗ್ ನಡೆಯಿತು. ಕರಾವಳಿ ಕಾವಲು ಪಡೆಯ ಸಾಕ್ಷಂ, ಸಮರ್ಥ್, ವಿಕ್ರಮ್ ಮತ್ತು ನೌಕಾಪಡೆಯ ಶಾರದಾ ಹಡಗುಗಳನ್ನು ಕಾರ್ಯಾಚರಣೆಗೆ ಬಳಸಿಕೊಳ್ಳಲಾಯಿತು.

# ಟೆಸ್ಟ್ ಕ್ರಿಕೆಟ್‌ಗೆ ದಕ್ಷಿಣ ಆಫ್ರಿಕಾ 'ರಾಜ'

## ಮರ್ಕರಂ, ಬವುಮಾ ದಿಟ್ಟ ಹೋರಾಟಕ್ಕೆ ಗೆಲುವು; ಆಸ್ಟ್ರೇಲಿಯಾ ಕೈಜಾರಿದ ಪ್ರಶಸ್ತಿ

**ಲಂಡನ್ (ಎಪಿ):** ಲಾರ್ಡ್ಸ್ ಅಂಗಳದಲ್ಲಿ ಶನಿವಾರ ದಕ್ಷಿಣ ಆಫ್ರಿಕಾ ತಂಡದ ಆಟಗಾರರ ಸಂಭ್ರಮ ಮುಗಿಲು ಮುಟ್ಟಿತು. ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಗೆದ್ದು ಚಾರಿತ್ರಿಕ ಸಾಧನೆ ಮಾಡಿದ ತಂಡವು ವಿಜೃಂಭಿಸಿತು.

ದಕ್ಷಿಣ ಆಫ್ರಿಕಾ ತಂಡವು 27 ವರ್ಷಗಳ ನಂತರ ಗೆದ್ದ ಐಸಿಸಿ ಪ್ರಶಸ್ತಿ ಇದಾಗಿದೆ. ಫೈನಲ್‌ನಲ್ಲಿ ಏಡನ್ ಮರ್ಕರಂ (136; 207ಎಸೆತ) ಅವರ ವಿಶ್ವಾಸಭರಿತ ಬ್ಯಾಟಿಂಗ್ ಬಲದಿಂದ ದಕ್ಷಿಣ ಆಫ್ರಿಕಾ ತಂಡವು 5 ವಿಕೆಟ್‌ಗಳಿಂದ ಆಸ್ಟ್ರೇಲಿಯಾ ವಿರುದ್ಧ ಗೆದ್ದಿತು.

ಪಂದ್ಯದ ಮೂರನೇ ದಿನವಾದ ಶುಕ್ರವಾರ 282 ರನ್‌ಗಳ ಗುರಿಯನ್ನು ದಕ್ಷಿಣ ಆಫ್ರಿಕಾ ಬೆನ್ನಟ್ಟಿತ್ತು. 'ಚಾಂಪಿಯನ್' ಬೌಲರ್‌ಗಳಿರುವ ಆಸ್ಟ್ರೇಲಿಯಾದ ದಾಳಿಯನ್ನು ಹಿಮ್ಮೆಟ್ಟಿಸುವುದು ದಕ್ಷಿಣ ಆಫ್ರಿಕಾದ ಬ್ಯಾಟರ್‌ಗಳಿಗೆ ಸಾಧ್ಯವೇ ಎಂಬ ಅನುಮಾನವೂ ಮೂಡಿತ್ತು. ಮಿಚೆಲ್ ಸ್ಟಾರ್ಕ್ ದಾಳಿಗೆ ದಕ್ಷಿಣ ಆಫ್ರಿಕಾ 70 ರನ್‌ಗಳಿಗೆ 2 ವಿಕೆಟ್ ಕೂಡ ಕಳೆದುಕೊಂಡಿತ್ತು.

ಈ ಹಂತದಲ್ಲಿ ಮರ್ಕರಂ ಮತ್ತು ನಾಯಕ ತೆಂಬಾ ಬವುಮಾ (66; 134ಎ) ಅವರ ಜೊತೆಯಾಟವು ತಂಡಕ್ಕೆ ಗೆಲುವಿನ ಹಾದಿ ತೋರಿಸಿತು. ಮೂರನೇ ದಿನದಾಟದ ಅಂತ್ಯಕ್ಕೆ ತಂಡವು 213 ರನ್‌ಗಳಿಗೆ 2 ವಿಕೆಟ್ ಕಳೆದುಕೊಂಡು ಸುಸ್ಥಿತಿ ತಲುಪಿತು. 102 ರನ್ ಗಳಿಸಿದ್ದ ಮರ್ಕರಂ ಮತ್ತು ತೆಂಬಾ ಕ್ರೀಸ್‌ನಲ್ಲಿದ್ದರು. ನಾಲ್ಕನೇ ದಿನದಾಟದಲ್ಲಿ ಜಯಕ್ಕೆ ಅವಶ್ಯವಿದ್ದ 69 ರನ್ ಗಳಿಸುವುದು ದಕ್ಷಿಣ ಆಫ್ರಿಕಾ ತಂಡದ ಪಾಲಿಗೆ ಸುಲಭವಾಗಿರಲಿಲ್ಲ. ಹೋದ ವರ್ಷದ ಚಾಂಪಿಯನ್ ಆಸ್ಟ್ರೇಲಿಯಾದ ಬೌಲರ್‌ಗಳು ತಮ್ಮ ಸಾಮರ್ಥ್ಯವನ್ನು ಪೂರ್ಣವಾಗಿ ಪಣಕ್ಕೊಡ್ಡಿದರು.

ಪ್ಯಾಟ್ ಕಮಿನ್ಸ್ ಮತ್ತು ಸ್ಟಾರ್ಕ್ ಅವರು ಕ್ರಮವಾಗಿ ತೆಂಬಾ ಮತ್ತು ಟ್ರಿಸ್ಟನ್ ಸ್ಟಬ್ಸ್ (8 ರನ್) ಅವರ ವಿಕೆಟ್‌ಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಂಡರು. ಎಲ್ಲ ಬೌಲರ್‌ಗಳೂ ನಿಖರ ದಾಳಿ ಸಂಘಟಿಸುವ ಮೂಲಕ ಬ್ಯಾಟರ್‌ಗಳ ಮೇಲೆ ಒತ್ತಡ ಹೆಚ್ಚಿಸಿದರು. ಈ ನಡುವೆ ಮರ್ಕರಂ ಮಾತ್ರ ಅಚಲವಾಗಿ ನಿಂತಿದ್ದರು. ಗೆಲುವಿಗೆ ಇನ್ನೂ 6 ರನ್‌ಗಳಷ್ಟೇ ಅವಶ್ಯವಿದ್ದ ಸಂದರ್ಭದಲ್ಲಿ ಮರ್ಕರಂ ವಿಕೆಟ್ ಉರುಳಿಸುವಲ್ಲಿ ಜೋಶ್ ಹ್ಯಾಜಲ್‌ವುಡ್ ಯಶಸ್ವಿಯಾದರು. ಟ್ರಾವಿಸ್ ಹೆಡ್ ಪಡೆದ ಕ್ಯಾಚಿಗೆ ಮರ್ಕರಂ ಇನಿಂಗ್ಸ್‌ಗೆ ತೆರೆ ಬಿತ್ತು. ಒಟ್ಟು 6 ಗಂಟೆ, 23 ನಿಮಿಷಗಳವರೆಗೆ ಅವರು ಕ್ರೀಸ್‌ನಲ್ಲಿದ್ದರು.

### ಮುಖ್ಯಾಂಶಗಳು

- ಚಾರಿತ್ರಿಕ ಸಾಧನೆ ಮಾಡಿದ ದಕ್ಷಿಣ ಆಫ್ರಿಕಾ
- 27 ವರ್ಷಗಳ ಬಳಿಕ ದಕ್ಷಿಣ ಆಫ್ರಿಕಾಕ್ಕೆ ಐಸಿಸಿ ಪ್ರಶಸ್ತಿ
- ಫೈನಲ್‌ನಲ್ಲಿ ಪ್ಯಾಟ್ ಕಮಿನ್ಸ್ ಬಳಗಕ್ಕೆ ನಿರಾಸೆ

ಇನ್ನೊಂದು ಬದಿಯಲ್ಲಿದ್ದ ಡೇವಿಡ್ ಬೆಡಿಂಗ್‌ಹ್ಯಾಮ್ (ಔಟಾಗದೇ 21) ಮತ್ತು ಕೈಲ್ ವೆರೆಯೇನ್ (ಔಟಾಗದೇ 4) ಅವರು ತಂಡವನ್ನು ಗೆಲುವಿನ ದಡ ಸೇರಿಸಿದರು. ಕೈಲ್ ಅವರು ಕವರ್ಸ್‌ಗೆ ಚೆಂಡನ್ನು ಡ್ರೈವ್ ಮಾಡುವ ಮೂಲಕ ಗೆಲುವಿನ ರನ್ ಗಳಿಸಿದರು.

ಲಾರ್ಡ್ಸ್ ಅಂಗಳದಲ್ಲಿ ಚೇಸಿಂಗ್ ಮಾಡಿ ಗೆದ್ದ ಎರಡನೇ ದೊಡ್ಡ ಮೊತ್ತ ಇದಾಗಿದೆ. 141 ವರ್ಷಗಳ ನಂತರ ಈ ಸಾಧನೆ ಮೂಡಿಬಂದಿದೆ.

**ಮೂರನೇ ಚಾಂಪಿಯನ್:** 2019ರಲ್ಲಿ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಆರಂಭವಾಯಿತು. ಇದುವರೆಗೂ ಒಟ್ಟು ಮೂರು ಆವೃತ್ತಿಗಳು ಮುಗಿದಿವೆ. ಮೊದಲ ಆವೃತ್ತಿಯಲ್ಲಿ ನ್ಯೂಜಿಲೆಂಡ್ ಮತ್ತು ಎರಡನೇಯದ್ದರಲ್ಲಿ ಆಸ್ಟ್ರೇಲಿಯಾ ಚಾಂಪಿಯನ್ ಆಗಿದ್ದವು. ಎರಡೂ ಸಲವೂ ಭಾರತ ರನ್ನರ್ಸ್ ಅಪ್ ಆಗಿತ್ತು. ಈ ಸಲ ದಕ್ಷಿಣ ಆಫ್ರಿಕಾ 'ಐಸಿಸಿ ರಾಜದಂಡ'ವನ್ನು ತನ್ನದಾಗಿಸಿಕೊಂಡಿತು.



ತೆಂಬಾ ಬವುಮಾ ಮತ್ತು ಏಡನ್ ಮರ್ಕರಂ ಎಪಿ/ಪಿಟಿಐ ಚಿತ್ರ

**ಐಸಿಸಿ ಟೂರ್ನಿಗಳಲ್ಲಿ ದಕ್ಷಿಣ ಆಫ್ರಿಕಾ ತಂಡದ ಸಾಧನೆ (ಸೆಮಿಫೈನಲ್ ಮತ್ತು ಫೈನಲ್‌ಗಳಲ್ಲಿ)**

| ಟೂರ್ನಿ | ಪಂದ್ಯ | ಗೆಲುವು | ಸೋಲು | ಟೈ |
|---|---|---|---|---|
| ಚಾಂಪಿಯನ್ಸ್ ಟ್ರೋಫಿ | 6 | 1 | 5 | 0 |
| ಏಕದಿನ ವಿಶ್ವಕಪ್ | 4 | 0 | 3 | 1 |
| ಟಿ20 ವಿಶ್ವಕಪ್ | 4 | 1 | 3 | 0 |
| ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ | 1 | 1 | 0 | 0 |


### ಸ್ಕೋರ್ ಕಾರ್ಡ್

**ಮೊದಲ ಇನಿಂಗ್ಸ್: ದಕ್ಷಿಣ ಆಫ್ರಿಕಾ: 57.1 ಓವರ್‌ಗಳಲ್ಲಿ 138. ಆಸ್ಟ್ರೇಲಿಯಾ: 56.4 ಓವರ್‌ಗಳಲ್ಲಿ 212.**
**2ನೇ ಇನಿಂಗ್ಸ್: ಆಸ್ಟ್ರೇಲಿಯಾ: 65 ಓವರ್‌ಗಳಲ್ಲಿ 207.**
**ದಕ್ಷಿಣ ಆಫ್ರಿಕಾ: 83.4 ಓವರ್‌ಗಳಲ್ಲಿ 5ಕ್ಕೆ 282 (ಶುಕ್ರವಾರ 56 ಓವರ್‌ಗಳಲ್ಲಿ 2ಕ್ಕೆ 213)**

ಮರ್ಕರಂ ಸಿ ಹೆಡ್ ಬಿ ಹ್ಯಾಜಲ್‌ವುಡ್ 136 (207ಎ, 4x14)
ಬವುಮಾ ಸಿ ಕ್ಯಾರಿ ಬಿ ಕಮಿನ್ಸ್ 66 (134ಎ, 4x5)
ಸ್ಟಬ್ಸ್ ಬಿ ಸ್ಟಾರ್ಕ್ 8 (43ಎ)
ಡೇವಿಡ್ ಬೆಡಿಂಗ್‌ಹ್ಯಾಮ್ ಔಟಾಗದೇ 21 (49ಎ, 4x1)
ಕೈಲ್ ವೆರೆಯೇನ್ ಔಟಾಗದೇ 4 (13ಎ)
**ಇತರೆ:** 14 (ಬೈ 8, ಲೆಗ್‌ಬೈ 4, ನೋಬಾಲ್ 2)
**ವಿಕೆಟ್ ಪತನ:** 3-217 (ತೆಂಬಾ ಬವುಮಾ, 58.6), 4-241 (ಟ್ರಿಸ್ಟನ್ ಸ್ಟಬ್ಸ್, 70.3), 5-276 (ಏಡನ್ ಮಾರ್ಕರಂ)
**ಬೌಲಿಂಗ್:** ಮಿಚೆಲ್ ಸ್ಟಾರ್ಕ್ 14.4–1–66–3, ಜೋಶ್ ಹ್ಯಾಜಲ್‌ವುಡ್ 19–2–58–1, ಪ್ಯಾಟ್ ಕಮಿನ್ಸ್ 17–0–59–1, ನೇಥನ್ ಲಯನ್ 26–4–66–0, ಬ್ಯೂ ವೆಬ್‌ಸ್ಟರ್ 5–0–13–0, ಟ್ರಾವಿಸ್ ಹೆಡ್ 2–0–8–0
**ಪಂದ್ಯದ ಆಟಗಾರ:** ಏಡನ್ ಮರ್ಕರಂ

**ಫಲಿತಾಂಶ: ದಕ್ಷಿಣ ಆಫ್ರಿಕಾ ತಂಡಕ್ಕೆ 5 ವಿಕೆಟ್ ಜಯ, ಪ್ರಶಸ್ತಿ**

## ಲೆಂಗಾದಿಂದ ಲಾರ್ಡ್ಸ್ ಎತ್ತರಕ್ಕೆ ಬೆಳೆದ ತೆಂಬಾ ಬವುಮಾ



**ನವದೆಹಲಿ (ಪಿಟಿಐ):** 'ಹೆಸರಲ್ಲಿ ಏನಿದೆ?' ಎಂದು ತೆಂಬಾ ಬವುಮಾ ಅವರನ್ನು ಕೇಳಬೇಡಿ.

ದಕ್ಷಿಣ ಆಫ್ರಿಕಾ ತಂಡಕ್ಕೆ ಅವರು ನಾಯಕರಾಗುವ ಮುನ್ನ ಅನುಭವಿಸಿದ ಟೀಕೆ, ವ್ಯಂಗ್ಯ, ಅವಮಾನಗಳಿಗೆ ಲೆಕ್ಕವೇ ಇಲ್ಲ. ಅವರ ಬ್ಯಾಟಿಂಗ್ ಸರಾಸರಿಯ ಬಗ್ಗೆ ಟೀಕಿಸಿದರು. ಅವರ ದೇಹಾಕೃತಿಯನ್ನು ಅವಮಾನಿಸಲಾಯಿತು. ಅವರ ಹೆಸರನ್ನೇ ಲೇವಡಿ ಮಾಡಿದರು. ಆದರೆ ಅದೇ ತೆಂಬಾ ಬವುಮಾ ನಾಯಕತ್ವದಲ್ಲಿ ಇವತ್ತು ದಕ್ಷಿಣ ಆಫ್ರಿಕಾ ತಂಡವು ಐಸಿಸಿ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಗೆದ್ದಿದೆ.

ಆಫ್ರಿಕಾದ ಲೆಂಗಾದಲ್ಲಿ ಜನಿಸಿದ್ದ ಬವುಮಾಗೆ 'ತೆಂಬಾ' ಎಂದು ಅವರ ಅಜ್ಜಿ ನಾಮಕರಣ ಮಾಡಿದ್ದರಂತೆ. ಝುಲು ಜನಾಂಗದಲ್ಲಿ ತೆಂಬಾ ಎಂದರೆ ಭರವಸೆ ಎಂಬ ಅರ್ಥ ಇದೆ. ಅದಕ್ಕೆ ತಕ್ಕಂತೆ ತೆಂಬಾ ತಮ್ಮ ಜೀವನದ ಯಾವುದೇ ಹಂತದಲ್ಲಿಯೂ ಎದೆಗುಂದಲಿಲ್ಲ. ಅದಕ್ಕಾಗಿಯೇ ಅವರು ತಮ್ಮ ಕನಸಿನ ಕ್ರೀಡಾಂಗಣ ಲಾರ್ಡ್ಸ್‌ನಲ್ಲಿ ಚಾಂಪಿಯನ್ ಕ್ಯಾಪ್ಟನ್ ಆಗಿ ಮೆರೆದರು.

ಫೈನಲ್‌ನಲ್ಲಿ ಶನಿವಾರ ಕೈಲ್ ವೆರೆಯೆನ್ ಅವರು ವಿಜಯದ ರನ್ ಪೂರೈಸುತ್ತಿದ್ದಂತೆಯೇ ಡ್ರೆಸಿಂಗ್ ರೂಮ್‌ನಲ್ಲಿದ್ದ ತೆಂಬಾ ತಮ್ಮ ಕೈಗಳಿಂದ ಮುಖ ಮುಚ್ಚಿಕೊಂಡರು. ಆರ್ದ್ರವಾಗಿದ್ದ ಕಂಗಳನ್ನು ಮುಚ್ಚಿಕೊಳ್ಳುವ ಪ್ರಯತ್ನ ಮಾಡಿದರು. ಸಹ ಆಟಗಾರರೆಲ್ಲರನ್ನೂ ಅವರನ್ನು ಸುತ್ತುವರಿದು ಅಪ್ಪಿಕೊಂಡರು. 27 ವರ್ಷದ ನಂತರ ದಕ್ಷಿಣ ಆಫ್ರಿಕಾ ತಂಡವನ್ನು ಐಸಿಸಿ ಟ್ರೋಫಿ ವಿಜಯದತ್ತ ಮುನ್ನಡೆಸಿದ್ದು ತೆಂಬಾ ಪಾಲಿಗೆ ಭಾವನಾತ್ಮಕವಾಗಿತ್ತು.

'ರೇನ್‌ಬೋ ನೇಷನ್' ಎಂದೇ ಖ್ಯಾತವಾಗಿರುವ ದಕ್ಷಿಣ ಆಫ್ರಿಕಾಕ್ಕೆ ಐಸಿಸಿ ಟ್ರೋಫಿ ಗೆದ್ದುಕೊಂಡ ಮೊದಲ ಕಪ್ಪುವರ್ಣೀಯ ನಾಯಕ ತೆಂಬಾ ಅವರು. 10 ಐಸಿಸಿ ಟ್ರೋಫಿಗಳನ್ನು ಗೆದ್ದಿರುವ ಬಲಿಷ್ಠ ಆಸ್ಟ್ರೇಲಿಯಾ ತಂಡವನ್ನು ಫೈನಲ್‌ನಲ್ಲಿ ಮಣಿಸಿದ್ದು ತೆಂಬಾ ಬಳಗದ ಮಹಾಸಾಧನೆಯೇ ಸರಿ. ಇದು ಕೇವಲ ಈ ತಂಡದ ಗೆಲುವಲ್ಲ. ದಕ್ಷಿಣ ಆಫ್ರಿಕಾದ ಕಪ್ಪುವರ್ಣೀಯರೆಲ್ಲ-ರಿಗೆ ಸಿಕ್ಕ ಜಯ. ಹಲವಾರು ವರ್ಷಗಳಿಂದ ವರ್ಣ ತಾರತಮ್ಯದ ಅವಮಾನ ಅನುಭವಿಸಿದ ಮನಗಳಿಗೆ ಚೈತನ್ಯ ತುಂಬುವ ಗೆಲುವು ಇದು. 'ಲಿಟ್ಲ್ ಬಿಗ್ ಮ್ಯಾನ್' ತೆಂಬಾ, ಲಾರ್ಡ್ಸ್‌ನ ಲಾಂಗ್ ರೂಮ್ ಮೂಲಕ ನಡೆದುಕೊಂಡು ಮೈದಾನಕ್ಕೆ ಪ್ರವೇಶಿಸಿದರು. ಚಿನ್ನದ ರಾಜದಂಡವನ್ನು ಪಡೆದು ಸಂಭ್ರಮಿಸಿದರು. ದಕ್ಷಿಣ ಆಫ್ರಿಕಾದ ಸಾಮಾಜಿಕ ಇತಿಹಾಸದ ಪುಟಗಳಲ್ಲಿ ತೆಂಬಾ, ಕಗಿಸೊ ರಬಾಡ ಮತ್ತು ಲುಂಗಿ ಎನ್‌ಗಿಡಿ ಅವರ ಹೆಸರು ಸುವರ್ಣಾಕ್ಷ-ರಗಳಲ್ಲಿ ಅಚ್ಚಾಗಲಿದೆ. ಅವರೊಂದಿಗೆ ಭಾರತೀಯ ಮೂಲದ ಕೇಶವ್ ಮಹಾರಾಜ, ಸೆನುರನ್ ಮುತ್ತುಸಾಮಿ, ದಕ್ಷಿಣ ಆಫ್ರಿಕಾದ ಶ್ವೇತವರ್ಣೀಯರಾದ ಏಡನ್ ಮರ್ಕರಂ, ಡೇವಿಡ್ ಬೆಡಿಂಗಂ ಮತ್ತು ಟ್ರಿಸ್ಟನ್ ಸ್ಟಬ್ಸ್ ಸಹ ಇತಿಹಾಸದ ಪುಟ ಸೇರಲಿದ್ದಾರೆ.

ಎಲ್ಲಕ್ಕಿಂತ ಮುಖ್ಯವಾಗಿ 5.4 ಅಡಿ ಎತ್ತರದ 'ವಾಮನಮೂರ್ತಿ' ತೆಂಬಾ ಅವರು ತಾವು ಕ್ರಿಕೆಟ್ ಆಟದಲ್ಲಿ ಯಶಸ್ವಿ ನಾಯಕ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಈ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವು ಮೊದಲ ಇನಿಂಗ್ಸ್‌ನಲ್ಲಿ ಹಿನ್ನಡೆ ಅನುಭವಿಸಿದ ನಂತರವೂ ಪುಟಿದೆದ್ದು ಗೆದ್ದಿದ್ದು ಅವರ ನಾಯಕತ್ವಕ್ಕೆ ಹಿಡಿದ ಕನ್ನಡಿಯಾಗಿದೆ.

### ವಿಜಯೋತ್ಸವ ಮಾರ್ಗಸೂಚಿ: ಬಿಸಿಸಿಐ ನಿರ್ಧಾರ

# ಮೂರು ಸದಸ್ಯರ ಸಮಿತಿ ರಚನೆ

**ನವದೆಹಲಿ (ಪಿಟಿಐ):** ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಐಪಿಎಲ್ ಪ್ರಶಸ್ತಿ ಜಯಿಸಿದ ಸಂಭ್ರಮಾಚರಣೆಯ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ್ದ ಕಾಲ್ತುಳಿತ ಪ್ರಕರಣದ ಕುರಿತು ಶನಿವಾರ ನಡೆದ ಬಿಸಿಸಿಐ ಅಪೆಕ್ಸ್ ಕೌನ್ಸಿಲ್ ಸಭೆಯಲ್ಲಿ ಚರ್ಚಿಸಲಾಯಿತು.

ಭವಿಷ್ಯದಲ್ಲಿ ಇಂತಹ ದುರ್ಘಟನೆಗಳು ಮರುಕಳಿಸದಂತೆ ಕ್ರಮವಹಿಸಲು ಮಾರ್ಗಸೂಚಿ ರೂಪಿಸುವ ನಿರ್ಧಾರ ಕೈಗೊಳ್ಳಲಾಯಿತು. ಅದಕ್ಕಾಗಿ ಬಿಸಿಸಿಐ ಕಾರ್ಯದರ್ಶಿ ದೇವಜೀತ್ ಸೈಕಿಯಾ ಅವರ ನೇತೃತ್ವದಲ್ಲಿ ಮೂವರು ಸದಸ್ಯರ ಸಮಿತಿಯನ್ನು ರಚಿಸಲಾಯಿತು.

'ಬೆಂಗಳೂರಿನಲ್ಲಿ ಸಂಭವಿಸಿದಂತಹ ದುರ್ಘಟನೆಗಳು ಮರುಕಳಿಸದಂತೆ ಕ್ರಮ-ವಹಿಸುವುದು ಅಗತ್ಯವಾಗಿದೆ. ಆದ್ದರಿಂದ ಒಂದು ಮಾರ್ಗಸೂಚಿ ರೂಪಿಸಲು ಸಮಿತಿಯನ್ನು ರಚಿಸಲಾಗಿದೆ' ಎಂದು ಬಿಸಿಸಿಐ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಜೂನ್ 4ರಂದು ಸಂಭವಿಸಿದ್ದ ಕಾಲ್ತುಳಿತದಲ್ಲಿ 11 ಅಭಿಮಾನಿಗಳು ಮೃತರಾಗಿದ್ದರು. 56 ಮಂದಿ ಗಾಯಗೊಂಡಿದ್ದರು.

**ಟಿ20 ಸೂಪರ್ ಲೀಗ್:** ಸೈಯದ್ ಮುಷ್ತಾದ್ ಅಲಿ ಟಿ20 ಕ್ರಿಕೆಟ್ ಟೂರ್ನಿಯ ಪ್ಲೇಟ್ ಗುಂಪಿನಲ್ಲಿ ಸೂಪರ್ ಲೀಗ್ ಜಾರಿ ಮಾಡಲಾಗುತ್ತಿದೆ. ಹೋದ ವರ್ಷದವರೆಗೂ ಕ್ವಾರ್ಟರ್‌ಫೈನಲ್, ಸೆಮಿಫೈನಲ್ ಮತ್ತು ಫೈನಲ್ ಹಂತದಲ್ಲಿ ನಾಕೌಟ್ ಪಂದ್ಯಗಳು ನಡೆದಿದ್ದವು. ಈಗ ಸೂಪರ್ ಲೀಗ್ ಮಾಡುವುದರಿಂದ 3 ಪಂದ್ಯಗಳು ಹೆಚ್ಚಾಗಲಿವೆ.

ಎ ಮತ್ತು ಬಿ ಗುಂಪಿನ ಅಗ್ರ ತಂಡಗಳು ಫೈನಲ್‌ನಲ್ಲಿ ಮುಖಾಮುಖಿಯಾಗಲಿವೆ. ಈ ಟೂರ್ನಿಯು ನವೆಂಬರ್ 26 ರಿಂದ ಡಿಸೆಂಬರ್ 18ರವರೆಗೆ ನಡೆಯಲಿದೆ.

### ರಣಜಿ ಟ್ರೋಫಿ ಮಾದರಿ ಪರಿಷ್ಕರಣೆ

ಅಕ್ಟೋಬರ್ 15ರಿಂದ ಫೆಬ್ರುವರಿ 28ರವರೆಗೆ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿ ನಡೆಯಲಿದೆ. ಈ ಸಲದ ಟೂರ್ನಿಯು ಎರಡು ಭಾಗಗಳಲ್ಲಿ ನಡೆಯಲಿದೆ. ಮೊದಲ ಹಂತವು ಅ.15 ರಿಂದ ನ.19ರವರೆಗೆ ನಡೆಯುವುದು. ಎರಡನೇಯದ್ದು ಜ.22ರಿಂದ ಫೆ.1 ರವರೆಗೆ ನಡೆಯಲಿದೆ. ನಾಕೌಟ್ ಹಂತವು ಫೆ.6 ರಿಂದ 28ರವರೆಗೆ ಆಯೋಜನೆಯಾಗಲಿದೆ.

ದುಲೀಪ್ ಟ್ರೋಫಿ ಟೂರ್ನಿಯನ್ನು ಮತ್ತೆ ವಲಯ ತಂಡಗಳ ಮಾದರಿಯಲ್ಲಿ ನಡೆಸಲಾಗುವುದು. ಆಗಸ್ಟ್ 28ರಿಂದ ಸೆಪ್ಟೆಂಬರ್ 15ರವರೆಗೆ ಟೂರ್ನಿ ನಡೆಯಲಿದೆ. ತಂಡಗಳನ್ನು ವಲಯ ಆಯ್ಕೆ ಸಮಿತಿಗಳು ಆಯ್ಕೆ ಮಾಡಲಿವೆ ಎಂದು ಬಿಸಿಸಿಐ ತಿಳಿಸಿದೆ. ಇರಾನಿ ಕಪ್ ಟೂರ್ನಿಯು ಅಕ್ಟೋಬರ್ 1 ರಿಂದ 5ರವರೆಗೆ ನಡೆಯುವುದು.

# ಬೌಂಡರಿ ಕ್ಯಾಚ್‌ಗಳಿಗೆ ಎಂಸಿಸಿ ಕಡಿವಾಣ

## ಬನಿ ಹಾಪ್ಸ್ ಕ್ಯಾಚ್ ಹೊಸ ನಿಯಮ ಇದೇ ತಿಂಗಳು ಜಾರಿ

**ಲಂಡನ್ (ಪಿಟಿಐ):** ಕ್ರಿಕೆಟ್‌ನಲ್ಲಿ ಬೌಂಡರಿ ಲೈನ್ ಕ್ಯಾಚ್‌ಗಳ ನಿಯಮವನ್ನು ಪರಿಷ್ಕರಿಸಲಾಗಿದೆ. ಬೌಂಡರಿಗೆರೆಯಾಚೆ ಚೆಂಡನ್ನು ಬಹುಸ್ಪರ್ಶದೊಂದಿಗೆ ಅಥವಾ ಬನಿ ಹಾಪ್ಸ್ ಮೂಲಕ ಕ್ಯಾಚ್ ಪಡೆಯುವುದು ನಿಯಮಬಾಹಿರ ಎಂದು ಮೆರಿಲ್‌ಬೋನ್ ಕ್ರಿಕೆಟ್ ಕ್ಲಬ್ (ಎಂಸಿಸಿ) ಹೇಳಿದೆ.

ಪರಿಷ್ಕೃತ ನಿಯಮವನ್ನು ಇದೇ ತಿಂಗಳು ಐಸಿಸಿ ಪ್ಲೇಯಿಂಗ್ ಕಂಡೀಷನ್ಸ್ ನಿಯಮಗಳಲ್ಲಿ ಸೇರಿಸಲಾಗುವುದು. ಮುಂದಿನ ವರ್ಷದ ಅಕ್ಟೋಬರ್‌ನಿಂದ ಪೂರ್ಣಪ್ರಮಾಣದಲ್ಲಿ ಜಾರಿಗೆ ತರಲಾಗುವುದು.

2023ರ ಬಿಗ್‌ಬ್ಯಾಷ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಮೈಕೆಲ್ ನೆಸೆರ್ ಪಡೆದಿದ್ದ ರೋಮಾಂಚನಕಾರಿ ಬೌಂಡರಿಲೈನ್ ಕ್ಯಾಚ್ ಮತ್ತು 2020ರಲ್ಲಿ ಟಾಮ್ ಬೆಂಟನ್ ಮತ್ತು ಮ್ಯಾಟ್ ರೆನ್‌ಶಾ ಅವರಿಬ್ಬರು ಸೇರಿ ಬೌಂಡರಿ ಗೆರೆಯ ಸಮೀಪ ಪಡೆದಿದ್ದ ಕ್ಯಾಚ್‌ಗಳನ್ನು ನಿಯಮಬದ್ಧವೆಂದು ಪರಿಗಣಿಸಲಾಗುವುದಿಲ್ಲ ಎಂದೂ ಎಂಸಿಸಿ ಹೇಳಿದೆ.

ಮೈಕೆಲ್ ನೇಸರ್ ಅವರು ಪಡೆದಿದ್ದ ಕ್ಯಾಚ್ ಸಾರ್ವಜನಿಕರಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿತ್ತು. ಬಿಬಿಎಲ್ ಟೂರ್ನಿಯಲ್ಲಿ ಬ್ರಿಸ್ಬೇನ್ ಹೀಟ್ ತಂಡದಲ್ಲಿ ಆಡುವ ಮೈಕೆಲ್ ಅವರು ಜೋರ್ಡಾನ್ ಸಿಲ್ಕ್ ಹೊಡೆದ ಚೆಂಡನ್ನು ಬೌಂಡರಿಯೊಳಗೇ ಕ್ಯಾಚ್ ಮಾಡುತ್ತಾರೆ. ಆದರೆ ಈ ಪ್ರಯತ್ನದಲ್ಲಿ ತಮ್ಮ ಓಟದ ವೇಗವನ್ನು ನಿಯಂತ್ರಿಸಲು ಅವರಿಗೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಬೌಂಡರಿಯ ಹಗ್ಗ ದಾಟುತ್ತಾರೆ. ಈ ಸಂದರ್ಭದಲ್ಲಿ ಚೆಂಡನ್ನು ಗಾಳಿಯಲ್ಲಿ ತೂರುತ್ತಾರೆ. ತಮ್ಮನ್ನು ನಿಯಂತ್ರಿಸಿಕೊಂಡು ಚೆಂಡನ್ನು ಹಿಡಿತಕ್ಕೆ ಪಡೆಯುತ್ತಾರೆ. ಆ ಹೊತ್ತಿನಲ್ಲಿ ಅವರು ಬೌಂಡರಿಗೆರೆ ಹೊರಗಿದ್ದರೂ ಗಾಳಿಯಲ್ಲಿ ನೆಗೆದಿರುತ್ತಾರೆ. ಅದೇ ಕ್ಷಣ ಚೆಂಡನ್ನು ಬೌಂಡರಿ ಗೆರೆಯೊಳಗೆ ಒಗೆದು ತಾವೂ ಜಿಗಿದು ಬಂದು ಕ್ಯಾಚ್ ಮಾಡುತ್ತಾರೆ. ಇದನ್ನು ಅಂಪೈರ್ ಔಟ್ ಎಂದು ಘೋಷಿಸುತ್ತಾರೆ. ಬ್ಯಾಟರ್ ನಿರ್ಗಮಿಸುತ್ತಾರೆ. ಆದರೆ ಸಾರ್ವಜನಿಕ ವಲಯದಲ್ಲಿ ಇದು 'ನ್ಯಾಯಸಮ್ಮತವಲ್ಲದ ಕ್ಯಾಚ್' ಎಂಬ ಚರ್ಚೆ ಆರಂಭವಾಗಿತ್ತು.

ಇದನ್ನು ಗಂಭೀರವಾಗಿ ಪರಿಗಣಿಸಿದ ಎಂಸಿಸಿ ಬಹಳಷ್ಟು ಚಿಂತನ, ಮಂಥನ ನಡೆಸಿತು. ಈಗ ಐಸಿಸಿ ಮತ್ತು ಎಂಸಿಸಿ ಸೇರಿ 19.5.2 ನಿಯಮಕ್ಕೆ ತಿದ್ದುಪಡಿ ಮಾಡಿದೆ.

'ಎಂಸಿಸಿಯು 'ಬನಿ ಹಾಪ್' ಎಂಬ ಹೊಸ ಪದಗಳನ್ನು ನೀಡಿದೆ. ಬೌಂಡರಿಯಾಚೆ ನೆಗೆದು ಚೆಂಡನ್ನು ಬಹುಸ್ಪರ್ಶ ಮಾಡುವುದನ್ನು ನಿಷೇಧಿಸಿದೆ. ಆದರೆ ಫೀಲ್ಡರ್ ಗಾಳಿಯಲ್ಲಿರುವ ಚೆಂಡನ್ನು ಬೌಂಡರಿಗೆರೆ ಮಿತಿಯೊಳಗೆ ತಳ್ಳಿದ ನಂತರ ಮತ್ತೆ ಡೈವ್ ಮಾಡಿ ಬಂದು ಕ್ಯಾಚ್ ಮಾಡುವುದನ್ನು ಪರಿಗಣಿಸಲಾಗುತ್ತದೆ. ಆದರೆ ಚೆಂಡು ಮತ್ತು ಫೀಲ್ಡರ್ ಇಬ್ಬರೂ ಬೌಂಡರಿ ಗೆರೆಯೊಳಗೆ ಇರಬೇಕು' ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ಪುರುಷರ ತಂಡಕ್ಕೆ 5ನೇ ಸೋಲು

**ಆ್ಯಂಟ್‌ವರ್ಪ್ (ಪಿಟಿಐ):** ಕೊನೆಯ ಕ್ಷಣದಲ್ಲಿ ಮತ್ತೆ ಎಡವಿದ ಭಾರತ ಪುರುಷರ ತಂಡವು ಎಫ್‌ಐಎಚ್ ಲೀಗ್ ಹಾಕಿ ಟೂರ್ನಿಯಲ್ಲಿ ಸತತ ಐದನೇ ಸೋಲು ಅನುಭವಿಸಿದೆ.

ಶನಿವಾರ ನಡೆದ ಯುರೋಪಿಯನ್ ಲೆಗ್‌ನ ಪಂದ್ಯದಲ್ಲಿ ಭಾರತ 2–3 ಗೋಲುಗಳಿಂದ ಆಸ್ಟ್ರೇಲಿಯಾ ವಿರುದ್ಧ ಮುಗ್ಗರಿಸಿದೆ. ಈಗಾಗಲೇ ಲೆಗ್‌ನಲ್ಲಿ ನೆದರ್ಲೆಂಡ್ಸ್ ಮತ್ತು ಅರ್ಜೆಂಟೀನಾ ವಿರುದ್ಧ ಭಾರತ ತಲಾ ಎರಡು ಪಂದ್ಯಗಳಲ್ಲಿ ಪರಾಭವಗೊಂಡಿದೆ.

ಅನುಭವಿ ಅಭಿಷೇಕ್ (8ನೇ ಮತ್ತು 35ನೇ ನಿಮಿಷ) ಗಳಿಸಿದ ಎರಡು ಗೋಲುಗಳ ನೆರವಿನಿಂದ ಭಾರತ ಒಂದು ಹಂತದಲ್ಲಿ 2–0 ಮುನ್ನಡೆ ಪಡೆದಿತ್ತು. ಆದರೆ, ನಂತರದಲ್ಲಿ ಆಸ್ಟ್ರೇಲಿಯಾದ ಆಟಗಾರರು ಪಾರಮ್ಯ ಮೆರೆದರು.



ಎರಡು ಗೋಲು ಗಳಿಸಿದ ಭಾರತದ ಆಟಗಾರ ಅಭಿಷೇಕ್

ನೇಥನ್ ಎಫ್ರಾಮ್ಸ್ (42ನೇ), ಜೋಯಲ್ ರಿಂತಲಾ (56ನೇ) ಟಾಮ್ ಕ್ರೇಗ್ (60ನೇ) ಗೋಲು ಗಳಿಸಿದರು. ಇದರಲ್ಲಿ ಕೊನೆಯ ಎರಡು ಗೋಲುಗಳು ಪೆನಾಲ್ಟಿ ಕಾರ್ನರ್‌ನಿಂದ ಲಭಿಸಿದವು.

### ಆಸ್ಟ್ರೇಲಿಯಾಕ್ಕೆ ಮಣಿದ ಮಹಿಳಾ ತಂಡ

**ಲಂಡನ್ (ಪಿಟಿಐ):** ಆಸ್ಟ್ರೇಲಿಯಾ ತಂಡಕ್ಕೆ ಮೂರು ಗೋಲುಗಳನ್ನು ಬಿಟ್ಟುಕೊಟ್ಟ ನಂತರ ದಿಟ್ಟ ಹೋರಾಟ ತೋರಿದ ಭಾರತದ ವನಿತೆಯರು ಶನಿವಾರ ನಡೆದ ಎಫ್‌ಐಎಚ್ ಪ್ರೊ ಲೀಗ್ ಲಂಡನ್ ಲೆಗ್‌ನ ಪಂದ್ಯದಲ್ಲಿ 2-3 ಗೋಲುಗಳಿಂದ ಪರಾಭವಗೊಂಡರು.

ಭಾರತದ ಪರ ದೀಪಿಕಾ (43ನೇ) ಮತ್ತು ನೇಹಾ (51ನೇ) ಗೋಲು ಗಳಿಸಿದರು. ಆಸ್ಟ್ರೇಲಿಯಾ ಪರ ಕೋರ್ಟ್ನಿ ಸ್ಕೋನೆಲ್ (16ನೇ ನಿಮಿಷ), ಲೆಕ್ಸಿ ಪಿಕರಿಂಗ್ (23ನೇ ನಿ.) ಮತ್ತು ಟ್ಯಾಟಂ ಸ್ಟೀವರ್ಟ್ (35ನೇ ನಿ.) ಗೋಲು ದಾಖಲಿಸಿದರು.



ಪ್ರಶಸ್ತಿಯೊಂದಿಗೆ ರಾಶಿ ವಿ.ರಾವ್ ಮತ್ತು ಸಾತ್ವಿಕ್ ಎಂ.

## ಟಿಟಿ: ಸಾತ್ವಿಕ್, ರಾಶಿ ಚಾಂಪಿಯನ್

**ಬೆಂಗಳೂರು:** ಸಾತ್ವಿಕ್ ಎಂ. ಮತ್ತು ರಾಶಿ ವಿ. ರಾವ್ ಅವರು ಕರ್ನಾಟಕ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ 15 ವರ್ಷದೊಳಗಿನವರ ಬಾಲಕರ ಮತ್ತು ಬಾಲಕಿಯರ ಸಿಂಗಲ್ಸ್ ಪ್ರಶಸ್ತಿ ಗೆದ್ದರು.

ನಗರದ ವಿ.ವಿ.ಪುರಂನ ಮ್ಯಾಚ್ ಪಾಯಿಂಟ್ ಅಕಾಡೆಮಿಯಲ್ಲಿ ನಡೆದ ಟೂರ್ನಿಯ ಬಾಲಕರ ಸಿಂಗಲ್ಸ್ ಫೈನಲ್ ಪಂದ್ಯದಲ್ಲಿ ಸಾತ್ವಿಕ್ 12-10, 9-11, 11-6, 10-12, 11-6 ರಿಂದ ಶ್ರೀರಾಮ್ ಕಿರಣ್ ಅವರನ್ನು ಮಣಿಸಿತು. ಸೆಮಿಫೈನಲ್‌ನಲ್ಲಿ ಸಾತ್ವಿಕ್ 11-3, 12-10, 11-8 ರಿಂದ ಆದ್ಯೋತ್ ಯು. ವಿರುದ್ಧ; ಶ್ರೀರಾಮ್ 11-9, 11-8, 11-9 ರಿಂದ ರೇಯಾನ್ಶ್ ಜಲನ್ ವಿರುದ್ಧ ಗೆಲುವು ಸಾಧಿಸಿದ್ದರು.

ಬಾಲಕಿಯರ ಫೈನಲ್‌ನಲ್ಲಿ ರಾಶಿ 11-8, 11-7, 11-6ರಿಂದ ಕ್ರಿಶಾ ಪಿ. ಕರ್ಕೇರ ಅವರನ್ನು ಮಣಿಸಿದರು. ಸೆಮಿಫೈನಲ್‌ನಲ್ಲಿ ರಾಶಿ 11-7, 11-9, 9-11, 11-3 ಸಾಕ್ಷ್ಯಾ ಸಂತೋಷ್ ಎದುರು; ಕ್ರಿಶಾ 11-8, 7-11, 11-9, 13-11ರಿಂದ ಲಕ್ಷ್ಮಿ ಆಶ್ರಿತಾ ಎದುರು ಜಯ ಸಾಧಿಸಿದ್ದರು.

ಎನ್‌ಎಂಎಸ್ ವಿಭಾಗದ ಫೈನಲ್‌ನಲ್ಲಿ ಕೆ.ಎಸ್. ಸಾಯಿ ಪ್ರಶಾಂತ್ ಪ್ರಶಸ್ತಿ ಗೆದ್ದರು. ಅವರು ಫೈನಲ್‌ನಲ್ಲಿ 11-6, 9-11, 12-10, 11-7ರಿಂದ ಗಣೇಶ್ ಹಿರೇಮಠ ಅವರನ್ನು ಸೋಲಿಸಿದರು.

## ಜಾಲಿ ಬ್ರದರ್ಸ್ ತಂಡಕ್ಕೆ ಜಯ

**ಬೆಂಗಳೂರು:** ಜಾಲಿ ಬ್ರದರ್ಸ್ ಎಫ್‌ಸಿ ತಂಡವು ಬಿಡಿಎಫ್‌ಎ ಸಿ ಡಿವಿಷನ್ ಫುಟ್‌ಬಾಲ್ ಲೀಗ್‌ನ ಪಂದ್ಯದಲ್ಲಿ 5-0ರಿಂದ ಬೆಂಗಳೂರು ಯಂಗ್‌ಸ್ಟರ್ಸ್ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಮತ್ತೊಂದು ಪಂದ್ಯದಲ್ಲಿ ರೋವರ್ಸ್ ಎಫ್‌ಸಿ 4–1ರಿಂದ ಬೆಂಗಳೂರು ರೆಡ್ಸ್ ಎಫ್‌ಸಿ ತಂಡವನ್ನು ಸೋಲಿಸಿತು. ಕೊಂಕಣ್ ಎಫ್‌ಸಿ 2–1ರಿಂದ ಬೆಂಗಳೂರು ವಾಂಡರರ್ಸ್ ಎಫ್‌ಸಿ ವಿರುದ್ಧ ಜಯ ಸಾಧಿಸಿತು. ಜೆ ಸ್ಪೋರ್ಟ್ಸ್ ಎಫ್‌ಸಿ 3–3ರಿಂದ ಅಗರಂ ಎಫ್‌ಸಿ ಜೊತೆ ಡ್ರಾ ಸಾಧಿಸಿತು.

### ಫಿಡೆ ವಿಶ್ವ ರ‍್ಯಾಪಿಡ್ ಟೀಂ ಚಾಂಪಿಯನ್‌ಷಿಪ್

# ಭಾರತದ ಎಂಜಿಡಿ ತಂಡಕ್ಕೆ ಪ್ರಶಸ್ತಿ

**ಲಂಡನ್ (ಪಿಟಿಐ):** ಗ್ರ್ಯಾಂಡ್‌ಮಾಸ್ಟರ್ ಅರ್ಜುನ್ ಇರಿಗೇಶಿ ಮತ್ತು ಪ್ರಣವ್ ಅವರು ಶನಿವಾರ ನಡೆದ ಮಹತ್ವದ ಪಂದ್ಯಗಳಲ್ಲಿ ಜಯಿಸಿದ್ದರಿಂದ ಎಂಜಿಡಿ 1 ತಂಡವು ಮೊದಲ ಬಾರಿಗೆ ಫಿಡೆ ವಿಶ್ವ ರ‍್ಯಾಪಿಡ್ ತಂಡ ಚಾಂಪಿಯನ್‌ಷಿಪ್ ಗೆದ್ದುಕೊಂಡಿತು. ಭಾರತದ ತಂಡವೊಂದರ ಚೊಚ್ಚಲ ಸಾಧನೆ ಇದಾಗಿದೆ.

ಆರನೇ ಶ್ರೇಯಾಂಕದ ಎಂಜಿಡಿ 1 ತಂಡವು ಮೂರು ದಿನಗಳಲ್ಲಿ ನಡೆದ 12 ಸುತ್ತುಗಳಲ್ಲಿ 10ರಲ್ಲಿ ಜಯಿಸಿತು. ಶುಕ್ರವಾರ ನಡೆದ ಸುತ್ತಿನಲ್ಲಿ ಟೀಮ್ ಹೆಕ್ಸಾಮೈಂಡ್ ಒಡ್ಡಿದ ಕಠಿಣ ಪೈಪೋಟಿಯನ್ನು ತಂಡವು ಮೀರಿ ನಿಂತಿತು. ಎರಡು ಆವೃತ್ತಿಗಳಲ್ಲಿ ಎಂಜಿಡಿ 1 ತಂಡವು ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದಿತ್ತು.

ಈ ಬಾರಿ ಉತ್ತಮವಾಗಿಯೇ ಅಭಿಯಾನ ಆರಂಭಿಸಿತ್ತು. ಆದರೆ ಈ ಹಾದಿಯಲ್ಲಿ ಟೀಮ್ ಫ್ರೀಡಂ ವಿರುದ್ಧದ ಸುತ್ತಿನಲ್ಲಿ ಡ್ರಾ ಮತ್ತು ಟೀಮ್ ಹೆಕ್ಸಾಮೈಂಡ್ ವಿರುದ್ಧ ಸೋತಿತ್ತು. ಇದರಿಂದಾಗಿ ಕೊನೆಯ ದಿನ ನೇರ ಗೆಲುವು ಅಗತ್ಯವಾಗಿತ್ತು. ಅದಕ್ಕೆ ತಕ್ಕಂತೆ ತಂಡವು ಉತ್ತಮ ರೀತಿಯಲ್ಲಿ ತನ್ನ ಸಾಮರ್ಥ್ಯ ಮೆರೆಯಿತು. ಅಂತಿಮ ದಿನದಂದು ಎಲ್ಲ ನಾಲ್ಕು ಸುತ್ತುಗಳನ್ನೂ ಗೆದ್ದು ಪ್ರಶಸ್ತಿ ಮುಡಿಗೇರಿಸಿಕೊಂಡಿತು.

ತಂಡದಲ್ಲಿ ಗ್ರ್ಯಾಂಡ್‌ಮಾಸ್ಟರ್ ಅರ್ಜುನ್ ಇರಿಗೇಶಿ, ಪೆಂಟ್ಯಾಲ ಹರಿಕೃಷ್ಣ, ಲಿಯೊನ್ ಮೆಂಡೋನ್ಸಾ, ಅಥರ್ವ ತಾಯಡೆ ಮತ್ತು ನಾಯಕ ಶ್ರೀನಾಥ್ ನಾರಾಯಣನ್ ಅವರಿದ್ದ ಎಂಜಿಡಿ1 ತಂಡವು ಅಂತಿಮ ಸುತ್ತಿನಲ್ಲಿ ಅಮೋಘ ಪ್ರದರ್ಶನ ನೀಡಿತು. ಅರ್ಜುನ್ ಮತ್ತು ಪ್ರಣವ್ ಅವರು ಮಾಲ್ಕಂ ಮೇಟ್ಸ್ ವಿರುದ್ಧ ಸಾಧಿಸಿದ ಗೆಲುವು ನಿರ್ಣಾಯಕವಾಯಿತು.



ಅರ್ಜುನ್ ಇರಿಗೇಶಿ

ಎಂಜಿಡಿ1 ತಂಡವು ಒಟ್ಟು 21 ಅಂಕಗಳನ್ನು ಗಳಿಸಿತು. ನಂತರದ ಸ್ಥಾನ ಪಡೆದ ಟೀಮ್ ಹೆಕ್ಸಾಮೈಂಡ್ 20 ಅಂಕ ಗಳಿಸಿತು. ವಿಶ್ವನಾಥನ್ ಆನಂದ್ ಅವರಿದ್ದ ಟೀಮ್ ಫ್ರೀಡಂ ತಂಡವು 17 ಅಂಕ ಗಳಿಸಿತು.

ಅಂತಿಮ ದಿನದಂದು ವಿಶ್ವ ರ‍್ಯಾಂಕ್‌ನಲ್ಲಿ ಮೂರನೇ ಸ್ಥಾನದಲ್ಲಿರುವ ಅರ್ಜುನ್ ಮಿಂಚಿದರು. ಅವರು ನಾಲ್ಕು ಸುತ್ತುಗಳಲ್ಲಿ 3.5 ಅಂಕಗಳನ್ನು ಪಡೆದರು. ಈ ಟೂರ್ನಿಯ ಎರಡನೇ ದಿನದಂದು ಅವರು ಕೇವಲ ಅರ್ಧ ಅಂಕ ಗಳಿಸಿದ್ದರು. ಆದರೆ ಕೊನೆಯ ದಿನ ಪುಟಿದೆದ್ದರು.

## ಅಂಧರ ಚೆಸ್: ಮುನ್ನಡೆಯಲ್ಲಿ ವಿಜಯ್, ರವಿಕಿರಣ್

**ಹೊಸಪೇಟೆ (ವಿಜಯನಗರ):** ಬೆಂಗಳೂರಿನ ಇ.ವಿಜಯ್ ಮತ್ತು ರವಿಕಿರಣ್ ಅವರು ಇಲ್ಲಿನ ಸೇವಿಯರ್ ಅಂಗವಿಕಲರ ಸೇವಾ ಸಮಿತಿಯು ರೋಟರಿ ಕ್ಲಬ್ ಸಹಯೋಗದಲ್ಲಿ ಹಮ್ಮಿಕೊಂಡಿರುವ ನಾಲ್ಕನೇ ರಾಜ್ಯಮಟ್ಟದ ವಿಜಯನಗರ ಕಪ್ ಅಂಧರ ಮುಕ್ತ ಚೆಸ್ ಟೂರ್ನಿಯ ಆರನೇ ಸುತ್ತಿನ ಬಳಿಕ ಶನಿವಾರ ತಲಾ 5.5 ಅಂಕದೊಂದಿಗೆ ಅಗ್ರಸ್ಥಾನದಲ್ಲಿದ್ದಾರೆ.

**ಫಲಿತಾಂಶ:** ಕೆ.ಮುನಿರಾಜು, ಬೆಂಗಳೂರು, ಎ.ಆರ್.ರಮೇಶ, ಬೆಂಗಳೂರು, ಕಿರಣ್ ಕುಮಾರ್ ಎ.ಸಿಂಪಿ, ಕಲಬುರ್ಗಿ, ಕೃಷ್ಣ ಉಡುಪ, ಶಿವಮೊಗ್ಗ, ಎನ್.ಎಂ.ಶಿವನಗೌಡ, ಧಾರವಾಡ, ಕೆ.ಎಂ. ಶಶಿಧರ, ಮೈಸೂರು, ಖಾದಿರ್ ಬವಸ್ ಕೊರಬು, ವಿಜಯಪುರ, ಕುಶಾಲ್ ರಾಮಣ್ಣ ಜಗಲಿ, ವಿಜಯಪುರ (ತಲಾ 5 ಅಂಕ). ಬಸಲಿಂಗಪ್ಪ ಮರಡ್ಡಿ, ಗದಗ, ಡಿ.ಎನ್ ಸಂತೋಷ್ ಕುಮಾರ್, ಹೊಸಪೇಟೆ (ತಲಾ 4.5 ಅಂಕ). ವೃತಿ ಜೈನ್, ಶಿವಮೊಗ್ಗ, ಕೆ.ಎಸ್.ನಾಗರಾಜ, ಮೈಸೂರು ನವೀನ್ ಮೆರ್ವಾಡೆ, ಗದಗ (ತಲಾ 4 ಅಂಕ).

### ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್: ಭಾರತಕ್ಕೆ ಒಟ್ಟು ನಾಲ್ಕು ಪದಕ

# ಆರ್ಯಾ–ಅರ್ಜುನ್ ಜೋಡಿಗೆ ಚಿನ್ನ

**ಮ್ಯೂನಿಕ್ (ಪಿಟಿಐ):** ಭಾರತದ ಆರ್ಯಾ ಬೊರಸೆ ಮತ್ತು ಅರ್ಜುನ್ ಬಬೂತಾ ಜೋಡಿಯು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್‌ನ 10 ಮೀಟರ್ಸ್ ಏರ್‌ರೈಫಲ್ ಮಿಶ್ರ ತಂಡ ವಿಭಾಗದಲ್ಲಿ ಚಿನ್ನದ ಪದಕ ಜಯಿಸಿತು.

ಶನಿವಾರ ನಡೆದ ಫೈನಲ್‌ನಲ್ಲಿ ಭಾರತದ ಜೋಡಿಯು ಒಲಿಂಪಿಕ್ ಚಾಂಪಿಯನ್ ಚೀನಾದ ಝ್ಯುಫಿ ವಾಂಗ್ ಮತ್ತು ಲಿಯಾವೊ ಶೆಂಗ್ ಅವರನ್ನು 17–7ರಿಂದ ಸೋಲಿಸಿತು.

ಆರ್ಯಾ ಮತ್ತು ಅರ್ಜುನ್ ಅವರು ಈ ಸ್ಪರ್ಧೆಯಲ್ಲಿ ಅಪಾರ ಆತ್ಮವಿಶ್ವಾಸದಲ್ಲಿದ್ದರು. ಅರ್ಹತಾ ಸುತ್ತಿನಲ್ಲಿ 635.2 ಅಂಕಗಳೊಂದಿಗೆ ಫೈನಲ್ ಪ್ರವೇಶಿಸಿತ್ತು. ಅರ್ಹತಾ ಸುತ್ತಿನಲ್ಲಿ ಚೀನಾದ ಜೋಡಿಯು (635.9) ಭಾರತಕ್ಕಿಂತ 0.7 ಅಂತರದಿಂದ ಮುಂದಿತ್ತು. ಇದು ವಿಶ್ವಕಪ್ ಕ್ವಾಲಿಫಿಕೇಷನ್ ದಾಖಲೆಯೂ ಆಗಿದೆ.

ಈಚೆಗೆ ಪೆರುವಿನಲ್ಲಿ ನಡೆದಿದ್ದ ವಿಶ್ವಕಪ್ ಶೂಟಿಂಗ್‌ನ 10 ಮೀ. ಏರ್ ರೈಫಲ್ ಮಿಶ್ರ ತಂಡ ವಿಭಾಗದಲ್ಲಿ ಆರ್ಯಾ ಅವರು ರುದ್ರಾಂಕ್ಷ್ ಪಾಟೀಲ ಅವರೊಂದಿಗೆ ಬೆಳ್ಳಿ ಪದಕ ಜಯಿಸಿದ್ದರು.

### ಮುಖ್ಯಾಂಶಗಳು

- ಒಲಿಂಪಿಕ್ ಚಾಂಪಿಯನ್ ಜೋಡಿಗೆ ಆಘಾತ
- ಭಾರತದ ಶೂಟರ್‌ಗಳಿಗೆ 17–7 ಅಂತರದ ಜಯ
- ಕ್ವಾಲಿಫಿಕೇಷನ್ ದಾಖಲೆ ಬರೆದ ಚೀನಾದ ಜೋಡಿ

ಇದೇ ಸ್ಪರ್ಧೆಯಲ್ಲಿದ್ದ ಭಾರತದ ಇಳವೇನಿಲ್ ವಾಳರಿವನ್ ಮತ್ತು ಅಂಕುಶ್ ಜಾಧವ್ ಜೋಡಿಯು ಅರ್ಹತಾ ಸುತ್ತಿನಲ್ಲಿ 631.8 ಅಂಕಗಳನ್ನು ಕಲೆಹಾಕಿ ಆರನೇ ಸ್ಥಾನ ಪಡೆಯಿತು.

ನಾರ್ವೆಯ ಜೀನೆಟ್ ಹೆಗ್ ಡ್ಯೂಸ್ಟಾಡ್ ಮತ್ತು ಜಾನ್ ಹರ್ಮನ್ ಹೆಗ್ ಜೋಡಿಯು ಕಂಚಿನ ಪದಕ ಜಯಿಸಿತು. ಈ ಜೋಡಿಯು 16–14ರಿಂದ ಅಮೆರಿಕದ ಸೇಗನ್ ಮ್ಯಾಡಲಿನಾ ಮತ್ತು ಪೀಟರ್ ಮ್ಯಾಥ್ಯೂ ಫಿಯೊರಿ ವಿರುದ್ಧ ಗೆದ್ದಿತು.

ಈ ವಿಶ್ವಕಪ್‌ನಲ್ಲಿ ಭಾರತಕ್ಕೆ ಒಲಿದ ಎರಡನೇ ಚಿನ್ನ ಇದಾಗಿದೆ. ಇದರೊಂದಿಗೆ ಒಟ್ಟು ನಾಲ್ಕು ಪದಕಗಳನ್ನು ಗೆದ್ದಿದೆ. ಸಿಫ್ಟ್ ಕೌರ್ ಮತ್ತು ಇಳವೇನಿಲ್ ಅವರು ವೈಯಕ್ತಿಕ ವಿಭಾಗದಲ್ಲಿ ಕಂಚಿನ ಪದಕ ಜಯಿಸಿದ್ದರು.



ಆರ್ಯಾ ಬೊರಸೆ ಮತ್ತು ಅರ್ಜುನ್ ಬಬೂತಾ ಎಕ್ಸ್ ಚಿತ್ರ

ಭಾನುವಾರ, ಜೂನ್ 15, 2025 ₹ 7.00
www.prajavani.net
prajavani.net prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

**ಎಎಸ್‌ಐಗೆ ಒತ್ತಾಯ**

ಪುರಿ ಜಗನ್ನಾಥ ದೇವಾಲಯದ ರತ್ನ ಭಂಡಾರದ ದುರಸ್ತಿ ಕೆಲಸ ಜೂನ್ 27ಕ್ಕೂ ಮುನ್ನ ಪೂರ್ಣಗೊಳಿಸುವಂತೆ ದೇವಾಲಯದ ಆಡಳಿತ ಮಂಡಳಿ ಎಎಸ್‌ಐಗೆ ಒತ್ತಾಯಿಸಿದೆ

**ಓದುಗರ ಗಮನಕ್ಕೆ**

ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ..





# ರಾಜ್ಯದಲ್ಲಿ ವಿದೇಶಿ ಹಣ್ಣುಗಳ ದಿಬ್ಬಣ



## ಬೆಳೆಗಾರರಿಗೆ ಬೇಕಿದೆ ಮಾರ್ಗದರ್ಶನ

• ನಡೆಯಬೇಕಿದೆ ಸಂಶೋಧನೆ, ಮಾರುಕಟ್ಟೆ ಅಧ್ಯಯನ

• ಗಾಣಧಾಳು ಶ್ರೀಕಂಠ

ಬೆಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಸುಬ್ರಹ್ಮಣ್ಯ, ಬೆಳ್ತಂಗಡಿ ಭಾಗದಲ್ಲಿ ಸುತ್ತಾಡುತ್ತಿದ್ದರೆ ತೆಂಗು–ಅಡಿಕೆ ತೋಟಗಳ ನಡುವೆ ಬಿಳಿ ಬಲೆಗಳನ್ನು ಹೊದ್ದ ಮರಗಳ ದರ್ಶನವಾಗುತ್ತದೆ. ಅವೆಲ್ಲ ರಂಬುಟಾನ್ ಹಣ್ಣಿನ ತೋಟಗಳು. ಹಣ್ಣುಗಳನ್ನು ಪಕ್ಷಿಗಳಿಂದ ರಕ್ಷಿಸಲು ಮರಗಳಿಗೆ ಹೊದಿಸಿರುವ ಬಲೆಗಳು..!

ವಿಜಯನಗರ, ಚಿಕ್ಕಬಳ್ಳಾಪುರ, ತುಮಕೂರು ಜಿಲ್ಲೆಗಳ ಕೆಲ ಊರುಗಳಲ್ಲಿ ಕೃಷಿ ಜಮೀನುಗಳತ್ತ ಅಡ್ಡಾಡುತ್ತಿದ್ದರೆ, ಎಕರೆಗಟ್ಟಲೆ ಸಾಲು ಕಂಬಗಳ ಮೇಲೆ ಕಳ್ಳಿಯಂತಹ ಬಳಿಗಳು ಜೋತುಬಿದ್ದು, ಮುಳ್ಳಿನ ಆಕಾರದ ಕೆಂಪು, ಬಿಳಿ ಹಣ್ಣುಗಳು ಜೋತಾಡುತ್ತಿರುತ್ತವೆ. ಅವೆಲ್ಲ ಡ್ರ್ಯಾಗನ್ ಫ್ರೂಟ್ ಬೆಳೆಯುವ ಜಮೀನುಗಳು..!

ಕೊಡಗಿನ ಕಾಫಿ ತೋಟಗಳು, ಹಾಸನ, ಶಿವಮೊಗ್ಗ, ದೊಡ್ಡಬಳ್ಳಾಪುರದ ಭಾಗದ ತೆಂಗಿನ ತೋಟಗಳ ಸಾಲಿನಲ್ಲಿ ಹಸಿರು ಲೋಲಾಕಿನಂತಹ ಕಾಯಿಗಳು ತೊನೆದಾಡುವ ಮರಗಳ ಸಾಲು ಇಣುಕುತ್ತವೆ. ಅವೆಲ್ಲ ಅವಕಾಡೊ ಅರ್ಥಾತ್ ಬೆಣ್ಣೆಹಣ್ಣಿನ (ಬಟರ್‌ಫ್ರೂಟ್) ತೋಟಗಳು !

ಮೂರ್ನಾಲ್ಕು ದಶಕಗಳಿಂದಲೂ ರಾಜ್ಯದ ವಿವಿಧೆಡೆ ಹವ್ಯಾಸಕ್ಕಾಗಿ ವಿದೇಶಿ ಹಣ್ಣುಗಳನ್ನು ಬೆಳೆಯಲಾಗುತ್ತಿದೆ. ಈಗಲೂ ಹವ್ಯಾಸಿ ಬೆಳೆಗಾರರ ತೋಟಗಳಲ್ಲಿ 250ಕ್ಕೂ ಹೆಚ್ಚು ವಿಧದ ವಿದೇಶಿ ಹಣ್ಣುಗಳಿವೆ. ಈ ಹಣ್ಣುಗಳ ದಿಬ್ಬಣದಲ್ಲಿ ಮಲೇಷ್ಯಾದ ರಂಬುಟಾನ್, ದುರಿಯನ್, ಮೆಕ್ಸಿಕೊ ದೇಶದ ಡ್ರ್ಯಾಗನ್ ಫ್ರೂಟ್, ಅವಕಾಡೊ, ಥಾಯ್ಲೆಂಡ್‌ನ ಮ್ಯಾಂಗೊಸ್ಟಿನ್, ಬ್ರೆಜಿಲ್–ಪೆರುವಿನ ಅಬಿಯು, ಫ್ರಾನ್ಸ್‌ನ ಮೆಕೆಡೊನಿಯಾ, ಗ್ರ್ಯಾಕ್ ಫ್ರೂಟ್, ಮಿಲ್ಕಿ ಫ್ರೂಟ್, ಲಾಂಗ್‌ಆನ್‌ನಂತಹ ಹಣ್ಣುಗಳು ಸೇರಿಕೊಂಡಿವೆ. ಇದರಲ್ಲಿ ನಾಲ್ಕೈದು ಹಣ್ಣುಗಳನ್ನು ಸಾವಿರಾರು ಎಕರೆಗಳಲ್ಲಿ ಬೆಳೆಯಲಾಗುತ್ತಿದ್ದು, ಕೋಟಿಗಳ ಲೆಕ್ಕದಲ್ಲಿ ವ್ಯಾಪಾರ ವಹಿವಾಟು ನಡೆಯುತ್ತಿದೆ. .



ದುರಿಯನ್



ಅಬಿಯು

### ಪರ್ಯಾಯ ಬೆಳೆಗಳಾಗಿ..

ದಾಳಿಂಬೆಯಲ್ಲಿ ಸೋತ ಹಗರಿಬೊಮ್ಮನಹಳ್ಳಿಯ ಕೆಲ ರೈತರು ಡ್ರ್ಯಾಗನ್ ಫ್ರೂಟ್ ಬೆಳೆಯುತ್ತಿದ್ದಾರೆ. ಬೇಡಿಕೆ, ಬೆಲೆ ಗಮನಿಸಿ ದಕ್ಷಿಣ ಕನ್ನಡ, ಕೊಡಗು, ಮಲೆನಾಡಿನ ಕೆಲ ಭಾಗಗಳಲ್ಲಿ ಅಡಿಕೆ, ತೆಂಗಿನ ತೋಟಗಳ ನಡುವೆ ಅಂತರ ಬೆಳೆಯಾಗಿ ರಂಬುಟಾನ್, ಮ್ಯಾಂಗೊಸ್ಟಿನ್ ಬೆಳೆಯಲು ಆರಂಭಿಸಿದ್ದಾರೆ. ಸುಲಭವಾಗಿ ಬೆಳೆಯುತ್ತದೆ, ಮಾರುಕಟ್ಟೆಯೂ ಚೆನ್ನಾಗಿದೆ ಎನ್ನುತ್ತಾ ರಾಜ್ಯದ ಹಲವು ಜಿಲ್ಲೆಗಳಲ್ಲಿ ನೂರಾರು ರೈತರು ತೆಂಗಿನ ನಡುವೆ ಅಂತರ ಬೆಳೆಯಾಗಿ ಬೆಣ್ಣೆಹಣ್ಣು ಬೆಳೆಯುತ್ತಿದ್ದಾರೆ.

ಕೃಷಿ, ತೋಟಗಾರಿಕೆಯಲ್ಲಿ ಅಷ್ಟಾಗಿ ಅನುಭವವಿಲ್ಲದವರು ವಿದೇಶಿ ಹಣ್ಣುಗಳ ಬೆಳೆಯುವ ಸಾಹಸಕ್ಕಿಳಿದಿದ್ದಾರೆ. ಕಾರ್ಪೊರೇಟ್ ಉದ್ಯೋಗ ತೊರೆದು ಈ ಹಣ್ಣಿನ ಕೃಷಿಗೆ ಏರಿದವರಿದ್ದಾರೆ. ದೂರದ ನಗರಗಳಲ್ಲಿದ್ದುಕೊಂಡೇ ತಮ್ಮ ತಮ್ಮ ಹಳ್ಳಿಗಳಲ್ಲಿ ವಾರಾಂತ್ಯದ ಕೃಷಿ ಮೂಲಕ, ವೈಜ್ಞಾನಿಕವಾಗಿ, ಶಿಸ್ತುಬದ್ಧವಾಗಿ ಈ ಹಣ್ಣುಗಳ ಕೃಷಿ ಮಾಡುವವರೂ ಇದ್ದಾರೆ.

ಒಂದು ಅಂದಾಜಿನ ಪ್ರಕಾರ ರಾಜ್ಯದಲ್ಲಿ 12 ಸಾವಿರದಿಂದ 13 ಸಾವಿರ ಎಕರೆ ಪ್ರದೇಶದಲ್ಲಿ ವಿದೇಶಿ ಹಣ್ಣುಗಳನ್ನು ವಾಣಿಜ್ಯವಾಗಿ ಬೆಳೆಯುತ್ತಿದ್ದಾರೆ. ಇದು ಲೆಕ್ಕಕ್ಕೆ ಸಿಕ್ಕಿರುವುದು. ಇದಕ್ಕಿಂತೆ ಹೆಚ್ಚಿನ ಪ್ರಮಾಣದಲ್ಲಿದೆ ಎಂದು ಹೇಳಲಾಗುತ್ತಿದೆ. ಇದರಲ್ಲಿ ಡ್ರ್ಯಾಗನ್ ಫ್ರೂಟ್ ಹಣ್ಣಿನದ್ದು ಸಿಂಹಪಾಲು. ನಂತರದ ಸ್ಥಾನ ಅವಕಾಡೊ ಹಣ್ಣಿಗೆ.

ರಾಜ್ಯದಲ್ಲಿ ಸುಮಾರು ಆರು ಸಾವಿರ ಎಕರೆಯಷ್ಟು ಡ್ರ್ಯಾಗನ್ ಫ್ರೂಟ್ ಕೃಷಿಯಿದೆ. ಐದು ಸಾವಿರ ಎಕರೆಯಲ್ಲಿ ಅವಕಾಡೊ, ಮೂರು ಸಾವಿರ ಎಕರೆ ರಂಬುಟಾನ್, ಮ್ಯಾಂಗೊಸ್ಟಿನ್ ಇದೆ. ದುರಿಯನ್, ಲಿಚಿ, ಸ್ಟ್ರಾಬೆರಿ, ಮೆಕೆಡೆಮಿಯಾ, ಅಬಿಯು ಮತ್ತಿತರರ ವಿದೇಶಿ ಹಣ್ಣುಗಳು ಸೇರಿ 2 ಸಾವಿರ ಎಕರೆ ಇರಬಹುದೆಂದು ಬೆಳೆಗಾರರು, ವಿಜ್ಞಾನಿಗಳು ಅಂದಾಜಿಸುತ್ತಾರೆ. ಆದರೆ ತೋಟಗಾರಿಕೆ ಇಲಾಖೆಯ ಅಂಕಿ ಅಂಶಗಳಲ್ಲಿ ವಿದೇಶಿ ಹಣ್ಣುಗಳ ಮಾಹಿತಿಗೂ ವಾಸ್ತವವಾಗಿರುವುದಕ್ಕೂ ಅಜಗಜಾಂತರವಿದೆ.

## ಸಮಸ್ಯೆ, ಸವಾಲು, ಪರಿಹಾರ



ಅವಕಾಡೊ (ಬೆಣ್ಣೆ ಹಣ್ಣು)

ವಿದೇಶಿ ಹಣ್ಣುಗಳನ್ನು ರುಚಿಗಿಂತ, ಆರೋಗ್ಯದ ಕಾಳಜಿಗಾಗಿ ತಿನ್ನುವವರ ಸಂಖ್ಯೆ ಹೆಚ್ಚಿದೆ. ಆರೋಗ್ಯದ ಕಾಳಜಿ ಹೆಚ್ಚುತ್ತಿರುವಂತೆ ಈ ಹಣ್ಣುಗಳು ಸೂಪರ್‌ಫುಡ್‌ಗಳಾಗಿವೆ. ಬೇಡಿಕೆ, ಬೆಲೆಯೂ ಹೆಚ್ಚಾಗಿ, ಬೆಳೆಯುವ ಪ್ರಮಾಣ ವಿಸ್ತಾರವಾಗುತ್ತಿದೆ.

ಬೆಳೆ ಪ್ರಮಾಣ ವಿಸ್ತಾರವಾಗುತ್ತಿರುವಂತೆ, ಹಣ್ಣುಗಳ ಕೃಷಿಯಲ್ಲಿ ಸಮಸ್ಯೆಗಳೂ ಎದುರಾಗುತ್ತಿವೆ. ಕೆಲವು ರೈತರಿಗೆ ಇದು ಸವಾಲಾಗಿದೆ.

ರಂಬುಟಾನ್ ಹಣ್ಣುಗಳಿಗೆ ಹಕ್ಕಿಗಳ ಕಾಟ. ಎರಡು ವರ್ಷಗಳಿಂದ ಗಿಡಗಳಿಂದ ರಾಶಿ ರಾಶಿ ಹಣ್ಣುಗಳು ಉದುರುತ್ತಿವೆ. ಕಾರಣ ಏನು ಅಂತ ತಿಳಿಯುತ್ತಿಲ್ಲ. ಪರಿಹಾರ ನೀಡುವವರಿಲ್ಲ ಎಂದು ಕೃಷಿಕರಾದ ಜಾಕೋಬ್, ಸುಧೀರ್ ಸೇರಿದಂತೆ ಹಲವು ಬೆಳೆಗಾರರು ಹೇಳಿದರು. 'ಪರಿಹಾರಕ್ಕಾಗಿ ತೋಟಗಾರಿಕೆ ಸಂಶೋಧನೆ ಕೇಂದ್ರವೊಂದಕ್ಕೆ ಕರೆ ಮಾಡಿದರೆ ವಿಜ್ಞಾನಿಗಳು ಸರಿಯಾಗಿ ಸ್ಪಂದಿಸಲಿಲ್ಲ' ಎಂದು ಬೆಳೆಗಾರರೊಬ್ಬರು ಬೇಸರಿಸಿದರು. ಡ್ರ್ಯಾಗನ್‌ಫ್ರೂಟ್ ಕೃಷಿಯಲ್ಲಿ ಕೆಲವರಿಗೆ ಮಾರುಕಟ್ಟೆ ಸಮಸ್ಯೆ ಎದುರಾದರೆ, ಹಲವರಿಗೆ ತಳಿಗಳ ಆಯ್ಕೆಯ ಸಮಸ್ಯೆಯಾಗಿದೆ. ಒಂದೇ ಬಾರಿಗೆ ಮಾರುಕಟ್ಟೆಗೆ ಹಣ್ಣುಗಳು ಪ್ರವೇಶಿಸಿ, ಬೆಲೆ ಕುಸಿತದ ಬಿಸಿ ಕಂಡವರೂ ಇದ್ದಾರೆ. ನಿರೀಕ್ಷಿತ ಬೆಲೆ ಸಿಗದೇ ಹತಾಶೆಯಿಂದ ಬೆಳೆ ತೆಗೆದವರೂ ಇದ್ದಾರೆ. ಬಟರ್‌ಫ್ರೂಟ್ ವಿಷಯದಲ್ಲೂ ತಮ್ಮ ಪ್ರದೇಶಕ್ಕೆ ಯಾವುದು ಸೂಕ್ತ ತಳಿ ಎಂದು ತಿಳಿಯದೇ ಬೆಳೆದು ಸಮಸ್ಯೆ ಎದುರಿಸುತ್ತಿದ್ದಾರೆ. ಇವು ನೈಜ ಸವಾಲುಗಳು.

ಹೊಸ ಬೆಳೆಗಳ ಪ್ರದೇಶ ವಿಸ್ತರಣೆಯಾಗುತ್ತಿರುವ ಈ ಹಂತದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರದ ಇಲಾಖೆಗಳು, ಸಂಶೋಧನಾ ಕೇಂದ್ರಗಳು ವಿದೇಶಿ ಹಣ್ಣುಗಳ ಕೃಷಿಯ ಅಧ್ಯಯನ ಮಾಡಿ, ನಮ್ಮ ವಾತಾವರಣದಲ್ಲಿ ಅವುಗಳನ್ನು ಬೆಳೆಯಬಹುದಾದ ಅವಕಾಶ, ಸಾಮರ್ಥ್ಯ, ದೌರ್ಬಲ್ಯ, ಹಣ್ಣುಗಳ ಮಾರುಕಟ್ಟೆ ಸಾಧ್ಯತೆ ಬಗ್ಗೆಯೂ ಜನರಲ್ಲಿ ಅರಿವು ಮೂಡಿಸುವುದು ಅಗತ್ಯವಾಗಿದೆ. ಇಲ್ಲದಿದ್ದರೆ, ಮತ್ತೊಂದು ವೆನಿಲ್ಲಾ, ಅಗರ್‌ವುಡ್ ದುರಂತವನ್ನು ನೋಡಬೇಕಾಗುತ್ತದೆ ಎಂದು ಎಚ್ಚರಿಸುತ್ತಾರೆ ನಿವೃತ್ತ ತೋಟಗಾರಿಕೆ ಅಧಿಕಾರಿ ಮತ್ತು ಬೆಳವಲ ಫೌಂಡೇಷನ್‌ನ ಕೆ.ರಾಮಕೃಷ್ಣಪ್ಪ.



**ವಿದೇಶಿ ಹಣ್ಣಿನ ಬೆಳೆ ಬೆಳೆಯಲು ತೋಟಗಾರಿಕೆ ಇಲಾಖೆ ಪ್ರೋತ್ಸಾಹಿಸುತ್ತಿದೆ. ರಾಷ್ಟ್ರೀಯ ತೋಟಗಾರಿಕೆ ಮಿಷನ್ (ಎನ್‌ಎಚ್‌ಎಂ) ಅಡಿ ಬೆಂಬಲ ನೀಡುತ್ತಿದೆ. ರೈತ ಉತ್ಪಾದಕ ಸಂಸ್ಥೆಗಳ ಮೂಲಕ ಮಾರುಕಟ್ಟೆಗೂ ನೆರವಾಗುತ್ತಿದೆ.**

–**ಕೆ.ಬಿ.ದುಂಡಿ,** ಹೆಚ್ಚುವರಿ ನಿರ್ದೇಶಕರು(ಹಣ್ಣು ವಿಭಾಗ), ತೋಟಗಾರಿಕೆ ಇಲಾಖೆ, ಬೆಂಗಳೂರು.

### ವ್ಯಾಪಕವಾದ ಡ್ರ್ಯಾಗನ್ ಫ್ರೂಟ್

ನಾಟಿ ಮಾಡಿದ ಒಂದು ವರ್ಷದೊಳಗೆ ಫಸಲು ನೀಡುವ ಡ್ರ್ಯಾಗನ್‌ಫ್ರೂಟ್‌ಹಣ್ಣಿನ ಬೆಳೆ, ಬೀದರ್‌ನಿಂದ ಚಾಮರಾಜನಗರದವರೆಗೂ (ಮಲೆನಾಡು ಕರಾವಳಿ ಹೊರತುಪಡಿಸಿ) ವಿಸ್ತರಿಸಿ ಕೊಂಡಿದೆ. 'ಕೆಫಾ'ದ 600 ಸದಸ್ಯರು 3 ಸಾವಿರ ಎಕರೆಯಲ್ಲಿ ಈ ಹಣ್ಣಿನ ಕೃಷಿ ಮಾಡುತ್ತಿದ್ದಾರೆ. ಕೆಲವರು ಆಫ್ ಸೀಸನ್‌ನಲ್ಲಿ ಕೃತಕ ಬೆಳಕಿನಲ್ಲಿ (ಲೈಟ್) ಡ್ರ್ಯಾಗನ್ ಫ್ರೂಟ್ ಕೃಷಿ ಮಾಡುತ್ತಿದ್ದಾರೆ. 'ಈ ವರ್ಷ ಈ ಹಣ್ಣಿನ ಕೃಷಿ ಇನ್ನಷ್ಟು ವಿಸ್ತರಿಸುವ ಸಾಧ್ಯತೆ ಇದೆ. ಉತ್ಪಾದನೆ ಪ್ರಮಾಣವೂ 50 ಸಾವಿರ ಟನ್ ದಾಟಬಹುದು' ಎಂದು ಅಂದಾಜಿಸುತ್ತಾರೆ ಮುಂಡರಗಿಯ ಮನ್ನೆ ವೇಣುಗೋಪಾಲಕೃಷ್ಣ. ಇವರು 10 ವರ್ಷಗಳಿಂದ 7 ಎಕರೆಯಲ್ಲಿ ಡ್ರ್ಯಾಗನ್ ಫ್ರೂಟ್ ಬೆಳೆಯುತ್ತಿದ್ದಾರೆ. ಜೊತೆಗೆ ಬೇರೆ ಬೇರೆ ವಿದೇಶಿ ಹಣ್ಣುಗಳ ಕೃಷಿ ಮಾಡುತ್ತಿದ್ದಾರೆ.

'ಎಕರೆಗೆ ನಾಲ್ಕೈದು ಲಕ್ಷ ರೂಪಾಯಿ ಬಂಡವಾಳದೊಂದಿಗೆ ಕೃಷಿ ಆರಂಭಿಸಿದರೆ, ಎರಡನೇ ವರ್ಷದಿಂದ ಫಸಲು ಆರಂಭ. ಸಮರ್ಪಕ ನಿರ್ವಹಣೆ ಇದ್ದರೆ ಪ್ರತಿ ವರ್ಷ ಗರಿಷ್ಠ 20 ಟನ್‌ವರೆಗೂ ಇಳುವರಿ ಪಡೆಯಬಹುದು' ಎನ್ನುವುದು ವಿದೇಶಿ ಹಣ್ಣುಗಳ ಬೆಳೆಗಾರ ಬೆಂಗಳೂರಿನ ಅರುಣ್ ಮಾತು. ಇವರು ಚಿತ್ರದುರ್ಗ ಜಿಲ್ಲೆ ಹಿರಿಯೂರು ಸಮೀಪ 15 ಎಕರೆಯಲ್ಲಿ ಡ್ರ್ಯಾಗನ್ ಫ್ರೂಟ್ ಬೆಳೆದಿದ್ದಾರೆ. ನಾಲ್ಕು ವರ್ಷಗಳಿಂದ ಫಸಲು ಪಡೆದು ಮಾರ್ಕೆಟ್‌ಮಾಡುತ್ತಿದ್ದಾರೆ.

ಕೆ.ಜಿ. ಹಣ್ಣಿಗೆ ₹80ರಿಂದ ₹150ರವರೆಗೂ ಬೆಲೆ ಇರುತ್ತದೆ. ಸೀಸನ್‌ನಲ್ಲಿ ₹220 ರವರೆಗೂ ಹೋಗುತ್ತದೆ. ಗಾತ್ರ, ಗುಣಮಟ್ಟ, ಸೀಸನ್‌ಗೆ ಅನುಗುಣವಾಗಿ ಬೆಲೆ ಏರಿಳಿತ ಸಾಮಾನ್ಯ ಎನ್ನುತ್ತಾರೆ ಬೆಳೆಗಾರರು.

ಹೆಸರಘಟ್ಟದ ಐಐಎಚ್‌ಆರ್‌ನ ವಿಜ್ಞಾನಿ ಡಾ. ಜಿ. ಕರುಣಾಕರನ್, ಡ್ರ್ಯಾಗನ್ ಫ್ರೂಟ್ ಬೆಳೆಯುವ ರೈತರಿಗೆ ಮಾರ್ಗದರ್ಶನ ನೀಡುತ್ತಿದ್ದಾರೆ 'ಐಐಎಚ್‌ಆರ್‌ನಲ್ಲಿ ಡ್ರ್ಯಾಗನ್ ಫ್ರೂಟ್ ಮೌಲ್ಯರ್ಧಿಸಿ ಜ್ಯೂಸ್, ಜ್ಯಾಮ್, ಪುಡಿಗಳನ್ನು ತಯಾರಿಸಲಾಗುತ್ತಿದೆ. ಈ ತಂತ್ರಜ್ಞಾನವನ್ನು ಆಸಕ್ತ ರೈತರಿಗೆ ನೀಡಲಾಗುತ್ತಿದೆ' ಎಂದು ಅವರು ಹೇಳಿದರು.






ಸುಧೀರ್ ಅವರು ಕಾಫಿ ಬೆಳೆ ನಡುವೆ ಬೆಳೆದ ಮ್ಯಾಂಗೊಸ್ಟಿನ್

### ವಿಸ್ತರಿಸುತ್ತಿದೆ ರಂಬುಟಾನ್

ದಕ್ಷಿಣ ಕನ್ನಡ, ಉಡುಪಿ, ಮಲೆನಾಡಿನ ಜಿಲ್ಲೆಗಳಲ್ಲಿ ತೆಂಗು, ಅಡಿಕೆಯ ನಡುವೆ ಹಾಗೂ ಕೊಡಗು ಭಾಗದಲ್ಲಿ ಕಾಫಿ ತೋಟಗಳ ಜತೆಗೆ ರಂಬುಟಾನ್ ವ್ಯಾಪಕವಾಗಿದೆ. ಪ್ರತಿ ವರ್ಷ ವಿಸ್ತರಿಸುತ್ತಿದೆ.

ಕೃಷಿಕ ಸಿ.ಎಫ್. ಜಾಕೋಬ್ ಅವರು ದಕ್ಷಿಣ ಕನ್ನಡ ಜಿಲ್ಲೆಯ ಸಂಸೆ ಸಮೀಪದಲ್ಲಿ 120 ಎಕರೆಯಲ್ಲಿ ರಂಬುಟಾನ್ ಬೆಳೆದಿದ್ದಾರೆ. ಅಜಿತ್‌ಶೆಟ್ಟಿ ಅವರು ಸುಬ್ರಹ್ಮಣ್ಯ ಸಮೀಪ 10 ಎಕರೆಯಲ್ಲಿ ಈ ಹಣ್ಣಿನ ಕೃಷಿ ಮಾಡುತ್ತಿದ್ದಾರೆ. ಹೀಗೆ ಹತ್ತು ಗಿಡಗಳಿಂದ ಹತ್ತಾರು ಎಕರೆವರೆಗೆ ಈ ಹಣ್ಣನ್ನು ಕೃಷಿ ಮಾಡುತ್ತಿದ್ದಾರೆ.

'ಎಕರೆಗೆ ಒಂದು ಟನ್ ಇಳುವರಿ ಸಿಕ್ಕಿದೆ. ಕಳೆದ ವರ್ಷ 120 ಎಕರೆಯಿಂದ 150 ಟನ್ ಬಂದಿದೆ. ಐದಾರು ವರ್ಷಗಳ ಹಿಂದೆ ರಂಬುಟಾನ್ ಬೆಳೆಯುವವರು ಕಡಿಮೆ ಇದ್ದರು. ಆಗ ಬೆಲೆ ಕೆ.ಜಿ. ₹400 ಇತ್ತು. ಈಗ ಬೆಳೆಯುವವರು ಹೆಚ್ಚಾಗಿದ್ದಾರೆ. ಬೆಲೆ ಕೆ.ಜಿ.ಗೆ ₹120 ಆಗಿದೆ. ಕೆಲವು ಸಾರಿ ₹80ಕ್ಕೆ ಇಳಿಯುತ್ತದೆ' ಎನ್ನುತ್ತಾರೆ ಜಾಕೋಬ್.

'ಕೇರಳದಿಂದ ಖರೀದಿದಾರರೇ ತೋಟಕ್ಕೆ ಬಂದು ತೆಗೆದುಕೊಂಡು ಹೋಗುತ್ತಿದ್ದಾರೆ. ಮಾರುಕಟ್ಟೆ ಸಮಸ್ಯೆಯಿಲ್ಲ. ಹಕ್ಕಿಗಳು ದಾಳಿ, ಪ್ರತಿಕೂಲ ಹವಾಮಾನದಿಂದ ವಿಪರೀತ ಹಣ್ಣುಗಳು ಉದುರುತ್ತವೆ' ಎನ್ನುತ್ತಾರೆ ಅಜಿತ್.



ಕೊಡಗಿನ ಸುಧೀರ್ ಅವರ ತೋಟದ ರಂಬುಟಾನ್

### ಅಂತರ ಬೆಳೆ ಮ್ಯಾಂಗೊಸ್ಟಿನ್

ಕೊಡಗು, ದಕ್ಷಣ ಕನ್ನಡ, ಕರಾವಳಿ ಭಾಗದಲ್ಲಿ ದಶಕದ ಹಿಂದಿನಿಂದ ಮ್ಯಾಂಗೊಸ್ಟಿನ್ ಬೆಳೆಯನ್ನು ಅಡಿಕೆ ತೋಟದ ನಡುವೆ ಅಂತರ ಬೆಳೆಯಾಗಿ ಬೆಳೆಯುತ್ತಿದ್ದಾರೆ. ಬೀಜದಿಂದ ಮಾಡಿದ ಸಸಿಯಾದರೆ, ನಾಟಿ ಮಾಡಿ ಏಳೆಂಟು ವರ್ಷಕ್ಕೆ ಫಸಲು ಆರಂಭ ವಾಗುತ್ತದೆ. ಕಸಿ ಗಿಡವಾದರೆ, ನಾಲ್ಕೈದು ವರ್ಷದಿಂದ ಶುರುವಾಗುತ್ತದೆ ಎನ್ನುತ್ತಾರೆ ಕೊಡಗಿನ ಸುಧೀರ್.

ಜಾಕೋಬ್ ಅವರು ಸುಮಾರು 40 ಎಕರೆಯಲ್ಲಿ ಮ್ಯಾಂಗೊಸ್ಟಿನ್ ಬೆಳೆದಿದ್ದಾರೆ. 'ಇದು ನಿಧಾನವಾಗಿ ಬೆಳೆಯುತ್ತದೆ. ಎಂಟು ವರ್ಷಕ್ಕೆ ಫಲಕೊಡುತ್ತದೆ. ತೆಂಗಿನಂತೆ ಪ್ರತಿ ವರ್ಷ ಫಸಲು ನೀಡುತ್ತದೆ' ಎನ್ನುತ್ತಾರೆ ಅವರು.

'ಒಂದು ಮರ 30 ಕೆ.ಜಿಯಿಂದ 40 ಕೆ.ಜಿವರೆಗೂ ಇಳುವರಿ ಕೊಡುತ್ತಿದೆ. ಉತ್ತಮ ಮಾರ್ಕೆಟ್ ಇರುವುದರಿಂದ, ಕಡಿಮೆ ಜಾಗದಲ್ಲಿ ಬೆಳೆದುಕೊಂಡರೂ ಲಾಭ' ಎನ್ನುತ್ತಾರೆ ಸುಧೀರ್. 'ಕೆ.ಜಿಗೆ ₹400 ರಂತೆ ತಮ್ಮ ತೋಟದ ಬಾಗಿಲಲ್ಲೇ ಮ್ಯಾಂಗೊಸ್ಟಿನ್ ಮಾರಾಟ ಮಾಡುತ್ತಿದ್ದೇನೆ. ಪ್ರತಿ ವರ್ಷ ನಮ್ಮ ನರ್ಸರಿಯಿಂದ ಸುಮಾರು 5 ಸಾವಿರ ಗಿಡಗಳು ಮಾರಾಟವಾಗಿವೆ. ಇದರಲ್ಲಿ ಬಹುಪಾಲು ಕರ್ನಾಟಕದ ರೈತರು ಖರೀದಿಸಿದ್ದಾರೆ' ಎನ್ನುತ್ತಾರೆ ಸಕ್ರೆಬೈಲಿನ ಕೃಷಿಕ ಹಾಗೂ ನರ್ಸರಿ ಮಾಲೀಕ ಬಿ.ಆರ್.ಕೃಷ್ಣ.

## ಬೆಳೆಗಾರರ ಸಂಘ 'ಕೆಫಾ'




ರಾಜ್ಯದಲ್ಲಿ ಡ್ರ್ಯಾಗನ್ ಫ್ರೂಟ್ ಸೇರಿದಂತೆ ವಿವಿಧ ವಿದೇಶಿ ಹಣ್ಣುಗಳನ್ನು ಬೆಳೆಯುವವರ ಸಂಖ್ಯೆ ಹೆಚ್ಚಾದ ನಂತರ, ಬೆಳೆಗಾರರೆಲ್ಲ ಸೇರಿ 2022 ರಲ್ಲಿ ಕರ್ನಾಟಕ ಎಕ್ಸೊಟಿಕ್ ಫ್ರೂಟ್ ಫಾರ್ಮರ್ಸ್ ಅಸೋಸಿಯೇಷನ್ (ಕೆಫಾ–KEFFA) ರಚಿಸಿಕೊಂಡಿದ್ದಾರೆ. ಸಂಘದಲ್ಲಿ 600 ಮಂದಿ ಸದಸ್ಯರಿದ್ದಾರೆ. ಇವರಲ್ಲಿ ಡ್ರ್ಯಾಗನ್‌ಫ್ರೂಟ್ ಬೆಳೆಗಾರರೇ ಹೆಚ್ಚು.

'ಹೆಸರಘಟ್ಟದ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯ (ಐಐಎಚ್‌ಆರ್) ವಿಜ್ಞಾನಿ ಡಾ.ಜಿ. ಕರುಣಾಕರನ್ ಈ ಸಂಘದ ತಾಂತ್ರಿಕ ಸಲಹೆಗಾರರಾಗಿದ್ದಾರೆ. ಈ ಸಂಬಂಧ ಕೆಫಾ– ಐಐಎಚ್‌ಆರ್‌ನೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ' ಎಂದು ಸಂಘದ ನಿರ್ದೇಶಕ ಮತ್ತು ಖಜಾಂಚಿ ಅರುಣ್ ಮಾಹಿತಿ ನೀಡಿದರು.

ಸಂಘ, ಡ್ರ್ಯಾಗನ್ ಫ್ರೂಟ್ ಸೇರಿದಂತೆ ವಿವಿಧ ವಿದೇಶಿ ಹಣ್ಣುಗಳನ್ನು ಬೆಳೆಯುವರಿಗೆ ಮಾರ್ಗದರ್ಶನ ನೀಡುತ್ತಿದೆ. ಡ್ರ್ಯಾಗನ್ ಫ್ರೂಟ್ ಹಣ್ಣಿನಿಂದ ಜ್ಯೂಸ್, ಪೌಡರ್ ಸೇರಿದಂತೆ ವಿವಿಧ ಮೌಲ್ಯವರ್ಧಿತ ಉತ್ಪನ್ನಗಳನ್ನು ತಯಾರಿಸುವ ಪ್ರಯತ್ನವೂ ನಡೆದಿದೆ. 'ಕೆಫಾ' ಕುರಿತು ಹೆಚ್ಚಿನ ಮಾಹಿತಿಗೆ: 8150835090 ಸಂಪರ್ಕಿಸಬಹುದು.



## ಚೆಟ್ಟಹಳ್ಳಿಯಲ್ಲಿ 'ಜರ್ಮ್‌ಪ್ಲಾಸಂ'

ಕೊಡಗಿನ ಚೆಟ್ಟಹಳ್ಳಿಯಲ್ಲಿರುವ ಕೇಂದ್ರೀಯ ತೋಟಗಾರಿಕಾ ಪ್ರಾಯೋಗಿಕ ಕೇಂದ್ರದಲ್ಲಿ 250ಕ್ಕೂ ಅಧಿಕ ವಿದೇಶಿ ಹಣ್ಣುಗಳ ಗಿಡಗಳನ್ನು ಸಂರಕ್ಷಿಸಲಾಗಿದೆ. ಇತ್ತೀಚೆಗೆ ರಂಬುಟಾನ್ ಮತ್ತು ಅವಕಾಡೊ ಹಣ್ಣುಗಳ ತಲಾ 2 ತಳಿಗಳನ್ನು ಅಭಿವೃದ್ಧಿಪಡಿಸಿ ಬಿಡುಗಡೆ ಮಾಡಿದೆ.

ಕೇಂದ್ರದಲ್ಲಿ 15ಕ್ಕೂ ಅಧಿಕ ವಿದೇಶಿ ಹಣ್ಣುಗಳ 500ಕ್ಕೂ ಹೆಚ್ಚು ಮೂಲ ತಳಿ (ಜರ್ಮ್‌ಪ್ಲಾಸಂ) ಸಂರಕ್ಷಿಸಲಾಗಿದೆ. ಅವಕಾಡೊ ಒಂದರಲ್ಲೇ ಸುಮಾರು 100ಕ್ಕೂ ಅಧಿಕ ಜರ್ಮ್‌ಪ್ಲಾಸಂ ಇದೆ. ದೇಶದ ವಿವಿಧ ಭಾಗಗಳಲ್ಲಿ ಸಿಗುವ ವೈವಿಧ್ಯಮಯ ಗುಣಲಕ್ಷಣಗಳನ್ನು ಹೊಂದಿರುವ ತಳಿಗಳನ್ನು ತಂದು ಇಲ್ಲಿ ಬೆಳೆಸಲಾಗುತ್ತಿದೆ.

'ಈ ಜರ್ಮ್‌ಪ್ಲಾಸಂ ತಳಿ ಸಂರಕ್ಷಣೆಗಲ್ಲದೇ, ರೋಗ ನಿರೋಧಕ, ಅಧಿಕ ಇಳುವರಿ ಕೊಡುವ ತಳಿಗಳನ್ನು ಅಭಿವೃದ್ಧಿಪಡಿಸಲೂ ಬಳಕೆಯಾಗುತ್ತಿದೆ' ಎಂದು ಕೇಂದ್ರದ ಹಿರಿಯ ಹಣ್ಣು ವಿಜ್ಞಾನಿ ಡಾ.ಬಿ.ಎಂ.ಮುರಳೀಧರ್ 'ಪ್ರಜಾವಾಣಿ'ಗೆ ತಿಳಿಸಿದರು.

ಇಲ್ಲಿ ರಂಬುಟನ್, ಬೆಣ್ಣೆಹಣ್ಣು, ಲಾಂಗ್‌ಆನ್, ದುರಿಯನ್, ಜಾಬೊಟಿಕಾ ಸೇರಿದಂತೆ ಸುಮಾರು 50 ವಿದೇಶಿ ಹಣ್ಣುಗಳ ವೈವಿಧ್ಯಮಯವಾದ ತಳಿಗಳು ಲಭ್ಯವಿವೆ. ಸಂಪರ್ಕಕ್ಕೆ: 7892882351 ಸಂಪರ್ಕಿಸಬಹುದು.

### ಎಲ್ಲೆಲ್ಲೂ ಅವಕಾಡೊ

ಅವಕಾಡೊ/ ಬೆಣ್ಣೆಹಣ್ಣು ಅಥವಾ ಬಟರ್ ಫ್ರೂಟ್ ಹಣ್ಣಿನ ಕೃಷಿ ರಾಜ್ಯದಲ್ಲಿ ವ್ಯಾಪಕವಾಗಿದೆ. ಉಷ್ಣಪ್ರದೇಶಕ್ಕೆ ಹೊಂದಿಕೊಳ್ಳುವ ಈ ಹಣ್ಣನ್ನು ಮೈಸೂರು ಚಾಮರಾಜನಗರದಿಂದ ಉತ್ತರ ಕರ್ನಾಟಕದ ಹಾವೇರಿ, ಗದಗ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಬೆಳೆಯುತ್ತಿದ್ದಾರೆ. ಸ್ಥಳೀಯ ಮಾರುಕಟ್ಟೆಯ ಜೊತೆಗೆ, ನೆರೆ ಹೊರೆಯ ರಾಜ್ಯಗಳಿಗೂ ಮಾರಾಟವಾಗುತ್ತಿದೆ.

ರಾಜ್ಯದಲ್ಲಿ 11 ವಿವಿಧ ತಳಿಗಳ ಅವಕಾಡೊ ಬೆಳೆಯಲಾಗುತ್ತಿದೆ. ಸದ್ಯ ಮೆಕ್ಸಿಕೊ ಹ್ಯಾಸ್ ತಳಿ ಜನಪ್ರಿಯವಾಗಿದೆ. ನಾಟಿ ಮಾಡಿದ ಮೂರು ವರ್ಷದಿಂದ ಫಸಲು ಆರಂಭವಾಗುತ್ತದೆ. ಸದ್ಯ ಸುಮಾರು ಐದೂವರೆ ಸಾವಿರ ಎಕರೆ ಪ್ರದೇಶದಲ್ಲಿ ಬೆಳೆಯುತ್ತಿರಬಹುದೆಂಬ ಅಂದಾಜು ಇದೆ. ಎಕರೆಗೆ 7 ಟನ್ ಅಂದಾಜು ಇಳುವರಿ ಇದೆ. ರಾಜ್ಯದಲ್ಲಿ ವಾರ್ಷಿಕವಾಗಿ 40 ಸಾವಿರ ಟನ್‌ವರೆಗೂ ಹಣ್ಣು ಉತ್ಪಾದನೆಯಾಗುತ್ತಿದೆ ಎಂಬ ಅಂದಾಜಿದೆ. ಕೆ.ಜಿಗೆ ₹60 ರಿಂದ ₹250 ವರೆಗೂ ಬೆಲೆ ಇದೆ ಈ ಹಣ್ಣಿಗೆ ಎಂದು ಬೆಳೆಗಾರರು ಹೇಳುತ್ತಾರೆ.

'ತೋಟಕ್ಕೆ ಬಂದು ಖರೀದಿ ಮಾಡುವ ವ್ಯಾಪಾರಿಗಳಿದ್ದಾರೆ. ಬೇರೆ ರಾಜ್ಯದ ಮಾರುಕಟ್ಟೆಗೂ ಕಳಿಸುತ್ತೇವೆ' ಎನ್ನುತ್ತಾರೆ ಅರಕಲಗೂಡು ಸಮೀಪದ ದೊಡ್ಡಮಗ್ಗೆಯಲ್ಲಿ 25 ಎಕರೆಯಲ್ಲಿ ತೆಂಗಿನ ನಡುವೆ ಅವಕಾಡೊ ಬೆಳೆಯುತ್ತಿರುವ ಕೃಷಿಕ ಶಿರೀನ್ ರಂಗಸ್ವಾಮಿ. ಇವರು ನಾಲ್ಕು ವರ್ಷಗಳಿಂದ ಫಸಲು ಪಡೆದು ಮಾರುಕಟ್ಟೆ ಮಾಡುತ್ತಿದ್ದಾರೆ.

'ನಮ್ಮ ತೋಟದಲ್ಲಿ ಬಿಸಿಲು ಚೆನ್ನಾಗಿರುವ ಜಾಗದಲ್ಲಿ ಬೆಳೆಯುತ್ತಿರುವ ಮರಗಳು 200 ಹಣ್ಣುಗಳವರೆಗೂ ಬಿಡುತ್ತವೆ. ಒಂದೊಂದು ಹಣ್ಣು 600 ಗ್ರಾಂವರೆಗೂ ತೂಗುತ್ತದೆ. ಕೆ.ಜಿಗೆ ₹70ರಿಂದ ₹220ವರೆಗೂ ಮಾರಾಟ ಮಾರಾಟವಾಗಿದೆ' ಎನ್ನುತ್ತಾರೆ ಶಿರೀನ್.

## ಮ್ಯಾಂಗೊಸ್ಟಿನ್ ಗ್ರಾಮ 'ಪರಿಯಾರಂ'

ಕೇರಳದಲ್ಲಿ ದಶಕದಿಂದ ವಿದೇಶಿ ಹಣ್ಣುಗಳ ವಾಣಿಜ್ಯ ಕೃಷಿ ದೊಡ್ಡಮಟ್ಟದಲ್ಲಿ ಏರುತ್ತಿದೆ. ಅಲ್ಲಿ ರಂಬುಟಾನ್ ಮೊದಲ ಸ್ಥಾನ, ಮ್ಯಾಂಗೊಸ್ಟಿನ್ ಎರಡನೇ ಸ್ಥಾನದಲ್ಲಿದೆ. ತ್ರಿಶ್ಶೂರ್ ಜಿಲ್ಲೆಯ ಪರಿಯಾರಂ ಗ್ರಾಮದ ತುಂಬಾ ಮ್ಯಾಂಗೊಸ್ಟಿನ್ ಬೆಳೆಯುತ್ತಿದ್ದು, ಅದನ್ನು 'ಮ್ಯಾಂಗೊಸ್ಟಿನ್ ಗ್ರಾಮ' ಎಂದು ಕರೆಯುತ್ತಾರೆ. ಹೊಸ ಹಣ್ಣಿನ ಬೆಳೆಗಳನ್ನು ಬೆಳೆಯಲು ಕ್ಷೇತ್ರಾಧ್ಯಯನ ಅಗತ್ಯ. ಇದರಿಂದ ಹೊಸದಾಗಿ ಕೃಷಿ ಮಾಡುವವರಿಗೆ ಮೌಲಿಕ ಸುಳಿವುಗಳು ಸಿಗುತ್ತವೆ. ಈ ನಿಟ್ಟಿನಲ್ಲಿ ಕರ್ನಾಟಕದ ಕೃಷಿಕರು ಕೇರಳದ ಹಣ್ಣಿನ ತೋಟಗಳಿಗೆ ಭೇಟಿ ನೀಡಿ ಅಧ್ಯಯನ ಮಾಡಿದರೆ, ಇನ್ನಷ್ಟು ವಿದೇಶಿ ಹಣ್ಣಿನ ಕೃಷಿ ವಿಸ್ತರಿಸಲು ಸಾಧ್ಯವಿದೆ.

–**ಶ್ರೀಪಡ್ರೆ,** ಕೃಷಿ ಪತ್ರಕರ್ತರು



ಮ್ಯಾಂಗೊಸ್ಟಿನ್

### 'ಸಂಘಟಿತ' ಮಾರುಕಟ್ಟೆ ಅಗತ್ಯ

ಕೃಷಿಕರ ಆಸಕ್ತಿಯಿಂದ ರಾಜ್ಯದಲ್ಲಿ ವಿದೇಶಿ ಹಣ್ಣುಗಳ ಪರಿಚಯವಾಗಿದೆ, ವಿಸ್ತಾರವಾಗುತ್ತಿದೆ. ವ್ಯಾಪಾರಸ್ಥರು ತೋಟದ ಬಾಗಿಲಿನಿಂದಲೇ ಹಣ್ಣುಗಳನ್ನು ಖರೀದಿಸುತ್ತಿದ್ದಾರೆ. ಬೆಂಗಳೂರಿನ ಆನೇಕಲ್ ತಾಲ್ಲೂಕಿನ ಹುಸ್ಕೂರಿನಲ್ಲಿ ಹಣ್ಣಿನ ಮಾರುಕಟ್ಟೆ ಮೂಲಕ ಅಲ್ಪ ಪ್ರಮಾಣದಲ್ಲಿ ಹೊರ ರಾಜ್ಯಗಳಿಗೆ ಮಾರಾಟವಾಗುತ್ತಿದೆ. ಇಷ್ಟನ್ನು ಹೊರತುಪಡಿಸಿ ವಿದೇಶಿ ಹಣ್ಣುಗಳ ವಾರ್ಷಿಕ ಉತ್ಪಾದನೆ, ಮಾರಾಟದ ಪ್ರಮಾಣ, ಬೇಡಿಕೆ, ರಫ್ತು, ಬೆಲೆ ನಿಗದಿ ಹೇಗೆ ಎಂಬ ನಿಖರವಾದ ಮಾಹಿತಿ ಲಭ್ಯವಿಲ್ಲ. ಈಗಿರುವ ಮಾಹಿತಿ, ಬೆಳೆಗಾರರ ಅಂದಾಜಿಗೆ ಸಿಕ್ಕಿರುವುದು. 'ಇನ್ನಷ್ಟು ಸಂಘಟಿತ ಮಾರುಕಟ್ಟೆ ರೂಪಿತವಾದರೆ, ಸರ್ಕಾರದ ಬೆಂಬಲ ದೊರಕಿದರೆ, ಬೆಳೆಗಾರರಿಗೆ ವಿಶ್ವಾಸ ಬರುತ್ತದೆ, ಬೆಳೆಯೂ ವಿಸ್ತರಣೆಯಾಗುತ್ತದೆ' ಎಂಬುದು ತಜ್ಞರ ಅಭಿಪ್ರಾಯವಾಗಿದೆ.

**ಪರಿಕಲ್ಪನೆ: ಯತೀಶ್ ಕುಮಾರ್ ಜಿ.ಡಿ**

**ಪೂರಕ ಮಾಹಿತಿ: ಗಿರೀಶ್ ಕೆ.ಎಸ್, ಮಡಿಕೇರಿ**

## ಗುಂಡಣ್ಣ




## 25 ವರ್ಷಗಳ ಹಿಂದೆ

ಗುರುವಾರ 15-6-2000

• **ಬನ್ನೇರುಘಟ್ಟದಲ್ಲಿ ಸರ್ಕಸ್ ಪ್ರಾಣಿಗಳಿಗೆ ಪಾಲನಾ ಕೇಂದ್ರ**

ಬೆಂಗಳೂರು, ಜೂನ್ 14– ರಾಜಧಾನಿಗೆ ಅತಿ ಸಮೀಪದಲ್ಲಿರುವ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದಲ್ಲಿ ಸರ್ಕಸ್‌ಗಳಲ್ಲಿ ಪ್ರದರ್ಶನ ನಿಷೇಧಿಸಿದ ಪ್ರಾಣಿಗಳ ಪಾಲನೆ ಮತ್ತು ಪೋಷಣಾ ಕೇಂದ್ರ ಮುಂದಿನ ತಿಂಗಳಲ್ಲಿ ಆರಂಭವಾಗಲಿದೆ.

ಇದರಿಂದ ಈಗಾಗಲೇ ಸಫಾರಿಯಲ್ಲಿರುವ ಹುಲಿ ಸಿಂಹಗಳ ಜೊತೆಯಲ್ಲಿ ರಾಜ್ಯದ ವಿವಿಧ ಭಾಗಗಳ ಸರ್ಕಸ್‌ನಲ್ಲಿ ಹಿಂಸೆಗೆ ಒಳಪಟ್ಟಿರುವ ಸುಮಾರು ನೂರು ಹುಲಿ ಸಿಂಹಗಳ ಗರ್ಜನೆಯನ್ನು ಶೀಘ್ರವೇ ಕೇಳಬಹುದು. ಕೇಂದ್ರ ಮೃಗಾಲಯ ಪ್ರಾಧಿಕಾರವು ಪ್ರತಿ ರಾಜ್ಯಗಳಲ್ಲಿ ಈ ಪೋಷಣಾ ಕೇಂದ್ರಗಳನ್ನು ನಿರ್ಮಿಸುತ್ತಿದೆ.

## 75 ವರ್ಷಗಳ ಹಿಂದೆ

ಗುರುವಾರ, 15-6-1950

• **ಹತ್ತಿ– ಹತ್ತಿ ಬಟ್ಟೆ ಹತೋಟಿ ಬಗ್ಗೆ ಹೊಸ ನೀತಿ**

ಮುಂಬಯಿ, ಜೂನ್ 14– ಹತ್ತಿ ಮತ್ತು ಹತ್ತಿ ಬಟ್ಟೆಗಳ ಹತೋಟಿ ಬಗ್ಗೆ ಅನುಸರಿಸಲಾಗುವ ಹೊಸ ನೀತಿಯನ್ನು ಭಾರತ ಸರ್ಕಾರ ಈ ವಾರದ ಅಂತ್ಯದಲ್ಲಿ ಪ್ರಕಟಿಸಲಿದೆ.

ಭಾರತ ಸರ್ಕಾರದ ಕೈಗಾರಿಕೆ ಸಚಿವ ಹರೆಕೃಷ್ಣ ಮೆಹತಾಬರು ಇಲ್ಲಿನ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡುತ್ತ, ಹತ್ತಿ ಹತೋಟಿ ಮತ್ತು ಪರಮಾಂಧಿ ಬೆಲೆಯ ಬಗ್ಗೆ ಒಂದಲ್ಲ ಒಂದು ರೀತಿಯಲ್ಲಿ ಸರ್ಕಾರವು ನಿರ್ಧರಿಸಬೇಕಾಗಬಹುದೆಂದರು.

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

**15 ಜೂನ್ 2025 ಭಾನುವಾರ**

**ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ:** ಜ್ಯೇಷ್ಠ ಕೃಷ್ಣ ಚತುರ್ಥಿ ಗಂ. 15-52 ನಕ್ಷತ್ರ: ಶ್ರವಣ ಗಂ. 25-00 ಯೋಗ: ಐಂದ್ರ ಗಂ. 12-19 ಕರಣ: ಬಾಲವ ಗಂ. 15-52, ಮಿಥುನ ಮಾಸದ 01 ನೇ ದಿನ. ಮಳೆ ನಕ್ಷತ್ರ : ಮೃಗಶಿರ 3 ನೇ ಪಾದ. ರಾಹುಕಾಲ : ಸಾಯಂಕಾಲ 04-30 –06-00 ಸೂರ್ಯೋದಯ : 06-08 ಸೂರ್ಯಾಸ್ತ : 06-54 ಮುಸ್ಲಿಂ ದಿನಾಂಕ : 18 ಜುಲ್‌ಹಿಜಾ ಅದೃಷ್ಟ ಸಂಖ್ಯೆ : 2, 3

**ಮೇಷ:** ವಿದ್ಯಾರ್ಥಿಗಳಿಗೆ ಹಲವು ದಿನದ ಅತಿ ಹೆಚ್ಚಿನ ಓದಿನಿಂದಾಗಿ ಬೇಸರಗೊಂಡು ಬದಲಾವಣೆ ಬಯಸುವಂತಾಗಲಿದೆ. ಟ್ರಾವೆಲ್ಸ್ ಉದ್ಯೋಗದವರಿಗೆ ಇಂದು ಬಹಳಷ್ಟು ಲಾಭದಾಯಕವಾದ ಬೆಳವಣಿಗೆ ಇರುವುದು.

**ವೃಷಭ:** ಲೇವಾದೇವಿ ವ್ಯವಹಾರ ನಡೆಸುವವರು ವ್ಯವಹಾರದಲ್ಲಿ ಸ್ವಲ್ಪ ಪ್ರಮಾಣದ ನಷ್ಟ ಸಂಭವಿಸಿ ಹಿನ್ನಡೆಯನ್ನು ಕಾಣುವಂತಾಗಲಿದೆ. ಹತ್ತು ಬಾರಿ ಯೋಚಿಸಿ ನಂತರದಲ್ಲಿ ದೂರ ದೃಷ್ಟಿ ಇಟ್ಟುಕೊಂಡು ಕಾರ್ಯ ಪ್ರವೃತ್ತರಾಗಿರಿ.

**ಮಿಥುನ:** ಕೆಲಸದಲ್ಲಿ ಒತ್ತಡ, ದೇಹಾಯಾಸ ತೋರಿಬಂದು ತಪ್ಪು ನಿರ್ಧಾರ ತೆಗೆದುಕೊಳ್ಳುವುದು, ಅನಾರೋಗ್ಯ ಸ್ಥಿತಿಯಂತಹದ್ದು ಎದುರಾಗಬಹುದು. ವೈದ್ಯರ ಸಲಹೆಯಂತೆ ಧ್ಯಾನ ಮತ್ತು ಯೋಗದ ಅಭ್ಯಾಸ ಮಾಡಿಕೊಳ್ಳಿ.

**ಕರ್ಕಾಟಕ:** ರಾಸಾಯನಿಕ ವಸ್ತುಗಳ ರಫ್ತು ವ್ಯಾಪಾರ ಮಾಡುವವರಿಗೆ ಕೆಲಸದಲ್ಲಿ ತೊಂದರೆ ಕಾಣಿಸಿಕೊಳ್ಳಲಿದೆ. ದಾಖಲೆಗಳಿಗೆ ಸಂಬಂಧಿಸಿದಂತೆ ಬಾಕಿ ಉಳಿಸಿಕೊಂಡಿರುವ ಕೆಲಸಗಳನ್ನು ಬೇಗ ಮುಗಿಸಿಕೊಳ್ಳುವುದು ಸೂಕ್ತ.

**ಸಿಂಹ:** ಈ ದಿನ ಮಾತು ಕಡಿಮೆ ಮಾಡಿ ಕೆಲಸದಲ್ಲಿ ಮಗ್ನರಾಗುವುದರಿಂದ ನಿಮ್ಮ ಕೆಲಸಗಳು ಸುಖ ಶಾಂತಿಯಿಂದ ತುಂಬಿರುತ್ತವೆ. ಕಳೆದ ವಸ್ತುಗಳನ್ನು ಹುಡುಕಲು ಸಮಯ ಉಪಯೋಗಿಸುವುದು ನಿಷ್ಪ್ರಯೋಜಕವಾಗಲಿದೆ

**ಕನ್ಯಾ:** ಮಾತುಗಾರಿಕೆಯ ಸಾಮರ್ಥ್ಯದಿಂದ ಇತರರನ್ನು ಗೆಲ್ಲುವ ಸಾಮರ್ಥ್ಯ ನಿಮ್ಮಲ್ಲಿದೆ. ಪೊಲೀಸ್ ಅಧಿಕಾರಿಗಳಿಗೆ ತುರ್ತು ಕೆಲಸ ಒದಗುವ ಸಂದರ್ಭ ಬರುವುದು. ಆರೋಗ್ಯದಲ್ಲಿ ಏರುಪೇರಾಗುವ ಲಕ್ಷಣ ಇದ್ದು, ಆತಂಕ ಪಡದಿರಿ.

**ತುಲಾ:** ಕಮಿಶನ್ ಏಜೆಂಟ್‌ಗಳಿಗೆ ಮತ್ತು ಸರಕು ಸಾಗಾಣಿಕೆದಾರರಿಗೆ ಉತ್ತಮ ದಿನ. ಮಕ್ಕಳ ವಿಷಯದಲ್ಲಿ ಕಾಳಜಿಯನ್ನು ತೋರಿ ವ್ಯವಸ್ಥಿತವಾದ ತೀರ್ಮಾನವನ್ನು ತೆಗೆದುಕೊಂಡಲ್ಲಿ ಅವರ ಭವಿಷ್ಯ ಉತ್ತಮವಾಗುವುದು.

**ವೃಶ್ಚಿಕ:** ಯಾರ ನೆರವೂ ಇಲ್ಲದೆ ನಿಮ್ಮೆಲ್ಲ ಕಾರ್ಯಗಳನ್ನು ಸ್ವಯಂ ನೀವೇ ನಿರ್ವಹಿಸುವುದು ಉತ್ತಮ. ಗೃಹ ಸಮಸ್ಯೆಗಳಿಂದ ಮುಕ್ತರಾಗಿ ನಿಶ್ಚಿಂತತೆ ತೋರಿ ಬರುತ್ತದೆ. ನಿಮ್ಮ ಸೋಲನ್ನು ಬಯಸುವವರ ಸಂಖ್ಯೆ ಕಡಿಮೆಯಾಗುವುದು.

**ಧನು:** ಯಾವುದೇ ಸಂಕೋಚವಿಲ್ಲದೆ ನೂತನ ಕಾರ್ಯಭಾರವನ್ನು ಹೆಗಲಿಗೇರಿಸಿಕೊಳ್ಳಿ. ಏಕೆಂದರೆ ನಿಮ್ಮ ಮೇಲಿರುವ ನಂಬಿಕೆ, ವಿಶ್ವಾಸದಿಂದಾಗಿ ಈ ಅವಕಾಶಗಳು ನಿಮ್ಮದಾಗಲಿದೆ. ದೇಹಾಲಸ್ಯ ನೀಗುವುದು.

**ಮಕರ:** ಬಹುದಿನದಿಂದ ಮುಂದೂಡಲ್ಪಟ್ಟಿದ್ದ ಪ್ರಯಾಣ ಅನಿವಾರ್ಯತೆಯ ಸನ್ನಿವೇಶದಿಂದ ಕೈಗೊಳ್ಳಬೇಕಾಗುತ್ತದೆ. ಸಂಸಾರದ ಘನತೆ ಹೆಚ್ಚಿಸುವುದಕ್ಕಾಗಿ ಸಾಹಸ ಪಡುತ್ತಿರುವ ನಿಮಗೆ ಹೆಂಡತಿ ಮಕ್ಕಳು ನೆರವಾಗುವರು.

**ಕುಂಭ:** ಬಿಡುವಿಲ್ಲದ ಕೆಲಸದಿಂದ ಬಳಲಿದ ನಿಮಗೆ ವಿಶ್ರಾಂತಿಗೆ ಸೂಕ್ತವಾದ ಸಮಯ ಸಿಗುವುದು. ಈ ದಿನದಂದು ದಿನಗೂಲಿ ನೌಕರರಿಗೆ ಅನುಕೂಲ ವಾತಾವರಣ ಸಿಗಲಿದೆ. ಮಕ್ಕಳಿಗೆ ವಿದ್ಯಾಭ್ಯಾಸದಲ್ಲಿ ಆಲಸ್ಯ ತೋರಿ ಬರುವುದು.

**ಮೀನ:** ರಾಜಕಾರಣಿಗಳೊಂದಿಗೆ ಅಧಿಕವಾಗಿ ಬೆಳೆಸಿಕೊಂಡ ಒಡನಾಟ ಅಪಾಯ ತಂದೊಡ್ಡಲಿದೆ. ಸಮಾಜಸೇವೆಗೆ ಗಮನ ನೀಡಿದರೆ ಸಾಕೆನಿಸುವುದು. ಹೊಸ ವಾಹನ ಖರೀದಿಸುವ ಯೋಚನೆ ಇದ್ದರೆ ಮುಂದೆ ಸಾಗಬಹುದು.

## ಪದಬಂಧ 6074


ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**

1. ಬಹಿರಂಗದ ವಿರುದ್ಧ ಪದ (4)
3. ತಡವಾಗಿ ನೋಡಿದ ಜಲಪಾತ (4)
5. ಜನರ ನಡುವೆಯೇ ಈ ಆಳು ನುಸುಳಿಹನಲ್ಲಾ? (3)
7. ಉದಾರಿಗೆ ಕಾಣಿಸಿದ ರಸ್ತೆ! (2)
8. ಶ್ರೀ ಕೃಷ್ಣನ ಸ್ನೇಹಿತ (3)
9. ಇಳೆಯಲ್ಲಿ ಸಿಕ್ಕಿರುವ ಸ್ನೇಹಿತ (3)
10. ಹಿಗ್ಗು ಈ ರೀತಿ ಬಂದಿದೆ (3)
11. ಗುರುಗುಟ್ಟುತ್ತಿರುವ ಗಂಡು ಕುರಿ (3)
13. ಒಟ್ಟಿಲು ಅಥವಾ ಗುಡ್ಡೆ ಎಂದರೂ ಸರಿಯೇ (2)
14. ಕಳ್ಳನಿಗೆ ಅಂಟಿಕೊಂಡಿದೆ ಈ ಅಪವಾದ! (3)
15. ಅಗ್ನಿ ಇಲ್ಲಿದೆ (4)
16. ಈ ಪರಿ ಕಾಣುತ್ತಿರುವ ಮೇರೆ (4)

**ಮೇಲಿಂದ ಕೆಳಕ್ಕೆ**

2. ಪರಾಕು ಹೇಳಿದರೂ ಕಪಾಳಮೋಕ್ಷ! (4)
4. ದಾಯಾದಿ ಹತ್ತಿರ ನೆರೆದಿರುವ ಗುಂಪು (4)
5. ನೀರಿನಿಂದಾದ ಅನಿಲ (5)
6. ಇದು ಹಾಸ್ಯ ಪ್ರಹಸನ (5)
10. ಒಳ್ಳೆಯ ಶಿಕ್ಷಣ ಪಡೆದವನು (4)
12. ದರಿದ್ರನ ಹೆಣ ಹೂಳಿರುವ ಸ್ಮಶಾನ! (4)



**6073ನೇ ಪದಬಂಧದ ಉತ್ತರ**

**ಎಡದಿಂದ ಬಲಕ್ಕೆ**

1.ಹಳವಂಡ 3.ಉಪೋದ್ಘಾತ 5.ಕೆಸರು 7.ದುಮ್ಮಾನ 9.ಮತ್ಸರ 10.ಶರಣ 11.ಅಂಗದ 15.ಕೋಲಾಹಲ 16.ಕಾರಬಾರು

**ಮೇಲಿಂದ ಕೆಳಕ್ಕೆ**

1.ಹರಕೆ 2.ಡಬ್ಬ 3.ಉಮೇದುವಾರ 4.ತಖ್ತೆ 6.ಸದವಕಾಶ 8.ನರೆದಲೆಗ 9.ಮರಣಕಾಲ 12.ದರ್ಬಾರು 13.ತಿಕೋ 14.ಕಾಕಾ

## ಸುಡೊಕು 6458

**ಹೀಗೆ ಆಡಿ:** ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

| | | | | | | | | |
|---|---|---|---|---|---|---|---|---|
| | 3 | | 4 | | | 2 | | 7 |
| 7 | | 4 | | 3 | | | | |
| | | | 1 | | | 8 | | 3 |
| | | | | 4 | | | | |
| 3 | | 2 | 9 | | 1 | | | |
| | | | | 6 | | | | 2 |
| 1 | | 8 | 3 | | 4 | | 2 | |
| | | | | | | 9 | | 8 |
| 6 | | 9 | | 2 | | | 3 | |

**6457 ಸುಡೊಕು**

| | | | | | | | | |
|---|---|---|---|---|---|---|---|---|
| 8 | 4 | 5 | 1 | 2 | 6 | 7 | 9 | 3 |
| 6 | 2 | 9 | 5 | 3 | 7 | 1 | 4 | 8 |
| 1 | 3 | 7 | 9 | 8 | 4 | 6 | 2 | 5 |
| 2 | 7 | 8 | 4 | 9 | 1 | 5 | 3 | 6 |
| 5 | 9 | 3 | 6 | 7 | 8 | 2 | 1 | 4 |
| 4 | 1 | 6 | 2 | 5 | 3 | 8 | 7 | 9 |
| 7 | 6 | 4 | 8 | 1 | 9 | 3 | 5 | 2 |
| 9 | 5 | 1 | 3 | 6 | 2 | 4 | 8 | 7 |
| 3 | 8 | 2 | 7 | 4 | 5 | 9 | 6 | 1 |

ಭಾನುವಾರ, ಜೂನ್ 15, 2025 | ₹ 7.00

www.prajavani.net prajavani.net prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

**ಪೊಲೀಸರ ನೇಮಕ**

ಉತ್ತರ ಪ್ರದೇಶ ಸರ್ಕಾರ **60,244** ಪೊಲೀಸ್ ಕಾನ್‌ಸ್ಟೆಬಲ್‌ಗಳನ್ನು ನೇಮಿಸಿಕೊಂಡಿದ್ದು ಶನಿವಾರ ನೇಮಕಾತಿ ಆದೇಶ ವಿತರಿಸಲಾಯಿತು



**ಅಯೋಧ್ಯೆ: ಸಿಸಿಟಿವಿ ಅಳವಡಿಕೆ**

**1,000** ಸ್ಮಾರ್ಟ್ ಸಿಟಿ ಯೋಜನೆ ಅಡಿ ಅಯೋಧ್ಯೆ ಮತ್ತು ಫೈಜಾಬಾದ್ ನಗರದಲ್ಲಿ ಅಳವಡಿಸಲು ನಿರ್ಧರಿಸಿರುವ ಸಿಸಿಟಿವಿ ಕ್ಯಾಮರಾಗಳ ಸಂಖ್ಯೆ



**₹56** ಕೋಟಿ ಕ್ಯಾಮರಾ ಅಳವಡಿಕೆಗೆ ತಗುಲುವ ವೆಚ್ಚ

ಮೂರು ಜಿಲ್ಲೆಗಳಿಗೆ 'ರೆಡ್ ಅಲರ್ಟ್' 6

ಮಂಗಳೂರು: ರಸ್ತೆಗಳು ಜಲಾವೃತ 6

# ಕ್ಯಾನ್ಸರ್‌ಪೀಡಿತ ವಿದ್ಯಾರ್ಥಿಗಳಿಗಾಗಿ ಸರ್ಕಾರಿ ವಸತಿ ಶಾಲೆ

ಪ್ರಜಾವಾಣಿ ವಾರ್ತೆ



ಎಸ್‌.ಮಧು ಬಂಗಾರಪ್ಪ

ಶಿವಮೊಗ್ಗ: 'ರಾಜ್ಯದಲ್ಲಿ ಕ್ಯಾನ್ಸರ್‌ನಿಂದ ಬಳಲುತ್ತಿರುವ 3,500 ವಿದ್ಯಾರ್ಥಿಗಳನ್ನು ಗುರುತಿಸಲಾಗಿದೆ. ಅವರಿಗೆ ಶಿಕ್ಷಣದೊಂದಿಗೆ ನಿರಂತರವಾಗಿ ಚಿಕಿತ್ಸೆ ಹಾಗೂ ವೈದ್ಯಕೀಯ ಸೌಲಭ್ಯ ಕಲ್ಪಿಸಲು ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆಯ ಪರಿಸರದಲ್ಲಿ ವಸತಿಯುತ ಶಾಲೆ (ಕ್ಯಾನ್ಸರ್ ರೆಸಿಡೆನ್ಷಿಯಲ್ ಸ್ಕೂಲ್) ಆರಂಭಿಸಲು ನಿರ್ಧರಿಸಲಾಗಿದೆ' ಎಂದು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ ಎಸ್.ಮಧು ಬಂಗಾರಪ್ಪ ಹೇಳಿದರು.

'ಕ್ಯಾನ್ಸರ್ ಈಗ ವಾಸಿಯಾಗುವ ಕಾಯಿಲೆ. ಆರಂಭಿಕ ಹಂತದಿಂದಲೇ ನಿರಂತರ ಚಿಕಿತ್ಸೆ ನೀಡಬೇಕಿದೆ. ಸಂಪೂರ್ಣ ಚಿಕಿತ್ಸೆಗೆ ಆರು ತಿಂಗಳು ಇಲ್ಲವೇ ಒಂದು ವರ್ಷ, ಇನ್ನೂ ಹೆಚ್ಚಿನ ಕಾಲಾವಧಿ ಬೇಕಾಗುತ್ತದೆ. ಈ ಅವಧಿಯಲ್ಲಿ ಮಕ್ಕಳು ಶಿಕ್ಷಣದಿಂದ ವಂಚಿತರಾಗ ಬಾರದು ಎಂಬ ಉದ್ದೇಶದಿಂದ ಕ್ಯಾನ್ಸರ್ ರೆಸಿಡೆನ್ಷಿಯಲ್ ಸ್ಕೂಲ್ ಆರಂಭಿಸಲು ಯೋಜನೆ ರೂಪಿಸಲಾಗಿದೆ' ಎಂದು ಅವರು ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸರ್ಕಾರೇತರ ಸಂಸ್ಥೆಯೊಂದರ (ಎನ್‌ಜಿಒ) ನೆರವಿನಿಂದ ಇಲಾಖೆ ಸಮೀಕ್ಷೆ ನಡೆಸಿ ಕ್ಯಾನ್ಸರ್‌ಪೀಡಿತ ವಿದ್ಯಾರ್ಥಿಗಳನ್ನು ಗುರುತಿಸಿದೆ. ಹಣವಂತರ ಮಕ್ಕಳು ತಾವು ಇರುವ ಕಡೆಯೇ ಚಿಕಿತ್ಸೆ ಪಡೆಯುತ್ತಾರೆ. ಆದರೆ ಬಡವರ ಮಕ್ಕಳು ಕ್ಯಾನ್ಸರ್ ಬಂದರೆ ಚಿಕಿತ್ಸೆ ಪಡೆಯುವುದು, ಓದು ಮುಂದುವರೆಸುವುದು ಕಷ್ಟ. ಅವರ ನೆರವಿಗಾಗಿಯೇ ಈ ಶಾಲೆ ಆರಂಭಿಸುತ್ತಿದ್ದೇವೆ. ಗುಣಮಟ್ಟದ ಶಿಕ್ಷಣ, ಎಲ್ಲ ಮಕ್ಕಳಿಗೂ ಸಮಾನ ಅವಕಾಶ ಹಾಗೂ ಅತ್ಯಾಧುನಿಕ ಚಿಕಿತ್ಸೆಯ ಲಭ್ಯತೆ ಈ ಮೂರು ಅಂಶಗಳನ್ನೂ ಗಮನದಲ್ಲಿಟ್ಟುಕೊಂಡು ಯೋಜನೆ ರೂಪಿಸಲಾಗಿದೆ ಎಂದರು.

ಮೊದಲು ತೀರಾ ಅಗತ್ಯವಿರುವ 1,500 ವಿದ್ಯಾರ್ಥಿಗಳಿಗೆ ಈ ವಸತಿ ಶಾಲೆಗೆ ಪ್ರವೇಶಾವಕಾಶ ಕಲ್ಪಿಸಲಾಗುತ್ತಿದೆ. ಕಿದ್ವಾಯಿ ಆಸ್ಪತ್ರೆ ಸಮೀಪದಲ್ಲಿಯೇ ಇಲಾಖೆಗೆ ಸೇರಿದ 3 ಎಕರೆ ಜಾಗ ಗುರುತಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಚಿಕಿತ್ಸೆ ವೇಳೆ ಮಕ್ಕಳನ್ನು ನೋಡಿಕೊಳ್ಳಲು ಬರುವ ಪಾಲಕರಿಗೂ ಅಲ್ಲಿ ಉಚಿತವಾಗಿ ಊಟ ಹಾಗೂ ವಸತಿ ವ್ಯವಸ್ಥೆ ಮಾಡಲಾಗುವುದು. ಈ ಶಾಲೆ ಒಳ್ಳೆಯ ಮೈದಾನ, ಗ್ರಂಥಾಲಯ ವ್ಯವಸ್ಥೆಯನ್ನು ಹೊಂದಲಿದೆ ಎಂದು ಹೇಳಿದರು.



- ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆ ಪರಿಸರದಲ್ಲಿ ಆರಂಭಕ್ಕೆ ಸಿದ್ಧತೆ
- ಕ್ಯಾನ್ಸರ್‌ನಿಂದ ಬಳಲುತ್ತಿರುವ 3,500 ಮಕ್ಕಳ ಮಾಹಿತಿ ಕ್ರೋಡೀಕರಣ
- ಚಿಕಿತ್ಸೆ ವೇಳೆ ಪಾಲಕರಿಗೂ ಉಚಿತ ಊಟ, ವಸತಿ

ಅಗತ್ಯ ಮೂಲಸೌಕರ್ಯ ಹಾಗೂ ಹಣಕಾಸಿನ ವ್ಯವಸ್ಥೆ ಮಾಡಿಕೊಂಡು ಜುಲೈನಿಂದಲೇ ಶಾಲೆ ಕಾರ್ಯಾರಂಭಕ್ಕೆ ಯೋಜಿಸಲಾಗಿದೆ. ಕ್ಯಾನ್ಸರ್‌ಪೀಡಿತ ಮಕ್ಕಳನ್ನು ಆಸ್ಪತ್ರೆಗೆ ಕರೆದೊಯ್ಯಲು ಹಾಗೂ ಕರೆತರಲು ಬಸ್ ವ್ಯವಸ್ಥೆ ಮಾಡಲಾಗುವುದು. ಅವರ ಚಿಕಿತ್ಸೆಯ ಮೇಲ್ವಿಚಾರಣೆಯನ್ನು ಇಲಾಖೆಯ ಅಧಿಕಾರಿಗಳೇ ಮಾಡಲಿದ್ದಾರೆ. ಆ ಮಕ್ಕಳನ್ನು ರೋಗಿಗಳಂತೆ ನೋಡದೇ ಸಾಮಾನ್ಯರಂತೆ ಪರಿಗಣಿಸಿ ಪಾಠ ಹೇಳಲು, ಅವರ ಆರೋಗ್ಯದ ಬಗ್ಗೆ ಗಮನ ಇಡಲು ಶಿಕ್ಷಕರಿಗೂ ವಿಶೇಷ ತರಬೇತಿ ಕೊಡಿಸಲಾಗುವುದು ಎಂದು ಸಚಿವರು ವಿವರಿಸಿದರು.

ಇಲಾಖೆಯಿಂದ ರಾಜ್ಯದಲ್ಲಿ 46 ಸಾವಿರ ಶಾಲೆಗಳ ನಿರ್ವಹಣೆ ಮಾಡುತ್ತಿದ್ದೇವೆ. ಕ್ಯಾನ್ಸರ್‌ಪೀಡಿತ 1,500 ಮಕ್ಕಳಿಗೆ ಬೆಂಗಳೂರಿನಲ್ಲಿ ವಸತಿಯುತ ಶಿಕ್ಷಣ ಕೊಡುವುದು ಹೊರೆ ಆಗುವುದಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ ಇದಕ್ಕೆ ಒಪ್ಪುತ್ತಾರೆ ಎಂಬ ವಿಶ್ವಾಸವಿದೆ. ಯೋಜನೆ ಅನುಷ್ಠಾನಕ್ಕೆ ಬಂದಾಗ ಎಲ್ಲರೂ ಖುಷಿ ಪಡಬಹುದು. ಮುಖ್ಯಮಂತ್ರಿಯವರ ಜೊತೆ ಮಾತನಾಡಿ ಶೀಘ್ರ ಯೋಜನೆ ಅಂತಿಮಗೊಳಿಸಲಾಗುವುದು ಎಂದರು.

### 'ಡಯೆಟ್‌ಗಳಿಗೆ ಕಳಪೆ ಸಾಧನೆ ಶಾಲೆ ಹೊಣೆ'

ಪ್ರತೀ ಜಿಲ್ಲೆಯಲ್ಲೂ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕಳಪೆ ಸಾಧನೆ ಮಾಡಿದ ಶಾಲೆಗಳ ಪಟ್ಟಿ ಮಾಡಿ ಈ ವರ್ಷದಿಂದ ಆಯಾ ಶಿಕ್ಷಣ ಹಾಗೂ ತರಬೇತಿ ಸಂಸ್ಥೆಗಳ (ಡಯೆಟ್) ತಜ್ಞರಿಗೆ ಹಂಚಿಕೆ ಮಾಡಲಾಗುವುದು ಎಂದು ಮಧು ಬಂಗಾರಪ್ಪ ತಿಳಿಸಿದರು.

'ಆ ಶಾಲೆಗಳ ಫಲಿತಾಂಶ ವೃದ್ಧಿ ಹೊಣೆ ಸಂಬಂಧಿಸಿದ ಶಿಕ್ಷಣತಜ್ಞರದ್ದು. ತಪ್ಪಿದಲ್ಲಿ ಅವರನ್ನು ಬೇರೆಡೆಗೆ ವರ್ಗಾವಣೆ ಮಾಡಲಾಗುವುದು. ಡಯೆಟ್‌ಗಳು ನಿಷ್ಕ್ರಿಯಗೊಂಡಿವೆ. ನಿರಾಶ್ರಿತರ ತಾಣಗಳಾಗಿವೆ ಎಂಬ ಆರೋಪ ತಪ್ಪಿಸಲು ಈ ಕ್ರಮ ಕೈಗೊಳ್ಳಲಾಗುತ್ತಿದೆ' ಎಂದು ಪ್ರಶ್ನೆಯೊಂದಕ್ಕೆ ಮಧು ಬಂಗಾರಪ್ಪ ಪ್ರತಿಕ್ರಿಯಿಸಿದರು.

# ಇಸ್ರೇಲ್ ಮೇಲೆ ಇರಾನ್ ಪ್ರತೀಕಾರ

## ಟೆಲ್ ಅವೀವ್ ಮೇಲೆ ದಾಳಿ, 3 ಸಾವು
## ಸುಮ್ಮನೆ ಬಿಡುವುದಿಲ್ಲ– ಖಮೇನಿ ಎಚ್ಚರಿಕೆ

**ಅಮೆರಿಕ ನೆರವು**

ಇಸ್ರೇಲ್ ಗುರಿಯಾಗಿಸಿ ಇರಾನ್ ಪ್ರಯೋಗಿಸುತ್ತಿರುವ ಕ್ಷಿಪಣಿಗಳ ತಡೆದುರುಳಿಸಲು ಅಮೆರಿಕ ಸೇನೆ ನೆರವಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇಸ್ರೇಲ್ ಗಡಿಯಲ್ಲಿ ಸೇನೆ ಸೌಲಭ್ಯಗಳನ್ನು ಅಮೆರಿಕ ನೆಲೆಯೂರಿಸುತ್ತಿದೆ. ಈ ವಲಯದಲ್ಲಿ ಅಗತ್ಯ ರಕ್ಷಣೆ ಒದಗಿಸುವುದು ಇದರ ಉದ್ದೇಶವಾಗಿದೆ ಎಂದು ತಿಳಿಸಿದೆ.

ದುಬೈ (ಎ.ಪಿ): ತನ್ನ ಅಣ್ವಸ್ತ್ರ, ಸೇನಾನೆಲೆಗಳ ಮೇಲೆ ನಡೆದ ದಾಳಿಗೆ ಪ್ರತೀಕಾರವಾಗಿ ಇರಾನ್, ಇಸ್ರೇಲ್‌ನ ಟೆಲ್ ಅವೀವ್, ಜೆರುಸಲೇಂ ನಗರಗಳ ಮೇಲೆ ಶನಿವಾರ ನೂರಾರು ಕ್ಷಿಪಣಿ, ಡ್ರೋನ್‌ಗಳ ಮೂಲಕ ದಾಳಿ ನಡೆಸಿದೆ.

ಶುಕ್ರವಾರ ರಾತ್ರಿ, ಶನಿವಾರ ಬೆಳಿಗ್ಗೆ ದಾಳಿ ನಡೆದಿದೆ. ಈ ದಾಳಿಯಿಂದಾಗಿ ಹಲವು ಕಟ್ಟಡಗಳು ತೀವ್ರ ಜಖಂಗೊಂಡಿವೆ. ನಗರಗಳ ಕೇಂದ್ರ ಭಾಗದಲ್ಲಿ ದಟ್ಟ ಹೊಗೆ, ಬೆಂಕಿ ಆವರಿಸಿದ್ದು ಕಂಡುಬಂತು. ಪ್ರಾಥಮಿಕ ವರದಿ ಪ್ರಕಾರ, ದಾಳಿಯಲ್ಲಿ ಮೂವರು ಸತ್ತಿದ್ದು, ಹಲವರು ಗಾಯಗೊಂಡಿದ್ದಾರೆ.

ಇರಾನ್‌ನ ಅಣ್ವಸ್ತ್ರ, ಸೇನಾನೆಲೆಗಳ ಮೇಲೆ ಶುಕ್ರವಾರ ಇಸ್ರೇಲ್ ದಾಳಿ ನಡೆಸಿತ್ತು. ಸದ್ಯ, ಇಸ್ರೇಲ್ ತನ್ನ ಪ್ರಜೆಗಳಿಗೆ ಸುರಕ್ಷಿತ ತಾಣಗಳಲ್ಲಿ ಆಶ್ರಯ ಪಡೆಯುವಂತೆ ಸಲಹೆ ಮಾಡಿದೆ.

'ತಾನು ಕೈಗೊಂಡ ಪ್ರತೀಕಾರ ದಾಳಿಯು ಗಂಭೀರ ಸ್ವರೂಪದ ದಂಡನಾ ಕ್ರಮವಾಗಿತ್ತು ಎಂದು ಇರಾನ್ ಸೇನೆಯು ವ್ಯಾಖ್ಯಾನಿಸಿದೆ' ಎಂದು ಇಸ್ಲಾಮಿಕ್ ರಿಪಬ್ಲಿಕ್ ನ್ಯೂಸ್ ಏಜೆನ್ಸಿ (ಐಆರ್‌ಎನ್‌ಎ) ವರದಿ ಮಾಡಿದೆ.

**ಖಮೇನಿ ಎಚ್ಚರಿಕೆ:** ಇರಾನ್‌ನ ಪರಮೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ, 'ಗಂಭೀರ ಅಪರಾಧ ಎಸಗಿರುವ ಅವರು (ಇಸ್ರೇಲ್) ಸುರಕ್ಷಿತವಾಗಿ ಪಾರಾಗಲು ಬಿಡುವುದಿಲ್ಲ' ಎಂದು ಎಚ್ಚರಿಸಿದ್ದಾರೆ. 'ದಾಳಿ ಮಾಡಿದೆವು, ಮುಗಿಯಿತು ಎಂದು ಅವರು ಭಾವಿಸಬೇಕಿಲ್ಲ. ಅವರು ದಾಳಿ ನಡೆಸಿದ್ದಾರೆ. ಯುದ್ಧ ಆರಂಭಿಸಿದ್ದಾರೆ. ಪ್ರತೀಕಾರ ಖಚಿತ' ಎಂದು ವಿಡಿಯೊ ಸಂದೇಶದಲ್ಲಿ ಹೇಳಿದ್ದಾರೆ.



ಇರಾನ್ ನಡೆಸಿದ ಕ್ಷಿಪಣಿ ದಾಳಿಯಿಂದಾಗಿ ಇಸ್ರೇಲ್‌ನ ರಿಶಾನ್ ಲೀಜಿಯಾನ್‌ನಲ್ಲಿ ವಸತಿ ಸಮುಚ್ಚಯಗಳು ತೀವ್ರ ಹಾನಿಗೊಂಡಿದ್ದು, ರಕ್ಷಣಾ ಸಿಬ್ಬಂದಿ ಪರಿಶೀಲಿಸಿದರು —ಎ.ಪಿ.ಚಿತ್ರ

ಈ ಮಧ್ಯೆ, ಇರಾನ್‌ನಲ್ಲಿನ ವಿಶ್ವಸಂಸ್ಥೆಯ ರಾಯಭಾರಿಯು, 'ಇಸ್ರೇಲ್‌ನ ದಾಳಿಯಿಂದಾಗಿ 78 ಜನರು ಮೃತಪಟ್ಟಿದ್ದು, ಕನಿಷ್ಠ 320 ಜನರು ಗಾಯಗೊಂಡಿದ್ದಾರೆ' ಎಂದು ತಿಳಿಸಿದ್ದಾರೆ.

ಟೆಲ್ ಅವೀವ್‌ನ ಆಸ್ಪತ್ರೆಯಲ್ಲಿ ಗಾಯಾಳುಗಳು ಚಿಕಿತ್ಸೆ ಪಡೆದಿದ್ದಾರೆ. ಇಸ್ರೇಲ್‌ನ ಅಗ್ನಿಶಾಮಕ ದಳವು ಹೇಳಿಕೆ ನೀಡಿದ್ದು, ಕಟ್ಟಡ ಸಂಕೀರ್ಣದ ಮೇಲೆ ನಡೆದ ದಾಳಿಯಿಂದ ಹಲವರು ಗಾಯಗೊಂಡಿದ್ದಾರೆ ಎಂದು ತಿಳಿಸಿದೆ.

ಇಸ್ರೇಲ್‌ನ ರಿಶಾನ್ ಲೀಜಿಯಾನ್ ನಗರದ ಮೇಲೆ ಇರಾನ್ ಕ್ಷಿಪಣಿ ದಾಳಿ ನಡೆಸಿದೆ. ಇಬ್ಬರು ಸತ್ತಿದ್ದು, ಕನಿಷ್ಠ 19 ಮಂದಿ ಗಾಯಗೊಂಡಿದ್ದಾರೆ. ನಾಲ್ಕು ಮನೆಗಳಿಗೆ ತೀವ್ರ ಸ್ವರೂಪದ ಹಾನಿಯಾಗಿದೆ.

ಇರಾನ್‌ನ ಅರೆ ಸರ್ಕಾರಿ ಸುದ್ದಿಸಂಸ್ಥೆ 'ತಸ್ನಿಂ', ಟೆಹರಾನ್‌ನ ಮೆಹ್ರಾಬಾದ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬೆಂಕಿ ಕಾಣಿಸಿಕೊಂಡಿದೆ ಎಂದು ತಿಳಿಸಿದ್ದು 'ಎಕ್ಸ್'ನಲ್ಲಿ ವಿಡಿಯೊ ಹಂಚಿಕೊಂಡಿದೆ.

ಟೆಲ್ ಅವಿವ್ ನಗರದಲ್ಲಿ ನಡೆದ ದಾಳಿಯಲ್ಲಿ 34 ಜನರು ಗಾಯಗೊಂಡಿದ್ದಾರೆ.

▶6

### ಗಾಜಾ ಪಟ್ಟಿ: ದಾಳಿಗೆ 16 ಬಲಿ

ದೇರ್ ಅಲ್ ಬಲಾಹ್ (ಗಾಜಾ ಪಟ್ಟಿ) (ಎ.ಪಿ): ಗಾಜಾ ಪಟ್ಟಿಯಲ್ಲಿ ಇಸ್ರೇಲ್ ಸೇನೆ ದಾಳಿ ಮುಂದುವರಿಸಿದ್ದು, ಕನಿಷ್ಠ 16 ಮಂದಿ ಪ್ಯಾಲೆಸ್ಟೀನಿಯರು ಮೃತಪಟ್ಟಿದ್ದಾರೆ.


ಇಸ್ರೇಲ್ ಮತ್ತು ಅಮೆರಿಕ ಬೆಂಬಲಿತ ಆಹಾರ ವಿತರಣೆ ಕೇಂದ್ರಗಳ ಮೇಲೆ ನಡೆದ ದಾಳಿ ಸಂದರ್ಭದಲ್ಲಿ 11 ಮಂದಿ ಪ್ಯಾಲೆಸ್ಟೀನಿಯರು ಸತ್ತಿದ್ದಾರೆ.

ಇಸ್ರೇಲ್ ಸೇನೆ ಜನಸಮೂಹವನ್ನು ಗುರಿಯಾಗಿಸಿ ಗುಂಡಿನ ದಾಳಿ ನಡೆಸಿತು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಇಸ್ರೇಲ್ ಸೇನೆ ಈ ಕುರಿತು ತಕ್ಷಣಕ್ಕೆ ಪ್ರತಿಕ್ರಿಯೆ ನೀಡಿಲ್ಲ.

### ಪರಮಾಣು ಸೌಲಭ್ಯ ನಾಶ –ವಿಶ್ವಸಂಸ್ಥೆ

ದುಬೈ (ಎ.ಪಿ): 'ಇರಾನ್‌ನ ಪ್ರಮುಖ ಪರಮಾಣು ಸೌಲಭ್ಯವನ್ನು ಇಸ್ರೇಲ್ ನಾಶ ಪಡಿಸಿದೆ' ಎಂದು ವಿಶ್ವಸಂಸ್ಥೆಯ ಪರಮಾಣು ವಿಭಾಗದ ಮುಖ್ಯಸ್ಥ ರಫೇಲ್ ಗ್ರಾಸ್ ಪ್ರತಿಕ್ರಿಯಿಸಿದ್ದಾರೆ.

ನಟಾನ್ಜ್‌ನಲ್ಲಿನ ಈ ನೆಲೆಯ ನೆಲಮಹಡಿ ಹೊರತುಪಡಿಸಿ ಕಟ್ಟಡದ ಉಳಿದ ಭಾಗ ಪೂರ್ಣ ಹಾನಿಯಾಗಿದೆ. ತುರ್ತು ವಿದ್ಯುತ್ ಉತ್ಪಾದನಾ ಸೌಲಭ್ಯವೂ ಹಾನಿಯಾಗಿದೆ. ಘಟಕದ ಕೇಂದ್ರ ಭಾಗಕ್ಕೆ ಹೆಚ್ಚಿನ ಧಕ್ಕೆಯಾಗಿಲ್ಲ. ವಿದ್ಯುತ್ ಪೂರೈಕೆ ವ್ಯವಸ್ಥೆಗೆ ತೀವ್ರ ಹಾನಿ ಆಗಿದ್ದು, ಹೆಚ್ಚಿನ ಪರಿಣಾಮ ಬೀರಿದೆ ಎಂದು ಅವರು ತಿಳಿಸಿದ್ದಾರೆ.



ಯಾದಗಿರಿಯಲ್ಲಿ 'ಆರೋಗ್ಯ ಆವಿಷ್ಕಾರ' ಯೋಜನೆಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಚಾಲನೆ ನೀಡಿದರು. ಸಚಿವ ಈಶ್ವರ ಖಂಡ್ರೆ, ಕೆಕೆಆರ್‌ಡಿಬಿ ಅಧ್ಯಕ್ಷ ಡಾ.ಅಜಯ್ ಸಿಂಗ್, ಸಚಿವರಾದ ದಿನೇಶ್ ಗುಂಡೂರಾವ್, ಶರಣಬಸಪ್ಪ ದರ್ಶನಾಪುರ, ರಾಜಾ ವೇಣುಗೋಪಾಲ ನಾಯಕ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ಶಾಸಕರಾದ ಚನ್ನಾರೆಡ್ಡಿ ಪಾಟೀಲ ತುನ್ನೂರು, ಸಂಸದ ಜಿ.ಕುಮಾರನಾಯಕ, ಸಚಿವ ಎಚ್‌.ಸಿ.ಮಹದೇವಪ್ಪ ಭಾಗವಹಿಸಿದ್ದರು

# ಶಿಕ್ಷಕರು, ಬ್ಯಾಕ್‌ಲಾಗ್ ಹುದ್ದೆ ಭರ್ತಿಮಾಡಿ: ಖರ್ಗೆ ಸಲಹೆ

## ಮೈಸೂರು, ಬೆಂಗಳೂರಿನಂತೆ ಅಭಿವೃದ್ಧಿ ಮಾಡಲು ಒತ್ತಾಯ

ಪ್ರಜಾವಾಣಿ ವಾರ್ತೆ

ಯಾದಗಿರಿ: 'ಕಲ್ಯಾಣ ಕರ್ನಾಟಕ ಭಾಗದಲ್ಲಿ ಖಾಲಿ ಇರುವ ಶಿಕ್ಷಕರ, ಬ್ಯಾಕ್‌ಲಾಗ್ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕು' ಎಂದು ರಾಜ್ಯಸಭೆ ವಿರೋಧ ಪಕ್ಷದ ನಾಯಕರೂ ಆಗಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಒತ್ತಾಯಿಸಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಜಿಲ್ಲಾ ಕ್ರೀಡಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 'ಆರೋಗ್ಯ ಆವಿಷ್ಕಾರ' ಯೋಜನೆಗೆ ಚಾಲನೆ ನೀಡಿ ಅವರು ಮಾತನಾಡಿದರು.

'ಕಲ್ಯಾಣ ಕರ್ನಾಟಕ ಭಾಗದಲ್ಲಿ ಇಂಗ್ಲಿಷ್, ವಿಜ್ಞಾನ, ಗಣಿತ ಶಿಕ್ಷಕರ ಹುದ್ದೆಗಳು ಖಾಲಿ ಇರುವ ಕಾರಣ ಫಲಿತಾಂಶದಲ್ಲಿ ಈ ಭಾಗದ ಜಿಲ್ಲೆಗಳು 30, 31, 32, 33, 34, 35ನೇ ಸ್ಥಾನ ಪಡೆಯುತ್ತಿವೆ. ಅಲ್ಲದೇ ಬ್ಯಾಕ್‌ಲಾಗ್ ಹುದ್ದೆಗಳೂ ಹೆಚ್ಚಿನ ಸಂಖ್ಯೆಯಲ್ಲಿ ಖಾಲಿ ಉಳಿದಿರುವುದರಿಂದ ಈ ಭಾಗ ಹಿಂದುಳಿದಿದೆ. ಹೀಗಾಗಿ ಕೂಡಲೇ ಎಲ್ಲ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕು' ಎಂದು ಖರ್ಗೆ ಅವರು ವೇದಿಕೆ ಮೇಲಿದ್ದ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಅವರಿಗೆ ಸಲಹೆ ನೀಡಿದರು.

'ಈ ಪ್ರದೇಶದಲ್ಲಿ ಉದ್ಯೋಗ ನೇಮಕಾತಿಗೆ 371 (ಜೆ) ಕಾಯ್ದೆಯಲ್ಲಿ ಹಣಕಾಸು ಇಲಾಖೆಯ ಅನುಮೋದನೆ ಪಡೆಯುವ ಅವಶ್ಯಕತೆ ಇಲ್ಲ. ಹೀಗಾಗಿ ಸರ್ಕಾರ ಹೆಚ್ಚಿನ ಮುತುವರ್ಜಿ ವಹಿಸಿ ಸ್ಥಳೀಯವರಿಗೆ ಉದ್ಯೋಗ ನೀಡುವತ್ತ ಗಮನಹರಿಸಬೇಕು' ಎಂದರು.

**ಮೈಸೂರು, ಬೆಂಗಳೂರಿನಂತೆ ಮಾಡಿ:** ಈ ಹಿಂದೆ ಮುಖ್ಯಮಂತ್ರಿಯಾಗಿದ್ದಾಗ ಎಸ್.ಎಂ. ಕೃಷ್ಣ ಅವರು ಬೆಂಗಳೂರನ್ನು ಸಿಂಗಪುರ ಮಾಡುತ್ತೇನೆ ಎಂದಿದ್ದರು. ಕಲ್ಯಾಣ ಕರ್ನಾಟಕ ಭಾಗವನ್ನು ಸಿಂಗಪುರ ಮಾಡುವುದು ಬೇಡ. ಬದಲಾಗಿ ಸಿದ್ದರಾಮಯ್ಯರ ಮೈಸೂರು ಹಾಗೂ ಡಿ.ಕೆ.ಶಿವಕುಮಾರರ ಬೆಂಗಳೂರಿನಂತೆ ಅಭಿವೃದ್ಧಿ ಮಾಡಿದರೆ ಸಾಕು. ಇದಕ್ಕಾಗಿ ಅಗತ್ಯ ಅನುದಾನ ನೀಡಬೇಕು' ಎಂದು ಸಲಹೆ ನೀಡಿದರು.

### '₹13 ಸಾವಿರ ಕೋಟಿ ಅನುದಾನ'

'ಕಲಬುರಗಿಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ₹857 ಕೋಟಿ ವೆಚ್ಚದ ಆರೋಗ್ಯ ಆವಿಷ್ಕಾರ ಯೋಜನೆಗಳಿಗೆ ಅನುಮೋದನೆ ನೀಡಿದ್ದರಿಂದ ಈಗ ಅದಕ್ಕೆ ಚಾಲನೆ ನೀಡಲಾಗುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ಅಭಿವೃದ್ಧಿ ಸೂಚ್ಯಂಕ ನಿಗದಿ ನಿಟ್ಟಿನಲ್ಲಿ ಆರ್ಥಿಕ ತಜ್ಞ ಗೋವಿಂದರಾವ್ ಅಧ್ಯಕ್ಷತೆಯಲ್ಲಿ ಉನ್ನತ ಸಮಿತಿ ರಚಿಸಿದ್ದು, ಸಮಿತಿ ವರದಿಯಂತೆ ಮುಂದಿನ ದಿನಗಳಲ್ಲಿ ಈ ಭಾಗಕ್ಕೆ ವಿಶೇಷ ಅನುದಾನ ನೀಡಲಾಗುವುದು' ಎಂದು ಹೇಳಿದರು.

'ನಮ್ಮ ಸರ್ಕಾರ ಬಂದ ನಂತರ ₹13 ಸಾವಿರ ಕೋಟಿ ಅನುದಾನವನ್ನು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ನೀಡಲಾಗಿದೆ. ಈ ಮೂಲಕ ದಾಖಲೆ ಬರೆದಿದ್ದೇವೆ. ಅಧಿಕಾರಕ್ಕೆ ಬಂದ ಆರು ತಿಂಗಳ ಅವಧಿಯಲ್ಲಿಯೇ ಐದು ಗ್ಯಾರಂಟಿ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಕ್ಕೆ ತಂದು, ಇದುವರೆಗೆ ₹90 ಸಾವಿರ ಕೋಟಿ ಖರ್ಚು ಮಾಡಿದ್ದೇವೆ' ಎಂದು ತಿಳಿಸಿದರು.

**ಮುಖ್ಯಾಂಶಗಳು**

- 'ಆರೋಗ್ಯ ಆವಿಷ್ಕಾರ' ಯೋಜನೆಗೆ ಚಾಲನೆ
- 12 ಪ್ರಾಥಮಿಕ ಆರೋಗ್ಯ ಕೇಂದ್ರಗಳ ನಿರ್ಮಾಣ
- 6 ಸಮುದಾಯ ಆರೋಗ್ಯ ಕೇಂದ್ರಗಳ ನಿರ್ಮಾಣ

## ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್

# ದಕ್ಷಿಣ ಆಫ್ರಿಕಾ ಪಡೆಗೆ ಕಿರೀಟ

ಲಂಡನ್ (ಎಪಿ): ದಕ್ಷಿಣ ಆಫ್ರಿಕಾ ಕ್ರಿಕೆಟ್ ತಂಡವು ಶನಿವಾರ ವಿಶ್ವ ಟೆಸ್ಟ್ ಕ್ರಿಕೆಟ್ ಚಾಂಪಿಯನ್ ಆಗಿ ಹೊರಹೊಮ್ಮಿತು. ಇದರೊಂದಿಗೆ 27 ವರ್ಷಗಳ ನಂತರ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಪ್ರಶಸ್ತಿ ಗೆದ್ದ ಸಾಧನೆಯನ್ನೂ ತಂಡವು ಮಾಡಿತು.

**ಫೈನಲ್ ಸ್ಕೋರ್**

**ಮೊದಲ ಇನಿಂಗ್ಸ್**
- ಆಸ್ಟ್ರೇಲಿಯಾ **212** (56.4 ಓವರ್‌ಗಳಲ್ಲಿ)
- ದಕ್ಷಿಣ ಆಫ್ರಿಕಾ **138** (57.1 ಓವರ್‌ಗಳಲ್ಲಿ)

**ಎರಡನೇ ಇನಿಂಗ್ಸ್**
- ಆಸ್ಟ್ರೇಲಿಯಾ **207** (65 ಓವರ್‌ಗಳಲ್ಲಿ)
- ದಕ್ಷಿಣ ಆಫ್ರಿಕಾ 5ಕ್ಕೆ**282** (83.4 ಓವರ್‌ಗಳಲ್ಲಿ)

**ಫಲಿತಾಂಶ:** ದಕ್ಷಿಣ ಆಫ್ರಿಕಾ ತಂಡಕ್ಕೆ 5 ವಿಕೆಟ್‌ಗಳ ಜಯ

**ಪಂದ್ಯದ ಆಟಗಾರ:** ಏಡನ್ ಮರ್ಕರಂ




ದಕ್ಷಿಣ ಆಫ್ರಿಕಾ ತಂಡದ ನಾಯಕ ತೆಂಬಾ ಬವುಮಾ ತಮ್ಮ ಮಗನೊಂದಿಗೆ ಸಂಭ್ರಮಿಸಿದರು

**ದ.ಆಫ್ರಿಕಾದ ಐಸಿಸಿ ಟ್ರೋಫಿ ಸಾಧನೆ**

- 1998ರಲ್ಲಿ ಐಸಿಸಿ ಚಾಂಪಿಯನ್ಸ್ ಟ್ರೋಫಿ ಜಯಿಸಿತ್ತು. ಫೈನಲ್‌ನಲ್ಲಿ ವೆಸ್ಟ್ ಇಂಡೀಸ್ ಪರಾಭವಗೊಂಡಿತ್ತು
- 2024ರಲ್ಲಿ ಟಿ20 ವಿಶ್ವಕಪ್ ಟೂರ್ನಿಯಲ್ಲಿ ರನ್ನರ್ಸ್ ಅಪ್ ಆಗಿತ್ತು. ಫೈನಲ್‌ನಲ್ಲಿ ಭಾರತ ಗೆದ್ದಿತ್ತು
- 2025ರಲ್ಲಿ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಆಸ್ಟ್ರೇಲಿಯಾ ಎದುರು ಜಯಿಸಿತು

## ಒಳನೋಟ

### ರಾಜ್ಯದಲ್ಲಿ ವಿದೇಶಿ ಹಣ್ಣುಗಳ ದಿಬ್ಬಣ

ರಾಜ್ಯದ ವಿವಿಧೆಡೆ ಹವ್ಯಾಸಕ್ಕಾಗಿ ವಿದೇಶಿ ಹಣ್ಣುಗಳನ್ನು ಬೆಳೆಯಲಾಗುತ್ತಿದೆ. ಈಗಲೂ ಹವ್ಯಾಸಿ ಬೆಳೆಗಾರರ ತೋಟಗಳಲ್ಲಿ 250ಕ್ಕೂ ಹೆಚ್ಚು ವಿಧದ ವಿದೇಶಿ ಹಣ್ಣುಗಳಿವೆ. ಈ ಹಣ್ಣುಗಳ ದಿಬ್ಬಣದಲ್ಲಿ ಮಲೇಷ್ಯಾದ ರಂಬುಟಾನ್, ದುರಿಯನ್, ಮೆಕ್ಸಿಕೊ ದೇಶದ ಡ್ರ್ಯಾಗನ್ ಫ್ರೂಟ್ ನಂತಹ ಹಣ್ಣುಗಳು ಸೇರಿಕೊಂಡಿವೆ.



## ಬೃಹತ್ ಕಾರ್ಯಕ್ರಮಗಳಲ್ಲಿ ಜನಸಂದಣಿ ನಿರ್ವಹಣೆಗಾಗಿ ಕಾನೂನು ಜಾರಿಗೆ ನಿರ್ಧಾರ

# ಕಾಲ್ತುಳಿತಕ್ಕೆ ಹೊಣೆ: 3 ವರ್ಷ ಜೈಲು

● ರಾಜೇಶ್ ರೈ ಚಟ್ಲ

ಬೆಂಗಳೂರು: ಆರ್‌ಸಿಬಿ ತಂಡದ ವಿಜಯೋತ್ಸವದ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತ ಸಂಭವಿಸಿ 11 ಜನರು ಮೃತಪಟ್ಟ ಬೆನ್ನಲ್ಲೆ, ಬೃಹತ್ ರಾಜಕೀಯ ರ‍್ಯಾಲಿ, ದೊಡ್ಡ ಸಮಾವೇಶ, ಸಾಮೂಹಿಕ ಸಮಾರಂಭಗಳಿಗೆ ಸೇರುವ ಜನಸಾಗರವನ್ನು ಪರಿಣಾಮಕಾರಿಯಾಗಿ ನಿರ್ವಹಿಸಿ, ನಿಯಂತ್ರಿಸುವ ಉದ್ದೇಶದಿಂದ ಕಾನೂನು ಜಾರಿಗೆ ತರಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಈ ಕಾನೂನು ಜಾರಿಗೆ ಬಂದರೆ, ಬೃಹತ್ ಕಾರ್ಯಕ್ರಮ ಆಯೋಜಿಸಿ ಕಾಲ್ತುಳಿದಂಥ ಘಟನೆ ಸಂಭವಿಸಿ ಸಾವುನೋವು, ದೈಹಿಕವಾಗಿ ಗಾಯಕ್ಕೆ ಕಾರಣರಾದರೆ, ಕಾರ್ಯಕ್ರಮಗಳ ಆಯೋಜಕರು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಅನುಭವಿಸಬೇಕಾಗುತ್ತದೆ. ಅಲ್ಲದೆ, ₹5 ಲಕ್ಷ ದಂಡ ಕಟ್ಟಬೇಕಾಗುತ್ತದೆ. ಜತೆಗೆ,



ಇಂತಹ ಘಟನೆಯು ಜಾಮೀನುರಹಿತ ಪ್ರಕರಣ ಎಂದು ಪರಿಗಣಿಸಲು ಮತ್ತು ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ ಮೂಲಕ ವಿಚಾರಣೆಗೆ ಒಳಪಡಿಸಲು ಉದ್ದೇಶಿತ ಕಾನೂನು ಅವಕಾಶ ಕಲ್ಪಿಸಲಿದೆ.


ಕಾನೂನು ರೂಪಿಸುವ ಉದ್ದೇಶದಿಂದ ಕಾನೂನು ಮತ್ತು ಸಂಸದೀಯ ಇಲಾಖೆಯು 'ಕರ್ನಾಟಕ ಜನಸಂದಣಿ ನಿಯಂತ್ರಣ (ಸಾಮೂಹಿಕ ಸಭೆ, ಕಾರ್ಯಕ್ರಮಗಳು ಮತ್ತು ಸ್ಥಳಗಳಲ್ಲಿ ಜನಸಂದಣಿ ನಿರ್ವಹಣೆ) ಮಸೂದೆ–2025'ರ ಕರಡು ಸಿದ್ಧಪಡಿಸಿದೆ. ಕರಡು ಮಸೂದೆಯು 'ಪ್ರಜಾವಾಣಿ'ಗೆ ಲಭ್ಯವಾಗಿದೆ.

▶6

### ಜಿಲ್ಲಾಧಿಕಾರಿಗೆ ಅಧಿಕಾರ

'ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ–2023'ರ ನಿಬಂಧನೆಗಳಿಗೆ ಯಾವುದೇ ಧಕ್ಕೆ ಆಗದಂತೆ ಜಿಲ್ಲಾ ಮ್ಯಾಜಿಸ್ಟ್ರೇಟ್ ಆಗಿರುವ ಜಿಲ್ಲಾಧಿಕಾರಿ ತಮ್ಮ ಅಧಿಕಾರದ ವ್ಯಾಪ್ತಿಯಲ್ಲಿನ ಯಾವುದೇ ಸ್ಥಳದಲ್ಲಿ, ಈ ಕಾಯ್ದೆಯ ನಿಬಂಧನೆಗಳ ಅಡಿಯಲ್ಲಿ ವಿವಿಧ ಗುಂಪುಗಳು, ಜಾತಿಗಳು ಅಥವಾ ಸಮುದಾಯಗಳ ಸದಸ್ಯರ ನಡುವೆ ಶಾಂತಿ ಭಂಗ ಅಥವಾ ಭಿನ್ನಾಭಿಪ್ರಾಯ ಸೃಷ್ಟಿಯಾಗುವ ಭೀತಿ ಇದೆ ಎಂದು ಅರಿವಾದರೆ, ಲಿಖಿತ ಆದೇಶದ ಮೂಲಕ ಕಾರ್ಯಕ್ರಮ ನಿಷೇಧಿಸಲೂ ಈ ಮಸೂದೆಯಲ್ಲಿ ಅವಕಾಶ ಮಾಡಿಕೊಡಲಾಗಿದೆ.

ಒಂದು ಸಮುದಾಯ, ಜಾತಿ ಅಥವಾ ಗುಂಪು ಮತ್ತೊಂದು ಸಮುದಾಯ, ಜಾತಿ ಅಥವಾ ಗುಂಪಿನ ವಿರುದ್ಧ ಬೆದರಿಸುವ, ಬೆದರಿಕೆ ಹಾಕುವ ಅಥವಾ ದ್ವೇಷ ಭಾವನೆ ಉತ್ತೇಜಿಸುವ ಉದ್ದೇಶವನ್ನು ಹೊಂದಿದೆ ಅಥವಾ ಅಂತಹ ಘಟನೆಯು ಕಾರ್ಯಕ್ರಮದಲ್ಲಿ ಭಾಗವಹಿಸುವ ವ್ಯಕ್ತಿಗಳಿಗೆ ಸಾವು ಅಥವಾ ದೈಹಿಕ ಗಾಯ ಉಂಟುಮಾಡಬಹುದು ಎಂದು ಜಿಲ್ಲಾಧಿಕಾರಿಗೆ ಅನಿಸಿದರೆ, ಕಾರ್ಯಕ್ರಮವನ್ನು ನಿಷೇಧಿಸಬಹುದು ಎಂದೂ ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ.



**ಕಾಲ್ತುಳಿತ ಘಟನೆಯನ್ನು ಗಮನದಲ್ಲಿ ಇಟ್ಟುಕೊಂಡು, ಬೃಹತ್ ಕಾರ್ಯಕ್ರಮಗಳಲ್ಲಿ ಜನಸಂದಣಿ ನಿರ್ವಹಣೆಗೆ ಕಾನೂನು ಜಾರಿಗೆ ಕರಡು ಮಸೂದೆ ಸಿದ್ಧಪಡಿಸಲಾಗಿದೆ**

**ಎಚ್‌.ಕೆ. ಪಾಟೀಲ,** ಕಾನೂನು ಮತ್ತು ಸಂಸದೀಯ ಸಚಿವ

### ಅನುಮತಿ ಹೇಗೆ?


- ಕಾರ್ಯಕ್ರಮವನ್ನು ಆಯೋಜಿಸುವವರು ನಿಗದಿತ ಸಮಯಕ್ಕೂ ಮೊದಲು, ಭಾಗವಹಿಸುವವರ ಅಂದಾಜು ಜನರ ವಿವರಗಳೊಂದಿಗೆ ಆ ವ್ಯಾಪ್ತಿಯ ಪೊಲೀಸ್ ಠಾಣೆಗೆ ಅರ್ಜಿ ಸಲ್ಲಿಸಬೇಕು.
- ಪೊಲೀಸ್ ಠಾಣೆಯು ಷರತ್ತುಗಳನ್ನು ವಿಧಿಸಿ ಕಾರ್ಯಕ್ರಮ ನಡೆಸಲು ಅನುಮತಿ ನೀಡಬಹುದು.
- ನಿಗದಿಪಡಿಸಿದ ಷರತ್ತುಗಳಿಗೆ ಒಳಪಟ್ಟು, ಕಾರಣಗಳನ್ನು ನೀಡುವ ಮೂಲಕ ದಿನ, ಸಮಯ ಅಥವಾ ಸ್ಥಳವನ್ನು ಪೊಲೀಸ್ ಅಧಿಕಾರಿಗಳು ಬದಲಾಯಿಸಬಹುದು.
- ತುರ್ತು ಸಂದರ್ಭದಲ್ಲಿ ಷರತ್ತುಗಳನ್ನು ವಿಧಿಸಿ ನಿಗದಿತ ಕಾರ್ಯಕ್ರಮವನ್ನು ರದ್ದುಗೊಳಿಸಬಹುದು ಅಥವಾ ಮುಂದೂಡಬಹುದು ಅಥವಾ ಕಾರ್ಯಕ್ರಮ ನಡೆಯುವ ಸ್ಥಳವನ್ನು ಸಂಪೂರ್ಣವಾಗಿ ಬದಲಾಯಿಸಬಹುದು.





# ಶ್ರೀಸಾಮಾನ್ಯ ಸಂಗಡ ಆರ್.ಕೆ.ಲಕ್ಷ್ಮಣ್

'ಆರ್.ಕೆ. ಲಕ್ಷ್ಮಣ್ ಅವರ ಕಣ್ಣುಗಳಲ್ಲಿ' ಎಂಬ ಶೀರ್ಷಿಕೆಯಡಿ ಆಯೋಜನೆಗೊಂಡಿರುವ ಈ ಪ್ರದರ್ಶನವು ಜೂನ್ 28ರವರೆಗೆ ಬೆಂಗಳೂರಿನ ಎಂ.ಜಿ.ರಸ್ತೆಯಲ್ಲಿರುವ ಇಂಡಿಯನ್ ಕಾರ್ಟೂನ್ ಗ್ಯಾಲರಿಯಲ್ಲಿ ಇರಲಿದೆ



'ಕಾಮನ್‌ಮ್ಯಾನ್'ನೊಂದಿಗೆ ಆರ್.ಕೆ.ಲಕ್ಷ್ಮಣ್ ವ್ಯಂಗ್ಯಚಿತ್ರ

• ರೂಪಾ ಕೆ.ಎಂ.

**ಒಂದು** ದೇಶದ ಸಂಪನ್ನತೆಯ ಸೂಚಕಗಳು ಆ ದೇಶದ ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳಷ್ಟೆ ಅಲ್ಲ; ಆ ದೇಶದಲ್ಲಿ ವಾಸಮಾಡುವ ಜವಾಬ್ದಾರಿಯುತ ಶ್ರೀಸಾಮಾನ್ಯರ ಪ್ರಜ್ಞಾವಂತ ನಡವಳಿಕೆಯೂ ಆಗಿರುತ್ತದೆ. ಆಡಳಿತ ವ್ಯವಸ್ಥೆಯ ಪ್ರತಿ ಚಲನವಲನಗಳನ್ನು, ಸಮಾಜದ ಆಗುಹೋಗುಗಳನ್ನು ಸೂಕ್ಷ್ಮವಾಗಿ ಗಮನಿಸುವ ಪ್ರಜ್ಞಾವಂತಿಕೆಯ 'ಚಕ್ಷು' ಶ್ರೀಸಾಮಾನ್ಯರಿಗೆ ಇರಬೇಕು. ಅಂಥದ್ದೊಂದು ವಿಶೇಷ ಪಾತ್ರ 'ಕಾಮನ್ ಮ್ಯಾನ್' ಅನ್ನು ವ್ಯಂಗ್ಯಚಿತ್ರ ಲೋಕಕ್ಕೆ ಕೊಟ್ಟ ಶ್ರೇಯ ಆರ್.ಕೆ.ಲಕ್ಷ್ಮಣ್ ಅವರದ್ದು.

ತಮ್ಮ ಮೊನಚಾದ ರೇಖೆಗಳ ಮೂಲಕ ಗಂಭೀರ ವಿಡಂಬನೆಗೆ ಹೆಸರಾದ ಆರ್.ಕೆ.ಲಕ್ಷ್ಮಣ್ ಅವರು ರಚಿಸಿದ 78 ವ್ಯಂಗ್ಯಚಿತ್ರಗಳನ್ನು ಬೆಂಗಳೂರಿನ ಇಂಡಿಯನ್ ಕಾರ್ಟೂನ್ ಗ್ಯಾಲರಿಯಲ್ಲಿ ಪ್ರದರ್ಶನಕ್ಕೆ ಇಡಲಾಗಿದೆ. ಕೆಲವನ್ನು ಹೊರತುಪಡಿಸಿದರೆ, ಇಲ್ಲಿ ಬಹುತೇಕ ರಾಜಕೀಯ ವಿಡಂಬನೆಯನ್ನು ಬಿಂಬಿಸುವ ವ್ಯಂಗ್ಯಚಿತ್ರಗಳೇ ಇವೆ.

ಅರಳಿದ ಗುಲಾಬಿಯನ್ನು ನೋಡುತ್ತ ಕುಳಿತ ನೆಹರೂ, ಸಂಗೀತದ ಆಲಾಪನೆಯಲ್ಲಿ ತೊಡಗಿಕೊಂಡಿರುವ ಎಂ.ಎಸ್.ಸುಬ್ಬುಲಕ್ಷ್ಮಿ, ಎಲ್.ಕೆ.ಅಡ್ವಾಣಿ, ಪೆರಿಯಾರ್, ಜಯಪ್ರಕಾಶ್ ನಾರಾಯಣ್, ಜಾಕೀರ್ ಹುಸೇನ್, ದೇವರಾಜ ಅರಸು... ಹೀಗೆ ಹಲವು ಖ್ಯಾತನಾಮರನ್ನು ತಮ್ಮ ತೀಕ್ಷ್ಣ ರೇಖೆಗಳ ಮೂಲಕ ವಿಡಂಬನೆ ಮಾಡಿದ್ದಾರೆ. ಈ ವ್ಯಂಗ್ಯಚಿತ್ರಗಳು ನೋಡುಗರ ಮುಖದಲ್ಲಿ ಒಂದು ನಗುವಿನ ಗೆರೆಯನ್ನು ಮೂಡಿಸುವುದಷ್ಟೆ ಅಲ್ಲದೇ, ಸಂದರ್ಭವನ್ನು ಆಳವಾಗಿ ಅರಿತುಕೊಂಡು ಪ್ರಶ್ನೆ ಮಾಡುವ ಛಾತಿಯನ್ನು ಬೆಳೆಸಿದರೆ ಆಶ್ಚರ್ಯವಿಲ್ಲ. ಇಲ್ಲಿ ರೇಖೆಗಳು ಬರೀ ರೇಖೆಗಳಲ್ಲ. ಹರಿತ ಲೇಖನಿ ಒಸರುವ ಪದಗಳಿಂದಲೂ ಕಟ್ಟಿಕೊಡಲು ಸಾಧ್ಯವೇ ಆಗದ, ಹಲವು ಹೊಳಹುಗಳನ್ನು ಬಹಳ ನಿರ್ಭಿಡೆಯಿಂದ ಚಿತ್ರಿಸಿವೆ.



ಕಾರ್ಟೂನ್ ಗ್ಯಾಲರಿಯಲ್ಲಿ ವ್ಯಂಗ್ಯಚಿತ್ರಗಳನ್ನು ವೀಕ್ಷಿಸುತ್ತಿರುವ ಯುವತಿಯರು ಚಿತ್ರ: ಪ್ರಶಾಂತ್ ಎಚ್.ಜಿ.

ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ ಬೇರೆ ಬೇರೆ ಕ್ಷೇತ್ರಗಳಲ್ಲಿ ರೂಪುಗೊಂಡ ಮಹೋನ್ನತ ವ್ಯಕ್ತಿಗಳನ್ನು ಆಯಾ ಸಂದರ್ಭಕ್ಕೆ ಅನುಗುಣವಾಗಿ ವಿಡಂಬನೆ ಮಾಡಿದ್ದಾರೆ. ಸಂದರ್ಭದ ಸಂಕ್ಷಿಪ್ತ ವಿವರ ತಿಳಿದಿದ್ದರೆ ಈ ವ್ಯಂಗ್ಯಚಿತ್ರಗಳ ಮಹತ್ವವನ್ನು ಇನ್ನಷ್ಟು ಅರ್ಥ ಮಾಡಿಕೊಳ್ಳಬಹುದು. ಇಲ್ಲಿರುವ ವ್ಯಂಗ್ಯಚಿತ್ರಗಳಲ್ಲಿ ಯಾರ ಘನತೆಗೂ ಒಂದಿಷ್ಟು ಮುಕ್ಕಾಗದಂತೆ, ಆದರೆ ದಾಟಿಸಬೇಕಾದ ಸಂದೇಶವನ್ನು ಮಹತ್ವದ ರೀತಿಯಲ್ಲಿ ದಾಟಿಸುವ ಲಕ್ಷ್ಮಣ್ ಅವರ ವಿಡಂಬನಾ ಶೈಲಿ ಎಂಥವರನ್ನು ಬೆರಗಾಗಿಸುತ್ತದೆ.

ವಿವಿಧ ಪತ್ರಿಕೆಗಳಲ್ಲಿ ಜನಪ್ರಿಯಗೊಂಡಿದ್ದ ಅವರ ವ್ಯಂಗ್ಯಚಿತ್ರಗಳನ್ನು ನೆಚ್ಚಿಕೊಳ್ಳದವರೇ ಇಲ್ಲ. ಆರ್.ಕೆ.ಲಕ್ಷ್ಮಣ್ ಅವರ 'ಕಾಮನ್ ಮ್ಯಾನ್' ಎಂಬುದು ಅದೆಂಥ ಚಂದದ ರೂಪಕ! ಎಲ್ಲ ಕಾಲಘಟ್ಟಗಳಲ್ಲಿಯೂ ಈ 'ಕಾಮನ್ ಮ್ಯಾನ್' ಹೊಂದಿರುವ ತೀಕ್ಷ್ಣ ಒಳನೋಟಗಳನ್ನು, ಅಂದಾಜಿಗೆ ಸಿಗದ ಅವನ ಪ್ರತಿಭೆಯನ್ನು ಯಾವುದೇ ಕಾರಣಕ್ಕೂ ಆಳುವ ವರ್ಗ ನಿರ್ಲಕ್ಷ್ಯ ಮಾಡುವಂತಿಲ್ಲ. ಕಾಮನ್ ಮ್ಯಾನ್ ಎಲ್ಲವನ್ನು ತಣ್ಣಗೆ ಗಮನಿಸುತ್ತಿರುತ್ತಾನೆ. ಸಮಯ ಬಂದಾಗ ತನ್ನ ಬತ್ತಳಿಕೆಯಲ್ಲಿರುವ ಬಾಣವನ್ನು ಹೊರಗಿಡುತ್ತಾನೆ ಎಂಬುದರ ಸ್ಪಷ್ಟ ಸಂದೇಶದಂತಿದೆ ಈ ಪಾತ್ರ. ಅಂಥದ್ದೊಂದು ಸಣ್ಣ ಅಳುಕನ್ನು ಆಳುವವರ ಎದೆಯಲ್ಲಿ ಹುಟ್ಟಿಸಿದ ಈ ಪಾತ್ರವು ತನ್ನ ಅಗ್ಗಳಿಕೆಯನ್ನು ಕಾಲಾತೀತವಾಗಿ ಹಿಡಿದಿಡುತ್ತದೆ. ಹಾಗೆಯೇ ಶ್ರೀಸಾಮಾನ್ಯರ ಶಕ್ತಿ ಎಂಥದ್ದು ಎಂಬುದರ ಬಗ್ಗೆ ಸ್ವತಃ ಶ್ರೀಸಾಮಾನ್ಯರಿಗೆ ಅರಿವಿರಬೇಕು. ಸಾರ್ವಜನಿಕರ ನೆನಪಿನಕೋಶ ಕಿರಿದಿರಬಹುದು. ಆದರೆ, ಶ್ರೀಸಾಮಾನ್ಯರ ಪ್ರಜ್ಞಾವಂತಿಕೆಯ ಹರಹು ದೊಡ್ಡದಿರಬೇಕಲ್ಲವೇ? ಎಂಬ ಪ್ರಶ್ನೆಯನ್ನು ಪ್ರತಿಯೊಬ್ಬ ಶ್ರೀಸಾಮಾನ್ಯನೂ ಕೇಳಿಕೊಳ್ಳುವಂತೆ ಮಾಡುತ್ತದೆ.

ಸದ್ಯಕ್ಕೆ ಎಲ್ಲಾ ಕ್ಷೇತ್ರಗಳೂ ವ್ಯಕ್ತಿಪೂಜೆಯ ಸೋಂಕನ್ನು ಅಂಟಿಸಿಕೊಂಡಿವೆ. ವ್ಯಕ್ತಿಯ ತಪ್ಪು–ಒಪ್ಪುಗಳನ್ನೆಲ್ಲ ವಿಡಂಬನೆ ಮಾಡಿ, ತಿದ್ದುವ ಮೊನಚಿಗೆ ಆರಾಧನಾ ಮನೋಭಾವದ ಮುಸುಕು ಅಡ್ಡಬರುತ್ತದೆ. ರಾಜಕೀಯ ಹಾಗೂ ಸೈದ್ಧಾಂತಿಕ ಚಿಂತನೆಗಳೆಲ್ಲವೂ ಧ್ರುವೀಕರಣಗೊಂಡಿರುವ ಈ ಹೊತ್ತಿನಲ್ಲಿ ವಿವಿಧ ಕ್ಷೇತ್ರಗಳ ಪ್ರಸಿದ್ಧರನ್ನು ಇಷ್ಟು ಮೊನಚು ಗೆರೆಗಳಿಂದ ತಿವಿಯುವ ಅವಕಾಶವನ್ನೇ ಕಳೆದುಕೊಂಡಿದ್ದೇವಲ್ಲ ಎಂಬ ಖೇದ ಈ ವ್ಯಂಗ್ಯಚಿತ್ರಗಳನ್ನು ನೋಡಿದಾಗ ಹುಟ್ಟದೆ ಇರದು. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿಯೂ ನಾವು ಮತ್ತೊಮ್ಮೆ ನಮ್ಮೊಳಗೆ ಇಣುಕಿ ನೋಡಲು 'ಕಾಮನ್ ಮ್ಯಾನ್' ಪಾತ್ರ ಕಿಟಕಿಯೇ ಸರಿ.

ಈ ವ್ಯಂಗ್ಯಚಿತ್ರಗಳ ಪ್ರದರ್ಶನ ತಾಂತ್ರಿಕ ಪಾಂಡಿತ್ಯದ ಪ್ರದರ್ಶನದಂತಿಲ್ಲ. ತೀಕ್ಷ್ಣತೆ ಹಾಗೂ ಸೂಕ್ಷ್ಮ ವ್ಯಂಗ್ಯದ ಮೂಲಕ ದೇಶ ಸಾಗಿ ಬಂದ ಹಲವು ಹಂತಗಳನ್ನು ಚಿತ್ರಿಸಲಾಗಿದೆ. ಇತಿಹಾಸ, ಕಲಾ ವಿದ್ಯಾರ್ಥಿಗಳಿಗಷ್ಟೆ ಅಲ್ಲದೇ ರಾಜಕೀಯ ವಿಡಂಬನಾಪ್ರಿಯರನ್ನು ಹಿಡಿದಿಡುತ್ತವೆ ಲಕ್ಷ್ಮಣ್ ಅವರ ರೇಖೆಗಳು. ಈ ರೇಖೆಗಳನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದರೆ ದೇಶ ಹಾದು ಬಂದ ಹಲವು ಸಂದಿಗ್ಧ ಪರಿಸ್ಥಿತಿಗಳನ್ನು ಸುಲಭವಾಗಿ ಅರಿಯಬಹುದು. ಆದರೆ ಪ್ರತಿ ವ್ಯಂಗ್ಯಚಿತ್ರದ ಕೆಳಗೆ ರಚನೆಯಾದ ವರ್ಷ ಹಾಗೂ ಸಂದರ್ಭ ಸಮೇತ ಶೀರ್ಷಿಕೆಯೊಂದನ್ನು ನೀಡಲು ಪ್ರದರ್ಶನದ ಆಯೋಜಕರು ಮನಸ್ಸು ಮಾಡಿದ್ದರೆ, ಇನ್ನಷ್ಟು ಮಾಹಿತಿಯನ್ನು ಪಡೆಯಲು ಸಾಧ್ಯವಾಗುತ್ತಿತ್ತು.

ಇಷ್ಟೆಲ್ಲ ಗಂಭೀರ ವಿಡಂಬನೆಯ ರೇಖೆಗಳನ್ನು ಕೊಟ್ಟ ಆರ್.ಕೆ.ಲಕ್ಷ್ಮಣ್ ತಾವು ರಚಿಸಿದ 'ಕಾಮನ್ ಮ್ಯಾನ್' ಪಾತ್ರದೊಂದಿಗೆ ಸ್ವತಃ ರೇಖೆಯಾಗಿದ್ದಾರೆ. ಲಕ್ಷ್ಮಣ್ ಅವರ ಹೆಗಲ ಮೇಲೆ ಕೈಹಾಕಿರುವ 'ಕಾಮನ್ ಮ್ಯಾನ್' ರೇಖೆಯ ಮುಖಭಾವದಲ್ಲಿ 'ಮುಂದೇನು?' ಎಂದು ಕೇಳುವಂತೆಯೂ, ಲಕ್ಷ್ಮಣ್ ಅವರ ರೇಖೆಯ ಮುಖಭಾವದಲ್ಲಿ 'ತಿಳಿಯಿತೇ' ಎನ್ನುವ ತುಂಟತನವು ಹಾದು ಹೋದಂತೆ ಭಾಸವಾಗುತ್ತದೆ.

# ಕೊಡವ ಕೌಟುಂಬಿಕ ಹಾಕಿ ವೈಭವ

ಆಧುನಿಕ ಕಾಲದಲ್ಲೂ ಕುಟುಂಬ ವ್ಯವಸ್ಥೆ ಮತ್ತು ಶ್ರೀಮಂತ ಸಂಸ್ಕೃತಿಯನ್ನು ಉಳಿಸುವ ದಿಸೆಯಲ್ಲಿ ಕೊಡವ ಕೌಟುಂಬಿಕ ಹಾಕಿ ಉತ್ಸವ ಕಾರ್ಯನಿರ್ವಹಿಸುತ್ತಿದೆ. ಈ ಉತ್ಸವಕ್ಕೆ ಈಗ ಬೆಳ್ಳಿಯ ಬೆಡಗು. ಈಚೆಗಷ್ಟೇ ಮಡಿಕೇರಿಯಲ್ಲಿ ನಡೆದ ಈ ಉತ್ಸವ ವರ್ಲ್ಡ್‌ವೈಡ್ ಬುಕ್ ಆಫ್ ರೆಕಾರ್ಡ್‌ಗೂ ಸೇರಿತು.



ಮಡಿಕೇರಿಯಲ್ಲಿ ನಡೆದ ಕೊಡವ ಕೌಟುಂಬಿಕ ಹಾಕಿ ಮುದ್ದಂಡ ಕಪ್‌ನಲ್ಲಿ ಬಡುವಮಂಡ ಮತ್ತು ಪಳಂಗೇಟಿರ ಆಟಗಾರರ ಸೆಣಸಾಟ

• ಗಿರೀಶ ದೊಡ್ಡಮನಿ

**ಕೊ**ಡಗು ಎಂದರೆ ಮನದಲ್ಲಿ ಆಹ್ಲಾದಕರ ಭಾವಗಳು ಸಾಲುಗಟ್ಟುತ್ತವೆ. ಮನಮೋಹಕ ಬೆಟ್ಟಗುಡ್ಡಗಳು, ಕಾಫಿಯ ಘಮಲು, ಕಿತ್ತಳೆಯ ಸೊಗಡು, ಉಮ್ಮತ್ತಾಟ್ ನೃತ್ಯದ ಸೊಬಗು, ಓಲಗದ ಮಾಧುರ್ಯ, ಕೋವಿ ಹಿಡಿದ ವೀರರು, ಸೇನೆಯ ಶಿಸ್ತು ಮತ್ತು ಹಾಕಿ ಕ್ರೀಡೆಯ ರೋಮಾಂಚನ ಇತ್ಯಾದಿಗಳು ವಿಜೃಂಭಿಸುತ್ತವೆ. ಇವೆಲ್ಲವೂ ಕೊಡವರ ಪಾಲಿಗೆ ಪರಂಪರೆಯಷ್ಟೇ ಅಲ್ಲ; ಉಸಿರಿನಲ್ಲಿಯೇ ಬೆರೆತುಹೋಗಿರುವ ಸಂಗತಿಗಳು. ಮನೆಗೊಬ್ಬ ಸೈನಿಕ ಮತ್ತು ಹಾಕಿಪಟು ಇರುವ ಜಿಲ್ಲೆ ಇದು.

ಇಂದಿನ ಆಧುನಿಕ ಕಾಲದಲ್ಲಿಯೂ ತಮ್ಮ ಸಂಸ್ಕೃತಿಯನ್ನು ಉಳಿಸಿಕೊಂಡು ಹೋಗುವ ಪ್ರಯತ್ನವನ್ನು ಕೊಡವರು ಮಾಡುತ್ತಿದ್ದಾರೆ. ಅದಕ್ಕಾಗಿ ಅವರು ಆಯ್ಕೆ ಮಾಡಿಕೊಂಡಿರುವುದು ಹಾಕಿ ಕ್ರೀಡೆ.

1997ರಿಂದ ನಡೆಯುತ್ತಿರುವ ಕೊಡವ ಕೌಟುಂಬಿಕ ಹಾಕಿ ಹಬ್ಬವು ಈ ನಿಟ್ಟಿನಲ್ಲಿ ತಕ್ಕಮಟ್ಟಿಗೆ ಸಫಲವೂ ಆಗಿದೆ. ಅಂದು 60 ತಂಡಗಳೊಂದಿಗೆ ಆರಂಭವಾದ ಉತ್ಸವ ಇದು. ವಿರಾಜಪೇಟೆಯ ಸಮೀಪದ ಕರಾಡಾದಲ್ಲಿ ಪಾಂಡಂಡ ಹಾಕಿ ಉತ್ಸವ ನಡೆದಿತ್ತು. ಕರ್ನಾಟಕದ ಹಾಕಿ ರೆಫರಿ ಆಗಿದ್ದ ಪಾಂಡಂಡ ಕುಟ್ಟಪ್ಪ ಮತ್ತು ಅವರ ಸಹೋದರ ಕಾಶಿ ಪೊನ್ನಪ್ಪ ಅವರ ಕನಸಿನ ಕೂಸು ಈ ಕೊಡವ ಕೌಟುಂಬಿಕ ಹಾಕಿ. ಈಗ ಈ ಕೂಟಕ್ಕೆ ಜಾಗತಿಕ ದಾಖಲೆಯ ಗೌರವ ಒಲಿದಿದೆ. ಈ ಬಾರಿ ಕೂಟವನ್ನು ಮಡಿಕೇರಿಯಲ್ಲಿ ಆಯೋಜಿಸಲಾಗಿತ್ತು. ಮುದ್ದಂಡ ಕುಟುಂಬವು ಆತಿಥ್ಯ ವಹಿಸಿತ್ತು.

'ಈ ಬಾರಿ 396 ತಂಡಗಳು ಭಾಗವಹಿಸಿದ್ದವು. ಇಲ್ಲಿಯವರೆಗೂ 360 ತಂಡಗಳ ಭಾಗವಹಿಸುವಿಕೆಯ ದಾಖಲೆ ಇತ್ತು. ಈ ಹಿಂದೆ ಲಿಮ್ಕಾ ಬುಕ್ ಆಫ್ ರೆಕಾರ್ಡ್‌ನಲ್ಲಿ ಮೂರು ಬಾರಿ ಸೇರಿತ್ತು. ಅಲ್ಲದೇ ಒಂದು ಸಲ ಗಿನ್ನೀಸ್ ದಾಖಲೆಯ ಗೌರವ ಕೂಡ ದೊರೆತಿದೆ. ಈ ಮೊದಲು ಟೂರ್ನಿಯನ್ನು ಆಯೋಜಿಸಿದ ಕುಟುಂಬಗಳು ಈ ಸಾಧನೆಗೆ ಕಾರಣ. ನಾವು ಆ ಪರಂಪರೆಯನ್ನು ಮುಂದುವರಿಸಿದ್ದು ಹೆಮ್ಮೆಯ ಸಂಗತಿ. ಹಾಕಿ ಉತ್ಸವ ಕೇವಲ ಕ್ರೀಡಾ ಚಟುವಟಿಕೆ ಮಾತ್ರವಲ್ಲ. ಒಂದು ಸಾಂಸ್ಕೃತಿಕ ಪರಂಪರೆಯಾಗಿಯೂ ಬೆಳೆಯುತ್ತಿದೆ. ಈ ಸಲ ₹ 3.2 ಕೋಟಿ ಖರ್ಚು ಮಾಡಲಾಗಿದೆ' ಎಂದು ಸಂಘಟನೆಯ ನೇತೃತ್ವ ವಹಿಸಿದ್ದ ಮುದ್ದಂಡ ಸುಬ್ಬಯ್ಯ ಸಂತಸ ವ್ಯಕ್ತಪಡಿಸಿದರು. ಅಲ್ಲದೇ ಈ ಬಾರಿಯ ಕೂಟದ ವೈಶಿಷ್ಟ್ಯಗಳನ್ನು ಅವರು ವಿವರಿಸಿದರು.

ಟೂರ್ನಿಯ ಆಯೋಜನೆಗೆ ವರ್ಷಪೂರ್ತಿ ಸಿದ್ಧತೆಗಳು ನಡೆಯುತ್ತವೆ. ಈ ಸಲ 25ನೇ ಕೂಟವಾಗಿದ್ದರಿಂದ ವಿಶೇಷವಾಗಿ ನಡೆಸುವ ಯೋಚನೆಯೂ ಇತ್ತು. ಅದಕ್ಕಾಗಿ ಕೆಲವೊಂದು ಕಾರ್ಯಕ್ರಮಗಳನ್ನು ಜೋಡಿಸಿಕೊಳ್ಳಲಾಯಿತು. ಒಲಿಂಪಿಕ್ ಕೂಟದ ಮಾದರಿಯಲ್ಲಿ ಕ್ರೀಡಾಜ್ಯೋತಿಯ ಸಂಚಾರ ಏರ್ಪಡಿಸಲಾಯಿತು. ಕೌಟುಂಬಿಕ ಹಾಕಿ ಆರಂಭಿಸಿದ ಕುಟುಂಬದ ಮನೆಯಿಂದ ಆರಂಭವಾಗಿ ಕೊಡಗು ಜಿಲ್ಲೆಯ ಎಲ್ಲ ಭಾಗಗಳಲ್ಲಿಯೂ ಸಂಚಾರ ನಡೆಯಿತು. ಈ ಸಂದರ್ಭದಲ್ಲಿ ಮ್ಯಾರಥಾನ್ ಆಯೋಜಿಸಲಾಗಿತ್ತು. ಸುಮಾರು 138 ಕಿಲೋಮೀಟರ್ ನಡೆದ ಈ ಓಟದಲ್ಲಿ ಪ್ರತಿದಿನವೂ ಹಲವು ಜನರು ಭಾಗವಹಿಸಿದ್ದರು. ಆದರೆ ಅದರಲ್ಲಿ ಓಟವನ್ನು ಪೂರ್ಣಗೊಳಿಸಿದವರು ಆರು ಜನರು ಮಾತ್ರ. ಅವರನ್ನು ಕಾರ್ಯಕ್ರಮದ ಕೊನೆಯಲ್ಲಿ ಗೌರವಿಸಿ, ಪ್ರಶಸ್ತಿ ನೀಡಲಾಯಿತು ಎಂದು ಸುಬ್ಬಯ್ಯ ವಿವರಿಸಿದರು.

ಈ ಕೂಟದಲ್ಲಿ ಮಂಡೆಪಂಡ ಕುಟುಂಬ ಪ್ರಶಸ್ತಿ ಗೆದ್ದಿತು. ಚಾಂದಂಡ ಕುಟುಂಬವು ರನ್ನರ್ಸ್ ಅಪ್ ಆಯಿತು. ಚಾಂದಂಡ ಸುಬ್ಬಯ್ಯ ಅವರು ವೈಯಕ್ತಿಕ ಸಮಗ್ರ ಪ್ರಶಸ್ತಿ ಗೌರವಕ್ಕೆ ಪಾತ್ರರಾದರು.

'ಹಾಕಿಯ ಜೊತೆಗೆ ಕೊಡಗಿನ ಸಂಸ್ಕೃತಿ ಮತ್ತು ಉಳಿದ ಕ್ರೀಡೆಗಳಿಗೂ ಉತ್ತೇಜನ ನೀಡುವ ಉದ್ದೇಶ ನಮ್ಮದು. ಕೊಡಗು ಜಿಲ್ಲೆಯು ಹಾಕಿ, ಫುಟ್‌ಬಾಲ್, ಟೆನಿಸ್, ಕ್ರಿಕೆಟ್ ಸೇರಿದಂತೆ ಹಲವಾರು ಕ್ರೀಡೆಗಳಿಗೆ ಪ್ರತಿಭೆಗಳನ್ನು ನೀಡಿದೆ. ಅವರಲ್ಲಿ ಅನೇಕರು ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಳಗಿದ್ದಾರೆ. ಆದ್ದರಿಂದ ಈ ಬಾರಿ ಶೂಟಿಂಗ್ ಸ್ಪರ್ಧೆಯನ್ನೂ ಏರ್ಪಡಿಸಲಾಗಿತ್ತು. ಕೊಡವರ ಸಾಂಸ್ಕೃತಿಕ ಕಾರ್ಯಕ್ರಮಗಳು, ನಾಯಿಗಳ ಪ್ರದರ್ಶನವನ್ನೂ ಆಯೋಜಿಸಲಾಗಿತ್ತು. ಇವುಗಳಿಗೆ ಜನರಿಂದ ಉತ್ತಮ ಸ್ಪಂದನೆ ದೊರೆಯಿತು. ವರ್ಷದಿಂದ ವರ್ಷಕ್ಕೆ ಈ ಉತ್ಸವವು ವಿಸ್ತಾರಗೊಳ್ಳುತ್ತಿದೆ ಮತ್ತು ಸಮೃದ್ಧವೂ ಆಗುತ್ತಿದೆ. ಬೇರೆ ಬೇರೆ ರಾಜ್ಯಗಳಲ್ಲಿಯೂ ಜನಪ್ರಿಯತೆ ಪಡೆಯುತ್ತಿದೆ. ಭಾರತ ಹಾಕಿ ತಂಡದ ಮಾಜಿ ನಾಯಕ ಸರದಾರ್ ಸಿಂಗ್ ಅವರು ಈ ಬಾರಿ ಉತ್ಸವಕ್ಕೆ ಭೇಟಿ ನೀಡಿದ್ದರು. ಬಹಳ ಆಸಕ್ತಿಯಿಂದ ವೀಕ್ಷಿಸಿದರು. ಅಪಾರ ಮೆಚ್ಚುಗೆ ವ್ಯಕ್ತಪಡಿಸಿದರು' ಎಂದೂ ಅವರು ಹೇಳಿದರು.

ಕೊಡವ ಪರಂಪರೆ ಮತ್ತು ಕೊಡವರ ಜೀವನಶೈಲಿಯಲ್ಲಿ ಕೋವಿ, ಉಡಗತ್ತಿ ಮತ್ತು ಪೋಷಾಕುಗಳಿಗೆ ಬಹಳ ಮಹತ್ವ ಇದೆ. ಆದ್ದರಿಂದ ಈ ಬಾರಿ ಶೂಟಿಂಗ್ ಸ್ಪರ್ಧೆ ಆಯೋಜಿಸಲಾಗಿತ್ತು. ಮೂರು ವಿಭಾಗಗಳಲ್ಲಿ 198 ಸ್ಪರ್ಧಿಗಳು ಭಾಗವಹಿಸಿದ್ದರು. ಗುರಿ ಕಟ್ಟಿ ಮೆರೆದ ವೀರರಿಗೆ ಪ್ರಶಸ್ತಿಗಳನ್ನೂ ನೀಡಲಾಯಿತು.

## ಹಾಕಿ ಮತ್ತು ಕೊಡಗು

ಭಾರತದ ಹಾಕಿ ಕ್ರೀಡೆಯ ಇತಿಹಾಸದ ಪುಟಗಳನ್ನು ತಿರುವಿಹಾಕಿದರೆ ಒಲಿಂಪಿಕ್ಸ್ ಮತ್ತು ವಿಶ್ವ ಮಟ್ಟದಲ್ಲಿಯೂ ಸುವರ್ಣಕಾಲದ ಸಾಧನೆಗಳು ಗಮನ ಸೆಳೆಯುತ್ತವೆ. ಆ ಸಾಧನೆಗಳಲ್ಲಿ ಕನ್ನಡಿಗರ ಹೆಜ್ಜೆ ಗುರುತುಗಳೂ ಢಾಳಾಗಿ ಕಾಣಿಸುತ್ತವೆ. ಆ ಕನ್ನಡಿಗರಲ್ಲಿ ಕೊಡಗು ಜಿಲ್ಲೆಯ ಹಾಕಿಪಟುಗಳದ್ದೇ ಸಿಂಹಪಾಲು.

ಬಿ.ಪಿ. ಗೋವಿಂದ, ಎಸ್.ಬಿ. ಕಾಳಯ್ಯ, ಎಂ.ಪಿ. ಗಣೇಶ್, ಅರ್ಜುನ್ ಹಾಲಪ್ಪ, ನಿಕಿನ್ ತಿಮ್ಮಯ್ಯ, ಎ.ಬಿ. ಸುಬ್ಬಯ್ಯ, ಎಂ.ಎಂ. ಸೋಮಯ್ಯ, ಎಸ್.ವಿ. ಸುನೀಲ್, ನಿತೀನ್ ತಿಮ್ಮಯ್ಯ, ವಿ.ಆರ್. ರಘುನಾಥ್, ಲೇನ್ ಅಯ್ಯಪ್ಪ, ವಿ.ಎಸ್.ವಿನಯ್, ವಿಕ್ರಂ ಕಾಂತ್ ಅವರು ಇದರಲ್ಲಿ ಪ್ರಮುಖರು. ಐದು ದಶಕಗಳ ಹಿಂದೆ ವಿಶ್ವ ಚಾಂಪಿಯನ್ ಆಗಿದ್ದ ಭಾರತ ತಂಡದಲ್ಲಿ ಬಿ.ಪಿ. ಗೋವಿಂದ ಮತ್ತು ಕಾಳಯ್ಯ ಅವರು ಆಡಿದ್ದರು.

'ಹಾಕಿ ಮಾತ್ರವಲ್ಲ; ಅಥ್ಲೆಟಿಕ್ಸ್‌ನಲ್ಲಿ ಅಶ್ವಿನಿ ನಾಚಪ್ಪ, ಬ್ಯಾಡ್ಮಿಂಟನ್‌ನಲ್ಲಿ ಅಶ್ವಿನಿ ಪೊನ್ನಪ್ಪ, ಕ್ರಿಕೆಟ್‌ನಲ್ಲಿ ರಾಬಿನ್ ಉತ್ತಪ್ಪ ಹಾಗೂ ಟೆನಿಸ್‌ನಲ್ಲಿ ರೋಹನ್ ಬೋಪಣ್ಣ ಅವರಂತಹ ತಾರೆಗಳು ನಮ್ಮ ಕೊಡವರು ಎನ್ನುವುದು ಹೆಮ್ಮೆಯ ವಿಷಯ' ಎಂದು ಸುಬ್ಬಯ್ಯ ಹೇಳುತ್ತಾರೆ.

ಆದರೆ ಇತ್ತೀಚಿನ ದಿನಗಳಲ್ಲಿ ಭಾರತ ಹಾಕಿ ತಂಡದಲ್ಲಿ ಕರ್ನಾಟಕದ ಆಟಗಾರರ ಸಂಖ್ಯೆ ಕಡಿಮೆಯಾಗಿದೆ ಎಂಬ ಕೂಗು ಕೇಳಿಬರುತ್ತಿದೆ. ಅದರಲ್ಲೂ ಕೊಡವ ಯುವಕರು ಬೇರೆ ಬೇರೆ ರಾಜ್ಯ, ದೇಶಗಳಿಗೆ ಉದ್ಯೋಗ, ವಿದ್ಯಾಭ್ಯಾಸಗಳಿಗೆ ತೆರಳುತ್ತಿದ್ದಾರೆ. ಹಾಕಿ ಮತ್ತು ಸೇನೆಗೆ ಹೋಗುವವರು ಕಡಿಮೆಯಾಗುತ್ತಿದ್ದಾರೆ ಎನ್ನುವ ಮಾತು ಇದೆ.

ಕೆಲವು ವರ್ಷಗಳ ಹಿಂದೆ ಹಾಕಿ ಇಂಡಿಯಾದ ಅಧ್ಯಕ್ಷರಾಗಿದ್ದ ನರೀಂದರ್ ಬಾತ್ರಾ ಅವರೇ ಈ ಮಾತು ಹೇಳಿದ್ದರು, 'ಒಂದು ಕಾಲದಲ್ಲಿ ಭಾರತ ತಂಡದಲ್ಲಿ ಕೊಡಗಿನ ಮೂರ್ನಾಲ್ಕು ಹಾಕಿಪಟುಗಳು ಇರುತ್ತಿದ್ದರು. ಈಗ ಆ ರೀತಿಯಾಗುತ್ತಿಲ್ಲ. ಮೊದಲಿನಂತೆ ಹಾಕಿ ಕ್ರೀಡಾಪಟುಗಳ ಹೆಚ್ಚಳಕ್ಕಾಗಿ ಕ್ರಮಕೈಗೊಳ್ಳಬೇಕು' ಎಂದೂ ಬಾತ್ರಾ ಸಲಹೆ ನೀಡಿದ್ದರು.

ಕೊಡವ ಕುಟುಂಬಗಳನ್ನು ಒಂದು ಸೂರಿನಡಿ ಕರೆತರಲು ಈ ಹಾಕಿ ಉತ್ಸವವು ಮಾಧ್ಯಮವಾಗಿದೆ. ಈ ಉತ್ಸವದ ಮೂಲಕ ಜನಾಂಗದ ಹಿರಿಯರು, ಸಾಧಕರು ಮತ್ತು ಇಂದಿನ ಯುವ ಪೀಳಿಗೆಯ ಸಮ್ಮಿಲನದ ವೇದಿಕೆಯೂ ಈ ಕೂಟವಾಗಿದೆ.

5ನೇ ಪುಟಕ್ಕೆ...

### ಮಹಿಳೆಯರಿಗೆ 5 ಎ ಸೈಡ್..

ಮೊದಲ ಬಾರಿಗೆ ಕೊಡವ ಕೌಟುಂಬಿಕ ಹಾಕಿ ಉತ್ಸವದಲ್ಲಿ ಮಹಿಳೆಯರಿಗಾಗಿ 5 ಎ ಸೈಡ್ ಟೂರ್ನಿಯನ್ನು ಆಯೋಜಿಸಲಾಗಿತ್ತು. 'ಇಷ್ಟು ವರ್ಷಗಳವರೆಗೆ ಆಸಕ್ತಿ ಇರುವ ಮಹಿಳೆಯರು ಪುರುಷರ ತಂಡಗಳಲ್ಲಿಯೇ ಆಡುತ್ತಿದ್ದರು. ಆದರೆ ಮಹಿಳೆಯರಿಗೆ ಪೂರ್ಣ ಅವಕಾಶ ಇರಲಿಲ್ಲ. ಆದ್ದರಿಂದ ಹಾಕಿ ಹಾಸ್ಟೆಲ್, ಶಿಬಿರಗಳಲ್ಲಿ ತರಬೇತಿ ಪಡೆದ ಕೆಲವರಿಗೆ ಮಾತ್ರ ಅವಕಾಶ ಸಿಗುತ್ತಿತ್ತು. ಆದರೆ ಅದರಾಚೆಯೂ ಹಲವಾರು ಮಹಿಳೆಯರು ಆಡುವ ಆಸಕ್ತಿ ಹೊಂದಿದ್ದರು. ಅವರಿಗೂ ವೇದಿಕೆ ಸೃಷ್ಟಿಸಲು ಈ ಸಲ 5 ಎ ಸೈಡ್ ಟೂರ್ನಿ ಆಯೋಜಿಸಲಾಯಿತು. 58 ತಂಡಗಳು ಭಾಗವಹಿಸಿದ್ದವು. ಗೆದ್ದವರಿಗೆ ಪ್ರಶಸ್ತಿ, ಸೋತವರಿಗೂ ಕಾಣಿಕೆಗಳನ್ನು ನೀಡಲಾಯಿತು' ಎಂದು ಸಂಘಟಕರು ಮಾಹಿತಿ ನೀಡಿದರು.

ಕೊಡಗು ಜಿಲ್ಲೆಯು ದೇಶದ ಮಹಿಳಾ ಹಾಕಿ ಕ್ಷೇತ್ರಕ್ಕೂ ಉತ್ತಮ ಕೊಡುಗೆ ನೀಡಿದೆ.

ಪುಷ್ಪ ಪೂವಯ್ಯ, ಜಮುನಾ, ಮಿಲನಾ, ಪೊನ್ನಮ್ಮ ಮತ್ತು ಸೌಮ್ಯಾ ಅವರು ಕೊಡಗಿನ ಪ್ರಮುಖ ಆಟಗಾರ್ತಿಯರಾಗಿದ್ದು, ಅವರು ಭಾರತ ತಂಡಕ್ಕಾಗಿ ಆಡಿದ್ದಾರೆ. ರೋಹಿಣಿ ಮತ್ತು ಪುಚಿಮಂಡ ಅನುಪಮಾ ಅವರು ಅಂತರರಾಷ್ಟ್ರೀಯ ಅಂಪೈರ್‌ಗಳಾಗಿ ಕಾರ್ಯನಿರ್ವಹಿಸಿದ್ದಾರೆ. ಭಾರತದ ಆಯ್ಕೆ ಶಿಬಿರದಲ್ಲಿ ಇದುವರೆಗೆ 17 ಮಹಿಳೆಯರು ಭಾಗವಹಿಸಿದ್ದಾರೆ.

ವಿಜೇತ ತಂಡಕ್ಕೆ ₹2 ಲಕ್ಷ, ರನ್ನರ್ಸ್ ಅಪ್ ತಂಡಕ್ಕೆ ₹ 1 ಲಕ್ಷ ಹಾಗೂ ಬೆಳ್ಳಿ ಟ್ರೋಫಿಗಳನ್ನು ನೀಡಲಾಗಿದೆ.





ಚಂದ್ರಂಪಳ್ಳಿ ಜಲಾಶಯದ ಹಿನ್ನೀರು ಪ್ರದೇಶ ಹಾಗೂ ಕಾಡು

# ಬಿಸಿಲನಾಡಲ್ಲೊಂದು ಮಲೆನಾಡು!

• ಜಗನ್ನಾಥ ಡಿ. ಶೇರಿಕಾರ

ಅದು ಮುಂಗಾರು ಮಳೆಯ ಸಮಯ. ಬೆಂಗಳೂರಿನಿಂದ ಸ್ನೇಹಿತ ಬಂದಿದ್ದ. ಅವನನ್ನು ಸುತ್ತಾಡಿಸಲು ಹೊರಟಿದ್ದೆ. ಅವನು ಪ್ರಯಾಣದ ಆಯಾಸದಿಂದ ನಿದ್ರೆಗೆ ಜಾರಿದ್ದು ಸ್ವಲ್ಪ ಸಮಯದ ಬಳಿಕ ಎಚ್ಚರಗೊಂಡ. ಆತನಿಗೆ ತಾನು ಎಲ್ಲಿದ್ದೀನಿ ಎನ್ನುವುದು ತಿಳಿಯದೇ 'ನಾವು ಈಗ ಮಲೆನಾಡಿನಲ್ಲಿ ಇದ್ದೀವಾ? ಚಿಂಚೋಳಿಯಿಂದ ಇಲ್ಲಿಗೆ ಯಾಕೆ ಕರೆದುಕೊಂಡ ಬಂದೆ' ಎಂದು ಅಚ್ಚರಿಯಿಂದ ಕೇಳಿದ. ಆಗ ನಾನು ಸಮಾಧಾನದಿಂದಲೇ, 'ನಾವು ಈಗ ಇರುವುದು ಚಿಂಚೋಳಿ ತಾಲ್ಲೂಕಿನ ಕುಂಚಾವರಂ ಅರಣ್ಯ ಪ್ರದೇಶದಲ್ಲಿಯೇ ಹೊರತು ಮಲೆನಾಡಿನಲ್ಲಿ ಅಲ್ಲ' ಎಂದೆ. ನನ್ನ ಈ ಮಾತನ್ನು ನಂಬಲು ಗೆಳೆಯ ಸಿದ್ಧವಿರಲಿಲ್ಲ. ಒಂದು ಕಡೆ ಇದ್ದ ಮಾಹಿತಿ ಫಲಕವನ್ನು ತೋರಿಸಿದ ನಂತರವೇ ಆತ ನಂಬಿದ್ದು!

ಹೌದು. ಒಂದು ವೇಳೆ ನೀವು ಈಗ ಕಲಬುರಗಿ ಜಿಲ್ಲೆಯ ಕುಂಚಾವರಂ ಅರಣ್ಯ ಪ್ರದೇಶಕ್ಕೆ ಏನಾದರೂ ಭೇಟಿ ಕೊಟ್ಟರೆ ಖಂಡಿತ ಅಚ್ಚರಿಗೆ ಒಳಗಾಗುತ್ತೀರಿ. ಏಕೆಂದರೆ, ಈ ಪ್ರದೇಶ ಮಲೆನಾಡಿನ ಪ್ರಕೃತಿಯನ್ನು ನೆನಪಿಸುತ್ತದೆ. ಬಿಸಿಲನಾಡು ಎಂದು ಕರೆಸಿಕೊಳ್ಳುವ ಈ ಪ್ರದೇಶದಲ್ಲಿ ಇಂಥ ಹಚ್ಚ ಹಸುರಿನ ಪರಿಸರವನ್ನು ಕಂಡವರು ವಿಸ್ಮಯಕ್ಕೆ ಒಳಗಾಗುತ್ತಾರೆ.

ಎತ್ತರದ ಬೆಟ್ಟಗುಡ್ಡಗಳು, ಕಣ್ಣು ಕುಕ್ಕುವ ಹಸಿರ ಸಿರಿ, ರುದ್ರ ನರ್ತನದ ಜಲಪಾತಗಳು, ಚಾರಣಕ್ಕೆ ಹೇಳಿ ಮಾಡಿಸಿದ ಸಾಹಸ ತಾಣಗಳು, ನಾಲಾ ನದಿ ತೊರೆ, ಕಾನನದ ಮಧ್ಯೆ ಶಾಂತವಾಗಿ ಆಕರ್ಷಿಸುವ ಜಲಾಶಯ, ಕೆರೆ, ಕುಂಟೆಗಳ ಸೌಂದರ್ಯ, ದುಂಬಿಗಳ ಝೇಂಕಾರ, ಬಾನಾಡಿಗಳ ಕಲರವ ಮಲೆನಾಡನ್ನೇ ನೆನಪಿಸುತ್ತದೆ.

ದಕ್ಷಿಣ ಭಾರತದ ಏಕೈಕ ಒಣ ವಲಯದ ವನ್ಯಧಾಮ ಎಂಬ ಹೆಗ್ಗಳಿಕೆ ಕುಂಚಾವರಂ ಅರಣ್ಯ ಪ್ರದೇಶಕ್ಕಿದೆ. ಎಲೆ ಉದುರುವ ಕಾಡುಗಳ ಪಟ್ಟಿಗೆ ಸೇರುವ ಬಯಲು ಸೀಮೆಯ ಚಿಂಚೋಳಿಯ ವನ್ಯಜೀವಿ ಧಾಮ ಸುಮಾರು 134 ಚದರ ಕಿಲೋಮೀಟರ್‌ನಷ್ಟಿದೆ. ಕರ್ನಾಟಕ ಮತ್ತು ತೆಲಂಗಾಣ ಗಡಿಗೆ ಹೊಂದಿಕೊಂಡ ಜೀವ ವೈವಿಧ್ಯತೆಯ ಪರಿಸರ ಸೂಕ್ಷ್ಮ ತಾಣವಾಗಿದೆ. ಮನಸ್ಸಿಗೆ ಮುದ ನೀಡುವ ಪರಿಸರ ಪ್ರವಾಸದ ಆಕರ್ಷಕ ತಾಣ. ಜೊತೆಗೆ ಬಯಲು ಸೀಮೆಯ ಈ ಹಸಿರು ಹೊದಿಕೆ ಜೀವ ವೈವಿಧ್ಯತೆಯ ಆಗರ. ಅವಸಾನದ ಅಂಚಿನಲ್ಲಿರುವ ಹಲವು ಸಸ್ಯ ಪ್ರಭೇದ ಹಾಗೂ ಪ್ರಾಣಿ ಸಂಕುಲಗಳಿಗೆ ಆಶ್ರಯ ನೀಡಿ ಪೋಷಿಸಿಕೊಂಡು ಬರುತ್ತಿದೆ.

ಇದು ಬೀದರ್‌ನಿಂದ 50 ಕಿಲೋಮೀಟರ್, ಕಲಬುರಗಿಯಿಂದ 100 ಕಿಲೋಮೀಟರ್, ಹೈದರಾಬಾದ್‌ನಿಂದ 130 ಕಿಲೋಮೀಟರ್ ದೂರದಲ್ಲಿದೆ. ಎತ್ತಿಪೋತೆ ಜಲಪಾತ, ಮಾಣಿಕಪುರ ಜಲಪಾತ, ಚಂದ್ರಂಪಳ್ಳಿ ಜಲಾಶಯ ಹಾಗೂ ಪ್ರಾಗೈತಿಹಾಸಿಕ ಕಾಲದ ನೆಲೆವೀಡಾದ ಯೋಗಿ ಬಕ್ಕಪ್ರಭುಗಳ ತಪೋಭೂಮಿಯಾದ ಗೊಟ್ಟಮಗೊಟ್ಟ ಇಲ್ಲಿನ ಪ್ರಮುಖ ಪರಿಸರ ಪ್ರವಾಸಿ ತಾಣಗಳಾಗಿವೆ.

ಚಂದ್ರಂಪಳ್ಳಿಯಿಂದ ಗೊಟ್ಟಮಗೊಟ್ಟ, ಚಂದ್ರಂಪಳ್ಳಿಯಿಂದ ಶೇರಿಭಿಕನಳ್ಳಿ, ಗೊಟ್ಟಮಗೊಟ್ಟದಿಂದ ಶೇರಿಭಿಕನಳ್ಳಿ, ಮಂಡಿ ಬಸವಣ್ಣ ಕ್ಯಾಂಪ್‌ನಿಂದ ಶೇರಿಭಿಕನಳ್ಳಿ ಹೀಗೆ ನಾಲ್ಕು ಚಾರಣ ಮಾರ್ಗಗಳಿವೆ. ಚಂದ್ರಂಪಳ್ಳಿ ಗೊಟ್ಟಮಗೊಟ್ಟ ಚಾರಣ ಮಾರ್ಗ ಚಾರಣಿಗರಿಗೆ ಮುಕ್ತವಾಗಿದೆ. ಇದಕ್ಕಾಗಿ ಆನ್‌ಲೈನ್ ಬುಕ್ಕಿಂಗ್ ವ್ಯವಸ್ಥೆ ಹಾಗೂ ಶುಲ್ಕ ಪಡೆದು ಗೈಡ್ ಅನ್ನು ಒದಗಿಸಲಾಗಿದೆ.

ವಾರ್ಷಿಕ ಸರಾಸರಿ 700 ರಿಂದ 950 ಮಿ.ಮೀ ಮಳೆ ಇಲ್ಲಿ ಸುರಿಯುತ್ತದೆ. ಇಲ್ಲಿ 49 ರಿಂದ 63 ಮಳೆ ದಿನಗಳು ಹಾಗೂ ಕನಿಷ್ಠ 10 ಡಿಗ್ರಿ ಸೆಲ್ಸಿಯಸ್, ಗರಿಷ್ಠ 40 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ.

4ನೇ ಪುಟಕ್ಕೆ...


### ಕಾಟೇಜ್, ಟೆಂಟ್ ಹೌಸ್

ಇಲ್ಲಿಗೆ ನಿತ್ಯ ನೂರಾರು ಪ್ರವಾಸಿಗರು ಬಂದು ಹೋಗುತ್ತಾರೆ. ಕಲಬುರಗಿ, ಬೀದರ್, ಯಾದಗಿರಿ, ಹೈದರಾಬಾದ್, ತೆಲಂಗಾಣದ ವಿಕಾರಾಬಾದ್, ಮೆದಕ್ ರಂಗಾರೆಡ್ಡಿ ನಗರಗಳಿಂದ ಜನ ಕುಟುಂಬ ಸಮೇತ ಬಂದು ನಿಸರ್ಗದ ಮಡಿಲಲ್ಲಿ ಸಮಯ ಕಳೆಯುತ್ತಾರೆ.


ಇಲ್ಲಿ ತಂಗಲು ಕಾಟೇಜ್ ಸೌಲಭ್ಯವನ್ನು ವನ್ಯಧಾಮ ಕಲ್ಪಿಸಿದೆ. ಗೊಟ್ಟಮಗೊಟ್ಟದಲ್ಲಿ ಟೆಂಟ್ ಹೌಸ್ ಸೌಕರ್ಯವಿದೆ. ಬೇಕೆಂದರೆ ಅಡುಗೆ ಮಾಡಿ ಕೊಡುತ್ತಾರೆ. ಹೀಗಾಗಿ ಬಲುಬೇಡಿಕೆಯೂ ಇದೆ.



ಮಾಣಿಕಪುರ ಜಲಪಾತದಲ್ಲಿ ಪ್ರವಾಸಿಗರು ಚಿತ್ರಗಳು: ಜಗನ್ನಾಥ ಡಿ. ಶೇರಿಕಾರ



ಸಿದ್ದಾಪುರ ತಾಲ್ಲೂಕಿನ ಹೆಗ್ಗೋಡ ಮನೆಯ ಹೊರನೋಟ



ಮನೆಯೊಳಗಿರುವ ರವಿವರ್ಮನ ಕಲಾಕೃತಿ

# ಶತಮಾನ ಸಂಭ್ರಮದಲ್ಲಿ ಹೆಗ್ಗೋಡಮನೆ

ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನಲ್ಲಿರುವ ಹೆಗ್ಗೋಡಮನೆ ಇತ್ತೀಚೆಗಷ್ಟೇ ಶತಮಾನೋತ್ಸವ ಆಚರಿಸಿಕೊಂಡಿದೆ. ದಿವಂಗತ ಪುಟ್ಟಣ್ಣಯ್ಯ ಗೌಡರ್ ನಿರ್ಮಿಸಿದ್ದ ಈ ಮನೆಯೊಳಗೆ ಸ್ವಾತಂತ್ರ್ಯಪೂರ್ವದ ಸಾಕಷ್ಟು ಕಥೆಗಳಿವೆ. ಅನೇಕ ಹೋರಾಟಗಾರರು, ಗಣ್ಯರು ಈ ಮನೆಗೆ ಭೇಟಿ ನೀಡಿದ್ದಾರೆ...



ಮನೆಯೊಳಗಿನ ವಾಸ್ತು ಬಾಗಿಲು

• ಗೋಪಾಲಭಾಶಿ

**'ಮನೆ'** ಎಂದ ಕೂಡಲೇ ನನಗೆ ನೆನಪಾಗುವುದು ಕುವೆಂಪು ಅವರು ಕುಪ್ಪಳಿಯ ಕವಿಶೈಲದೆದುರು ಬರೆದ 'ಮನೇ ಮನೇ ಮುದ್ದು ಮನೇ..' ಕವಿತೆ. ಮನೆ ಚಿಕ್ಕದಾಗಿರಲಿ ಅಥವಾ ದೊಡ್ಡದೇ ಆಗಿರಲಿ ಅದು ಅವರವರ ಪಾಲಿಗೆ ಅನ್ನ-ಆಶ್ರಯ, ಆಟ-ಪಾಠ, ನಿದ್ರೆ-ನೆಮ್ಮದಿ ಎಲ್ಲವನ್ನೂ ನೀಡುವ ಸ್ಥಳ. ಇತ್ತೀಚೆಗೆ ಸಿದ್ದಾಪುರ ತಾಲ್ಲೂಕಿನ ಹೆಗ್ಗೋಡಮನೆ ಕುಟುಂಬದವರ ಆಹ್ವಾನದ ಮೇರೆಗೆ 'ಆಸರೆ' ಮನೆಯ ಶತಮಾನ ಸಂಭ್ರಮಕ್ಕೆ ಹೋದಾಗ ಅದೊಂದು ವಿಶೇಷ ಅನ್ನಿಸಿತು.

1923ರಲ್ಲಿ ಪುಟ್ಟಣ್ಣಯ್ಯ ಗೌಡರ್ ನಿರ್ಮಿಸಿದ ಈ ಮನೆ ಇತ್ತೀಚೆಗಷ್ಟೇ ಶತಮಾನೋತ್ಸವ ಆಚರಿಸಿಕೊಂಡಿತು. ಬ್ರಿಟಿಷ್ ಸರ್ಕಾರದ ಅವಧಿಯಲ್ಲಿ ಭೂಮಾಲೀಕರದ್ದೇ ಕಾರುಬಾರು. ಆಗರ್ಭ ಶ್ರೀಮಂತಿಕೆ, ಸ್ಥಳೀಯ ಆಡಳಿತ ವ್ಯವಸ್ಥೆಯಲ್ಲಿಯೂ ಈ ಮನೆತನದ ಹಿರಿಯರು ಭೂಮಾಲೀಕರಾಗಿದ್ದರೂ, ದೌರ್ಜನ್ಯ, ದಬ್ಬಾಳಿಕೆ ಮಾಡಿದವರಲ್ಲ. ಹಸಿದವರಿಗೆ ಊಟ ನೀಡಿದ ಅನೇಕ ಮಾತೆಯರು, ಕಷ್ಟವೆಂದು ಮನೆಬಾಗಿಲಿಗೆ ಬಂದವರಿಗೆ ಕರೆದು ಸಹಾಯ ಮಾಡಿದ ಹಿರಿಯ ದಾನಿಗಳು, ನೂರಾರು ಕೂಲಿಕಾರ್ಮಿಕರಿಗೆ, ಗುಡಿ ಕೈಗಾರಿಕೆಯವರಿಗೆ ಆಶ್ರಯ ನೀಡಿದ ಹಿರಿಮನಸ್ಸುಗಳು, ಸುತ್ತ ಹತ್ತೂರು ವ್ಯಾಜ್ಯಗಳನ್ನು ಸಕಾಲಿಕವಾಗಿ ಪರಿಹರಿಸಿ ಸೂಕ್ತ ನ್ಯಾಯ ನೀಡಿದ ಹಿರಿತಲೆಗಳು ಬಾಳಿಬದುಕಿದಂತಹ ಮನೆಯಿದು.

'ಕರ ನಿರಾಕರಣೆ, ಚಲೇಜಾವ್ ಚಳವಳಿ ಮುಂತಾದ ಸ್ವಾತಂತ್ರ್ಯ ಹೋರಾಟಗಳಲ್ಲಿ ಭಾಗಿಯಾದ ನೂರಾರು ಭೂಗತ ಸ್ವಾತಂತ್ರ್ಯ ಸೇನಾನಿಗಳಿಗೆ ನಮ್ಮ ಹಿರಿಯರು ಆಶ್ರಯ ನೀಡಿದ್ದರು. ಈ ಮನೆಯಲ್ಲಿ ಎರಡು ಅಂತಸ್ತುಗಳಿದ್ದು, ಹಿಂಬದಿಯ ಅಂತಸ್ತಿಗೂ ಮುಂಭಾಗಕ್ಕೂ ಯಾವುದೇ ಬಾಗಿಲುಗಳಿಲ್ಲ. ಹಿಂದಿನ ಮೇಲಂತಸ್ತಿನಲ್ಲಿ ಭೂಗತ ಹೋರಾಟಗಾರರಿಗೆ ಆಶ್ರಯ ನೀಡುತ್ತಿದ್ದರು. ಸ್ವಾತಂತ್ರ್ಯ ನಂತರ ಗಾಂಧೀಜಿ ಚರಕದ ಕೈಮಗ್ಗ ಸೇರಿದಂತೆ ಅನೇಕ ಗಾಂಧಿ ತತ್ವಗಳನ್ನು ಈ ಮನೆ ಅಳವಡಿಸಿಕೊಂಡಿತು.

**ದೇಗುಲದ ವಾತಾವರಣ**

'ಅಖಂಡ ಕರ್ನಾಟಕ ರಾಜ್ಯ ಪುನರ್ ವಿಂಗಡಣೆ ವೇಳೆ ಮಾಜಿ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪ, ಸ್ವಾತಂತ್ರ್ಯ ಹೋರಾಟಗಾರ ಹಾವೇರಿಯ ಹಳ್ಳಿಕೇರಿ ಗುದ್ಲೆಪ್ಪ, ಕೊಂಡಜ್ಜಿ ಬಸಪ್ಪ ಮುಂತಾದ ನಾಯಕರು 1952-53ರ ಸುಮಾರಿಗೆ ಈ ಮನೆಗೆ ಆಗಮಿಸಿ ವಾಸ್ತವ್ಯ ಹೂಡಿ, ಈ ಭಾಗದಲ್ಲಿ ಸಭೆ ನಡೆಸಿದ್ದರು. ಡಾ. ಎಂ.ಸಿ. ಮೋದಿ, ವೈದ್ಯರ ತಂಡದೊಂದಿಗೆ ಇಲ್ಲಿ ವಾಸ್ತವ್ಯ ಮಾಡಿ ಒಂದು ವಾರದ 'ಕಣ್ಣಿನ ಚಿಕಿತ್ಸಾ ಶಿಬಿರ' ಹಮ್ಮಿಕೊಂಡಿದ್ದರು. ಹಬ್ಬ ಹರಿದಿನಗಳು, ಸ್ಥಳೀಯ ಭಾಗದ ವಿಶೇಷ ಆಚರಣೆಗಳ ಸಮಯದಲ್ಲಿ ಈ ಮನೆ ಒಂದು ರೀತಿ ದೇವಾಲಯದಂತೆ ಪರಿವರ್ತನೆ ಆಗುತ್ತದೆ. ಕುಟುಂಬದವರ ಜತೆ ಸುತ್ತಲಿನ ಜನ ಇಲ್ಲಿ ಬಂದು ಸಂಭ್ರಮಿಸುತ್ತಾರೆ' ಎಂದು ಸಂತಸ ವ್ಯಕ್ತಪಡಿಸುತ್ತಾರೆ ಈ ಮನೆಯ ಮತ್ತೋರ್ವ ಸದಸ್ಯ ಸತೀಶ್ ಗೌಡರ್.

ಇಂದಿಗೂ ಈ ಮಹಾಮನೆಯ ಮುಂಭಾಗದಲ್ಲಿ ಮಹಾತ್ಮ ಗಾಂಧಿ ಹಾಗೂ ಪಂಡಿತ್ ಜವಾಹರಲಾಲ್ ನೆಹರೂ ಅವರ ಭಾವಚಿತ್ರಗಳಿವೆ' ಎನ್ನುತ್ತಾರೆ ಮನೆಯ ಸದಸ್ಯರಲ್ಲಿ ಒಬ್ಬರಾದ ವಕೀಲ ಎಂ.ಎಸ್. ಗೌಡರ್.

ಸ್ವಾತಂತ್ರ್ಯಾನಂತರ ಭೂದಾನ ಚಳವಳಿಯ ನೇತಾರ ವಿನೋಬಾ ಭಾವೆಯವರ ಮಾತಿನಂತೆ ಹಾಗೂ ಕಾಗೋಡು ಹೋರಾಟ ಮತ್ತು ಕೆನರಾ ಜಿಲ್ಲೆಯ ದಿನಕರ ದೇಸಾಯಿಯವರ ರೈತ ಹೋರಾಟಕ್ಕೆ ಸ್ಪಂದಿಸಿ ತಮ್ಮ ಸುಪರ್ದಿಯಲ್ಲಿದ್ದ ಸುಮಾರು ಐದುನೂರು ಎಕರೆಗೂ ಹೆಚ್ಚಿನ ಭೂಮಿಯನ್ನು ಗೇಣಿದಾರರಿಗೆ ನೀಡಲು ಈ ಕುಟುಂಬದವರು ಸಮ್ಮತಿಸಿದ್ದರು. 'ಉಳುವವನೇ ಭೂಮಿಯ ಒಡೆಯ' ಕಾನೂನಿಗೆ ತಲೆಬಾಗಿ ಕೆನರಾ ಜಿಲ್ಲೆಯಲ್ಲಿಯೇ ಮೊದಲ ಭಾರಿಗೆ ಉಳುವ ರೈತರಿಗೆ ಅವರವರ ಜಮೀನು ನೀಡಿದ ಹೆಗ್ಗಳಿಕೆ ಈ ಕುಟುಂಬದ್ದು.

**ಮಹಾಮನೆಯ ನಿರ್ಮಾಣ**

ಸದ್ಯ ಈ ಮನೆಯಲ್ಲಿ ನಾಲ್ಕು ಕುಟುಂಬಗಳಿವೆ. ಯಾವ ಕುಟುಂಬವೂ ಮೂಲಮನೆಯಲ್ಲಿ ಉಳಿದುಕೊಳ್ಳುವುದಿಲ್ಲ. ಬದಲಿಗೆ ಹಿಂಭಾಗದಲ್ಲಿ ಬೇರೆ ಮನೆ ಮಾಡಿಕೊಂಡು ಮೂಲಮನೆಯನ್ನು ಸ್ಮಾರಕದಂತೆ ಉಳಿಸಿಕೊಂಡಿದ್ದಾರೆ. ಪ್ರತಿ ವಾರ ಒಂದು ಕುಟುಂಬ ಈ ಮನೆಯನ್ನು ಸ್ವಚ್ಛಗೊಳಿಸಿ ಸಾರ್ವಜನಿಕ ಭೇಟಿಗೆ ಅವಕಾಶ ಕಲ್ಪಿಸಿಕೊಡುತ್ತದೆ.

'1923ರಲ್ಲಿ ರಾಯಚೂರಿನಿಂದ ಕಲ್ಲು ಕಟ್ಟಡ ಕುಶಲಕರ್ಮಿಗಳನ್ನು ಕರೆಸಿ ನಿಡಗೋಡಿನ ಕಪ್ಪು ಶಿಲೆಗಳಿಂದ ಸುಭದ್ರವಾದ ಗೋಡೆಗಳನ್ನು ನಿರ್ಮಿಸಲಾಯಿತು. ಇದರ ನಿರ್ಮಾಣಕ್ಕೆ ಮರಳು, ಸುಣ್ಣ ಹಾಗೂ ಬೆಲ್ಲದ ಸುರ್ಕಿ ಗಾರೆ ಬಳಕೆ ಮಾಡಿದ್ದಾರೆ. ವಿವಿಧ ಜಾತಿಯ ಹೆಮ್ಮರಗಳಿಂದ ಕರಕುಶಲ ಕಂಬಗಳು, ಜಂತಿಗಳು, ಪಕಾಸು, ತೊಲೆಗಳು, ಬಾಗಿಲುಗಳು, ಕಿಟಕಿಗಳನ್ನು ವಿನ್ಯಾಸಗೊಳಿಸಲಾಗಿದೆ. ಆ ದಿನಗಳಲ್ಲಿ ಕಲ್ಲು, ಮರಳು, ಮರಮುಟ್ಟುಗಳನ್ನು ಸಾಗಿಸಲು ನೂರಾರು ಎತ್ತುಗಳನ್ನು, ಕೋಣಗಳನ್ನು ಬಳಸಿದ್ದಾರೆಂದು ನಮ್ಮ ಪೂರ್ವಿಕರು ಹೇಳುತ್ತಿದ್ದರು. ಶತಮಾನದ ಹೊಸ್ತಿನಲ್ಲಿ ಮನೆಯನ್ನು ಸುಣ್ಣಬಣ್ಣಗಳಿಂದ ಅಲಂಕರಿಸಿದ್ದೇವೆ. ಒಂದೆರಡು ಸಲ ಸಣ್ಣಪುಟ್ಟ ರಿಪೇರಿ ಕೆಲಸ ಮಾಡಿಸಿದ್ದೇವೆ' ಎನ್ನುತ್ತಾರೆ ಎಂ.ಎಸ್.ಗೌಡರ್.

ಹೆಗ್ಗೋಡಮನೆ ಕುಟುಂಬದವರು ಉತ್ತರ ಕನ್ನಡದವರಲ್ಲ. ಕೋಲಾರ ಪ್ರಾಂತ್ಯದವರಾಗಿದ್ದು, ಅಲ್ಲಿ ಜಮೀನ್ದಾರರು. 1800ರ ಸುಮಾರಿಗೆ ಇಲ್ಲಿಗೆ ಒಕ್ಕಲು ಬಂದವರು. ಅಂದಿನ ಬಾಂಬೆ ಬ್ರಿಟಿಷ್ ಸರ್ಕಾರವು ಈ ಕುಟುಂಬಕ್ಕೆ ಸಿದ್ದಾಪುರ ಉತ್ತರ ಭಾಗದ ಸುಮಾರು 500 ಎಕರೆ ಭೂಮಾಲೀಕತ್ವ ನೀಡಿ, ಹಿರಿಯರಾದ ಪುಟ್ಟಣ್ಣನವರಿಗೆ 'ರಾವ್ ಬಹಾದ್ದೂರ್' ಪದವಿ ನೀಡಿತು.


ಸಿದ್ದಾಪುರ–ಶಿರಸಿ ಮಾರ್ಗದಲ್ಲಿರುವ ಈ ಮನೆಗೆ ಸಾರ್ವಜನಿಕರು ವಾರದ ಎಲ್ಲ ದಿನ ಹಗಲಿನಲ್ಲಿ ಭೇಟಿ ನೀಡಲು ಮುಕ್ತ ಆಹ್ವಾನವಿದೆ.

# ಜೀವವೃಕ್ಷದೊಳಗೆ ಬನಾರಿ ಬದುಕು

• ಗ.ನಾ. ಭಟ್ಟ

**ವೈದ್ಯಕೀಯ**, ಸಾಹಿತ್ಯ ಕ್ಷೇತ್ರ ಮತ್ತು ತಾಳಮದ್ದಳೆ ವಲಯದಲ್ಲಿ ಅತ್ಯುನ್ನತ ಸಾಧನೆ ಮಾಡಿ ಜನಮಾನಸದಲ್ಲಿ ಉಳಿದವರು ಡಾ.ರಮಾನಂದ ಬನಾರಿಯವರು.

ಪ್ರಬಂಧ ಸಂಕಲನ, ಚಿಂತನ ಬರಹ, ಕವನ ಸಂಕಲನ, ವೈದ್ಯಕೀಯ ಕವನ ಸಂಕಲನ, ಹನಿಗವನಗಳ ಸಂಕಲನ, ವೈದ್ಯಕೀಯ ಲೇಖನ, ಆತ್ಮವೃತ್ತಾಂತ, ಸಂಪಾದಿತ ಕೃತಿ, ವ್ಯಕ್ತಿಚಿತ್ರ-ಹೀಗೆ ಅವರು ಮೂವತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. 'ಆರವೆ' (ತೋಟ, ಉದ್ಯಾನ) ಅನ್ನುವುದು ಅವರ ಚಿಂತನ ಪ್ರಬಂಧ. ಇಪ್ಪತ್ತು ಲೇಖನಗಳ ಗುಚ್ಛ ಇದು. ಇದರಲ್ಲಿರುವ ಬಹುಪಾಲು ಲೇಖನಗಳು ಯಕ್ಷಗಾನ ಮತ್ತು ತಾಳಮದ್ದಳೆ ವಿಮರ್ಶೆಗೇ ಮೀಸಲಾದರೂ ಐದಾರು ಮಂದಿ ಸಾಹಿತಿಗಳ ಬಗ್ಗೆಯೂ ಇದೆ. ಕವಿ ಗೋವಿಂದ ಪೈ, ಮಹಾಬಲ ಭಂಡಾರಿ, ಅವರ ತಂದೆ ಕಿರೀಕ್ಕಾಡು ವಿಷ್ಣು ಭಟ್, ದೇರಾಜೆ ಸೀತಾರಾಮಯ್ಯ, ಸ್ವಾಮಿ ಕೇಶವಾನಂದ ಭಾರತೀ ಮೊದಲಾದವರ ಬಗ್ಗೆ ವ್ಯಕ್ತಿಚಿತ್ರಗಳಿವೆ.



ಡಾ.ರಮಾನಂದ ಬನಾರಿ

'ಜೀವವೃಕ್ಷ' ಅವರ ಕುರಿತಾದ ಒಂದು ಅಭಿನಂದನಾ ಕೃತಿ. ಅವರ ಅಭಿಮಾನಿಗಳು, ಸಾಹಿತಿಗಳು, ಲೇಖಕರು, ಅವರ ಕುಟುಂಬದವರು, ಸ್ನೇಹಿತರು ಹೀಗೆ-72 ಮಂದಿ ಅದರ ಮೈತುಂಬಿಸಿದ್ದಾರೆ. ಅವರ ಅಭಿನಂದನ ಕೃತಿ 'ಜೀವವೃಕ್ಷ' ಒಂದು 'ಜೀವ' ಅಥವಾ ಒಬ್ಬ 'ವ್ಯಕ್ತಿ' ವೃಕ್ಷವಾಗಿ, ಕೊಂಬೆ-ರೆಂಬೆಗಳಾಗಿ ಟಿಸಿಲೊಡೆದು, ಹೂವಾಗಿ, ಹಣ್ಣಾಗಿ ಜನೋಪಯುಕ್ತವಾದುದನ್ನು ಸಂಕೇತಿಸುತ್ತದೆ. ಬಹೂಪಯೋಗಿ ವೃಕ್ಷದಂತೆ ಬನಾರಿಯವರು ಲೋಕಕ್ಕೆ ಬೇಕಾದವರಾಗಿ ಬಾಳಿದರು ಎಂಬುದನ್ನು ಈ ಶೀರ್ಷಿಕೆ ಅತ್ಯಂತ ಹೃದಯಂಗಮವಾಗಿ ಧ್ವನಿಸುತ್ತದೆ.

ಅವರ ಕವನ ಸಂಕಲನಗಳಲ್ಲಿ 'ಮುತ್ತು ನೀರಾಗದು' ಎಂಬುದು ಒಂದು. ಇದರಲ್ಲಿ 44 ಕವನಗಳಿವೆ. ಒಂದೊಂದೂ ಚಿಂತನಪೂರ್ಣ ಕವನವೇ ಆಗಿದೆ. ಅವರ ಚಿಂತನ ಶೈಲಿ ಅದಾವ ಬಗೆಯದು, ಅದು ಹೇಗೆ ನಮ್ಮ ಮನವನ್ನು ಮುಟ್ಟುತ್ತದೆ, ತಟ್ಟುತ್ತದೆ ಎನ್ನುವುದಕ್ಕೆ ಇದೊಂದು ಉದಾಹರಣೆ: ಭಾಷೆಯ ಬಗ್ಗೆ ಅವರು ಹೇಳುತ್ತಾರೆ- 'ಮಾತಾಡುವ ಭಾಷೆಗಳು ಕೆಲವಾದರೆ ಮಾತೇ ಇಲ್ಲದ ಭಾಷೆಗಳು ಹಲವು. ಕಣ್ಣಿನ ಭಾಷೆ, ಹುಬ್ಬಿನ ಭಾಷೆ, ಉಗುರಿನ ಭಾಷೆ, ಕೈಸನ್ನೆಯ ಭಾಷೆ. ಇನ್ನು ಎಲ್ಲವನ್ನೂ ಮೀರಿದ ಪ್ರೀತಿಯ ಭಾಷೆ, ಹೃದಯದ ಭಾಷೆ, ವ್ಯಾಕರಣವೇ ಇಲ್ಲದ ಅಂತಃಕರಣದ ಭಾಷೆ. ವೈದ್ಯರ ಭಾಷೆ, ರೋಗಿಗಳ ಭಾಷೆ, ರಾಜಕೀಯದ ಭಾಷೆ, ಕಿವಿಯಲ್ಲಿ ಪಿಸುಗುಟ್ಟುವ ಪ್ರಣಯಿಗಳ ಭಾಷೆ. ಹೊರಗೊಂದು ಭಾಷೆ, ಒಳಗೊಂದು ಭಾಷೆ, ಅರ್ಥವಾಗಿಯೂ ಅರ್ಥವಾಗದ ಭಾಷೆ..ಹೀಗೆ ಬೆಳೆಯುತ್ತಲೇ ಹೋಗುವ ಭಾಷಾವತರಾದಲ್ಲಿ ಕೊನೆಗೂ ಉಳಿಯುವುದು ಒಂದೇ ಒಂದು ಭಾಷೆ ಕಣ್ಣ ಕರುಳಿನ ಭಾಷೆ'.

ಹೀಗೆ ಅತ್ಯಂತ ಕಡಿಮೆ ಅಕ್ಷರಗಳಲ್ಲಿ ಭಾಷೆಯ ವಿವಿಧ ಮಜಲುಗಳ ಬಗ್ಗೆ ಒಂದು ರೋಚಕ ಉಪನ್ಯಾಸವನ್ನೇ ಕೊಟ್ಟುಬಿಡುತ್ತಾರೆ. ಇದರಲ್ಲಿ ಅವರ ಅನುಭವ, ಲೋಕಾನುಭವ, ವೃತ್ತಿ ಅನುಭವ, ಚಿಂತನೆ, ವ್ಯಂಗ್ಯ, ವಿಡಂಬನೆ, ಕೊಂಕು, ಪ್ರೇಮ, ಕಾಮ ಎಲ್ಲವೂ ಒಳಗೊಂಡು ಓದುಗನನ್ನು ಒಂದು ಹೊಸ ಲೋಕಕ್ಕೆ ಒಯ್ಯುತ್ತದೆ. ಇಂಥಹ ಚಿಂತನಪೂರ್ಣ, ಆಹ್ಲಾದಕ ಕವನಗಳು ಇಲ್ಲಿ ನೂರಾರು ಮುತ್ತಾಗಿ ಕಂಗೊಳಿಸಿವೆ.

ಬನಾರಿಯವರ ಇನ್ನೊಂದು ಕೃತಿ 'ಸವೆಯದ ದಾರಿ'. ಇದು ಅವರ ಆತ್ಮವೃತ್ತಾಂತ. ಮೊದಲ ಪರ್ವ, ಉದ್ಯೋಗ ಪರ್ವ, ಕುಟುಂಬ ಪರ್ವ, ಸಾಹಿತ್ಯ ಪರ್ವ, ಕಲಾ ಪರ್ವ, ಸಂಕೀರ್ಣ ಪರ್ವ -ಹೀಗೆ ಒಟ್ಟು ಆರು ಪರ್ವಗಳುಳ್ಳ, 296 ಪುಟಗಳ ಈ ಕೃತಿ ಅವರ ಸಮಗ್ರ ಜೀವನ ಪರ್ವವನ್ನು ಹೇಳುವ ಒಂದು ಆತ್ಮಕಥನವಾಗಿದೆ. ಅವರೇ ಹೇಳುವಂತೆ 'ಇದು ಸಹೃದಯರ ಮುಂದೆ ಒಂದು ನಿವೇದನೆ ಮಾತ್ರ. ಬಗೆದದ್ದು ಮೊಗೆದದ್ದು ಪಡೆದದ್ದು ನಡೆದದ್ದು ಕಂಡದ್ದು ಕೊಂಡದ್ದು ಈ ಎಲ್ಲಾ ಸೇರಿ ನಿರ್ಮಾಣವಾಗಿದೆ' ಎಂದಿದ್ದಾರೆ.

ಬನಾರಿಯವರು ತಮ್ಮ ಬರಹ, ತಾಳಮದ್ದಳೆ ಅರ್ಥಗಾರಿಕೆಗೆ ಎಷ್ಟು ಮಹತ್ವವನ್ನು ನೀಡಿದರೋ ಅಷ್ಟೇ ಮಹತ್ವವನ್ನು ತಮ್ಮ ವೈದ್ಯಕೀಯ ವೃತ್ತಿಗೂ ನೀಡಿದ್ದಾರೆ. ಅದನ್ನು ಅವರು ಎಂದೂ ನಿರ್ಲಕ್ಷಿಸಿದ್ದಿಲ್ಲ. ರೋಗಿಗಳೆಲ್ಲರ ದೃಷ್ಟಿಯಲ್ಲಿ ಅವರು ಗುಣವಂತ ವೈದ್ಯರಾಗಿ ಇಂದಿಗೂ ಸ್ಮರಣೀಯರೇ ಆಗಿದ್ದಾರೆ. ರೋಗಗಳ ಬಗ್ಗೆ ಅರಿವು ಮೂಡಲಿ ಎಂಬ ಕಾರಣಕ್ಕೆ ಅವರು ತಮ್ಮ ಕವಿ ಹೃದಯದ ಸ್ಫೂರ್ತಿಯಿಂದ ನಲವತ್ತು ಕಾಯಿಲೆಗಳ ಬಗ್ಗೆ ಕವನ ರಚಿಸಿ ಸಂಕಲನವನ್ನೇ ಹೊರತಂದಿದ್ದಾರೆ. ಅದಕ್ಕೆ 'ಆರೋಗ್ಯ ಗೀತೆ'ಯೆಂದು ಹೆಸರಿಸಿದ್ದಾರೆ. ರೋಗಗಳ ಬಗ್ಗೆ ಸಂದೇಹ ಉಂಟಾದರೆ ಅವುಗಳ ನಿವಾರಣೆಗಾಗಿ 'ಅನುಬಂಧ'ದಲ್ಲಿ ಒಂದಿಷ್ಟು ಟಿಪ್ಪಣಿಯನ್ನೂ ದಾಖಲಿಸಿದ್ದಾರೆ. ಇದು ಅವರಿಗೆ ರೋಗ-ರೋಗಿಗಳ ಬಗ್ಗೆ ಇರುವ ಕಾಳಜಿಯನ್ನು ತೋರಿಸುತ್ತದೆ.

ಡಾ. ಬನಾರಿಯವರು ತಮ್ಮ ಜೀವನವನ್ನು ತಮ್ಮ ವೃತ್ತಿ-ಪ್ರವೃತ್ತಿಗಳಿಗೇ ಮೀಸಲಾಗಿರಿಸಿಕೊಂಡವರಲ್ಲ. ಸಾರ್ವಜನಿಕ ಜೀವನದಲ್ಲೂ ತೊಡಗಿಸಿಕೊಂಡವರು. ಇಂದು ಕಾಸರಗೋಡು ನಮ್ಮದಾಗಿ ಉಳಿದಿಲ್ಲ, ಕಾಸರಗೋಡು ಕರ್ನಾಟಕದಲ್ಲಿ ವಿಲೀನಗೊಳ್ಳಬೇಕು ಎಂಬ ಚಳವಳಿ ನಡೆಯುತ್ತಿದ್ದ ಸಂದರ್ಭದಲ್ಲಿ ಬನಾರಿಯವರೂ ಕೂಡ ತಮ್ಮ ಆಸ್ಪತ್ರೆ ಕೆಲಸವನ್ನು ಬದಿಗೊತ್ತಿ ಆ ಚಳವಳಿಯಲ್ಲಿ ಭಾಗವಹಿಸಿದ್ದಿದೆ. ಆರ್ಥಿಕ ಬೆಂಬಲ ನೀಡಿದ್ದೂ ಇದೆ. ಕಾಸರಗೋಡಿನ ಬಗ್ಗೆ ಅವರಿಗಿರುವ ಅಭಿಪ್ರಾಯ ಹೀಗಿದೆ-'ಇದು ಭಾಷಾ ಸಮಸ್ಯೆ ಅನ್ನುವುದಕ್ಕಿಂತ ಸಂಸ್ಕೃತಿಯ ಸಮಸ್ಯೆ ಎನ್ನುವುದೇ ಹೆಚ್ಚು ಸಮಂಜಸವಾದದ್ದು. ಈ ಸಂಸ್ಕೃತಿ ಹಲವು ಭಾಷೆಗಳ ಸಂಗಮದಿಂದ ಉಂಟಾದದ್ದು ಮತ್ತು ಕನ್ನಡಕ್ಕೆ ಅತ್ಯಂತ ನಿಕಟವಾದದ್ದು' ಎಂದು ಅವರು ಹೇಳುತ್ತಾರೆ.

# ಮರೆಯಾದ ಹಾಲ್ತುಪ್ಪದ ಗಿಂಡಿ

• ಬೀರಣ್ಣ ನಾಯಕ ಮೊಗಟಾ

**ನಮ್ಮ** ಬದುಕಿನಲ್ಲಿ ಒಂದಾಗಿದ್ದ ಹಾಲ್ತುಪ್ಪದ ಗಿಂಡಿ ಈಗ ನೆನಪು ಮಾತ್ರ. ಒಂದು ಕಾಲದಲ್ಲಿ ಎಲ್ಲರ ಮನೆಯಲ್ಲೂ, ಎಲ್ಲರಿಗೂ ಬೇಕಾಗಿದ್ದ ಈ ಹಾಲ್ತುಪ್ಪದ ಗಿಂಡಿ ಬಹು ಉಪಯೋಗಿ ಸಲಕರಣೆಯಾಗಿ ತನ್ನ ಸ್ಥಾನವನ್ನು ಗಟ್ಟಿಯಾಗಿಸಿಕೊಂಡಿತ್ತು.

ಸಾಮಾನ್ಯವಾಗಿ ಹಿತ್ತಾಳೆಯಿಂದ ಮಾಡಲಾಗುವ ಈ ಗಿಂಡಿ ಸಣ್ಣದು, ಮಧ್ಯಮ ಹಾಗೂ ದೊಡ್ಡದು ಎಂಬ ಪ್ರಕಾರದಲ್ಲಿದ್ದು, ಗಿಂಡಿಯ ಮುಚ್ಚಳ ಹಾಕಲು ಯಾವ ತೊಂದರೆಯೂ ಇರುತ್ತಿರಲಿಲ್ಲ. ಗಿಂಡಿಯ ಮುಚ್ಚಳ ತಿರಗಣಿ ಪದ್ಧತಿಯಲ್ಲಿದ್ದು, ಹಿಡಿಕೆ ಅಖಂಡವಾಗಿರುತಿತ್ತು. ಈಗಿನ ಅಳತೆಯಂತೆ ಸಣ್ಣದರಲ್ಲಿ ಎರಡು ಲೀಟರ್, ಮಧ್ಯಮದರಲ್ಲಿ ಐದು ಲೀಟರ್ ಹಾಗೂ ದೊಡ್ಡದರಲ್ಲಿ ಏಳು ಲೀಟರ್ ಪದಾರ್ಥ ಹಿಡಿಯುವಂತೆ ಇರುತಿತ್ತು. ಸಾಮಾನ್ಯರ ಮನೆಯಲ್ಲಿ ಸಣ್ಣ ಹಾಲ್ತುಪ್ಪದ ಗಿಂಡಿ ಮಾತ್ರ ಇದ್ದು ಸಿರಿವಂತರ ಮನೆಯಲ್ಲಿ ಮೂರು ಪ್ರಕಾರದ ಹಾಲ್ತುಪ್ಪದ ಗಿಂಡಿಗಳು ಇರುತ್ತಿದ್ದವು.

ಊರಿನ ಯಾರದಾದರೂ ಮನೆಯಲ್ಲಿ, ಮದುವೆ, ಸೀಮಂತ, ಉಪನಯನ, ಹಿರಿಯರ ದಿನಗಳು ಇದ್ದಾಗ ನೆಂಟರಿಷ್ಟರು ಗಿಂಡಿಯಲ್ಲಿ ಹಾಲನ್ನಿಟ್ಟು ಹಾಗೂ ಲೋಟದಲ್ಲಿ ತುಪ್ಪವನ್ನು ತುಂಬಿಸಿ ತೆರಳುವ ಪದ್ಧತಿ ಇತ್ತು. ಹಿಂದಿರುಗುವಾಗ ಕಾರ್ಯದ ಮನೆಯಲ್ಲಿ ಮಾಡಿದ ಯಾವುದಾದರೂ ತಿನಿಸನ್ನು ಈ ಗಿಂಡಿಯಲ್ಲಿಟ್ಟು ಕಳಿಸುತ್ತಿದ್ದರು. ಹೀಗಾಗಿ ಇದಕ್ಕೆ ಹಾಲ್ತುಪ್ಪದ ಗಿಂಡಿ ಎಂದು ಕರೆಯುತ್ತಿದ್ದರು. ಇದು



ಅಂದು ಎಷ್ಟರಮಟ್ಟಿಗೆ ಜನಜನಿತವಾಗಿತ್ತೆಂದರೆ ನೆಂಟರ ಮನೆಯಿಂದ ಹಾಲ್ತುಪ್ಪದ ಗಿಂಡಿ ಮನೆಗೆ ತರುತ್ತಿದ್ದಂತೆ ಮನೆಯ ಬೆಕ್ಕು ಯಜಮಾನಿಯ ಹಿಂದೆ ಸುತ್ತಾಡಿ ತಿಂಡಿಗಾಗಿ ಹಂಬಲಿಸುತಿತ್ತು. ನೆಂಟರ ಮನೆಯ ಕಾರ್ಯಗಳಲ್ಲಿ ಹಾಲ್ತುಪ್ಪದ ಗಿಂಡಿಯಲ್ಲಿ ಹಾಲು ಮತ್ತು ತುಪ್ಪವನ್ನು ಒಯ್ದು ಕೊಟ್ಟರೆ ತಮ್ಮ ಮನೆಯ ಕೊಟ್ಟಿಗೆಯಲ್ಲಿ ಗೋವುಗಳ ಸಂತತಿ ವೃದ್ಧಿಯಾಗುತ್ತದೆ ಎಂಬ ನಂಬಿಕೆ ಕೂಡ ಹಳ್ಳಿಗರಲ್ಲಿ ಇತ್ತು.

ಅಂದಿನ ಕಾಲದಲ್ಲಿ ಇಂದಿನಂತೆ ಪ್ಲಾಸ್ಟಿಕ್ ಬಾಟಲಿಗಳು ಇಲ್ಲದ ಸಮಯದಲ್ಲಿ ಪ್ರವಾಸದ ವೇಳೆ, ತೀರ್ಥಯಾತ್ರೆಯ ಸಂದರ್ಭದಲ್ಲಿ ಕಾಸಿ ಆರಿಸಿದ ನೀರನ್ನು ದೊಡ್ಡ ಹಾಲ್ತುಪ್ಪದ ಗಿಂಡಿಯಲ್ಲಿ ಒಯ್ಯುತ್ತಿದ್ದರು.

ಹಾಲ್ತುಪ್ಪದ ಗಿಂಡಿಯನ್ನು ಖಾಲಿ ಇಟ್ಟರೆ, ಮನೆ ಖಾಲಿಯಾಗುವುದೆಂಬ ನಂಬಿಕೆ ಇದ್ದುದರಿಂದ ಹಾಲ್ತುಪ್ಪದ ಗಿಂಡಿಯನ್ನು ಖಾಲಿ ಇಡದೇ ಅದರಲ್ಲಿ ವಿಶೇಷವಾದ ಕಾಯಿಪಲ್ಯ ಬೀಜವನ್ನು ತುಂಬಿಡುತ್ತಿದ್ದರು. ಹೊಸ್ತಿನ ಹಬ್ಬ(ತೆನೆ ಹಬ್ಬ)ದಲ್ಲಿ ಹಾಲ್ತುಪ್ಪದ ಗಿಂಡಿಗೆ ವಿಶೇಷ ಪೂಜೆ ಕೂಡಾ ನಡೆಯುತಿತ್ತು.

ಈಗ ಹಾಲ್ತುಪ್ಪದ ಗಿಂಡಿಯನ್ನು ಬಳಸುವವರೇ ಇಲ್ಲ. ಹೀಗಾಗಿ ಇದು ಮನೆಯಿಂದ ಮರೆಯಾಗಿ ಜಾನಪದ ವಸ್ತುಸಂಗ್ರಹಾಲಯವನ್ನು ಸೇರಿದೆ.

## ಮುನ್ನೋಟ 15-06-2025 ರಿಂದ 21-06-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

### ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

**ಮೇಷ** — ಅಶ್ವಿನಿ, ಭರಣಿ, ಕೃತ್ತಿಕಾ 1

ಸೌಂದರ್ಯದ ಕಡೆ ಹೆಚ್ಚು ಗಮನ ಕೊಡುವಿರಿ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಸಂಸಾರದಲ್ಲಿ ಸಂತೋಷವಿರುತ್ತದೆ. ರಕ್ತದಲ್ಲಿ ದೋಷವಿರುವವರು ಎಚ್ಚರವಹಿಸಿ. ಸಂಗಾತಿಗೆ ನೀವು ಸಾಕಷ್ಟು ಸಹಕಾರ ನೀಡುವಿರಿ. ಮಕ್ಕಳಿಂದ ನಿರೀಕ್ಷಿತ ಪ್ರಮಾಣದ ಸಹಕಾರ ಸಿಗುವುದಿಲ್ಲ. ವೃತ್ತಿಯಲ್ಲಿದ್ದ ಗೊಂದಲಗಳು ದೂರವಾಗುತ್ತವೆ.

**ವೃಷಭ** — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ನಿಮ್ಮ ನಿರ್ಧಾರಗಳ ಬಗ್ಗೆ ನಿಮಗೆ ನಂಬಿಕೆ ಇರುವುದಿಲ್ಲ. ಆದಾಯವು ಉತ್ತಮವಾಗಿರುತ್ತದೆ. ನಿಮ್ಮ ನಡವಳಿಕೆಯಲ್ಲಿ ನಿಮ್ಮ ಹಿರಿಯರ ಪ್ರಭಾವವನ್ನು ಕಾಣಬಹುದು. ಮಕ್ಕಳಿಂದ ನಿಮಗೆ ಆರ್ಥಿಕ ಸಹಾಯ ಸಿಗುತ್ತದೆ. ಗಣಿತ ವಿದ್ಯಾರ್ಥಿಗಳಿಗೆ ಹೆಚ್ಚು ಈಗ ಯಶಸ್ಸು ಲಭಿಸುತ್ತದೆ. ಸರ್ಕಾರಿ ಸಂಸ್ಥೆಗಳ ಮುಖ್ಯಸ್ಥರಾಗಿರುವವರಿಗೆ ಆದಾಯ ಹೆಚ್ಚುತ್ತದೆ. ಮಹಿಳೆಯರಿಗೆ ಸ್ವಲ್ಪ ಅನಾರೋಗ್ಯ ಕಾಡಬಹುದು.

**ಮಿಥುನ** — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಬಹಳ ಜಾಣ ನಡವಳಿಕೆ ನಿಮ್ಮಲ್ಲಿ ಇರುತ್ತದೆ. ಆದಾಯವು ಸ್ವಲ್ಪ ಕಡಿಮೆ ಇರುತ್ತದೆ. ನಿಮ್ಮ ಆಸಕ್ತಿಯಿಂದ ಕೃಷಿ ಭೂಮಿಯನ್ನು ವಿಸ್ತರಣೆ ಮಾಡಿಕೊಳ್ಳಬಹುದು. ಉಷ್ಣ ಸಂಬಂಧಿ ದೋಷಗಳು ನಿಮ್ಮನ್ನು ಕಾಡಬಹುದು. ಸಂಗಾತಿಯ ಸಹಕಾರ ಮತ್ತು ಆರ್ಥಿಕ ಸಹಾಯ ನಿಮಗೆ ಸಿಗುತ್ತದೆ. ಹಿರಿಯರು ವಿದೇಶಕ್ಕೆ ಹೋಗಿ ಬರುವ ಯೋಗವಿದೆ. ವೃತ್ತಿಯಲ್ಲಿ ಹೆಚ್ಚು ಶ್ರಮಪಡಬೇಕಾಗಬಹುದು.

**ಕಟಕ** — ಪುನರ್ವಸು 4 ಪುಷ್ಯ, ಆಶ್ಲೇಷ

ಮನಸಿನಲ್ಲಿ ಆನಂದವಿದ್ದರೂ ಸ್ವಲ್ಪ ಅಳುಕು ಇರುತ್ತದೆ. ಆದಾಯವು ಕಡಿಮೆ ಇರುತ್ತದೆ. ನಿಮ್ಮ ಚಟುವಟಿಕೆಗಳಲ್ಲಿ ನಿರುತ್ಸಾಹವಿರುತ್ತದೆ. ಮಧ್ಯವರ್ತಿಗಳಿಗೆ ಹೆಚ್ಚಿನ ಕಮಿಷನ್ ಹಣ ದೊರೆಯುತ್ತದೆ. ಕೆಲವರಿಗೆ ಪಿತ್ತ ವಿಕಾರ ಅಥವಾ ಚರ್ಮವ್ಯಾಧಿ ಕಾಡಬಹುದು. ಪ್ರೀತಿ, ಪ್ರೇಮದಲ್ಲಿ ಯಶಸ್ಸು ದೊರೆಯುತ್ತದೆ. ವಿದೇಶಿ ಪ್ರಯಾಣ ಮಾಡುವವರು ದಾಖಲೆಗಳನ್ನು ಸರಿಯಾಗಿ ಪರಿಶೀಲನೆ ಮಾಡಿಕೊಳ್ಳಿ.

**ಸಿಂಹ** — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಶಕ್ತಿ ಕುಂದಿದಂತೆ ಅನ್ನಿಸಬಹುದು. ಆದಾಯವು ಉತ್ತಮವಾಗಿರುತ್ತದೆ. ವ್ಯಾಪಾರ ವ್ಯವಹಾರಗಳಿಂದ ಆದಾಯ ಹೆಚ್ಚುವುದು. ನಿಮ್ಮ ಕೆಲಸ ಕಾರ್ಯಗಳಿಗೆ ಹಿರಿಯರಿಂದ ಸಹಕಾರ, ಮಾರ್ಗದರ್ಶನ ದೊರೆಯುವುದು. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಲಭಿಸುತ್ತದೆ. ಶೀತ ಬಾಧೆ ಕೆಲವರನ್ನು ಕಾಡಬಹುದು. ಸಂಗಾತಿಯ ಕಠಿಣ ನಿಲುವುಗಳು ನಿಮಗೆ ಸಂಕಷ್ಟ ತರುತ್ತವೆ. ಉದ್ಯೋಗದಲ್ಲಿ ಪ್ರಗತಿ ಇರುತ್ತದೆ. ಸರ್ಕಾರಿ ಕೆಲಸಗಳಲ್ಲಿ ಅನುಕೂಲವಿರುತ್ತದೆ.

**ಕನ್ಯಾ** — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಹಿರಿಯರ ಮಾತಿನಂತೆ ನಡೆಯುವುದು ಬಹಳ ಉತ್ತಮ. ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ಯಾವುದೇ ಕೆಲಸ ಮಾಡಲು ಮನಸು ಇರುವುದಿಲ್ಲ. ಸಂಸಾರದಲ್ಲಿ ಸ್ವಲ್ಪ ಸಂತೋಷ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಸ್ವಲ್ಪ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ಸಂಗಾತಿಯು ನಿಮ್ಮ ಮಾತಿಗೆ ಸ್ವಲ್ಪವೂ ಬೆಲೆ ಕೊಡುವುದಿಲ್ಲ.

**ತುಲಾ** — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಎಲ್ಲ ಕೆಲಸಗಳನ್ನು ಬೇರೆಯವರಿಂದ ಮಾಡಿಸಲು ಪ್ರಯತ್ನ ಪಡುವಿರಿ. ಆದಾಯವು ಕಡಿಮೆ ಇರುತ್ತದೆ. ಹೈನುಗಾರಿಕೆ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ಭೂಮಿಯ ವ್ಯವಹಾರ ಮಾಡುವವರಿಗೆ ಲಾಭವಿರುತ್ತದೆ. ಮಕ್ಕಳಿಂದ ಯಾವುದೇ ರೀತಿಯ ಗೌರವ ಲಭಿಸುವುದಿಲ್ಲ. ಹಳೆಯ ಕಾಯಿಲೆಗಳು ಮರುಕಳಿಸುವ ಸಾಧ್ಯತೆಗಳಿವೆ. ಸಂಗಾತಿಯ ಅಲಂಕಾರಕ್ಕಾಗಿ ಬಹಳ ಹಣ ಖರ್ಚಾಗುತ್ತದೆ.

**ವೃಶ್ಚಿಕ** — ವಿಶಾಖಾ 4 ಅನೂರಾಧ, ಜ್ಯೇಷ್ಠ

ಯಾವುದೇ ಕೆಲಸ ಮಾಡಲು ಮನಸಿರುವುದಿಲ್ಲ. ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ನಿಮ್ಮ ಕೆಲಸ ಕಾರ್ಯಗಳಿಗೆ ತಾಯಿಯಿಂದ ಪೂರಕ ಸಹಾಯ ದೊರೆಯುತ್ತದೆ. ಕಾನೂನು ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರಗತಿಯಿದೆ. ರಾಜಕಾರಣಿಗಳಿಗೆ ಜನಬೆಂಬಲ ಹೆಚ್ಚುತ್ತದೆ. ಗುಹ್ಯ ರೋಗಗಳು ಕೆಲವರನ್ನು ಬಾಧಿಸಬಹುದು. ಸಂಗಾತಿ ಮಾಡುವ ವ್ಯವಹಾರಗಳಿಂದ ನಷ್ಟವಾಗುತ್ತದೆ. ನಿಮ್ಮ ಕಷ್ಟಗಳಿಗೆ ಹಿರಿಯರು ಸ್ಪಂದಿಸುವರು.

**ಧನುಸ್ಸು** — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಆತ್ಮವಿಶ್ವಾಸವು ಹೆಚ್ಚಾಗಿರುತ್ತದೆ. ಆದಾಯ ಸ್ವಲ್ಪ ಉತ್ತಮವಾಗುತ್ತದೆ. ನಿಮ್ಮ ಕೆಲಸ ಕಾರ್ಯಗಳಿಗೆ ಬಂಧುಗಳ ವಿರೋಧ ಬರಬಹುದು. ಕೃಷಿ ಭೂಮಿ ಅಭಿವೃದ್ಧಿ ಪಡಿಸುವವರಿಗೆ ಹೆಚ್ಚು ಲಾಭವಿರುತ್ತದೆ. ಪ್ರಸೂತಿ ತಜ್ಞರಿಗೆ ಈಗ ಬೇಡಿಕೆ ಹೆಚ್ಚುತ್ತದೆ. ಸಂಗಾತಿಯ ಸಹಾಯದಿಂದ ನಿಮ್ಮ ಆದಾಯವನ್ನು ಹೆಚ್ಚು ಮಾಡಿಕೊಳ್ಳಬಹುದು. ಸರ್ಕಾರಿ ವ್ಯವಹಾರಗಳಲ್ಲಿ ಲಾಭ ಹೆಚ್ಚುತ್ತದೆ. ತಾಯಿಯ ಸಲಹೆಯಿಂದ ಅನಿರೀಕ್ಷಿತ ಲಾಭ ಬರುವ ಸಾಧ್ಯತೆ ಇದೆ.

**ಮಕರ** — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ವಾರದ ಆರಂಭ ಬಹಳ ಆನಂದದಾಯಕವಾಗಿರುತ್ತದೆ. ವಿದೇಶಿ ವ್ಯವಹಾರಗಳಿಂದ ಆದಾಯ ಹೆಚ್ಚುತ್ತದೆ. ಮೂಳೆ ತಜ್ಞರಿಗೆ ಹೆಚ್ಚು ಆದಾಯವಿರುತ್ತದೆ. ಬಟ್ಟೆಯನ್ನು ತಯಾರು ಮಾಡುವವರಿಗೆ ಲಾಭ ಹೆಚ್ಚುತ್ತದೆ. ಸರ್ಕಾರಿ ವ್ಯಾಪಾರ ವ್ಯವಹಾರಗಳು ನಷ್ಟಕ್ಕೆ ಕಾರಣವಾಗಬಹುದು. ಪ್ರೀತಿ ಪ್ರೇಮದಲ್ಲಿರುವವರಿಗೆ ಹಿರಿಯರ ಒಪ್ಪಿಗೆ ದೊರೆಯುತ್ತದೆ. ಸಾಂಪ್ರದಾಯಿಕ ಕೃಷಿ ಮಾಡುವವರಿಗೆ ನಿರೀಕ್ಷಿತ ಲಾಭವಿದೆ.

**ಕುಂಭ** — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಆದಾಯವು ಕಡಿಮೆ ಇದ್ದರೂ ನಿಭಾಯಿಸುವ ಶಕ್ತಿ ಇರುತ್ತದೆ. ಆಸ್ತಿಯನ್ನು ಕೊಳ್ಳಲು ನಿಮ್ಮ ಸಹೋದರಿಯರು ಸಹಾಯ ಮಾಡುವರು. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳುವವರಿಗೆ ಹೆಚ್ಚಿನ ಅಭಿವೃದ್ಧಿ ಇರುತ್ತದೆ. ಶೀತ ಸಂಬಂಧಿ ಕಾಯಿಲೆ ಇರುವವರು ಬಹಳ ಎಚ್ಚರವಾಗಿರಿ. ಸಂಗಾತಿಯ ಕಠಿಣನುಡಿಗಳು ನಿಮ್ಮನ್ನು ಗಾಬರಿಗೊಳಿಸಬಹುದು.

**ಮೀನ** — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಆದಾಯವು ಉತ್ತಮವಾಗಿರುತ್ತದೆ. ಸಂಗೀತಗಾರರಿಗೆ ಸಾಕಷ್ಟು ಪ್ರೋತ್ಸಾಹ ಸಿಗುತ್ತದೆ. ನಡವಳಿಕೆಯಿಂದ ನೀವು ಜನರನ್ನು ಸಂಪಾದನೆ ಮಾಡಬಹುದು. ಹೈನುಗಾರಿಕೆ ಅಭ್ಯಾಸ ಮಾಡುತ್ತಿರುವವರಿಗೆ ಅಭಿವೃದ್ಧಿ ಇರುತ್ತದೆ. ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡುವವರಿಗೆ ಲಾಭವಿರುತ್ತದೆ.

## ಪದಬಂಧ 2896

**ಮೇಲಿನಿಂದ ಕೆಳಕ್ಕೆ**

1. ಹತ್ತು ವರ್ಷಕ್ಕೊಮ್ಮೆ ದೇಶದ ಮಂದಿಯನ್ನು ಎಣಿಸುವ ದಾಖಲಿಸುವ ಕ್ರಿಯೆ 5
2. ತಲೆಯ ಮೇಲೆ ಸೂರು ಇಲ್ಲದ ಪ್ರಜೆ 5
3. ವೃಕ್ಷ ಏರಿಸಿ ಮಂಗನನ್ನಾಗಿ ಮಾಡುವ ಹಳೆ ಆಟ 4
4. ತಾತನ ತಾತ ಅತಿ ಗೌರವದ ಹಿರಿಯ 5
9. ಅಲುಗಾಡದೆ ನಿಂತ ಸ್ಥಿತಿ ಭದ್ರತೆಗೆ ಅಗತ್ಯ 3
11. ಲಲಲಲ... ಎನ್ನುವ ಹೆಣ್ಮಗಳು 3
12. ಭಸ್ಮಾಸುರನನ್ನು ಕೊಂದ ಆಕರ್ಷಕ ಸ್ತ್ರೀ 3
13. ನಮ್ಮ ರಾಷ್ಟ್ರ ಪಕ್ಷಿ ನಮ್ಮನ್ನಾಳಿದ ರಾಜ್ಯ ವಂಶದ ಕುರುಹು 3
14. ಮನ್ಮಥನಲ್ಲಿ ಕಾಣುವ ಎರಡು ರೂಪ, ಒಂದು ಸುಂದರ ಮತ್ತೊಂದು ಬಯಕೆ 5
15. ಮಾವಿನ ಹಣ್ಣಿನ ಜಾತಿಯಲ್ಲಿ ಸವಿ ತುಂಬಿಹೋದದ್ದು 5
16. ಮಂದಿಯನ್ನು ಕಾಪಾಡುವ ಹೊಣೆ 5
17. ನವದಂಪತಿಗಳಿಗೆ ಬೆಳದಿಂಗಳ ರಾತ್ರಿಯ ಜೇನ ಸವಿ 4

**ಎಡದಿಂದ ಬಲಕ್ಕೆ**

1. ನೀರಿನಿಂದ ಉಗಮಿಸಿದ್ದು 4
3. ವಿಶ್ವಾಮಿತ್ರನೆಂಬ ಶ್ರೇಷ್ಠ ಬ್ರಾಹ್ಮಣ 4
5. ಕಾಲ ಕಾಲಕ್ಕೆ ಒಳ್ಳೆಯ ಕಿವಿಮಾತು ಹೇಳುವವ 5
6. ಮಗುವನ್ನು ಹೊತ್ತಿರುವವಳು, ಇನ್ನೇನು ತಾಯಿಯಾಗುವವಳು 4
7. ಬೆತ್ತ ತೆಗೆದುಕೊಂಡು ಬಾ ಎನ್ನುವ ಅಪ್ಪನ ತಂದೆಯ ಪರಂಪರೆ 4
8. ತೀರಾ ಕೆಳಕ್ಕೆ ಬಿದ್ದ ತುಚ್ಛಾವಸ್ಥೆ 5
10. ಗ್ರಹಚಾರ ಕೆಟ್ಟಾಗ ಕೊಡುವ ಎಳ್ಳು 4
12. ದಿಗ್ಭ್ರಾಂತಿಗೆ ಒಳಪಡಿಸುವ ಅತಿ ಪ್ರೀತಿ 2
13. ಮಮಕಾರ ತುಂಬಿರುವ ವಾತ್ಸಲ್ಯ 3
14. ನಮ್ಮ ವಾಸ ಗೃಹ 2
15. ಬೆಳಂದಿಂಗಳಿಂದ ಹುಟ್ಟಿದ್ದು 4
17. ಹಲಗೆಗಳಿಂದ ಬಾಗಿಲು-ಕಿಟಕಿ, ಕುರ್ಚಿ-ಮೇಜು ಇತ್ಯಾದಿ ಸಿದ್ಧಪಡಿಸುವ ಚೊಕ್ಕ ಕಾರ್ಯ 5
18. ಆಗತಾನೆ ಹಸೆಮಣೆ ಏರಿದ ಹೆಣ್ಣು 4
19. ಆಲೋಚನೆಗೆ ಒಳಪಡುವ ಹಿಂದು-ಮುಂದು 4
20. ಬೆಳದಿಂಗಳ ಶಶಿಯೊಂದಿಗೆ ಕಾಣಿಸಿಕೊಳ್ಳುವ ಹೆಣ್ಣು ಹಕ್ಕಿ 5
21. ಬೃಹದಾಕಾರಿ ಶಂಕರ ಭಯಂಕರ 4
22. ಆರೋಪ ಹೊತ್ತವನ ಶೋಧನೆ 4



**ಪದಬಂಧ ಉತ್ತರ -2895**

**ಮೇಲಿಂದ ಕೆಳಕ್ಕೆ**

1. ಮಿನುಗುತಾರೆ 2.ವರಮಾಲಿಕೆ 3.ಗಂಧದಮರ 4.ರಸಗವಳ 6.ನಿರಾಯಾಸ 10.ಲವಣ 11.ಗಾಯಕ 12.ವಿರಾಜಮಾನ 13.ರಕ್ಷಾಬಂಧನ 14.ಭೀಮಬಲ 15.ರಸಭರಿತ 16.ಪಾಪನಾಶಕ

**ಎಡದಿಂದ ಬಲಕ್ಕೆ**

1.ಮಿಶ್ರಭಾವ 3.ಗಂಡಾಂತರ 5.ರಜನಿಗಂಧ 7.ತಾಯಿಲಾಲಿ 8.ಮಹದೇವ 9.ಕೆಲಸಗಾರ 13.ರಣಭೀಕರ 17.ರಾಮರಕ್ಷಾ 18.ಸಪ್ತದ್ವೀಪ 19.ಧವಲಗಿರಿ 20. ನವವನ 21.ತಕತಕ

# ರಂಗದ ಮೇಲೆ ಕಾರಂತರ ಮೈಮನಗಳ ಸುಳಿಯಲ್ಲಿ

ಕೆ.ಶಿವರಾಮ ಕಾರಂತರ 'ಮೈಮನಗಳ ಸುಳಿಯಲ್ಲಿ' ಜನಪ್ರಿಯ ಕಾದಂಬರಿಗಳಲ್ಲೊಂದು. ಇದನ್ನೇ ನಾಟಕವಾಗಿ ರಂಗದ ಮೇಲೆ ಪ್ರಸ್ತುತಪಡಿಸಿದ್ದು 'ನಿರ್ದಿಗಂತ' ತಂಡ.

• ಮೋಹನ್ ಕುಮಾರ ಸಿ.

ಕಾದಂಬರಿ ಧ್ವನಿಸುವ ವಸ್ತುವನ್ನು 'ಹಿಡಿ'ಯಾಗಿ ನಾಟಕದ ಮೂಲಕ ಪ್ರೇಕ್ಷಕರಿಗೆ ಕೊಡುವುದು ಸುಲಭವಲ್ಲ. ಕನ್ನಡ ರಂಗಭೂಮಿಯಲ್ಲಿ ಕೆಲವೇ ಕಾದಂಬರಿಗಳು ರಂಗವೇದಿಕೆಯಲ್ಲಿ ಮೈದಳೆದಿವೆ. ಅದೂ ದೀರ್ಘ ಪ್ರಯೋಗಗಳಾಗಿ!

ಒಂದೂ ಮುಕ್ಕಾಲು ಗಂಟೆಯಲ್ಲಿ ಕೆಲವೇ ಪಾತ್ರಗಳು, ನಟರಿಂದ ಕಾದಂಬರಿಯ 'ವಸ್ತು'ವನ್ನು ದಾಟಿಸಬಹುದು, ರೂಪಕಗಳ ರಂಗವಿನ್ಯಾಸ, ಜೀವಸಾರ ಸಂಗೀತ, ನವಿರಾದ ನಿರೂಪಣೆಯಿಂದ ಕಾವ್ಯಮಯವಾಗಿಸಬಹುದು ಎಂಬುದನ್ನು 'ನಿರ್ದಿಗಂತ' ರಂಗ ತಂಡವು ಕೆ.ಶಿವರಾಮ ಕಾರಂತರ 'ಮೈಮನಗಳ ಸುಳಿಯಲ್ಲಿ' ನಾಟಕದ ಮೂಲಕ ಸಾಧ್ಯವಾಗಿಸಿದೆ.

ಇಲ್ಲಿ ಕಾದಂಬರಿಯು ರಂಗಕಾವ್ಯವಾಗಿ ಸಹೃದಯರ ಎದೆಯಾಳಕ್ಕೆ ಇಳಿಯುತ್ತದೆ. 'ಮೈ ಬೇರೆ.. ಮನಸ್ಸೇ ಬೇರೆ' ಎಂಬ ಜಿಜ್ಞಾಸೆಯಲ್ಲಿ ಹುಟ್ಟಿದ ಕಾದಂಬರಿಗೆ ಕಾವ್ಯಲೇಪನವನ್ನು ಕಾರಂತರು ಸೃಷ್ಟಿಸಿದ ಪಾತ್ರಗಳ ಮೂಲಕವೇ ತಂಡವು ಗಟ್ಟಿಯಾಗಿ ಹೇಳಿದೆ.

ಎಲ್ಲ ಪಾತ್ರಗಳು ರಂಗದಲ್ಲಿ ಕಾಣುವುದಿಲ್ಲ. ಎಲ್ಲ ಸಂಗತಿಗಳೂ ಮಾತಾಗಿಲ್ಲ. ಆದರೆ, ವರ್ತಮಾನಕ್ಕೆ ಬೇಕಾದ ಕಾದಂಬರಿಯ ಸತ್ವವನ್ನು ಪ್ರೇಕ್ಷಕರ ಎದೆಯಲ್ಲಿ ಬಿತ್ತುತ್ತಲೇ, ದ್ವಂದ್ವಗಳ ಸುಳಿಯಲ್ಲಿ ಸಿಲುಕಿರುವ ಅವರನ್ನು ಹೊರಗೆಳೆದು, ಜೀವ ಹಗುರಗೊಳಿಸುವುದನ್ನು ಈ ರಂಗಪ್ರಯೋಗ ಸಾಧ್ಯವಾಗಿಸಿದೆ. ರಂಗಾಯಣದ ಶ್ರೀರಂಗದಲ್ಲಿ ಪ್ರದರ್ಶನಗೊಂಡ ಅಮಿತ್ ಜೆ. ರೆಡ್ಡಿ ನಿರ್ದೇಶನದ ನಾಟಕ ವಿಸ್ಮಿತಗೊಳಿಸಿದೆ.

'ಮೈ–ಮನಸ್ಸು ಎರಡೂ ಬೇರೆ' ಎಂದು ಹೇಳಿದ ಅಮ್ಮನ ಮಾತನ್ನು ಬದುಕಿನುದ್ದಕ್ಕೂ ಶೋಧಿಸುವ ಕಥಾ ನಾಯಕಿ, ವೇಶ್ಯೆ ಮಂಜುಳೆ, 'ಮೈ–ಮನಸ್ಸು ಎರಡೂ ಒಂದೇ' ಎಂದು ಅರ್ಥ ಮಾಡಿಕೊಳ್ಳುವ ಅವಳ ಹುಡುಕಾಟದಲ್ಲಿ ಕಾಮತೃಷೆ ತೀರಿಸಿಕೊಳ್ಳಲು ಬರುವ ಕಂಡಲೂರು ವಾಸುದೇವ ಪೈ, ಉಳ್ಳೂರು ಸುಬ್ಬರಾಯ, ಲಕ್ಷ್ಮಣತೀರ್ಥ ಎಂಬ ಪಾತ್ರಗಳು ಇಂದಿನ ಸಮಾಜಕ್ಕೆ ಕನ್ನಡಿ ತೋರಿದವು. ಪಮ್ಮ–ದುಗ್ಗಿ ಎಂಬ ವಯೋವೃದ್ಧ ದಂಪತಿಯ ಆದರ್ಶದ ಪ್ರೀತಿಯು ಪ್ರೇಕ್ಷಕರ ಒಳಗಿದ್ದ ಸತ್ಯದ ಭಾವಗನ್ನಡಿಯೇ ಆಗಿತ್ತು.

ಹೆಣ್ಣು–ಗಂಡಿನ ಸಂಬಂಧ ದೇಹ ತೃಷೆಗಷ್ಟೇ ಸೀಮಿತವೇ, ಲೈಂಗಿಕ ಸಂತೃಪ್ತಿ ಮಾತ್ರ ಮುಖ್ಯವೇ. ಇಲ್ಲ, ಜೀವನದ ದಾರಿಯುದ್ದಕ್ಕೂ ಬೇಕಾದ ಸಾಂಗತ್ಯವೇ. ಪ್ರೀತಿ ಮಾಡಲು ಮನಸ್ಸೊಂದಿದ್ದರೇ ಸಾಕೇ ಎಂಬ ಚರ್ಚೆ ನಾಟಕದುದ್ದಕ್ಕೂ ನಡೆಯುತ್ತದೆ. ಅದು ವೇಶ್ಯೆಯೊಬ್ಬಳ ಕಥೆಯಲ್ಲ. ಅದು ಎಲ್ಲರ ಕಥೆ. ಮಂಜುಳೆಯ ಮೈ–ಮನಸ್ಸು ಪ್ರತಿ ಗಂಡು–ಹೆಣ್ಣಿನದೂ ಆಗಿದೆ. ಮಂಜುಳೆ ಸುಂದರ ದಾಂಪತ್ಯದ ಪಾಠವನ್ನೂ ಮಾಡುತ್ತಾಳೆ.


'ಮೈಮನಗಳ ಸುಳಿಯಲ್ಲಿ' ನಾಟಕದಲ್ಲಿ ಅಕ್ಷತಾ ಕುಮಟಾ, ರಾಜೇಶ್ ಮಾಧವನ್ ಚಿತ್ರಗಳು: ಫಕ್ರುದ್ದೀನ್ ಎಚ್.

ಆ ಪಾತ್ರವನ್ನು ಮಾಡಿರುವ ಅಕ್ಷತಾ ಕುಮಟಾ ಅವರ ಭಾವಶುದ್ಧ ಅಭಿನಯಕ್ಕೆ ಪೈಪೋಟಿ ನೀಡುವಂತೆ ರಾಜೇಶ್ ಮಾಧವನ್ ಅವರು ಕಂಡಲೂರು ವಾಸುದೇವ ಪೈ, ಉಳ್ಳೂರು ಸುಬ್ಬರಾಯ, ಲಕ್ಷ್ಮಣತೀರ್ಥ ಪಾತ್ರಗಳಿಗೆ ಜೀವ ತುಂಬಿದ್ದಾರೆ. ರಾಜೇಶ್ ಒಂದು ಪಾತ್ರದಿಂದ ಪಾತ್ರಕ್ಕೆ ಜಿಗಿದರೂ ರೂಪಾಂತರಕ್ಕೆ ಭಾವ ಪ್ರಸನ್ನತೆ ತಂದುಕೊಡುತ್ತಾರೆ.

ಮಂಜುಳೆಯ ಯೌವ್ವನದ ದಿನಗಳಿಗೆ ಲೇಖಕಿ ವಿಜಯಮ್ಮ ಹಿನ್ನೆಲೆ ಧ್ವನಿಯಾಗಿದ್ದಾರೆ. ಪ್ರೇಕ್ಷಕರನ್ನು ಅತ್ತಿತ್ತ ಹೊರಳಿಸದಂತೆ, ಭಾವದಲೆಗಳನ್ನು ಏಳಿಸುವಂತೆ ಸತ್ವವಾದ ನಿರೂಪಣೆಯ ಗಟ್ಟಿ ಧ್ವನಿ ಅವರಿಂದ ನಾಟಕಕ್ಕೆ ಸಿಕ್ಕಿದೆ. ಧ್ವನಿಯ ಜೊತೆಗೆ ಬರುವ ಸಮುದ್ರದ ಅಲೆಗಳು, ಸಿಡಿಲು, ಮಳೆ, ಬೀಸುವ ಗಾಳಿಯ ಶಬ್ದವಿನ್ಯಾಸ ಮನದಣಿಸುತ್ತದೆ. ಹಿನ್ನೆಲೆಯ ಧ್ವನಿ ಭೂತವಾದರೆ, ಮಂಜುಳೆಯ ಪಾತ್ರ ವಾಸ್ತವವಾಗಿ ಎದುರು ನಿಂತಿರುತ್ತದೆ.

ವಾಸುದೇವ ಪೈ ಜೊತೆಗಿನ ಸಂಬಂಧದಲ್ಲಿ ಪತ್ರ, ಮಾತಿನಲ್ಲಿ ಅವ ಚೆನ್ನಾಗಿದ್ದರೂ, ಮಂಚದಲ್ಲಿ ದೇಹವನ್ನು ಹರಿದು ತಿನ್ನುವ ಹುಲಿಯಂತೆ, ನಾನು ಮಾರಿಯಮ್ಮನ ಮುಂದೆ ಕಡಿಯುವ ಕುರಿಯಾಗಬೇಕಾಯಿತು. ನಾನು ಹಿಂಸೆಗೊಳಪಟ್ಟ ಪಶುವೊಂದರಂತೆ, ಮೈಮನಗಳೆರಡರ ನೋವಿಗೆ ಗುರಿಯಾದೆ ಎನ್ನುತ್ತಾಳೆ ಮಂಜುಳೆ. ಈ ವೇಳೆಯೇ ಶೃಂಗಾರಕ್ಕೆ ಬೇಕಿರುವುದು ವೈಯ್ಯಾರ, ಒನಪಲ್ಲ. ಬೇರೇನೋ ಮುಗ್ಧತೆ, ಸಹಜತೆ ಬೇಕು ಎಂದು ಪಮ್ಮ–ದುಗ್ಗಿ ಎಂಬ ವೃದ್ಧರಲ್ಲಿ ನೋಡುತ್ತಾಳೆ. ಈ ನಂತರ ಬರುವವರೇ ಉಳ್ಳೂರು ಸುಬ್ಬರಾಯ ಮತ್ತು ಲಕ್ಷ್ಮಣತೀರ್ಥ. ಇವರಿಬ್ಬರಲ್ಲೂ ತನ್ನ ಆದರ್ಶದ ಪಮ್ಮ–ದುಗ್ಗಿಯನ್ನು ಕಾಣುತ್ತಾಳೆ.

ಉಳ್ಳೂರು ಸುಬ್ಬರಾಯ ಜೊತೆಗಿನ ಸಂಬಂಧದಲ್ಲಿ ಗಾಢಪ್ರೀತಿಯನ್ನು ಕಾಣುವ ಮಂಜುಳೆಗೆ, ಕಾಮತೃಪ್ತಿ ಸಿಗುವುದಿಲ್ಲ. ಕೊನೆಗೆ ಅವನೂ ಸಾಯುತ್ತಾನೆ. ಮಠದ ಸನ್ಯಾಸಿ ಲಕ್ಷ್ಮಣತೀರ್ಥ ಉರುಫ್ ಆನಂದಮೂರ್ತಿಯ ಸಂಬಂಧದಲ್ಲಿ ಪ್ರೀತಿ–ತೃಪ್ತಿ ಎರಡೂ ಸಿಗುತ್ತದೆ. ಮೈ–ಮನಸ್ಸು ಒಂದೇ ಎಂದೇ ಖಾತ್ರಿ ಪಡಿಸಿಕೊಳ್ಳುತ್ತಾಳೆ. ಆದರೆ, ಆತ ಶಾಶ್ವತವಾಗಿ ಭೌತಿಕ ಜೀವನ ತೊರೆದು ಸಮಾಧಿಯಾಗಿಬಿಡುತ್ತಾನೆ. ಕೊನೆಯಲ್ಲಿ, ತಂಬೂರಿ ಹಿಡಿದ ಮಂಜುಳೆ ಹೇಳುವ ಮಾತಿದು, 'ನನ್ನ ತಂಬೂರಿ, ದಂಡ ಉಳ್ಳೂರರು, ಅದರ ತಂತಿ ಆನಂದರು. ಅವರಿಬ್ಬರು ಜೊತೆಯಲ್ಲಿ ಅನುದಿನ ಇರುವುದರಿಂದ ನಾನು ಸುಮಂಗಲೆ, ನಿತ್ಯ ಸುಮಂಗಲೆ' ಎನ್ನುತ್ತಾಳೆ.

ರೇಷ್ಮೆಹುಳು ಬುಟ್ಟಿಯ ಅಂಚಿನ ಅಚ್ಚೆಗಳ ಚಂದ್ರಿಕೆಯನ್ನು ರಂಗದ ಮೇಲೆ ಇರಿಸಲಾಗಿದ್ದು, ಇದು ವೃತ್ತಾಕಾರದಲ್ಲಿ ಸುರುಳಿ ಸುತ್ತಿದ ಕೋಟೆಯಂತೆ ಭಾಸವಾಗುತ್ತದೆ. ಇವುಗಳ ಮಧ್ಯೆ ಪಾತ್ರಗಳು ಸುತ್ತುತ್ತವೆ. ರೇಷ್ಮೆಹುಳು ಗೂಡಿನಿಂದ ಬಿಡಿಸಿಕೊಂಡು ಚಿಟ್ಟೆಯಾಗಿ ಹಾರುವ ಅವಕಾಶವನ್ನು ಪಾತ್ರಗಳೇ ಭಾವಾಭಿನಯದ ಮೂಲಕ ತೋರುತ್ತವೆ.

ಪಮ್ಮ–ದುಗ್ಗಿ ಪಾತ್ರಗಳು ಬೊಂಬೆಗಳಾಗಿದ್ದು, ಆದರ್ಶ ದಾಂಪತ್ಯ ಕಟ್ಟಿಕೊಡುವ ಹಾಡಿನಿಂದಾಗಿ ಬೊಂಬೆಗಳು ನಾಟಕದ ಕೊನೆಯವರೆಗೂ ಸಜೀವವಾಗಿರುತ್ತವೆ. ಯಾವುದೇ ಕಲಾವಿದರೂ ಜೀವ ತುಂಬಿ ಅಭಿನಯಿಸಿದ್ದರೂ ಇಷ್ಟು ಪರಿಣಾಮಕಾರಿ ಆಗುತ್ತಿರಲಿಲ್ಲ. ಬೊಂಬೆಗಳು ಕಟ್ಟಿಕೊಡುವ ರೂಪಕ ಮನಸ್ಸಿನಲ್ಲಿ ಅಚ್ಚಳಿಯದಂತೆ ಜೀವಂತವಾಗುತ್ತದೆ. ಕಾದಂಬರಿಯನ್ನು ಕಾವ್ಯವಾಗಿಸಲು ಬೊಂಬೆ, ಬಿದಿರಿನ ಅಚ್ಚೆ, ಕನ್ನಡಿಗಳು, ಅವುಗಳಲ್ಲಿ ಮೂಡಿದ ಬೆಳಕಿನ ಬಿಂಬ, ಪ್ರತಿಬಿಂಬಗಳು ಪ್ರೇಕ್ಷಕರ ಮನೋಭಿವ್ಯಕ್ತಿಯೇ ಆಗಿವೆ. ಅವೇ ಬೆಳಕಿನ ಹಾದಿಯನ್ನು ತೋರುತ್ತವೆ. ಪಾತ್ರಗಳು ಪರಸ್ಪರ ಒಪ್ಪಿಸಿಕೊಳ್ಳುವ ಹರಿವಾಣ, ಕಾಯಿ ತುರಿದು ಮಾಡುವ ಪಂಚಾಮೃತವು ಪ್ರೇಕ್ಷಕರ ಬಾಯಿ ತುಂಬಿಸುತ್ತದೆ. ಕಾದಂಬರಿಯ ಆಯ್ದ ಭಾಗಗಳನ್ನು ನಿರ್ದೇಶಕರು ರಂಗರೂಪವಾಗಿಸಿದ್ದರೂ, ಒಂದು ದೃಶ್ಯದಿಂದ ಇನ್ನೊಂದು ದೃಶ್ಯದ ಚಲನೆಗೆ ಯಾವುದೇ ತಡೆಯಾಗಿಲ್ಲ.

ಪಾತ್ರಗಳ ಭಾವ ತೀವ್ರತೆಯನ್ನು ಹೆಚ್ಚಿಸಲು ನೃತ್ಯ, ಅದಕ್ಕೊಪ್ಪುವ ಸಂಗೀತ ನಾಟಕದಲ್ಲಿದೆ. ಚಲನೆ ವಿನ್ಯಾಸವನ್ನು ಶಕೀಲ್ ಅಹಮದ್ ಹಾಗೂ ಅನುಷಾ ವೀರೇಶ್ ಮಾಡಿದ್ದರೆ, ಅನುಷ್ ಎ.ಶೆಟ್ಟಿ ಅವರ ಸಂಗೀತವೇ ನಾಟಕಕ್ಕೆ ಜೀವ ನೀಡುತ್ತದೆ. ಬೆಳಕಿನ ವಿನ್ಯಾಸ ಬಾಷಾಸಾಬ್, ವಸ್ತ್ರ ವಿನ್ಯಾಸ ಎಚ್.ಕೆ.ಶ್ವೇತಾರಾಣಿ ಚಂದವಾಗಿ ಮಾಡಿದ್ದಾರೆ.


'ಮೈಮನಗಳ ಸುಳಿಯಲ್ಲಿ' ಸಿಲುಕಿದ ಕಲಾವಿದರು...


ಐನೋಳ್ಳಿ ಅರಣ್ಯ ಪ್ರದೇಶದಲ್ಲಿ ಕಾಣಸಿಗುವ ಚುಕ್ಕಿಜಿಂಕೆ. ಚಿತ್ರಗಳು: ಸಿದ್ಧಾರೂಢ ಹೊಕ್ಕುಂಡಿ

# ಬಿಸಿಲನಾಡಲ್ಲೊಂದು ಮಲೆನಾಡು!


ಕಿಂಗ್ ಫಿಶರ್

2ನೇ ಪುಟದಿಂದ...
ಸಮುದ್ರ ಮಟ್ಟದಿಂದ ಇಲ್ಲಿನ ಬುರುಗುದೊಡ್ಡಿ 634 ಮೀಟರ್, ಶೇರಿಭಿಕನಳ್ಳಿ 601 ಮೀಟರ್, ಧರ್ಮಾಸಾಗರ 594 ಮೀಟರ್, ಗೊಟ್ಟಮಗೊಟ್ಟ 547 ಮೀಟರ್, ಶಾದಿಪುರ 502 ಮೀಟರ್, ಚಿಂದಾನೂರ 500 ಮೀಟರ್, ಭೈರಂಪಳ್ಳಿ 478 ಮೀಟರ್ ಎತ್ತರದಲ್ಲಿವೆ. ಸಂಗಾಪುರ ಮತ್ತು ಒಂಟಿಚಿಂತಾ ಮಧ್ಯೆ ಬರುವ ಎತ್ತಿಪೋತೆ ಜಲಪಾತ ಹಾಗೂ ಮಾಣಿಕಪುರ ಬಳಿಯ ರಾಚೇನಹಳ್ಳಿ ನಾಲಾದಲ್ಲಿ ಕೇವಲ 500 ಮೀಟರ್ ಅಂತರದಲ್ಲಿ ಮೂರು ಜಲಪಾತಗಳು ಪ್ರವಾಸಿಗರನ್ನು ಸೆಳೆಯುತ್ತವೆ. ಇಲ್ಲಿನ ಹುಲಿಮೋಕ್ ಅದ್ಭುತ ವ್ಯಾಲಿಯಿದ್ದು ಪರಿಸರ ಪ್ರೇಮಿಗಳ ನೆಚ್ಚಿನ ತಾಣವಾಗಿವೆ. ಕಲ್ಯಾಣ ಕರ್ನಾಟಕದ ಪ್ರಸಿದ್ಧ ಪ್ರವಾಸಿ ತಾಣ ಎಂದು ಹೆಸರು ಪಡೆದ ಸುಮಾರು 360 ಹೆಕ್ಟೇರ್ ವಿಶಾಲವಾದ ಚಂದ್ರಂಪಳ್ಳಿ ಜಲಾಶಯದ ಪ್ರಕೃತಿ ಸೌಂದರ್ಯ ಕಣ್ಣುಗಳಿಗೆ ಹಬ್ಬವನ್ನುಂಟು ಮಾಡುತ್ತದೆ.

ಗೊಟ್ಟಮಗೊಟ್ಟ, ನವಿಲುಗುಡ್ಡ, ಮಹಿಶಮ್ಮನ ಬೆಟ್ಟ, ಮಲ್ಲಣ್ಣದೇವರ ಗುಡ್ಡ, ಹಾಥಿ ಪಗಡಿ, ಚಂದ್ರಂಪಳ್ಳಿ ವೀಕ್ಷಣಾ ಗೋಪುರಗಳು, ಚಿಕ್ಕಲಿಂಗದಳ್ಳಿ, ಲಾಲ್ ತಾಲಾಬ್, ಅಂತಾವರಂ, ಲಿಂಗಾನಗರ, ಕೊಳ್ಳೂರು, ನಾಗಾಈದಲಾಯಿ ಕೆರೆಗಳು ಅರಣ್ಯದ ಸೆರಗಿನಲ್ಲಿವೆ. ಸರ್ನಾಲಾ, ಕೊತ್ವಾಲ ನಾಲಾ, ರಾಚೇನಹಳ್ಳ ನಾಲಾ, ಬುರುಗದೊಡ್ಡಿ ನಾಲಾ, ಯಾಕತಪುರ ನಾಲಾ, ಮೂರಕಲ್ ನಾಲಾ, ಹನುಮಾನ ಮಡಗ ನಿಸರ್ಗ ಸಿರಿಯ ತಾಣಗಳಾಗಿವೆ.


ಕಾಡಿನಲ್ಲಿ ನೀಲಗಾಯ್ ಸಂಚಾರ

ಜೀವವೈಧ್ಯತೆಯ ಆಗರ

ಅವಸಾನದ ಅಂಚಿನಲ್ಲಿರುವ ರಕ್ತಚಂದನ, ರಕ್ತಹೊನ್ನೆ, ಬನ್ನಿ (ಶಮಿ), ಬೇಲ್, ಧೂಪ, ಸಿರಿಗಂಧ, ಹೊಳೆಮತ್ತಿ, ಬಿಳಿಮತ್ತಿ, ಕರಿಮತ್ತಿ, ನೆಲ್ಲಿ, ಶಿವಣೆ, ತೇಗ, ಸೀಸ್ಸೂ, ಮುತ್ತುಗ, ದಿಂಡಿಲು (ಶಿರವಾಳ), ಹಿಪ್ಪೆ, ಠಾಣಿ (ತಾರೆ), ಬೇವು, ಆಲ, ಅರಳೆಯಂತಹ ಮರಗಳಿವೆ. ವನ್ಯಜೀವಿಗಳಾದ ಚುಕ್ಕೆ ಜಿಂಕೆ, ಕಾಡು ಕುರಿ, ನರಿ, ಮೊಲ, ಕಾಡು ಕೋಣ, ಹೈನಾ, ನೀಲಗಾಯ್, ಮುಳ್ಳು ಹಂದಿ, ಕಾಡು ಹಂದಿ, ಮಂಗಗಳು, ಕೃಷ್ಣಮೃಗ, ಕಾಡುಬೆಕ್ಕು, ತೋಳ, ಚಿರತೆ, ಚೌಸಿಂಗಾ, ಚಿಪ್ಪು ಹಂದಿ, ಮಕಾಕ್ ಕೋತಿ, ಉಸುರುವಳ್ಳಿ, ಸರಿಸೃಪಗಳಾದ ನಾಗರಹಾವು, ಹೆಬ್ಬಾವು, ಭಾರತದ ಅತ್ಯಂತ ವಿಷಪೂರಿತ ಮಂಡಲ ಹಾವುಗಳು, ಪಕ್ಷಿಗಳಾದ ಕಿಂಗ್‌ಫಿಶರ್, ಗೋಲ್ಡನ್ ಬ್ಯಾಕ್ಡ್ ವುಡ್ ಪಿಕರ್, ಕಾಡುಕೋಳಿ ಇಲ್ಲಿರುವುದು ವಿಶೇಷ. ಅಳಿವಿನ ಅಂಚಿನಲ್ಲಿರುವ ಹಲವು ಸಸ್ಯ ಪ್ರಭೇದ ಪ್ರಾಣಿ, ಪಕ್ಷಿಗಳು ಸೇರಿದಂತೆ ಸುಮಾರು 230ಕ್ಕೂ ಹೆಚ್ಚು ಜಾತಿಯ ಪಕ್ಷಿಗಳಿಂದ ಸಮೃದ್ಧವಾದ ಜೀವವೈವಿಧ್ಯತೆಯ ತಾಣವಾಗಿದೆ.

ಈ ಅರಣ್ಯ ಪ್ರದೇಶದಲ್ಲಿನ ಸುತ್ತಾಟದ ನಂತರ ಬೆಂಗಳೂರಿನ ನನ್ನ ಸ್ನೇಹಿತ ಖುಷಿಯಾಗಿದ್ದ. ಮುಂದಿನ ಬಾರಿ ಮಲೆನಾಡಿಗೆ ಬದಲು ಇಲ್ಲಿಗೇ ಬರುವುದಾಗಿ ಹೇಳಿ ಹೋದ!



## ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

**ಕನ್ನೆಳಲು**
'ಕನ್ನೆ' ಆದ ಚಿತ್ರಾಂಗದೆ 'ಕನ್ನೆಲ' ಅರ್ಥಾತ್ ಹೊಸಭೂಮಿ, ಫಲವತ್ತಾದ ಭೂಮಿ. ಅವಳ ಕನ್ಯಾ ಭಾವದ ಹರ್ಷ ಮಿನುಗನ್ನು ಕುವೆಂಪು ಪ್ರಕೃತಿಯ 'ಕನ್ನೆಳಲ' ನಲಿವಿನಲ್ಲಿ ಬಣ್ಣಿಸಿರುವ ರೀತಿ ಮನೋಜ್ಞವಾಗಿದೆ. ಅವರಿಂದ ರೂಪುಗೊಂಡ ಪದ 'ಕನ್ನೆಳಲು' ಕನ್ನೆ ಚಿತ್ರಾಂಗದೆಯಂತೆ ಹೊಸತಾದ ನೆಳಲು.

**'ಕನ್ನೆಳಲ ಪಸಲೆಯಲಿ**
**ಹೊನ್ನೀರ ಮಳೆಹೊಯ್ಯಲಲ್ಲಲ್ಲಿ ನೀರುಗಳ್**
**ಸಣ್ಣಸಣ್ಣಗೆ ತಂಗಿ ಮಿನುಗುವಂತೆ.'**

**ಕಲಿಧನ್ವಿ**
ಕಲಿಧನ್ವಿ (ನಾ). ಶೂರ ಬಿಲ್ಲುಗಾರ

ಮಾಯಾ ಜಿಂಕೆಯನ್ನು ಹಿಡಿದು ತರಲು ಹೊರಟ ಶೂರ ಧನುರ್ಧರ ರಾಮನನ್ನು 'ಕಲಿಧನ್ವಿ' ಪದದಿಂದ ಕುವೆಂಪು ಹೀಗೆ ಚಿತ್ರಿಸಿದ್ದಾರೆ:


**'ಸದೃಢ ಜಂಘೆಯ ನಡೆಯ ಕಲಿಧನ್ವಿ'**

**ರವಶವ**
ರವಶವ (ನಾ). ಶಬ್ದದ ಹೆಣ

ಸೀತೆಯನ್ನು ರಾವಣನು ಅಪಹರಿಸಿಕೊಂಡು ಹೋದಮೇಲೆ ರಾಮಲಕ್ಷ್ಮಣರು ನಿರಾಶೆಯಿಂದ ಪಂಚವಟಿಯನ್ನು ಬಿಟ್ಟು ಹೋಗುವರು. ನಿಬಿಡ ಕಾಡಿನಲ್ಲಿ ನಡೆಯುವ ರಾಮನಿಗೆ ನೋವು, ಸಂಕಟ, ವ್ಯಸನದಿಂದಾಗಿ ಆ ನಿರ್ಜನ ಮೌನ ವಾತಾವರಣವು ನೇತ್ಯಾತ್ಮಕವಾಗಿ ಕಾಣುತ್ತದೆ. ಅದನ್ನು ಮನಃಶಾಸ್ತ್ರಜ್ಞನಂತೆ ಪರಿಭಾವಿಸಿ ಕುವೆಂಪು 'ರಣಶವಂ' ನುಡಿ ರೂಪಿಸಿ ಹೀಗೆ ಬಣ್ಣಿಸಿದ್ದಾರೆ:

**'ಇದು ನಿರ್ಜನತೆಯಲ್ತು:**
**ನೈರಾಶ್ಯದಾಕಳಿಕೆ! ಇದು ಮೌನಮಲ್ತಲ್ತು:**
**ರವಶವಂ!**

## ಮೊದಲ ಓದು



**ಬೆಂಕಿ ಮತ್ತು ನೀರು**
ಲೇ: ಎನ್.ಕೆ. ಮೋಹನ್‌ರಾಂ
ಪ್ರ: ಆಕ್ರಾಂತ ಪ್ರಕಾಶನ
ಸಂ: 96204 02737

### ದ್ರಾವಿಡ ಮತ್ತು ಆರ್ಯ ಮೂಲ ಹುಡುಕಾಟ


**ಆಗಾಗ** ಉಕ್ಕೇರುವ ಭಾಷಾ ಸಂಘರ್ಷದ ಜತೆಯಲ್ಲೇ ದ್ರಾವಿಡ ಮತ್ತು ಆರ್ಯ, ಧರ್ಮ, ಜಾತಿ ಹೀಗೆ ಚರ್ಚೆಗಳು ಇಂದಿಗೂ ಮುಖಾಮುಖಿಯಾಗುತ್ತಲೇ ಇರುತ್ತವೆ. ಆದರೆ ಇಂಥ ಶ್ರೇಷ್ಠತೆಯ ಚರ್ಚೆಗಿಂತ ವೈಜ್ಞಾನಿಕ ತಳಹದಿಯಲ್ಲಿ ವಿಶ್ಲೇಷಿಸಿದಲ್ಲಿ ಸಾವಿರಾರು ವರ್ಷಗಳ ಹಿಂದೆ ಆಹಾರ ಅರಸಿ ಮನುಷ್ಯರ ವಿವಿಧ ತಳಿಗಳು ಜಗತ್ತಿನ ಹಲವೆಡೆ ವಲಸೆ ಹೋಗಿ ನೆಲೆಯಾಗಿ ತಮ್ಮದೇ ಸಂಸ್ಕೃತಿ, ಭಾಷೆಯನ್ನು ಅಲ್ಲಿ ಪ್ರತಿಷ್ಠಾಪಿಸಿದ್ದರ ಕುರಿತು ಹಲವು ಲೇಖಕರು ವಿವಿಧ ಭಾಷೆಗಳಲ್ಲಿ ದಾಖಲಿಸುತ್ತಲೇ ಇದ್ದಾರೆ.

ಯುವಾಲ್ ನೊವಾ ಹರಾರಿ ಅವರ 'ದಿ ಹೋಮೊ ಸೇಫಿಯನ್ಸ್' ಎಂಬ ಕೃತಿಯೂ ಓದುಗರ ಮೆಚ್ಚುಗೆ ಪಡೆದ ಅಂಥ ಕೃತಿಗಳಲ್ಲೊಂದು. ಮನುಷ್ಯ ಎಂಬ ಜೀವಿಯ ವಿವಿಧ ತಳಿ ಮತ್ತು ಅವುಗಳ ವಿಕಾಸದ ಕುರಿತ ಚರ್ಚೆ ಒಂದೆಡೆಯಾದರೆ, ಇಡೀ ಜಗತ್ತನ್ನೇ ತನ್ನೊಡಲೊಳಗೆ ಸೇರಿಸಿಕೊಂಡ ಭಾರತವು ಮಿಶ್ರ ಜನಾಂಗದ ದೇಶವಾಗಿದ್ದು, ಇಲ್ಲಿನ ವಿಕಾಸವೇ ಭಿನ್ನ. ಈ ವಿಷಯ ವಸ್ತುವುಳ್ಳ 'ಬೆಂಕಿ ಮತ್ತು ನೀರು – ಆರ್ಯ ಮತ್ತು ದ್ರಾವಿಡ ಕುರಿತು' ಎಂಬ ಕೃತಿಯನ್ನು ಲೇಖಕ ಎನ್.ಕೆ. ಮೋಹನ್‌ರಾಂ ರಚಿಸಿದ್ದಾರೆ.

ಭಾರತದಲ್ಲಿ ಮೂಲವಾಗಿ ಇದ್ದವರು ಯಾರು? ವಲಸೆ ಬಂದವರು ಯಾರು? ಇಲ್ಲಿನ ಭಾಷೆ ಯಾವುದು? ಮುಂದೆ ನಾಗರಿಕತೆ ಹೇಗೆ ವಿಕಾಸವಾಗುತ್ತಾ ಸಾಗಿತು ಎಂಬುದರ ಕುರಿತು ಆಳವಾದ ಮಾಹಿತಿ ನೀಡಿದ್ದಾರೆ. ಭೂಮಂಡಲದ ತಾಯಿಬೇರು ಎಂದೆನಿಸಿಕೊಂಡಿರುವ ಹರಪ್ಪನ್ನರು ಇದ್ದ ಪ್ರದೇಶ, ನಂತರ ಭಾರತ ಪ್ರವೇಶಿಸಿದ ಇರಾನಿಯನ್ನರು ಆರ್ಯನ್ನರಾದ ಕಥೆ, ಮುಂದೆ ಇವರಿಬ್ಬರ ಸಂಘರ್ಷದಲ್ಲಿ ಹರಪ್ಪಗಳ ಸ್ಥಳಾಂತರ, ಧರ್ಮಗಳ ಹುಟ್ಟು, ಅವುಗಳ ನಡುವಿನ ಸಂಘರ್ಷದ ನಡುವೆಯ ವೃತ್ತಿ ಮತ್ತು ಶ್ರೇಷ್ಠತೆಯ ಆಧಾರದಲ್ಲಿ ಸಮಾಜ ರಚನೆಯ ಮಾಹಿತಿಯನ್ನು ಮೋಹನ್‌ರಾಂ ಈ ಕೃತಿಯಲ್ಲಿ ದಾಖಲಿಸಿದ್ದಾರೆ.

ಈ ಕೃತಿಯ ರಚನೆಗಾಗಿ ಮೋಹನ್‌ರಾಂ ಅವರು ಸುಮಾರು 15 ಕೃತಿಗಳನ್ನು ಆಕರವಾಗಿ ಬಳಸಿಕೊಂಡಿರುವುದಾಗಿ ದಾಖಲಿಸಿದ್ದಾರೆ. ಆ ಮೂಲಕ ಆರ್ಯರು ಮತ್ತು ದ್ರಾವಿಡರು ಯಾರು ಮತ್ತು ಇವರ ಭಾಷೆ ಮತ್ತು ಸಂಸ್ಕೃತಿ ಏನು ಎಂಬುದನ್ನು ದಾಖಲೆಗಳ ಸಹಿತ ವಿವರಿಸುವ ಪ್ರಯತ್ನವನ್ನು ಲೇಖಕ ಈ ಕೃತಿಯಲ್ಲಿ ಮಾಡಿದ್ದಾರೆ.

ಪು: 168 ₹170



**ಗಂಧವತಿ**
ಲೇ: ಡಾ. ಚಂದ್ರು ಕಾಳೇನಹಳ್ಳಿ
ಪ್ರ: ಅನಿಕೇತನ
ಸಂ: 9448868548


### ರಂಗದ ಮೇಲೆ ಚರಿತ್ರೆಯ ಚಿತ್ರ

**'ಗಂಧವತಿ'** ನಾಟಕದ ವಸ್ತು ನಾಟ್ಯರಾಣಿ ಎಂದೇ ಪರಿಚಿತಳಾಗಿರುವ ಶಾಂತಲೆ ಮತ್ತು ಬಿಟ್ಟಿದೇವನನ್ನು ಕೇಂದ್ರೀಕರಿಸಿದೆ. ಚಾರಿತ್ರಿಕ ಸನ್ನಿವೇಶವನ್ನು ರಂಗರೂಪಕ್ಕೆ ಸಂಶೋಧನಾ ನೋಟದಲ್ಲಿ ಚಂದ್ರು ಕಾಳೇನಹಳ್ಳಿ ತಂದಿದ್ದಾರೆ. ಇತಿಹಾಸ ಪಠ್ಯ, ಸಿನಿಮಾ, ಜನಪದ, ವಾಸ್ತುಶಿಲ್ಪದ ಮೂಲಕ ಶಾಂತಲೆ–ವಿಷ್ಣುವರ್ಧನ ಬೇರೆ ಬೇರೆ ರೂಪದಲ್ಲಿ ಜನಮಾನಸದಲ್ಲಿ ನೆಲೆಗೊಂಡಿದ್ದಾರೆ. ಶಾಂತಲೆ ಮತ್ತು ವಿಷ್ಣುವರ್ಧನನ ಮೂಲಕ ಹೊಯ್ಸಳ ರಾಜವಂಶದ ಇತಿಹಾಸವನ್ನು ಕೃತಿಕಾರ ಇಲ್ಲಿ ಕಟ್ಟಿಕೊಡುತ್ತಾರೆ.

ನಾಟಕಕಾರರೇ ಇಲ್ಲಿ ಸೂತ್ರದಾರರಾಗಿ ರಾಜಮನೆತನದ ಆದಿ ಪುರುಷನ ಕಥೆಯನ್ನು ಹೇಳುತ್ತಾರೆ. ಅವರು ನಾಟಕದ ವಿಸ್ತರಣೆಯ ತಂತ್ರದಲ್ಲಿ ಸೂತ್ರದಂತೆಯೇ ಕಾಣಿಸುತ್ತಾರೆ. ಗತಕಾಲವನ್ನು ಚರಿತ್ರೆಯ ಕೃತಿಯೊಂದು ಅನುಸಂಧಾನ ಮಾಡುವ ಬಗೆಗಿಂತ, ಸೃಜನಶೀಲ ಕೃತಿಯೊಂದು ಹೇಗೆ ಭಿನ್ನವಾಗಿ ನಿರೂಪಿಸುತ್ತದೆ ಎನ್ನುವುದು ಕುತೂಹಲದ ಅಂಶ. ಅಂತಹ ಸವಾಲನ್ನು ಬಿಡಿಸುವ ಪ್ರಯತ್ನವನ್ನು ಚಂದ್ರು ಇಲ್ಲಿ ಮಾಡಿದ್ದಾರೆ.

ಧರ್ಮ ಎನ್ನುವುದು ಪಾಲಿಸುವವನ ಗುಣಧರ್ಮಕ್ಕೆ ಸಂಬಂಧಿಸಿದ ಸಂಗತಿಯಾಗಿತ್ತು. ವೈಷ್ಣವ, ಜೈನ, ಶೈವ ಮತಗಳನ್ನು ಅನುಯಾಯಿಗಳು ತಮ್ಮ ಒಲವು ನಿಲುವಿನ ಮೇಲೆ ನಿರ್ಧರಿಸುತ್ತಿದ್ದರು. ಇಲ್ಲಿ ರಾಜ ಬಿಟ್ಟಿದೇವ ಜೈನ ಧರ್ಮ ತ್ಯಜಿಸಿ ವೈಷ್ಣವನಾದ ಮೇಲೆ ವಿಷ್ಣುವರ್ಧನ ಆಗುತ್ತಾನೆ. ಸಹಜವಾಗಿ ಆತ ಸರ್ವಧರ್ಮ ಸಹಿಷ್ಣು ಕೂಡ. ಸರ್ವಧರ್ಮಗಳ ಸಾರವೂ ಒಂದೇ ಆಗಿತ್ತು ಅನ್ನುವ ಅಂಶವನ್ನು ಈ ನಾಟಕ ತೋರಿಸುತ್ತದೆ.

ಪು: 128 ₹150



**ನೇರಳೆ ಐಸ್‌ಕ್ರೀಂ**
ಲೇ: ಪ್ರಸಾದ ಶೆಣೈ ಆರ್.ಕೆ.
ಪ್ರ: ವೀರಲೋಕ
ಸಂ: 70221 22121

### ಪ್ರಕೃತಿಯೇ ಮೈತಳೆದಿರುವ ಕಥೆಗಳು

**ನಿಗೂಢ** ಕಾಡಿನಲ್ಲಿ ಹೆಸರೇ ಇರದ ಅದೆಷ್ಟು ಕಾಲ್ದಾರಿಗಳು. ಈ ಕಾಲ್ದಾರಿಗಳನ್ನೆಲ್ಲ ದಾಟಿ ಅಲ್ಲಿಯೇ ಇದ್ದ ಕಾಡ ಹೂವಿನ ಘಮವನ್ನು ಆಸ್ವಾದಿಸುವುದು ಒಂದು ಬಗೆಯ ಚಂದದ ಅನುಭವ. ಹಸಿರ ಸಾಲಿನಲ್ಲಿ ಸಣ್ಣ ಸಣ್ಣ ತೊರೆಗಳ ಜಾಡು ಹಿಡಿದು ಪ್ರಕೃತಿಯನ್ನು ಆಸ್ವಾದಿಸುವಂತೆ ಭಾಸವಾಗುತ್ತದೆ ಪ್ರಸಾದ ಶೆಣೈ ಆರ್.ಕೆ. ಅವರ ಕಥೆಗಳು.


ಇಲ್ಲಿ ಕರಾವಳಿ ಸಂಸ್ಕೃತಿಯ ಜತೆಗೆ ಪ್ರಕೃತಿಯ ದಟ್ಟ ವಿವರಗಳಿವೆ. ಪಶ್ಚಿಮ ಘಟ್ಟ ಸಾಲುಗಳ ಮಧ್ಯೆ ಹಂಚಿ ಹೋದ ಊರುಗಳು, ಅಲ್ಲಿರುವ ಪಾತ್ರಗಳೆಲ್ಲವೂ ಹಸಿರ ಸಾಲಿನ ಮಧ್ಯೆ ಜಿನುಗುವ ಮಳೆಯಲ್ಲಿ ತಣ್ಣಗೆ ಹಾದು ಹೋದಂತೆ ಭಾಸವಾಗುತ್ತವೆ.

ಮಳೆಗಾಲದಲ್ಲಿ ಮಣ್ಣಿನಡಿಯಲ್ಲಿ ಗುಡುಗು ಮಿಂಚಿಗೆ ಮೂಡುವ ಲಾಂಬು ಅಂದರೆ ಅಣಬೆಗಳು ಇಲ್ಲಿ ಪ್ರೀತಿಯ ರೂಪಕಗಳಾಗಿವೆ. ಸೇಸಿಯನ್ನು ಅಗಾಧವಾಗಿ ಪ್ರೀತಿಸುವ ನಿಚ್ಚುವಿಗೆ ಮಳೆಗಾಲದಲ್ಲಿ ನಾಲ್ಕು ಕಾಸು ಸಂಪಾದಿಸಲು ಅವಕಾಶ ಮಾಡಿಕೊಡುವ ಅಣಬೆಗಳ ರುಚಿಯ ಘಮಲು ಸೇಸಿಯ ಪ್ರೀತಿಯ ಅಮಲು ಎರಡೂ ಒಂದೇ ಆಗಿಯೂ ಕಾಣುತ್ತದೆ. ಹಳ್ಳಿಯ ಸೊಗಡಷ್ಟೆ ಅಲ್ಲದೇ ಪೇಟೆಯಲ್ಲಿ ಐಷಾರಾಮಿ ಅಪಾರ್ಟ್‌ಮೆಂಟ್‌ವೊಂದರಲ್ಲಿ ಎಲ್ಲ ನಗರ ಸೌಕರ್ಯಗಳ ನಡುವೆ ಬದುಕುವ ಪುಟ್ಟ ಕುಟುಂಬವು ಹೇಗೆ ಪ್ರಕೃತಿಯಿಂದ ದೂರ ಉಳಿದಿದೆ ಮತ್ತು ಪ್ರಕೃತಿಯಿಂದ ದೂರ ಉಳಿದಷ್ಟು ಮನುಷ್ಯ ಮನಸ್ಸಿನ ಮೇಲೆ ಬೀರುವ ಪರಿಣಾಮ ಎಂಥದ್ದು ಎಂಬುದನ್ನು ಬಹಳ ಸೂಕ್ಷ್ಮವಾಗಿ ಕಥೆಗಾರ ಇಲ್ಲಿ ಹೇಳಿದ್ದಾರೆ. ಮಕ್ಕಳ ಲೋಕದಲ್ಲಿ ಅಪರಿಚಿತತೆ ಎಂಬುದು ಕ್ಷಣಿಕವಾದದ್ದು. ಯಾವ ಕ್ಷಣದಲ್ಲಾದರೂ ಮಕ್ಕಳು ಅಪರಿಚಿತತೆಯ ಗೆರೆಯನ್ನು ದಾಟಿ, ಪರಸ್ಪರ ಬೆರೆಯಬಲ್ಲರು ಎಂಬುದನ್ನು 'ಕಿತ್ತಳೆ ಪೆಪ್ಪರ್‌ಮೆಂಟ್' ಕಥೆ ಹೇಳುತ್ತದೆ. ಪ್ರಸಾದ್ ಅವರ ಕಥೆಗಳಲ್ಲಿ ಕಾಡು, ಮರ, ಗಿಡ, ಬಳ್ಳಿ, ಹೂವು ಜತೆಗೆ ಮಳೆ ಹೀಗೆ ಪ್ರಕೃತಿಯೇ ಮೈದಳೆದಿದೆ.

ಪು: 184 ₹225



ಕುದುರೆಮುಖ ಶಿಖರದ ನೆತ್ತಿಯ ಮೇಲಿಂದ ಕಾಣುವ ಪ್ರಕೃತಿಯ ವಿಹಂಗಮ ನೋಟ



ಶೋಲಾ ಕಾಡು

ಚಾರಣ

**ಎಷ್ಟು ದೂರ?**

ಕುದುರೆಮುಖವು ಬೆಂಗಳೂರಿನಿಂದ **318** ಕಿಲೋಮೀಟರ್, ಚಿಕ್ಕಮಗಳೂರಿನಿಂದ **95** ಕಿಲೋಮೀಟರ್ ಮತ್ತು ಕಳಸದಿಂದ **10** ಕಿಲೋ ಮೀಟರ್ ದೂರದಲ್ಲಿದೆ.

ಪಶ್ಚಿಮ ಘಟ್ಟದಲ್ಲಿರುವ ಕುದುರೆಮುಖ ಶಿಖರದ ಚಾರಣವು ಹೃನ್ಮನ ತಣಿಸುತ್ತದೆ. ಪ್ರಕೃತಿ ಸೌಂದರ್ಯ ಸವಿಯುತ್ತಾ ಈ ಬೆಟ್ಟದ ತುದಿಯತ್ತ ಹೆಜ್ಜೆ ಹಾಕಿದರೆ ಹೊಸ ಲೋಕದ ಅನುಭವ ಖಚಿತ

# ಚಾರಣಿಗರ ಸ್ವರ್ಗ
# ಕುದುರೆಮುಖ ಶಿಖರ

• ಲೋಕೇಶ ಬೆಕ್ಕಳಲೆ


ಚಿಕ್ಕಮಗಳೂರು ಜಿಲ್ಲೆಯಲ್ಲಿ ಹಲವು ಗಿರಿಶಿಖರಗಳಿವೆ. ಅವುಗಳಲ್ಲಿ ಕುದುರೆಮುಖವೂ ಒಂದು. ನಾವು ಹತ್ತು ಜನ ಗೆಳೆಯರು ಕುದುರೆಮುಖ ಶಿಖರದ ಆರಂಭ ಬಿಂದುವನ್ನು ತಲುಪಿ, ಅಲ್ಲಿ ಅರಣ್ಯಾಧಿಕಾರಿಗಳಿಂದ ತಪಾಸಣೆಗೆ ಒಳಗಾಗಿ ನಮ್ಮ ಚಾರಣವನ್ನು ಆರಂಭಿಸಿದೆವು.

ಸಾವಿರಾರು ಜನರು ನಡೆದಾಡಿ ಸವೆದ ಹಾಗೆ ಕಾಣುತ್ತಿದ್ದ ಕಾಲುದಾರಿಯಲ್ಲಿ ಒಬ್ಬರ ಹಿಂದೆ ಒಬ್ಬರು ಸಾಲಾಗಿ ಶಿಖರದ ತುದಿಯ ಕಡೆಗೆ ಹೆಜ್ಜೆ ಹಾಕಿದೆವು. ಆ ಕಾಲುದಾರಿ ಹಿಡಿದು ಹೊರಟರೆ ಸಾಕು, ಅದೇ ನಮ್ಮನ್ನು ಶಿಖರದ ತುದಿಗೆ ಕರೆದೊಯ್ಯುತ್ತದೆ. ಎಲ್ಲಿಯೂ ದಾರಿ ತಪ್ಪಿಸುವುದಿಲ್ಲ. ಆದರೂ ನಮ್ಮೆಲ್ಲರಿಗಿಂತಲೂ ಮುಂದೆ ಸ್ಥಳೀಯ ಗೈಡ್ ಹೋಗುತ್ತಿದ್ದರು.

ಅರಣ್ಯ ಇಲಾಖೆಯ ನಿಯಮದ ಪ್ರಕಾರ ಕುದುರೆಮುಖ ಶಿಖರದ ಚಾರಣ ಮಾಡಬೇಕಾದರೆ ಒಬ್ಬರು ಸ್ಥಳೀಯ ಗೈಡ್ ಅನ್ನು ನೇಮಿಸಿಕೊಳ್ಳುವುದು ಕಡ್ಡಾಯವಾಗಿದೆ.

**ಶೋಲಾ ಕಾಡು:** ಕುದುರೆಮುಖ ಶಿಖರ ಚಾರಣದಲ್ಲಿ ಮೊದಲಿಗೆ ಶೋಲಾ ಕಾಡನ್ನು ಹಾದುಹೋಗಬೇಕು. ಅಂದರೆ ಎರಡೂ ಕಡೆಯು ಪರ್ವತ ಸಾಲುಗಳಿದ್ದು, ಅದರ ಮಧ್ಯದಲ್ಲಿ ಶಿಖರದಿಂದ ಇಳಿಯುವ ನೀರು ಹರಿದು ಹೋಗುವ ಕಣಿವೆಯ ಜಾಗದಲ್ಲಿ ಮರಗಿಡಗಳು ಬೆಳೆದು ಕಾಡು ಸೃಷ್ಟಿಯಾಗಿದೆ. ಕುದುರೆಮುಖ ಚಾರಣದ ವೈಶಿಷ್ಟ್ಯಗಳಲ್ಲಿ ಶೋಲಾ ಕಾಡು ಪ್ರಮುಖವಾಗಿದೆ. ಚಾರಣ ಶುರು ಮಾಡಿದಾಗ ಬಯಲಲ್ಲಿ ನಡೆದು ಹೋಗುತ್ತಿರುತ್ತೇವೆ. ಮರುಕ್ಷಣ ಇದ್ದಕ್ಕಿದ್ದಂತೆ ಕಾಡನ್ನು ಪ್ರವೇಶಿಸುತ್ತೇವೆ. ಕಣಿವೆಯಲ್ಲಿ ಸ್ವಲ್ಪ ದೂರ ಸಾಗಿದ ಮೇಲೆ ಮತ್ತೆ ಬಯಲಿಗೆ ಬರುತ್ತೇವೆ. ಬಯಲಿನಲ್ಲಿ ಸ್ವಲ್ಪ ದೂರ ಸಾಗಿದ ಮೇಲೆ ಮತ್ತೆ ಕಾಡಿನ ಪ್ರವೇಶ. ಒಂದು ರೀತಿಯಲ್ಲಿ ಬಯಲು ಮತ್ತು ಕಾಡು ಕಣ್ಣಾಮುಚ್ಚಾಲೆ ಆಟ ಆಡುತ್ತಿವೆಯೇನೋ ಎಂಬಂತೆ ಭಾಸವಾಗುತ್ತದೆ!

ಕಣಿವೆಯ ಶೋಲಾ ಕಾಡಿನೊಳಗಿನ ಅನುಭವವೇ ರೋಮಾಂಚನಕಾರಿ. ಮುಗಿಲೆತ್ತರದ ಮರಗಳು, ಶಿಖರದಿಂದ ಹರಿದು ಬರುವ ನೀರಿನ ಜುಳುಜುಳು ನಾದ, ಹಕ್ಕಿಗಳ ಚಿಲಿಪಿಲಿ, ಕಪ್ಪೆಗಳ ವಟಗುಟ್ಟುವಿಕೆ, ಒಂದೇ ಸಮನೆ ಗುಯ್‌ಗುಡುವ ಜೀರುಂಡೆಗಳ ಶಬ್ದ... ಇವೆಲ್ಲವೂ ಒಟ್ಟಿಗೆ ಸೇರಿ ದಟ್ಟ ಕಾಡಿನ ಅನುಭವವನ್ನು ನೀಡುತ್ತದೆ. ಶೋಲಾ ಕಾಡು ಒಮ್ಮೆ ಭಯಪಡಿಸಿದ್ದು ಉಂಟು. ಶಿಖರದ ತುದಿ ತಲುಪಿ ವಾಪಸ್ ಮರಳುವಾಗ ನಾಲ್ಕು ಜನರ ಒಂದು ತಂಡ ಮುಂದೆ ಹೋಗಿತ್ತು. ನಾಲ್ಕು ಜನರ ಇನ್ನೊಂದು ತಂಡ ಹಿಂದೆ ಬರುತ್ತಿತ್ತು. ನಾನು ಮತ್ತು ಇನ್ನೊಬ್ಬರು ಈ ಎರಡು ತಂಡಗಳಿಂದ ಬೇರ್ಪಟ್ಟಿದ್ದೆವು. ಒಳಗೊಳಗೆ ಭಯ, ಆತಂಕ. ಆದರೂ ಪರಸ್ಪರ ತೋರಿಸಿಕೊಳ್ಳಲಿಲ್ಲ. ಸಂಜೆ ಐದು ಗಂಟೆ ಸಮಯ. ಆಗಸದಲ್ಲಿ ಕಾರ್ಮೋಡ ಕವಿದಿತ್ತು. ಕತ್ತಲು ಇಣುಕುತ್ತಿತ್ತು. ಹಾಗೇ ನಡೆದುಕೊಂಡು ಕಣಿವೆ ಕಾಡಿನೊಳಗೆ ಬಂದಾಗ ಕಾಡ್ಗತ್ತಲು ಆವರಿಸಿದಂತಾಗಿ, ಭಯ ಹೆಚ್ಚಾಯಿತು. ಅದೇ ಸಮಯಕ್ಕೆ ದೂರದಲ್ಲಿ ಮನುಷ್ಯರ ರೀತಿಯಲ್ಲಿಯೇ ಸಿಳ್ಳೆ ಹಾಕುತ್ತಿದುದ್ದು ಕೇಳಿಸಿತು. ಜೊತೆಯಲ್ಲಿದ್ದ ಇನ್ನೊಬ್ಬರಿಗೆ ಹೇಳಿದೆ. ಅವರು ಅದನ್ನು ಆಲಿಸಿ 'ಹೌದು. ಯಾರೋ ಸಿಳ್ಳೆ ಹಾಕುತ್ತಿದ್ದಾರೆ' ಎಂದರು. ಆದರೆ ಈ ಕಾಡಿನೊಳಗೆ ಇಷ್ಟೊತ್ತಲ್ಲಿ ಯಾರೋ ಬಂದು ಸಿಳ್ಳೆ ಹಾಕಲು ಹೇಗೆ ಸಾಧ್ಯ? ಎಂದು ಅನಿಸಿದರೂ, ಮನಸ್ಸಿನಲ್ಲಿ ಏನೇನೋ ಕಲ್ಪನೆಗಳು ನುಸುಳಿ ಎದೆ ಜೋರಾಗಿ ಬಡಿದುಕೊಳ್ಳುತ್ತಿತ್ತು. ಅಷ್ಟೊತ್ತಿಗೆ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರು ತಮ್ಮ ಯಾವುದೋ ಪುಸ್ತಕದಲ್ಲಿ ಮನುಷ್ಯರ ರೀತಿಯಲ್ಲಿಯೇ ಸಿಳ್ಳೆ ಹಾಕುವ ಪಕ್ಷಿಯ ಬಗ್ಗೆ ಉಲ್ಲೇಖಿಸಿರುವುದು ನೆನಪಾದರೂ, ಹೆದರಿಕೆ ದೂರವಾಗಿರಲಿಲ್ಲ. ಇಂಥ ದಟ್ಟ ಕಾಡಿನ ಅನುಭವಕ್ಕೆ ಕುದುರೆಮುಖ ಶಿಖರದ ಚಾರಣದ ಹಾದಿಯಲ್ಲಿ ಸಿಗುವ ಶೋಲಾ ಕಾಡು ಸಾಕ್ಷಿಯಾಯಿತು.



ಒಂಟಿ ಮರದ ಬಳಿ ಚಾರಣಿಗರು

## ಪರ್ವತ ಬಯಲು

ಶೋಲಾ ಕಾಡನ್ನು ದಾಟಿ ಮುಂದೆ ಬಂದರೆ ಪರ್ವತದ ಅನಂತ ಬಯಲು ಎದುರಾಗುತ್ತದೆ. ಈ ಬಯಲಿನಲ್ಲಿ ಐದು ಬೆಟ್ಟಗಳನ್ನು ಹತ್ತಿಳಿದರೆ ಅಂತಿಮವಾಗಿ ಕುದುರೆಮುಖ ಶಿಖರ ಕಾಣಿಸುತ್ತದೆ. ಮೊದಲನೆಯ ಬೆಟ್ಟವು ಸ್ವಲ್ಪ ಕಡಿದಾಗಿದ್ದು, ಹತ್ತಲು ಸವಾಲೊಡ್ಡುತ್ತದೆ. ಬೆಟ್ಟದ ಹೊಟ್ಟೆಯ ಮೇಲೆ ನಡೆದು ಸ್ವಲ್ಪ ದೂರ ಸಾಗಿದ ಮೇಲೆ ಒಂಟಿಮರವೊಂದು ಸಿಗುತ್ತದೆ. ಅಲ್ಲಿಗೆ ಕುದುರೆಮುಖ ಶಿಖರ ಚಾರಣದ ಅರ್ಧದಾರಿಯನ್ನು ಕ್ರಮಿಸಿದ್ದೆವು. ಒಂಟಿಮರ ಇರುವ ಸ್ಥಳವು ಪ್ರಕೃತಿ ಸೌಂದರ್ಯವನ್ನು ಆಸ್ವಾದಿಸುವ ಒಂದು 'ವ್ಯೂ ಪಾಯಿಂಟ್' ಕೂಡ. ಜೊತೆಗೆ ಚಾರಣಿಗರ ವಿಶ್ರಾಂತಿಯ ತಾಣವು ಹೌದು. ಅಲ್ಲಿಗೆ ತಲುಪುವ ಹೊತ್ತಿಗಾಗಲೇ ಚಾರಣಿಗರ ಗುಂಪೊಂದು ಅಲ್ಲಿ ಕುಳಿತು ವಿಶ್ರಮಿಸುತ್ತಾ, ಪ್ರಕೃತಿ ಸೌಂದರ್ಯವನ್ನು ಆಸ್ವಾದಿಸುತ್ತಿತ್ತು. ಅವರ ಜೊತೆಗೂಡಿದ ನಾವು ಕೂಡ ನಿಸರ್ಗದ ರಮಣೀಯ ಸೊಬಗನ್ನು ಆನಂದಿಸಿದೆವು. ಮನಸ್ಸು ಉಲ್ಲಾಸಗೊಂಡಿತು. ಆಗ ಉಳಿದರ್ಧ ಶಿಖರ ಏರಲು ಉತ್ಸಾಹ ಮೂಡಿತು.

ಬೆಟ್ಟದ ಮೇಲಿನ ನಡಿಗೆ ಸಹಜವಾಗಿ ತುಸು ನಿಧಾನವಾಗಿತ್ತು. ದಾರಿಯು ಸಣ್ಣ ಸಣ್ಣ ಕಲ್ಲುಗಳಿಂದ ಕೂಡಿದೆ. ದಾರಿ ಉದ್ದಕ್ಕೂ ಬೆಂಬಿಡದ ಬೇತಾಳದಂತೆ ಕಾಡುವ ಕುದುರೆ ನೊಣಗಳು. ನಡಿಗೆ ಸ್ವಲ್ಪ ನಿಧಾನವಾದರೂ ಕೈ, ಕಾಲು, ಮುಖ, ಹಣೆ ಎನ್ನದೆ ಎಲ್ಲೆಂದರಲ್ಲಿ ಕುಳಿತು ಕ್ಷಣಾರ್ಧದಲ್ಲಿ ರಕ್ತ ಹೀರಿಬಿಡುತ್ತವೆ. ಇವುಗಳ ಕಾಟ ಕಿರಿಕಿರಿ ಅನಿಸಿದರೂ ಸಹಿಸಿಕೊಳ್ಳದೆ ಬೇರೆ ದಾರಿ ಇಲ್ಲ.

## ಕುದುರೆಮುಖ ಶಿಖರ

ಪಶ್ಚಿಮ ಘಟ್ಟವು ಗಿರಿ ಶಿಖರಗಳ ತವರೂರು. ಇಲ್ಲಿರುವ ಶಿಖರಗಳಲ್ಲಿ ಕುದುರೆಮುಖ ಗಿರಿಧಾಮವು ಒಂದು. ಇದರ ತುದಿಯು ಕುದುರೆ ಮುಖವನ್ನು ಹೋಲುವುದರಿಂದ ಕುದುರೆಮುಖ ಶಿಖರ ಎಂದು ಕರೆಯುತ್ತಾರೆ ಎಂದು ನಮ್ಮ ಜೊತೆ ಬಂದಿದ್ದ ಸ್ಥಳೀಯ ಗೈಡ್ ಹೇಳಿದರು. ನಾವು ಶಿಖರವನ್ನೇ ದೃಷ್ಟಿಸಿ ನೋಡಿದೆವು. ಅದು ನಮಗೆ ಕುದುರೆಯ ಮೊಗದಂತೆಯೇ ಕಂಡಿತು. ಬಹುಶಃ ನಾವು ಮೊದಲೇ ಕುದುರೆಯ ಮುಖವನ್ನು ಮನಸ್ಸಿನಲ್ಲಿ ಕಲ್ಪಿಸಿಕೊಂಡು ನೋಡುವುದರಿಂದ ಹಾಗೆ ಕಾಣುತ್ತದೆಯೋ ಏನೋ? ಪ್ರಜ್ಞೆಯಿಂದ ಪರಿಸರವೋ? ಪರಿಸರದಿಂದ ಪ್ರಜ್ಞೆಯೋ?

ಕುದುರೆಮುಖ ಶಿಖರ ಹತ್ತುವ ಕಲ್ಪನೆಯೇ ಸೋಜಿಗ. ಸ್ಥಳೀಯರು ಆ ಶಿಖರವನ್ನು ನಿಂತಿರುವ ಕುದುರೆ ಆಕಾರಕ್ಕೆ ಹೋಲಿಸಿದ್ದಾರೆ. ಕುದುರೆಮುಖ ಶಿಖರದ ಆರಂಭದ ತುದಿಯನ್ನು ಬಾಲ ಎಂತಲೂ, ಶಿಖರದ ಮಧ್ಯಭಾಗವನ್ನು ಕುದುರೆಯ ಬೆನ್ನು ಎಂತಲೂ, ಶಿಖರದ ಅಂತ್ಯದ ತುದಿಯನ್ನು ಮುಖ ಎಂತಲೂ ಭಾವಿಸಿದ್ದಾರೆ. ಸ್ಥಳೀಯರ ಪ್ರಕಾರ ಶಿಖರವನ್ನು ಅದರ ಬಾಲದಿಂದ ಹತ್ತುತ್ತೇವೆ. ಬಾಲ ಹತ್ತಲು ಶ್ರಮ ಪಡಬೇಕು. ಅದು ಸ್ವಲ್ಪ ಕಡಿದಾಗಿದೆ. ಬಾಲವೇರಿ ಅದರ ಬೆನ್ನ ಮೇಲೆ ಬಂದರೆ ಅದು ಸಮತಟ್ಟಾಗಿದೆ. ಇದೇ ಕೊನೆ ಶಿಖರ. ತಲೆ ಎತ್ತಿ ನೋಡಿದರೆ ಬರೀ ಆಕಾಶವಷ್ಟೆ ಕಾಣುತ್ತದೆ. ಕುದುರೆಮುಖ ಶಿಖರವು ಸಮುದ್ರ ಮಟ್ಟದಿಂದ 1894 ಮೀಟರ್ ಎತ್ತರದಲ್ಲಿದೆ. ಅಷ್ಟು ಎತ್ತರದಲ್ಲಿ ಸಮತಟ್ಟಾದ ಹುಲ್ಲುಗಾವಲಿನ ಮೇಲಿನ ನಡಿಗೆ, ತಂಗಾಳಿಯ ಮೃದು ಸ್ಪರ್ಶ ಮನಸ್ಸಿಗೆ ಮುದ ನೀಡಿತು.

ಶಿಖರದ ತುದಿ ಮುಟ್ಟಿದಾಗ ಸಮಯ ಮಧ್ಯಾಹ್ನ 1.15 ಗಂಟೆ. ತುದಿಯಲ್ಲಿ ನಿಂತು ನೋಡಿದರೆ ಅರಬ್ಬೀ ಸಮುದ್ರ ಕಾಣುತ್ತದೆಯಂತೆ. ಆದರೆ ನಾವು ತುದಿ ತಲುಪಿದಾಗ ಮಂಜು ಎಲ್ಲವನ್ನೂ ತನ್ನೊಳಗೆ ಬಚ್ಚಿಟ್ಟುಕೊಂಡಿತ್ತು. ಎಷ್ಟೂ ಕಾದರೂ ಹೊರಗೆ ಬಿಟ್ಟುಕೊಡಲಿಲ್ಲ. ಒಮ್ಮೊಮ್ಮೆ ಇದ್ದಕ್ಕಿದ್ದಂತೆ ಮಂಜು ಸರಿದಾಗ ನೆತ್ತಿಯ ಮೇಲಿಂದ ಕಾಣುವ ದೃಶ್ಯ ಮನಮೋಹಕ. 'ಹಸುರತ್ತಲ್, ಹಸುರಿತ್ತಲ್ ಹಸುರೆತ್ತಲ್' ಎಂಬ ಕವಿವಾಣಿಯನ್ನು ನೆನಪಿಸಿತು. ಅದರಲ್ಲೂ ಬೆಳ್ಮೋಡವು ನಮ್ಮನ್ನೇ ಆಪೋಶನ ತೆಗೆದುಕೊಳ್ಳುವಂತಹ ಅನುಭವ ಪದಗಳಿಗೆ ನಿಲುಕದು.

ಕುದುರೆಮುಖ ಶಿಖರವು ಪ್ರಕೃತಿ-ಚಾರಣ ಪ್ರಿಯರ ಸ್ವರ್ಗ. ಇಲ್ಲಿಗೆ ಭೇಟಿ ನೀಡಿದ ಪ್ರತಿಯೊಬ್ಬರಿಗೂ ಸಾಯುವುದರೊಳಗೆ ಇನ್ನೊಮ್ಮೆಯಾದರೂ ಕುದುರೆಮುಖ ಶಿಖರ ಏರಬೇಕು ಎಂದೆನಿಸದೇ ಇರದು. ❖



ಬೊಡಿ ನಮ್ಮೆಯಲ್ಲಿ ಯುವತಿಯೊಬ್ಬರು ಬಂದೂಕಿನಿಂದ ಗುರಿಯತ್ತ ದೃಷ್ಟಿನೆಟ್ಟಿರುವುದು

# ...ಹಾಕಿ ವೈಭವ

2ನೇ ಪುಟದಿಂದ...

'ಬೆಂಗಳೂರಿನಲ್ಲಿ ಮಾಹಿತಿ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೊಡವ ಯುವಕರೇ ಈ ಬಾರಿ ಕೂಟದ ಸಂಘಟನೆಯ ಮುಂಚೂಣಿಯಲ್ಲಿದ್ದರು. ತಮ್ಮ ಪ್ರತಿಷ್ಠಿತ ಪರಂಪರೆಯನ್ನು ಉಳಿಸುವ ಆಸಕ್ತಿ ನವಪೀಳಿಗೆಯಲ್ಲಿಯೂ ಇದೆ. ಅವರೆಲ್ಲರೂ ತಮಗೆ ಗೊತ್ತಿರುವ ತಂತ್ರಜ್ಞಾನವನ್ನೂ ಇಲ್ಲಿ ಅಳವಡಿಸಿಕೊಂಡರು. ಅದರ ಫಲವಾಗಿ ವಿಡಿಯೊ ರೆಫರಲ್ ವ್ಯವಸ್ಥೆ ಮಾಡಲು ಸಾಧ್ಯವಾಯಿತು. ಅಷ್ಟೇ ಅಲ್ಲ, ಪ್ರತಿಯೊಂದು ಹಂತದಲ್ಲಿಯೂ ಈ ಕಾಲದ ಹುಡುಗರೇ ಅಚ್ಚುಕಟ್ಟಾಗಿ ಕಾರ್ಯನಿರ್ವಹಿಸಿದರು. ಅವರೆಲ್ಲರ ಸಹಕಾರದಿಂದ ಶೂನ್ಯ ಕಸ ನಿರ್ವಹಣೆ ಮತ್ತು ಪ್ಲಾಸ್ಟಿಕ್ ಮುಕ್ತಕೂಟವನ್ನು ಆಯೋಜಿಸಲಾಯಿತು. ಪರಿಸರಪ್ರೀತಿ ಮೆಚ್ಚುವಂತದ್ದು. ತಮ್ಮ ಸೃಜನಾತ್ಮಕತೆಯಿಂದ ಉತ್ಸವವನ್ನು ಮತ್ತಷ್ಟು ಉತ್ಕೃಷ್ಟಗೊಳಿಸಿದರು. ವರ್ಲ್ಡ್‌ವೈಡ್ ಬುಕ್ ಆಫ್ ರೆಕಾರ್ಡ್‌ನಲ್ಲಿ ಸೇರ್ಪಡೆಯಾಗಲು ಬೇಕಾದ ತಾಂತ್ರಿಕ ಮಾನದಂಡಗಳನ್ನು ಪೂರೈಸಲೂ ಯುವ ಸ್ನೇಹಿತರೇ ಕಾರಣರಾದರು. ಆದ್ದರಿಂದ ಕೊಡವ ಕೌಟುಂಬಿಕ ಹಾಕಿ ಉತ್ಸವಕ್ಕೆ ಉತ್ತಮ ಭವಿಷ್ಯ ಇದೆ ಎಂಬ ಭರವಸೆ ಮೂಡಿದೆ' ಎಂದು ಸುಬ್ಬಯ್ಯ ಹೆಮ್ಮೆಯಿಂದ ಹೇಳಿದರು.

ಈ ಬಾರಿ ಉತ್ಸವದ ಬೆಳ್ಳಿ ಮಹೋತ್ಸವವನ್ನು ಆಚರಿಸುವ ಕೊಡವ ಕುಟುಂಬಗಳು ಮುಂದಿನ ವರ್ಷದ ಕೂಟಕ್ಕಾಗಿ ಸಿದ್ಧತೆ ಆರಂಭಿಸಿವೆ. ಮುಂದಿನ ಬಾರಿ ಚೆನಂಡ ಕುಟುಂಬವು ಸಂಘಟಿಸಲಿದೆ. ಮತ್ತಷ್ಟು ಹೊಸತನಗಳ ನಿರೀಕ್ಷೆಯೊಂದಿಗೆ ಕೊಡಗು ಸಿದ್ಧವಾಗುತ್ತಿದೆ. ❖



ತೆಕ್ಕಡ ಮತ್ತು ಚೊಟ್ಟೆಯಂಡ ತಂಡದ ಆಟಗಾರರ ತುರುಸಿನ ಸ್ಪರ್ಧೆ

# ಮಜ ಮಜ ಮಜಕೂರ

ಎಂ.ಎಸ್.ಪೂಜಾರ

## ಗಣಿತದಲ್ಲಿ ಗರ್ದಿ ಗಮ್ಮತ್ತು

+ — × % ÷

### ತಿರುಗು ಮುರುಗು ತಮಾಷೆ

ಇಲ್ಲಿರುವ ಸಂಕಲನ ಲೆಕ್ಕವನ್ನು ಮಾಡಿದರೆ 264 ಉತ್ತರ ಬರುತ್ತದೆ. ನಂತರ ಇದೇ ಸಂಖ್ಯೆಗಳನ್ನು ತಲೆಕೆಳಗೆ ಮಾಡಿ ಕೂಡಿಸಿದರೂ 264 ಬರುತ್ತದೆ. ಪ್ರಯತ್ನಿಸಿ.

69
18
86
91
——
264

ತಲೆಕೆಳಗೆ ಹೀಗೆ ಮಾಡಿ: 18 = 81

| ಹೇಗಾದರೂ ಓದಿ ನೋಡು | ಯಶದಾಸನಸದಾಶಯ |
|---|---|

## ತೋಟದ ಊಟ

ಶಾಲೆಯ ಮಕ್ಕಳು
ಒಂದೆಡೆ ಸೇರುತ
ತೋಟದ ಊಟಕೆ ಹೊರಟಿಹೆವು
ಎಡಬಲ ಹೊಲದಿ
ಬೆಳೆದಾಪೈರನು
ನೋಡುತ ಹಿಗ್ಗನು ಪಡೆದಿಹೆವು
ಊರ ಮುಂದಿನ
ತೋಟವ ಸೇರಿ
ಎಲ್ಲರೂ ಸಾಲಾಗಿ ಕುಳಿತಿಹೆವು
ಬುತ್ತಿಯ ಬಿಚ್ಚಿ
ಎಲ್ಲರೂ ಹಂಚಿ
ಒಟ್ಟಿಗೆ ಊಟವ ಮಾಡಿಹೆವು
ಜಾತಿಯ ಮರೆತು
ಪ್ರೀತಿಲೆ ಕಲೆತು
ಗೆಳೆತನ ಎಲ್ಲರೂ ಮೆರೆದಿಹೆವು
ತೋಟದ ಊಟವು
ಬಲು ರುಚಿ ಎನ್ನುತ
ಮನೆಕಡೆ ನಡೆದಿಹೆವು




ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಡಸ್ಗ ಚಿಕ್ಕು ಕೀಶ್ರಷ್ಣ ಕಥೆಯ

ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

## ಪುಂಗಿಯೊಳಗೆ ಸೇರಿದ ಹಾವು!



ಹಾವಾಡಿಗನೊಬ್ಬ ಸಂತೆಗೆ ಬಂದಿದ್ದ. ಹತ್ತಾರು ಜನರು ಅವನ ಸುತ್ತ ಸೇರಿದ್ದರು. ಜನರು ಸೇರಿದ ಖುಷಿಯಲ್ಲೇ ಬುಟ್ಟಿಯೊಳಗಿದ್ದ ಪುಂಗಿ ತೆಗೆದು ಕಣ್ಮುಚ್ಚಿ ಊದಲಾರಂಭಿಸಿದ. ಹಾವು ಬುಟ್ಟಿಯಿಂದ ಹೊರಬರಲೇ ಇಲ್ಲ. ಸುಮಾರು ಐದು ನಿಮಿಷದ ಬಳಿಕ ಪುಂಗಿ ಬಲೂನಿನಂತೆ ಊದಿಕೊಂಡಿತು. ಮರುಕ್ಷಣದಲ್ಲೇ ಢಂ ಎಂದು ಒಡೆಯಿತು. ಅದರೊಳಗಿಂದ ಹಾವು ಚಿಮ್ಮಿತು. ಇದನ್ನು ಕಂಡ ಹಾವಾಡಿಗನೇ ಬೆಚ್ಚಿಬಿದ್ದ.

## ಜಾಣಪದ ಅಕ್ಷರ ಆಟ

ಇಲ್ಲಿ ಕೊಟ್ಟಿರುವ ಇಂಗ್ಲಿಷ್ ಪದಗಳಿಗೆ ಸಮಾನಾರ್ಥ ಕನ್ನಡ ಪದ ಕಂಡುಹಿಡಿದು ಅದಕ್ಕೆ ಮುಂದಿನ ಕನ್ನಡ ಅಕ್ಷರಕ್ಕೆ ಸೇರಿಸಿಕೊಂಡು ಓದಿದರೆ ಮೂರು ಅಕ್ಷರಗಳ ಕನ್ನಡ ಪದವಾಗುತ್ತದೆ. ಓದಿ ನೋಡಿ

| | | |
|---|---|---|
| 1 | FATHERಣೆ | |
| 2 | MOTHERತ | |
| 3 | LEGವೆ | |
| 4 | MANGOತ | |
| 5 | CASHತೆ | |
| 6 | PEOPLEರ | |
| 7 | HANDಡಿ | |
| 8 | TREEಣ | |
| 9 | HEADಸಿ | |
| 10 | CHAINಣಿ | |

## ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

| | | | | | | | |
|---|---|---|---|---|---|---|---|
| 1 | ನಾಕ | + | ಮಣ | + | ರ | = | |
| 2 | ಮಣ | + | ಗತಿ | + | ರು | = | |
| 3 | ಕಾಯ | + | ಗೂಗೆ | + | ಡು | = | |
| 4 | ಪರ್ಣ | + | ಲವ | + | ಟ | = | |
| 5 | ನರೆ | + | ಕಪ್ಪೆ | + | ಣ್ಣಿ | = | |

## ಚಿಕ್ಕಲೆಕ್ಕ

ಮೂರು ಅಂಕಿಗಳಿವೆ. ಅದನ್ನು ಗುಣಿಸಿದಾಗ ಸಿಕ್ಕ ಉತ್ತರ, ಆ ಅಂಕಿಗಳನ್ನು ಕೂಡಿಸಿದಾಗ್ಯೂ ಬರುತ್ತದೆ. ಆ ಸಂಖ್ಯೆಗಳಾವುವು? ಯೋಚಿಸಿ ಇಲ್ಲಿ ಬರೆಯಿರಿ.

................................ ................................

### ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಕೆಳಗಿರುವ ಇಮೇಲ್‌ಗೆ ಕಳುಹಿಸಿ...

majakoora@prajavani.co.in

### ಕಳೆದ ಸಂಚಿಕೆಯ ಸರಿ ಉತ್ತರಗಳು

**ಪದಸಂಕಲನ:**
1.ಕಪಟತನ 2.ಜೋಳದರಾಶಿ
3.ಕಾಳಗಮಾಡು 4.ಹರಿಪ್ರಸಾದ
5.ರಮಾಕುಮಾರಿ

**ಪದಹುಡುಕಾಟ:**
ಅನಿಲ್‌ಕುಂಬಳೆ

**ಮೋಜಿನ ಇಂಗ್ಲಿಷ್:**
1.BUSY 2.HERE 3.MANY
4.NOTE 5.PINK 6.RATE
7.SITE 8.TENT 9.WIND
10.FUND

**ಜಾಣಪದ ಆಟ:**
1.ನಿರ್ವಹಣೆ 2.ವರ್ಧಮಾನ
3.ಕರ್ಮಕಾಂಡ 4.ಧರ್ಮರಾಜ
5.ಅರ್ಧಚಂದ್ರ 6.ಆರ್ಯಭಟ
7.ಕರ್ಣರೇಖೆ 8.ದೀರ್ಘಸ್ವರ
9.ವರ್ಷಾರಂಭ
10.ಕರ್ಮವೀರ


### ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಸವಿನಯ ಕೆ.ಎಸ್.
ದಾವಣಗೆರೆ



ಪಲ್ಲವಿ ಎ.ಸಿ.
ಕಡೂರು




ಮಾನ್ಯ ಡಿ.ನಾಯ್ಕ
ಧಾರವಾಡ



ಪ್ರಣವ್ ಎಂ.
ಶಿವಮೊಗ್ಗ



ಶಾರ್ವರಿ ಎಸ್.
ಹೂವಿನಹಡಗಲಿ



ಪೂರ್ವಿತ್ ಡಿ.
ಮೈಸೂರು

ಚಿಟಿಕೆ ಸುದ್ದಿ

## ದೇವಿಮನೆ ಘಟ್ಟ: ಭೂಕುಸಿತ



ಶಿರಸಿ ತಾಲ್ಲೂಕಿನ ದೇವಿಮನೆ ಘಟ್ಟ ಪ್ರದೇಶದಲ್ಲಿ ಸಂಭವಿಸಿದ ಭೂಕುಸಿತದಿಂದ ರಸ್ತೆಗೆ ಬಿದ್ದ ಕಲ್ಲು, ಮಣ್ಣನ್ನು ಜೆಸಿಬಿ ಮೂಲಕ ತೆರವು ಮಾಡಲಾಯಿತು

ಶಿರಸಿ: ತಾಲ್ಲೂಕಿನ ದೇವಿಮನೆ ಘಟ್ಟ ಪ್ರದೇಶದಲ್ಲಿ ಶುಕ್ರವಾರ ರಾತ್ರಿ ಭೂಕುಸಿತ ಸಂಭವಿಸಿ, ರಾಷ್ಟ್ರೀಯ ಹೆದ್ದಾರಿ (766 ಇ) ಮೇಲೆ ಕಲ್ಲು, ಮಣ್ಣಿನ ರಾಶಿ ಸಂಗ್ರಹವಾಗಿತ್ತು. ಶನಿವಾರ ಮಣ್ಣು ತೆರವುಗೊಳಿಸಿ, ಲಘು ವಾಹನಗಳ ಸಂಚಾರಕ್ಕೆ ಅವಕಾಶ ಕಲ್ಪಿಸಲಾಯಿತು.

ಶುಕ್ರವಾರ ರಾತ್ರಿ 10ರ ಸುಮಾರಿಗೆ ರಸ್ತೆಯ ಮೇಲೆ ಕಲ್ಲುಬಂಡೆಗಳು, ಮಣ್ಣಿನ ರಾಶಿ ಬಿದ್ದಿತ್ತು. ಇದರಿಂದ ಕೆಲ ವಾಹನ ಸವಾರರು ತೀವ್ರ ಪರದಾಡಿದರು.

ಹೆದ್ದಾರಿ ನಿರ್ಮಾಣ ಗುತ್ತಿಗೆ ಕಂಪನಿ ಆರ್‌ಎಸ್‌ಎಸ್ ಇನ್ಫ್ರಾ ಸ್ಟ್ರಕ್ಚರ್ ಕಾರ್ಮಿಕರು ಶನಿವಾರ ಬೆಳಿಗ್ಗೆ ಜೆಸಿಬಿ ಮೂಲಕ ತೆರವು ಕಾರ್ಯಾಚರಣೆ ನಡೆಸಿದರು. ಇಲ್ಲಿ ರಸ್ತೆ ವಿಸ್ತರಣೆ ಕಾರ್ಯ ಪ್ರಗತಿಯಲ್ಲಿದೆ.

## ಕೊಡಗು: ಪ್ರವಾಹದ ಮುನ್ನೆಚ್ಚರಿಕೆ



ಮಡಿಕೇರಿ: ಕೊಡಗು ಜಿಲ್ಲೆಯ ಹಲವೆಡೆ ಶನಿವಾರ ಮಳೆ ಬಿರುಸುಗೊಂಡಿದೆ. ಹಾರಂಗಿ ಜಲಾಶಯದ ಒಳಹರಿವು 4 ಸಾವಿರ ಕ್ಯೂಸೆಕ್‌ಗೆ ಏರಿಕೆಯಾಗಿದೆ.

ಜಲಾಶಯದಿಂದ ನದಿಗೆ ಬಿಡುತ್ತಿರುವ ನೀರಿನ ಪ್ರಮಾಣವನ್ನು 4 ಸಾವಿರ ಕ್ಯೂಸೆಕ್‌ಗೆ ಹೆಚ್ಚಿಸಲಾಗಿದೆ. ನದಿ ದಂಡೆಯಲ್ಲಿ ವಾಸಿಸುವವರಿಗೆ ಕಾವೇರಿ ನೀರಾವರಿ ನಿಗಮ ಪ್ರವಾಹದ ಮುನ್ನೆಚ್ಚರಿಕೆ ನೀಡಿದೆ. ಹವಾಮಾನ ಇಲಾಖೆಯು 2 ದಿನಗಳಿಂದ ರೆಡ್ ಅಲರ್ಟ್ ಸೂಚನೆ ನೀಡಿದ್ದರಿಂದ ಜಿಲ್ಲಾಡಳಿತ ಶಾಲಾ, ಕಾಲೇಜುಗಳಿಗೆ ರಜೆ ಘೋಷಿಸಿತ್ತು. ಆದರೆ ಎರಡೂ ದಿನ ಮಳೆಯಾಗಲಿಲ್ಲ. ಹೀಗಾಗಿ ಶನಿವಾರ ರಜೆ ನೀಡಿರಲಿಲ್ಲ. ನೆನೆಯುತ್ತಲೇ ವಿದ್ಯಾರ್ಥಿಗಳು ಶಾಲೆಗೆ ತೆರಳಿದರು.

# ಮಂಗಳೂರು: ರಸ್ತೆಗಳು ಜಲಾವೃತ

### ಕರಾವಳಿಯಲ್ಲಿ ಧಾರಾಕಾರ ಮಳೆ
### ನೀರುಮಾರ್ಗದಲ್ಲಿ 12 ಸೆಂ.ಮೀ ಮಳೆ

ಪ್ರಜಾವಾಣಿ ವಾರ್ತೆ

ಮಂಗಳೂರು: ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಶನಿವಾರ ಮಧ್ಯಾಹ್ನದ ನಂತರ ಧಾರಾಕಾರ ಮಳೆಯಾಗಿದೆ.

ಮಂಗಳೂರು ನಗರದಲ್ಲಿ ಎರಡು ತಾಸಿಗೂ ಹೆಚ್ಚು ಕಾಲ ಮುಸಲಧಾರೆಯಾಗಿದ್ದು ರಸ್ತೆಗಳು ಜಲಾವೃತವಾಗಿದ್ದವು. ಹಲವು ಕಡೆಗಳಲ್ಲಿ ಅಪಾರ್ಟ್‌ಮೆಂಟ್‌ಗಳ ತಳಭಾಗ ನೀರಿನಲ್ಲಿ ಮುಳುಗಿತು. ಮಂಗಳೂರು ತಾಲ್ಲೂಕಿನ ನೀರುಮಾರ್ಗದಲ್ಲಿ ಸಂಜೆ 4.30ರ ವೇಳೆ 12 ಸೆಂ.ಮೀ ಮಳೆಯಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಬಹುತೇಕ ಕಡೆಗಳಲ್ಲಿ ಬೆಳಿಗ್ಗೆ ಬಿಸಿಲಿತ್ತು. ಸುಳ್ಯ ತಾಲ್ಲೂಕಿನಲ್ಲಿ ಬೆಳಿಗ್ಗೆ ಸಾಧಾರಣ ಮಳೆಯಾಗಿತ್ತು. ಬೆಳ್ತಂಗಡಿ, ಮೂಲ್ಕಿ, ಪುತ್ತೂರು, ಸುಬ್ರಹ್ಮಣ್ಯ, ಮೂಡುಬಿದಿರೆ, ಬಂಟ್ವಾಳ ಭಾಗದಲ್ಲಿ, ಮಂಗಳೂರು ತಾಲ್ಲೂಕು, ನಗರದಲ್ಲಿ ಮಧ್ಯಾಹ್ನ 2.30ರ ಭಾರಿ ಮಳೆ ಆರಂಭವಾಯಿತು.

ನಗರದ ಪಡೀಲ್ ರೈಲ್ವೆ ಕೆಳಸೇತುವೆ ಮತ್ತು ಪಂಪ್‌ವೆಲ್ ಸರ್ಕಲ್‌ನಲ್ಲಿ ನೀರು ತುಂಬಿ ವಾಹನ ಸಂಚಾರಕ್ಕೆ ತೊಂದರೆಯಾಯಿತು. ಪಂಪ್‌ವೆಲ್ ವೃತ್ತದಲ್ಲಿ ಕೈ ಕೈ ಹಿಡಿದು ನಿಂತ ಸ್ಥಳೀಯರು ರಸ್ತೆ ದಾಟುವವರಿಗೆ ನೆರವಾದರು. ಜಪ್ಪಿನಮೊಗರು, ಸುಭಾಷ್ ನಗರ ಮತ್ತು ಅತ್ತಾವರ ಕೆಎಂಸಿ ಬಳಿ ಮನೆಗಳ ಒಳಗೆ ನೀರು ನುಗ್ಗಿತು. ಮಂಗಳೂರು ಕೇಂದ್ರ ರೈಲು ನಿಲ್ದಾಣ, ಕದ್ರಿ, ಕದ್ರಿ ಕಂಬಳ, ಕೊಡಿಯಾಲ್‌ಗುತ್ತು, ಬಿಜೈ, ಎಕ್ಕೂರಿನಲ್ಲಿ ರಸ್ತೆಯಲ್ಲಿ ಮೊಣಕಾಲುವರೆಗೂ ನೀರು ನಿಂತಿತ್ತು.

ಉಡುಪಿ ಜಿಲ್ಲೆಯಾದ್ಯಂತ ಶನಿವಾರ ಬಿರುಸಿನ ಮಳೆಯಾಗಿದೆ. ಕುಂದಾಪುರ, ಬ್ರಹ್ಮಾವರ, ಹೆಬ್ರಿ, ಕಾಪು, ಬೈಂದೂರು ವ್ಯಾಪ್ತಿಯಲ್ಲಿ ಧಾರಾಕಾರ ಮಳೆಯಾಗಿದ್ದು ಕಾರ್ಕಳ ತಾಲ್ಲೂಕಿನ ಮುಂಡ್ಕೂರು ಗ್ರಾಮದ ಸಚ್ಚರಿಪೇಟೆಯಲ್ಲಿ ಮನೆಯೊಂದರ ಆವರಣಗೋಡೆ ಕುಸಿದು ಬಿದ್ದಿದೆ.

ಚಿಕ್ಕಮಗಳೂರು ಜಿಲ್ಲೆಯ ಕೆಲವು ಪ್ರದೇಶಗಳು ಬಿಟ್ಟರೆ ಉಳಿದಂತೆ ಶನಿವಾರ ಮಳೆ ಕಡಿಮೆಯಾಗಿತ್ತು. ಮೂಡಿಗೆರೆ ತಾಲ್ಲೂಕಿನಲ್ಲಿ ನಸುಕಿನಿಂದಲೇ ಮಳೆ ಬಿರುಸುಗೊಂಡಿತ್ತು.



ಶನಿವಾರ ಸುರಿದ ಭಾರಿ ಮಳೆಗೆ ನದಿಯಂತಾಗಿದ್ದ ಮಂಗಳೂರಿನ ಡೊಂಗರಕೇರಿ–ಕುದ್ರೋಳಿ ರಸ್ತೆಯಲ್ಲಿ ನಡೆಯುವುದಕ್ಕೂ ಜನರು ಪ್ರಯಾಸಪಟ್ಟರು

ಚಿತ್ರ: ಫಕ್ರುದ್ದೀನ್ ಎಚ್

### ಮೂರು ಜಿಲ್ಲೆಗಳಿಗೆ 'ರೆಡ್ ಅಲರ್ಟ್'

ಬೆಂಗಳೂರು: ರಾಜ್ಯದ ಹಲವು ಜಿಲ್ಲೆಗಳಲ್ಲಿ ಭಾನುವಾರ ಭಾರಿ ಮಳೆಯಾಗಲಿದ್ದು, ಮೂರು ಜಿಲ್ಲೆಗಳಿಗೆ 'ರೆಡ್ ಅಲರ್ಟ್' ಘೋಷಿಸಲಾಗಿದೆ.

ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗೆ 'ರೆಡ್ ಅಲರ್ಟ್' ನೀಡಲಾಗಿದೆ. ಕೆಲವೆಡೆ ಗುಡುಗು ಸಹಿತ ಧಾರಾಕಾರ ಮಳೆಯಾಗುವ ಸಾಧ್ಯತೆ ಇದೆ. ಬೆಳಗಾವಿ, ಧಾರವಾಡ, ಶಿವಮೊಗ್ಗ, ಚಿಕ್ಕಮಗಳೂರು, ಕೊಡುಗು ಜಿಲ್ಲೆಗೆ 'ಆರೆಂಜ್ ಅಲರ್ಟ್' ಘೋಷಿಸಲಾಗಿದೆ.

ಬೀದರ್, ಕಲಬುರಗಿ, ವಿಜಯಪುರ, ಯಾದಗಿರಿ, ಗದಗ, ಚಿತ್ರದುರ್ಗ, ಚಾಮರಾಜನಗರ, ಮಂಡ್ಯ, ಮೈಸೂರು, ಕೊಪ್ಪಳ, ಬಳ್ಳಾರಿ, ದಾವಣಗೆರೆ, ಹಾವೇರಿ, ತುಮಕೂರು, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಜೋರು ಮಳೆಯಾಗುವ ಬಗ್ಗೆ ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ಈ ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ನೀಡಿದೆ.

ಕರಾವಳಿಯಲ್ಲಿ ಗಂಟೆಗೆ 40 ರಿಂದ 55 ಕಿ.ಮೀ ವೇಗದಲ್ಲಿ ಗಾಳಿ ಬೀಸಲಿದ್ದು, ಮೀನುಗಾರರು ಸಮುದ್ರ ಪ್ರದೇಶಕ್ಕೆ ತೆರಳದಂತೆ ಸೂಚಿಸಲಾಗಿದೆ.

# ಗಾಜಾಪಟ್ಟಿ ನಿರ್ಣಯ: ಭಾರತ ಗೈರು

ವಿಶ್ವಸಂಸ್ಥೆ (ಪಿಟಿಐ): ಗಾಜಾ ಪಟ್ಟಿಯಲ್ಲಿ 'ತಕ್ಷಣದ, ಷರತ್ತಿಲ್ಲದ ಮತ್ತು ಶಾಶ್ವತ' ಕದನ ವಿರಾಮಕ್ಕೆ ಸಂಬಂಧಿಸಿದಂತೆ ಕರಡು ನಿರ್ಣಯ ಅಂಗೀಕರಿಸಲು ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ನಡೆದ ಮತದಾನ ಪ್ರಕ್ರಿಯೆಗೆ ಭಾರತ ಗೈರಾಗಿದೆ.

ಗಾಜಾ ಪಟ್ಟಿಯಲ್ಲಿ ಶಾಶ್ವತ ಕದನ ವಿರಾಮ ಘೋಷಿಸಿ, ಹಮಾಸ್, ಮತ್ತಿತರರ ಸಂಘಟನೆಗಳು ಒತ್ತೆಯಾಳುಗಳನ್ನಾಗಿ ಇಟ್ಟುಕೊಂಡಿರುವವರನ್ನು ಷರತ್ತುಗಳಿಲ್ಲದೆ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿ ಸ್ಪೇನ್ ಮಂಡಿಸಿದ ಈ ನಿರ್ಣಯಕ್ಕೆ 193 ಸದಸ್ಯ ರಾಷ್ಟ್ರಗಳು ಸದಸ್ಯರಾಗಿರುವ ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಅಭೂತಪೂರ್ವ ಬೆಂಬಲ ಲಭಿಸಿತು.

ಭಾರತ ಸೇರಿ 19 ರಾಷ್ಟ್ರಗಳು ಮತದಾನ ಪ್ರಕ್ರಿಯೆಯಿಂದ ಹೊರಗುಳಿದಿದ್ದವು. 12 ರಾಷ್ಟ್ರಗಳು ನಿರ್ಣಯಕ್ಕೆ ವಿರುದ್ಧವಾಗಿ, 149 ರಾಷ್ಟ್ರಗಳು ನಿರ್ಣಯದ ಪರವಾಗಿ ಮತ ಚಲಾಯಿಸಿದವು. ಗೈರಾದ ದೇಶಗಳಲ್ಲಿ ಭಾರತ, ಅಲ್ಬಾನಿಯಾ, ಕೆಮರೂನ್, ಈಕ್ವೆಡಾರ್, ಇಥಿಯೋಪಿಯಾ, ಮಾಲಾವಿ, ಪನಾಮಾ, ದಕ್ಷಿಣ ಸುಡಾನ್, ಟೊಗೊ ಸೇರಿವೆ.

'ಗಾಜಾ ಪಟ್ಟಿಯಲ್ಲಿ ಮಾನವೀಯ ಪರಿಸ್ಥಿತಿ ಹದಗೆಡುತ್ತಿರುವ ಕಾರಣದಿಂದ ಈ ನಿರ್ಣಯ ಅಂಗೀಕರಿಸಲಾಗಿದೆ' ಎಂದು ವಿಶ್ವ ಸಂಸ್ಥೆಯಲ್ಲಿನ ಭಾರತದ ಶಾಶ್ವತ ರಾಯಭಾರ ಪ್ರತಿನಿಧಿ ಪರ್ವತನೇನಿ ಹರೀಶ್ ತಿಳಿಸಿದ್ದಾರೆ.

'ಗಾಜಾ ಪಟ್ಟಿಯಲ್ಲಿನ ಮಾನವೀಯ ಬಿಕ್ಕಟ್ಟು ಮತ್ತು ನಾಗರಿಕರ ಜೀವಹಾನಿಯ ಕುರಿತು ಭಾರತ ಅತೀವ ಕಳವಳ ಹೊಂದಿದೆ' ಎಂದು ಅವರು ಹೇಳಿದ್ದಾರೆ.

'ಇಸ್ರೇಲ್–ಪ್ಯಾಲೆಸ್ಟೀನಿಯನ್ ವಿಷಯದಲ್ಲಿ ವಿಶ್ವಸಂಸ್ಥೆ ಕೈಗೊಂಡ ನಿರ್ಣಯದಿಂದಲೂ ಭಾರತ ದೂರ ಉಳಿದಿತ್ತು' ಎಂದು ಹರೀಶ್ ಹೇಳಿದ್ದಾರೆ.

# ಇರಾನ್‌ಗೆ ಎರಡನೇ ಅವಕಾಶ: ಟ್ರಂಪ್

ವಾಷಿಂಗ್ಟನ್ (ಎಪಿ): 'ಇರಾನ್ ತನ್ನ ಪರಮಾಣು ಯೋಜನೆಗಳನ್ನು ಸ್ಥಗಿತಗೊಳಿಸುವ ಸಂಬಂಧ ಶೀಘ್ರ ಒಪ್ಪಂದಕ್ಕೆ ಬರಬೇಕು' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಒತ್ತಾಯಿಸಿದ್ದಾರೆ.

ಮಧ್ಯ ಪ್ರಾಚ್ಯದಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ ನಿರ್ಮಾಣವಾಗಿರುವ ಬೆನ್ನಲ್ಲೇ ಹೇಳಿಕೆ ನೀಡಿದ ಟ್ರಂಪ್, 'ಇನ್ನಷ್ಟು ವಿನಾಶವಾಗುವ ಮುನ್ನ ಇರಾನ್ ನಾಯಕತ್ವವು ಒಪ್ಪಂದಕ್ಕೆ ಬರಲು ಎರಡನೇ ಅವಕಾಶವಿದೆ. ಒಂದು ಕಾಲದಲ್ಲಿ ಇರಾನ್ ಸಾಮ್ರಾಜ್ಯ ಎಂದು ಕರೆಯಲ್ಪಡುತ್ತಿತ್ತು, ಈಗ ಅವರಿಗೂ ಏನೂ ಉಳಿದಿಲ್ಲ' ಎಂದು ಹೇಳಿದ್ದಾರೆ.

'ಇರಾನ್‌ನ ಪರಿಸ್ಥಿತಿ ಕುರಿತಂತೆ ರಾಷ್ಟ್ರೀಯ ಭದ್ರತಾ ತಂಡದ ಜೊತೆ ಮಾತುಕತೆ ನಡೆಸಿದ್ದೇನೆ. ದಾಳಿಯಲ್ಲಿ ನಮ್ಮ ದೇಶದ ಯಾವುದೇ ಪಾತ್ರವಿಲ್ಲ. ಆದರೆ, ಇರಾನ್ ಮೇಲಿನ ದಾಳಿಗೆ ಅಮೆರಿಕದ ಶಸ್ತ್ರಾಸ್ತ್ರಗಳನ್ನು ಇಸ್ರೇಲ್ ಬಳಸಿಕೊಂಡಿದೆ' ಎಂದು ತಿಳಿಸಿದ್ದಾರೆ.

**ಮಾತುಕತೆಗೆ ಅರ್ಥವಿಲ್ಲ (ದುಬೈ):** ಇಸ್ರೇಲ್ ದಾಳಿ ಹಿನ್ನೆಲೆಯಲ್ಲಿ ಅಮೆರಿಕದ ಜೊತೆಗೆ ಇರಾನ್ ಪರಮಾಣು ಒಪ್ಪಂದ ನಡೆಯುವುದು ಅನುಮಾನವಾಗಿದೆ. ಅಮೆರಿಕ ಹಾಗೂ ಇರಾನ್ ನಡುವೆ ಭಾನುವಾರ ಒಮನ್‌ನಲ್ಲಿ ಈ ಹಿಂದೆ ಸಭೆ ನಿಗದಿಯಾಗಿತ್ತು.

'ತಮ್ಮ ದೇಶದ ಮೇಲೆ ಇಸ್ರೇಲ್ ದಾಳಿ ನಡೆಸಿರುವುದು ಸಮರ್ಥನೀಯವಲ್ಲ. ಈ ವಾರಾಂತ್ಯದಲ್ಲಿ ವಾಷಿಂಗ್ಟನ್ ಜೊತೆ ನಿಗದಿಯಾಗಿದ್ದ ಮಾತುಕತೆಗೆ ಯಾವುದೇ ಅರ್ಥವಿಲ್ಲ' ಎಂದು ಇರಾನ್‌ನ ಉನ್ನತ ರಾಜತಾಂತ್ರಿಕ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

### ಟೆಹರಾನ್ ಹೊತ್ತಿ ಉರಿಯಲಿದೆ: ಇಸ್ರೇಲ್ ಎಚ್ಚರಿಕೆ

ಜೆರುಸಲೇಂ (ಪಿಟಿಐ): 'ಇಸ್ರೇಲ್ ಮೇಲೆ ಇರಾನ್ ಕ್ಷಿಪಣಿ ದಾಳಿ ಮುಂದುವರಿಸಿದರೆ, ಟೆಹರಾನ್ ಹೊತ್ತಿ ಉರಿಯಲಿದೆ' ಎಂದು ಇಸ್ರೇಲ್‌ನ ರಕ್ಷಣಾ ಸಚಿವ ಕಾಟ್ಸ್ ಎಚ್ಚರಿಕೆ ನೀಡಿದ್ದಾರೆ. ಇಸ್ರೇಲ್ ದಾಳಿಗೆ ಪ್ರತಿಯಾಗಿ, ಇರಾನ್ ಪ್ರತಿದಾಳಿ ಆರಂಭಿಸಿದೆ.

# ಕಾಲ್ತುಳಿತಕ್ಕೆ ಹೊಣೆ: 3 ವರ್ಷ ಜೈಲು

ಒಂದನೇ ಪುಟದಿಂದ...

ಮುಂದಿನ ಅಧಿವೇಶನದಲ್ಲಿ ಆಡಳಿತ ಇಲಾಖೆಯಾದ ಗೃಹ ಇಲಾಖೆಯು ಈ ಮಸೂದೆಯನ್ನು ಮಂಡಿಸಲಿದೆ ಎಂದು ಸರ್ಕಾರದ ಉನ್ನತ ಮೂಲಗಳು ತಿಳಿಸಿವೆ.

**ಪೊಲೀಸರ ಆದೇಶ ಪಾಲನೆ ಅನಿವಾರ್ಯ:** ಪೊಲೀಸರ ಆದೇಶಗಳನ್ನು ಪಾಲಿಸದ ಅಥವಾ ಈ ಕಾಯ್ದೆಯ ಷರತ್ತುಗಳನ್ನು ಅಥವಾ ನಿಯಮಗಳನ್ನು ಉಲ್ಲಂಘಿಸುವ ಆಯೋಜಕರಿಗೆ ಜೈಲು ಶಿಕ್ಷೆ ಅಥವಾ ದಂಡ ಅಥವಾ ಎರಡನ್ನೂ ವಿಧಿಸಲಾಗುವುದು ಎಂದು ಈ ಕರಡು ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ. ಕ್ರೀಡೆ, ಸರ್ಕಸ್ ಮುಂತಾದ ವಾಣಿಜ್ಯ ಉದ್ದೇಶಕ್ಕೆ ಜನಸಮೂಹವನ್ನು ಒಟ್ಟುಗೂಡಿಸುವ ಕಾರ್ಯಕ್ರಮಗಳ ಆಯೋಜಕರು ಜನಸ್ತೋಮವನ್ನು ನಿಯಂತ್ರಿಸಲು ವಿಫಲವಾದರೆ, ಏನಾದರೂ ಘಟನೆ ಸಂಭವಿಸಿ ಪರಿಹಾರ ನೀಡಲು ವಿಫಲವಾದರೆ ಅಥವಾ ನಿಯಮಗಳನ್ನು ಉಲ್ಲಂಘಿಸಿದವರಿಗೂ ಜೈಲು ಶಿಕ್ಷೆ ಅಥವಾ ದಂಡ ಅಥವಾ ಎರಡನ್ನೂ ವಿಧಿಸಲಾಗುವುದು. ರಾಜಕೀಯ ರ್‍ಯಾಲಿ, ಸಮ್ಮೇಳನದ ವೇಳೆ ಸಂಭವಿಸುವ ಘಟನೆಯಲ್ಲಿ ತೀವ್ರವಾಗಿ ಗಾಯಗೊಂಡ ವ್ಯಕ್ತಿಗೆ ಅಥವಾ ಮೃತರ ಕುಟುಂಬದ ಸದಸ್ಯರಿಗೆ ಪರಿಹಾರ ಪಾವತಿಸಲು ಕಾರ್ಯಕ್ರಮ ಆಯೋಜಕರು ಹೊಣೆಗಾರರಾಗಿರುತ್ತಾರೆ. ಕಾರ್ಯಕ್ರಮ ಆಯೋಜಕರು ಪರಿಹಾರವನ್ನು ಪಾವತಿಸದಿದ್ದರೆ, ರಾಜ್ಯ ಸರ್ಕಾರವು ಭೂ ಕಂದಾಯದ ಬಾಕಿಯಾಗಿ ಪರಿಹಾರ ಮೊತ್ತ ವಸೂಲಿ ಮಾಡಬಹುದು. ಪರಿಹಾರ ನೀಡದ ಕಾರ್ಯಕ್ರಮದ ಆಯೋಜಕರ ಆಸ್ತಿಯನ್ನೂ ಸರ್ಕಾರ ಹರಾಜು ಹಾಕಬಹುದು ಎಂದೂ ಈ ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ.

# ಇಸ್ರೇಲ್ ಮೇಲೆ ಇರಾನ್ ಪ್ರತೀಕಾರ

ಒಂದನೇ ಪುಟದಿಂದ...

ಈ ಪೈಕಿ ಮಹಿಳೆ ಅವಶೇಷಗಳಡಿ ಸಿಕ್ಕಿದ್ದು, ತೀವ್ರವಾಗಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬೆಲಿನ್ಸನ್ ಆಸ್ಪತ್ರೆಯ ವಕ್ತಾರರು, ಚಿಕಿತ್ಸೆಗೆ ಕರೆತಂದಿದ್ದ ಮಹಿಳೆಯೊಬ್ಬರು ಸತ್ತಿದ್ದು, ಮೃತರ ಸಂಖ್ಯೆ 3ಕ್ಕೆ ಏರಿದೆ. ಅಲ್ಲದೆ, ಶನಿವಾರದ ದಾಳಿಯಲ್ಲಿ ಏಳು ಮಂದಿ ಗಾಯಗೊಂಡಿದ್ದಾರೆ ಎಂದು ತಿಳಿಸಿದೆ.

ಅಮೆರಿಕದ ವಾಯುಗಡಿ ಸುರಕ್ಷತಾ ವ್ಯವಸ್ಥೆಯು ಈ ವಲಯದಲ್ಲಿ ಇರಾನ್‌ನ ಕ್ಷಿಪಣಿಗಳನ್ನು ತಡೆದು ಉರುಳಿಸಲು ನೆರವಾಗುತ್ತಿದೆ ಎಂದು ಅಮೆರಿಕದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

**ಯುದ್ಧದ ಕಾರ್ಮೋಡ:** ಇಸ್ರೇಲ್‌ನ ದಾಳಿ ಮತ್ತು ಇರಾನ್‌ನ ತೀವ್ರ ಪ್ರತೀಕಾರದ ಹಿನ್ನೆಲೆಯಲ್ಲಿ ಮಧ್ಯಪೂರ್ವ ಪ್ರಾಂತ್ಯದಲ್ಲಿ ಯುದ್ಧದ ಕಾರ್ಮೋಡ ಆವರಿಸಿದೆ. ಈ ಪ್ರಾಂತ್ಯದ ಹಲವು ದೇಶಗಳು ಇಸ್ರೇಲ್‌ನ ದಾಳಿಯನ್ನು ಖಂಡಿಸಿವೆ. ಉಭಯ ದೇಶಗಳು ಈ ಹೊತ್ತಿನಲ್ಲಿ ಸಂಯಮ ಕಾಯ್ದುಕೊಳ್ಳಬೇಕು ಎಂದು ಸಲಹೆ ಮಾಡಿವೆ.

ಇಸ್ರೇಲ್ ಸೇನೆ ಪ್ರಕಾರ, ಇರಾನ್ ಮೇಲೆ ನಡೆಸಿದ ಆರಂಭಿಕ ದಾಳಿಯಲ್ಲಿ 200 ಯುದ್ಧ ವಿಮಾನಗಳು ಬಳಕೆಯಾಗಿದ್ದು, 100 ಸ್ಥಳಗಳನ್ನು ಗುರಿಯಾಗಿಸಿ ದಾಳಿ ನಡೆಸಲಾಗಿತ್ತು.

ಇರಾನ್‌ನ ಇಸ್‌ಫಹಾನ್‌ನ ಪರಮಾಣು ಸಂಶೋಧನಾ ಕೇಂದ್ರ, ನಟಾನ್ಜ್, ಫೋರ್ಡೊದಲ್ಲಿರುವ ಪ್ರಮುಖ ಅಣ್ವಸ್ತ್ರ ಸೌಲಭ್ಯಗಳ ನೆಲೆಗಳನ್ನು ಗುರಿಯಾಗಿಸಿ ದಾಳಿ ನಡೆಸಲಾಗಿತ್ತು ಎಂದು ಇಸ್ರೇಲ್ ಪ್ರಕಟಿಸಿದೆ.



ಕ್ಷಿಪಣಿ ದಾಳಿಯಿಂದಾಗಿ ಇಸ್ರೇಲ್‌ನ ಟೆಲ್ ಅವೀವ್ ನಗರದ ಕಟ್ಟಡವೊಂದರಲ್ಲಿ ಶುಕ್ರವಾರ ತಡರಾತ್ರಿ ದಟ್ಟ ಬೆಂಕಿ ಆವರಿಸಿತ್ತು ಎ.ಪಿ. ಚಿತ್ರ

# ಪ್ಯಾಲೆಸ್ಟೀನ್ ಕುರಿತ ವಿಶ್ವಸಂಸ್ಥೆ ಸಮ್ಮೇಳನ ಮುಂದೂಡಿಕೆ

ಪ್ಯಾರಿಸ್ (ಎಪಿ): 'ಇಸ್ರೇಲ್ ಹಾಗೂ ಪ್ಯಾಲೆಸ್ಟೀನ್‌ಗೆ ಸಂಬಂಧಿಸಿದಂತೆ ಪರಿಹಾರ ಕಂಡುಕೊಳ್ಳುವ ಸಂಬಂಧ ಮುಂದಿನ ವಾರ ಹಮ್ಮಿಕೊಂಡಿದ್ದ ಉನ್ನತ ಮಟ್ಟದ ಸಮ್ಮೇಳನವನ್ನು ಮಧ್ಯಪ್ರಾಚ್ಯ ಬಿಕ್ಕಟ್ಟು ಹಿನ್ನಲೆಯಲ್ಲಿ ಮುಂದೂಡಲಾಗಿದೆ' ಎಂದು ಫ್ರಾನ್ಸ್ ಅಧ್ಯಕ್ಷ ಎಮಾನ್ಯುಯೆಲ್ ಮ್ಯಾಕ್ರನ್ ತಿಳಿಸಿದ್ದಾರೆ.

ನ್ಯೂಯಾರ್ಕ್‌ನ ವಿಶ್ವಸಂಸ್ಥೆ ಕಚೇರಿಯಲ್ಲಿ ಜೂನ್ 17ರಿಂದ 20ರವರೆಗೆ ಫ್ರಾನ್ಸ್ ಹಾಗೂ ಸೌದಿ ಅರೇಬಿಯಾ ಆಯೋಜಿಸಿದ್ದ ಸಮ್ಮೇಳನದಲ್ಲಿ ಮ್ಯಾಕ್ರನ್ ಸೇರಿದಂತೆ ಹಲವು ಗಣ್ಯ ನಾಯಕರು ಭಾಗಿಯಾಗಲಿದ್ದರು. ಈ ಸಮ್ಮೇಳನವು ದೀರ್ಘ ಕಾಲದಿಂದ ಹಿಂಸಾಚಾರಕ್ಕೆ ಸಾಕ್ಷಿಯಾಗಿರುವ ನೆಲದಲ್ಲಿ ಶಾಂತಿ ಪುನರ್‌ಸ್ಥಾಪನೆಗೆ ನಾಂದಿ ಹಾಡಲಿದೆ ಎಂದು ಪ್ಯಾಲೆಸ್ಟೀನ್ ಸರ್ಕಾರ ಆಶಾಭಾವ ವ್ಯಕ್ತಪಡಿಸಿತ್ತು.

'ಪ್ಯಾಲೆಸ್ಟೀನ್ ಅನ್ನು ದೇಶವನ್ನಾಗಿ ಗುರುತಿಸುವ ದೃಢನಿಶ್ಚಯ'ಪಡಿಸಲು ಈ ಸಮ್ಮೇಳನ ನೆರವಾಗಲಿದೆ ಎಂದು ಮ್ಯಾಕ್ರನ್ ಈ ಹಿಂದೆ ತಿಳಿಸಿದ್ದರು. ಇದಲ್ಲದೇ, ಇಸ್ರೇಲ್‌ಗೂ ಕೂಡ ಇದೇ ಮಾನ್ಯತೆ ನೀಡುವ ಕುರಿತು ಅವರು ಇಂಗಿತ ವ್ಯಕ್ತಪಡಿಸಿದ್ದರು. ಇರಾನ್ ಮೇಲೆ ಇಸ್ರೇಲ್ ಶುಕ್ರವಾರ ದಾಳಿ ನಡೆಸಿತ್ತು. ಇದರ ಬೆನ್ನಲ್ಲೇ ಹೇಳಿಕೆ ನೀಡಿದ್ದ ಮ್ಯಾಕ್ರನ್, 'ಮಧ್ಯಪ್ರಾಚ್ಯದಲ್ಲಿ ಇಸ್ರೇಲ್ ಸೇರಿದಂತೆ ಮಿತ್ರಪಡೆಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಫ್ರಾನ್ಸ್ ಸೇನೆಯು ಸಿದ್ಧವಾಗಿದೆ. ಆದರೆ, ಇರಾನ್ ಮೇಲೆ ಯಾವುದೇ ದಾಳಿ ನಡೆಸುವ ಉದ್ದೇಶ ಹೊಂದಿಲ್ಲ' ಎಂದು ಸ್ಪಷ್ಟಪಡಿಸಿದ್ದರು.

'ಭದ್ರತೆ ಕಾರಣದಿಂದ ಪ್ಯಾಲೆಸ್ಟೀನ್‌ನ ಪ್ರತಿನಿಧಿಗಳು ಕಾರ್ಯಕ್ರಮಕ್ಕೆ ಬರಲು ಸಾಧ್ಯವಾಗುತ್ತಿಲ್ಲ. ಸೌದಿ ಅರೇಬಿಯಾದ ರಾಜ ಮೊಹಮ್ಮದ್ ಬಿನ್ ಸಲ್ಮಾನ್ ಜೊತೆಗೆ ಚರ್ಚಿಸಿ ಹೊಸ ದಿನಾಂಕ ಪ್ರಕಟಿಸಲಾಗುವುದು' ಎಂದು ಎಮಾನ್ಯುಯೆಲ್ ಮ್ಯಾಕ್ರನ್ ಹೇಳಿದರು.

ಪ್ರಜಾವಾಣಿ ಭಾನುವಾರ • ಜೂನ್ 15, 2025

# ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪ್ರಜಾವಾಣಿ
# ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

# PROPERTY CORNER ಕ್ಲಾಸಿಫೈಡ್ಸ್

## REAL ESTATE SELLING

### Sites

#### Banashankari

**"AVAILABLE WANTED** BDA Sites Banashankari 6TH Stg,Anjanapura Vishweshwaraiah Lyt 50x80 40x60 30x40 20x30,Value Properties Call Raju:9901315949, 9731814437

**"AVAILABLE' WANTED** BDA Sites Banashankari 6TH Stage, 20x30,30x40,40x60, 50x80, Genuine Buyers/Sellers : 9902764626 9513332646

**BANASHANKARI 6TH** STAGE- BDA-AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

**MANTRALAYA ENTERPRISES:** BUYING And SELLING BDA/A Khatha SITES/ BANASHANKARI 6th Stage, Anjanapura, Vishweswaraiah Layout. 9945724472.

**BANASHANKARI 6TH** Stage, 9th Block, #33/A, 40x60 S/F, 100 Feet Parallel, 2.60Cr. Negotiable. OWNER: 9799099699, 9740075563.

**AVAILABLE BSK** 6th Stage 50x80 100ft Road NF, 50x80 60ft Road EF 7th Block Contact: 9845062822/ 8660751654

**BDA, RESIDENTIAL,** Commercial, Banashankari 2nd, 3rd, 5th & 6th stage Uttrahalli, Rajarajeshwarinagara Katriguppe, Girinagara, 30x40, 40x60, 50x80. 9916592400

#### Basavanagudi

**BASAVANAGUDI N.R.COLONY,** Sale 15000 Sft Residential Prime Land, West Facing at Kalyani Garden. 9972535002/ 9880244300

#### Chandra Layout

**SITE FOR** SALE 1125sft, 40feet Road, BCC Layout Near Water Tank, Chandra Layout. 9880311959

#### Gnanabharathi

**40X60 EAST** Facing Site for Sale BDA Jnanabarathi 2nd Block. Brokers Excuse. Genuine Buyer Call: 8105688602.

#### Jakkur

**PRIME RESIDENTIAL** Corner Plot for Sale, 4400sqft North/ West at Jakkur, Telecom Layout. Call: 9019144869.

#### Jayanagar

**JAYANAGAR EXCELLENT** LOCATION 80x120 Residential Property For Sale Near Metro Station Genuine Buyers. RAO: 9341906338/ 9742211233

**2808 SQFT.** Rs.26,000/-. Per Sqft. South Property #23, 8th Main, 4th Cross, Jayanagar 1st East, Byrasandra. Call: 9886124124.

#### K R Puram

**KR PURAM,** BLR , Residential vacant plots in a well known developed layout close to Train station, ITPark (adjacent 2 plots 2957 and 4800 sft.) CONTACT PH: 9845674424

#### Kempegowda Layout

***KEMPEGOWDA LAYOUT*** 50x80,Site #4233,West-facing 3rd Block"L"sector 300feet-road,40x60 Site #547,East-facing 1st Block"K"sector 40feet-road. Contact Owner:8095002424

***NADAPRABHU KEMPEGOWDA*** LAYOUT 1st Block 30X40 WEST FACING SITE FOR SALE. Contact: 6366610999

**KEMPEGOWDA LAYOUT,** Commercial/ Residential BDA Site for Sale 20x30, 30x40, 40x60, 50x80 Contact Kumar 9945119449

#### Nagarabhavi

**"NAGARABHAVI BDA COMPLEX** Backside 30x40 West (old House) 40 Feet Road BDA Site for Sale. 9448432633"

**NAGARABAVI D GROUP** LAYOUT 30x40 Sale, BBMP (E Swatthu) A Khatha, South Face, Near Agasthya School. Call: 9663226688.

**SALE: SITE** 30x60 Nagarabhavi 2nd Stage, 'A' Khata. Immediate Registration. Genuine Buyers. Contact: 6361819741.

**SITE SALE,** North Facing 40x60 Sqft, Behind Namooru Tindi, Nagarbhavi, No Brokers/ No Agents: 9448377834

#### Peenya

**CHOKKASANDRA 1** grd plots Patel Kempaiah Layout & Ullal near Agastya Vidyanikethan. 9789522759

#### Vishweshwariah Layout

**"VISHVESWARAIAH 8TH-BLOCK** 40x60 west facing (BDA) Allottee site, Good Location, Genuine Buyers Contact: 9900925309"

**SMV LAYOUT** 5th Block, 30x40 Sale, North Face, Behind Venkateshwara Temple, Near KLE Law College, BDA Allottee. 9663226688.

**30X40 BDA** Site Sale Vishveshwaraiah Layout 3rd-Block Near BDA Complex & 100Ft Ring Road Parllel 12500/- Negotiable 8970306030

**AVAILABLE BDA** Site Vishweshwariah Layout 3rd Block 30X40 West Facing GOOd Location Genuine Buyers: 7338688111

**VISVESWARAIAH LAYOUT** 8th Block 30x40 BDA Site For Sale, 40' Road 14000/- Per Sft.: 9845488488

**"30X40 WF** RESIDENTIAL TOP LOCATION SITE BDA 1ST BLOCK VISHWESHWARAIH LAYOUT [IMMEDIATE SALE]. CONTACT- 9480973579"

***BUYING/ SELLING*** 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

**"50X80 EF** 60 FEET ROAD PROPOSED BDA COMPLEX 6TH BLOCK VISHWESHWARAIH LAYOUT [75% WHITE]- 9845143579"

**BDA-SITE FOR-SALE** 30x40 East Facing at Sir.M Vishveshwaraiya Layout 1st & 3rd Block Good Location Call:7676900174 6363496142

**WANTED BDA** Sites 30x40, 40x60, 50x80 Vishweshwariah Layout Any Facing, Any Property Contact: 9035470616

**SMV 4TH** Block 50X80 West 80ft Road Commercial Allotted Site 6th Block, 30X40 North 9900224071

#### Yelahanka

**DC CONVERSION** BIAAPA Approved A KATHA 30x40 site 30,00,000/- on IVC MAIN ROAD. Near Yelahanka. Ready for Construction. 9663884211

#### Mysore

**DC CONVERTED RESIDENTIAL** land, 7guntas (7623sq/ft) for Sale Close to Arka Dhama, Bogadi highway, Mysore, Call: Raghu- 9845518228

**0% BROKERAGE** for Buying and Selling any properties in Mysore city. Contact: Mysore Estates Vishwanath Gowda 9590911111

**KHB ALLOTTED** 30x40 Site at Kenchalgudu, Mysore City 46 Lakhs Clear Documents Owner Contact: 9606866368

#### Ramanagara

**RESIDENTIAL CONVERTED** RCUDA Approved (Semi-Commercial) Site For Sale in Ramanagar 10000Sqft 400Meters from highway 40 FeetRoad, 2000/P.Sft Owner- 9900115519

#### Srirampura

**SITE 30X100 - 30X50 SRIRAMPURAM**
30X100 North facing Site, 30x50 also available on split basis, 1st Cross, A Khata, Single Owner, 2mins from Metro, 17000/sqft, SALE ONLY.
**OWNER 9916800300**

#### Anjanapura

**WANTED ANJANAPURA** Banashankari 6th Stage JPNagar Near Kanakapura Road Any Measurement Immediate Settlement Call:9964627255

**ANJANAPURA 10TH** Block 30×40 East. Anjanapura 2nd Block 40×60 East. BDA Site For Sale. Contact: 9845298419

**BDA, RESIDENTIAL** & Commercial Anjanapura, BDA Layout, Narayananagara, BCMC Layout, Judicial Layout, Vakil Garden, Kanakapura Road 30x40, 40x60, 50x80. 9916592400

#### Mysore Road

**NADAPRABHU KEMPEGOWDA** Layout, Residential 30x40 Commercial 40x60, 50x80, 80Feet Road, 100Feet Road, 300Feet Road, Ready For Registration & Construction. 9916592400

#### Rajarajeshwari Nagar

**RAJARAJESHWARIN AGAR IDEAL** Homes 73*97 Corner BEML 30*40, 40*60, 50*80, Banashankari VI Stage 30*40, 40*60, 50*80 and Houses. 9448483699.

#### Hegganahalli

**PLOT SALE** 160ftx100ft For Outright Sale @ Hegganahalli Cross. East Facing Bangalore-91 9900287834/ 9448377834

#### Babusapalya

**AVAILABLE 80*64** North West Corner, Horamavu Agara, near St. Vincent Pallotti School, Babusapalya 9000/-. Brokers Excuse. 9972849555.

**JOB**
To Place your Classified Ads Contact:
**9886213331**

### House

#### Banashankari

**SALE RESIDENTIAL** Independent Bungalow in BSK 2nd Stage 36X85, Built-up 10,000sft, West facing, Basement 4 Carparking, G+3 floors with terrace Garden & lift, Ready to Move Verna Developers, Barton Center MG Road 9353128035/ 9916310226 (Brokers excuse)

#### Basaweshwaranagar

**SALE SITE** 1600 SQFT A KHATHA WITH EASTHI READY FOR REGISTRATION WITH 5BHK HOUSE 1 CRORE 90 LAKHS 9035883017

#### HRBR Layout

**KAMANAHALLI ROAD** Empire Hotel, House for Sale,600sft built G1BHK,1& 2Floor Each 2BHK Rental Income 50k.Rs.1.20cr 73493 22223

#### J P Nagar

**BDAN/E,CORNER,1550SFT 3BHK** Duplex NrForam 4.10cr.30x50,N/W14500/-2150Sft,3BHKFlrwise Flat 1.65Cr,35x40 N/W ,13500/-30x40,3units 3.10cr:8904210201

#### Mathikere

**BUILDING FOR** SALE 4500 Sft Building Adj. to M S Ramaiya College Mattikere 4Floors Built On 1200Sft North Facing Site: 7022106263

#### Vishweshwariah Layout

**BUILDING FOR SALE** BDA East 30x40 4BHK Triplex Home 7thblock SMV layout Nagarbhavi. 9019962007, 9742974929.

#### Vidyaranyapura

**INDEPENDENT 4** BHK Duplex (60'x40') S/F, BEL layout, 2nd Block, Immediate registration. 15500/- sq.ft :9844264852

### Industrial & Factory

#### Tumkur Road

**KIADB DABASPETE** Industrial Cold Storage facility Sale 20crores, Rent 20Lakhs and Nagarbhavi Malgala 40x90 East Sale. 9845720810.

### Flat

#### Banashankari

**"LUXURY NEW** Flats 3 BHK Banashankari 2nd Stage near K.R.Road for more details. 9845286505"

#### Bannerghatta Road

**BANNERGHATTA ROAD** near Vege City Mall Purva Height Apartment,`3 BHK 3000 Sft North,with amenities, 2 carpark 2,75,00,000/- 9739995042.

#### Basavanagudi

**BASAVANAGUDI SALE** FLAT BRAND NEW 2050 SFT NEAR KR-PARK OC-CC 3.4 Corer NEGO. SHIVU 9880004149

#### Frazer Town

**FLAT SUITABLE** for Residential or Consultancy office for sale at Millers Road, Near Manipal Hospital 1F, 1341sq.ft UDS 857sqft, 14 flats. 'Estates Point'- 9980946638

#### Vijayanagar

**VIJAYANAGAR 5** bedroom flat 4298, 2 car parking, 2 private terrace 2.3 Cr 9600008771

### Commercial Building

#### Airport Road

**FOR SALE** Fully Furnished Office Old Airport Road VDB TOUCHDOWN Next to HAL Museum 7447 Sqft 96 Work Stations 5 Cabins 3 Meeting Room 1 Board 1 MD Cabin 6 Carparks. NO PHONE CALLS WHATS APP MESSAGE ONLY TO: 9845031550

#### Indiranagar

**INDIRANAGAR COMMERCIAL** Building 30x40 South, BDA allotee, Getting Rent 1L,.Near 100 Feet Road 3.85cr. 9980577227.

#### Seshadripuram

**SALE PRIME** Location Seshadripuram vacant Building 6000 Sqft North Facing 42'x70' site full cheque clear titles. Contact 10 AM to 5 PM at 38/1, NSI Street, Behind Seshadripuram Main College. 560020.

### Residential/ Commercial

#### Multiple Locations


**Sri Rajarajeshwari**
Property Junction
HUGE PROPERTY
For Sale in Bangalore
Devanahalli, Whitefield, Hoskote, Doddaballapura, Nelamangala,Kanakapura
7483637817, 9880578159

### Commerical

#### Banashankari

**FOR SALE** Commercial BDA Site Banashankari 6th Stage 100ft Road 50x80 North Facing: 9845146725/ 9741466369

#### BTM Layout

**BTM LAYOUT** 30x40 Monthly Rental Income 1.80 Lakhs to 4 Lakhs and Commercial SITE 40x60 SALE Genuine Buyers Call: 98457-55977

#### Basaveshwaranagar

**COMMERCIAL PLOT** SALE Basaveswarnagar Main Road 100 Feet Road 3250 Sqft BBMP A Katha West Facing, 21,000/- PSft: 9916014394

#### Gnanabharathi

**COMMERCIAL PROPERTY** Ullal Main Road 1500sft South West Corner & Nagarbhavi Kengeri Ring Road 4800sft 9980433004

#### Vishweshwariah Layout

**BDA COMMERCIAL** 40X60 Sale KLE Law College Circle South SMV 5th-Block 80ft Road: 9945694783/ 9980433004

### Agricultural Land

#### Mysore Road

**"SALE 1ACRE** 12 Kms From Ramnagar Towards Kankapura Near SRS Hills ₹70 Lakhs/ Acre. 9845178335"

### Commercial Land

#### Mysore

**2.22 ACRE** land for Sale at Gundlupet 2 acres 22 Guntas Commercial converted (Hotel purpose) land for Sale at Agathagowdanahalli off. Mysore Ooty National Highway. Contact; Mysore Estates Vishwanath Gowda 9590911111

#### Out-Station

**PETROL BUNK SALE** with Land 3 Acres, Bangalore to Chennai Highway near Sulagiri. Call: 9443225303, 8660719986.

## REAL ESTATE BUYING

### Agricultural Land

#### Devanahalli

**REQUIRED/WANTED AGRICULTURE** green zone or converted 4 to 50 acres outright purchase and joint venture for MNC Company and NRI investors in and around Doddaballapura Devanahalli Chikkaballpur Sarjapura Road Hoskote-Chintamani-Malur surroundings, minimum road width 40 feet plus. Payment flexible. Elite Group 9916592400/ 9986682400elitegroupsrealtors@gmail.com

### Sites

#### Banashankari

**BDA SITES** WANTED ARKAVATHY ANJANAPURA BANASHANKRI 6TH STAGE VISHWESHWARAIAH KEMPEGOWDA ANY BDA LAYOUT: 9845062822/ 8660751654

#### Multiple Locations

**WANTED BDA** SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

### Villas/Bunglows

#### Jayanagar

**BUY /** Sale / Rent- Prestige Falcon City, Total Environment Mantri Serenity Sobha Indraprastha Purvankara Prestige West Woods Brigade Tata Promont Embassy and many more and several protects Plotted, Apartment and Villa projects in Koramangala, Jayanagar, Basavangudi, RMV Layout, Vijayanagar, Rajajinagar. 9591932400.

## BUILDERS ESSENTIAL

### Water Proofing

**LEAKAGE... LEAKAGE...** Old/New Building, Sump, Bathroom, Wallcrack, Skylight, Terrace Waterproofing done by New Technology- 9880916988



## RENTAL PROPERTIES

### Accommodation Available

#### Commercial

**COMMERCIAL SPACE at Mysore GF-2700Sqft, FF-3000Sqft, SF-3000Sqft. Available for rent at Main road Kuvempunagar/ Ramakrishna Nagar, Mysore 9980431800**

**VFM HONDA** adjoining Furnished Office at 100 Pai Layout, Old Madras Road, 6200 sqft 04 car parks 30 2W parks with 105 WorkStations @ 60/- per sqft. Call 9980450000

#### Flats

**NAGARBHAVI GARDEN VILLAS,** Apartment 2BHK 2Bath 770.Sft. 1st Floor, Semi`Furnished, RENT 19,500+ Negotiable. (Families). Owner: 9448017508.

**FOR LEASE:** 2 Bedroom Flat at SVG Nagara (Near Vijaya Nagara) Contact: 9351225019

#### House

**HAL 2ND** Stage, 2 BHK Ground Floor (Indepenent House) near Gayathri Pride Apartment. Contact:- 9538428534.

## MATRIMONIAL

### Brides Wanted

#### Malayalam

**BRIDE WANTED**
Parents seeking Malayalee Girl (Caste no bar) 28-30 yrs (unemployed) for our only son 34. Self Employed. Settled in Bengaluru.
WhatsApp:
**9741369621**

### Grooms Wanted

#### Brahmin

**SM FOR** Oct 1996 born, 167cm, beautiful girl studying PhD from Bluru/Delhi based Kannada Smartha Brahmin professionals aged 30-34. Email/WhatsApp photos, profile: +916360638721/sreenathd@yahoo.com

#### Hindu

**BALIJA**
Parents invite proposal from suitable Grooms working in Canada/ USA.
For their daughter 29yrs Fair 5'6" Software Engineer working in Canada.
**Ct: 8884924533**

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ
ಕ್ಲಾಸಿಫೈಡ್ಸ್

# JOB OPPORTUNITIES

## Teachers/ Professors

**NEW HOLY** Saint English School Wanted Primary Teachers From 2nd Standard to 6th Standard and Nursery Trained Teacher or Anglo Indian Teacher for Pre KG, LKG, UKG: 7892461960/ 7892459315

**IMPACT COLLEGE OF ENGINEERING & APPLIED SCIENCES**
Kodigehalli, Sahakaranagar, Bangalore-560092.
**REQUIRES FACULTY**
invites applications from candidates eligible for the following positions for BE - CSE / AIML / DSc / Cyber Security / Automation & Robotics.
**PROFESSOR**
**ASSOCIATE / ASST PROFESSOR**
**LAB INSTRUCTORS**
Apply online on: https:// impact.ac.in/job-openings/
(AICTE rules apply for eligibility and compensation) IMP-25606

**THIRUMALA VIDYA NIKETHAN SCHOOL**
#29, G.D Park Extn, Vyalikaval, Bangalore - 560003
Ph: 080-23447560 / 23447570, Email: tvns1984@gmail.com
**WALK – IN INTERVIEW on 16-06-2025**
For the post of Social Science, Computer P.E.Teacher, Kannada, English (FL), Maths, Science, Sanskrit Teachers - for Primary & High School. Nursery trained teachers are also required.
**Essential Qualification :** Graduate/Post Graduate with B.Ed, B.PEd. Interested and eligible candidates may attend the walk - in Interview between 9:00 am to 12:15 pm on 16/6/2025 in the School premises, along with filled application form, attested copies of testimonials & bio-data.
Principal
Thirumala Vidya Nikethan School

**SRI LAL BAHADUR SHASTRY MEMORIAL HIGH SCHOOL**
No.19/01, 1st Cross, Cholurpalya, Magadi Road Post, Bengaluru-560023.
**WANTED**
Part time Teacher to teach **English Medium High School** Science (CBZ) and Maths Subject
Daily Between : 03-30 p.m. to 06-00 p.m. (Except on Saturday).
Contact between 10-00 a.m. to 04-00 p.m.
Sd/- Secretary
Mobile Number : 9449976761

**WANTED ENGLISH** MEDIUM TRAINED LADY TEACHER to teach Maths, Science for Primary/ Hindi for High School/ Computer Faculty/ NTT trained. Salary with PF and ESI facilities. Contact in person (10 am- 3 pm on all working days) - Secretary, Deccan Educational Society®, Near Sampige Theater, Malleswaram. Mob: 9353382686

**VIDYAVAHINI ENGLISH** SCHOOL Anandnagar Bangalore-24 mail:principalvves@ srsect.edu.in Ph:080-23538869 9343865939 9008396542 Requires Experienced Qualified Teacher for the-post of Physical Education, Hindi, EVS, Computer & Moral Education for Van Driver Assistant is Urgently Required.

**"WANTED LECTURES** Economics, B.Studies, Accountancy, Hindi, PT.Teacher, Admin Best`Salary for`Right_Candidates. "Columbia_College", J.P.Nagar, 8th-Phase, Bangalore.Call: 9845457012/ 7899093631"

**MORNING STAR** English School Ramachandrapuram (Rajajinagar Entrance) Requires B.Sc Computer Science Lady Teacher to handle Classes and Administration Work. Contact: 9845018480

**REQUIRED EXPERIENCE** Head Mistress, Primary Teacher and PE Teacher for S.N. HIGH SCHOOL, ADUGODI. 9611159043.

**DRAWING, KANNADA** TEACHER Wanted for immediate appointment Contact with Resume & Certificates, Principal CAMLIN PRIMARY SCHOOL, 4th Cross, Near 7th Main Bus Stop, Hampinagar, Bangalore-560104. Phone: 080-23301363

**WANTED EXPERIENCED** PRINCIPAL AND LECTURES for Suryodaya PU_and degree college Female Typist near Eletronicity Bangalore. Immediately contact 9632081875, 7975796544

**TEACHER REQUIRED** for Social Studies, Kannada and Scouts and Guides, contact whatsapp 9901501185 and email kenmoreschool@gmail.com

**WANTED TEACHERS** FOR KANNADA ABDUL BARI'S HIGH SCHOOL Near Coles Park, Frazer Town Whatsapp 9353111888

## Accounts & Finance

**LEADING TIMBER** Industry Kumbalgodu Near Mysore Road; Requires: Lady Accountant, Sales Man, above 5 years experience, Minimum Degree; Mob: 9886465289

## Drivers

**DRIVERS WANTED** with Yellow Badge and Good Experience Preferred Staying in and around Basavanagudi: 9019282328

## General

**WANTED FACULTIES** M.Sc-Nursing, B.Sc-Nursing, MPT, M-Pharmacy, Anatomy, Physiology, Microbiology, Librarian, Contact: MGP Institutions. Kanmanikai, Mysore Road, Bangalore. Phone:9886236341.

**V&V GROUP** Bannerghatta Road Wanted immediately MANAGERS, Lady FRONT OFFICE EXECUTIVES, MARKETING EXECUTIVES, TELECALLERS, Good Salary: 9900001954.

**REQUIRE ASSISTANT** supervisor with Computer Knowledge. Age Limit: Below 45 years, Working Location: Near R.V Eng College, Mysore Road. Mob No: 8217649412

## Hospital & Medical Jobs

**FPA INDIA** Bengaluru Branch requires: Bommanahalli and Peenya Clinic. MEDICAL OFFICER PROJECT CO-ORDINATOR COUNSELLOR (Psychiatry/ Psychology MSW) NURSE LAB TECHNICIANS FIELD WORKERS. Recruitment reflects our commitment to safety protection of children and young people. Email: bengaluru@fpaindia.org

## HRD & Admin

**WANTED FIELD** / recruitment officers for a reputed Facilities & Security Management company. Salary-35K-50K Contact - 8050290580/8310882699

## Manager

**WANTED OPERATIONS MANAGER**
(DEFENCE PERSONNEL CAN ALSO APPLY)
Committed and experienced manager able to oversee and supervise the repairs, maintenance and operations of the college. Co-ordinate with vendors, service providers and contractors.
E-Mail cbbhandarijaincollege@gmail.com
Ph: 8951556740

## Multiple Vacancy

**MEDI DERMA HOSPITAL**
85, Byrathi, Hennur Main Road, Bangalore-77
**REQUIRED**
- SURGEON
- GYNECOLOGIST
- ORTHOPEDICIAN
- ANAESTHETIST
- PEDIATRICIAN
- RADIOLO GIST
- ONCOLOGIST
- ONCO SURGEON

INTERVIEW TIMING : 9AM -12PM
CONTACT: +91 9844130455

**A LEADING** Pharma Distributor Company near Kengeri Looking for DRIVERS 4 wheeler and 2 wheeler, DELIVERY BOYS. Call: 9513306536 9916902503

## Engg/ Production Technical

**CHETHANA PRECI** PRODUCTS, BENGALURU-560091, REQUIRES CNC MACHINE OPERATORS, MECHANICAL ENGINEERS DME,ITI FITTERS MECHANICAL, FRESHERS OR SLIGHTLY EXPERIENCED, MALE CANDIDATES ONLY, GOOD SALARY WITH ALL BENEFITS. CONTACT: 9845032663, 9341240930. EMAI:rotoflexb@gmail.com

**WANTED EXPERIENCED** site Engineer with own vehicle to supervise Building B.E./Diploma civil Contact:7022874360 /6362433352

## Walk-in

**WANTED: OFFICE** Executive (Male/ Female) for a Hydraulic Trading Company to take care of day to day office work (Qtn, Invoice, eway bill making, keeping Inventory Records etc). Good English & Computer skills must. E-Mail resume to: vandec.office@gmail.com. WALK-IN INTERVIEW. VANDEC, 47, R.A.R. MANSION, 1ST MAIN ROAD, ROYAN CIRCLE, CHAMRAJPET, BLR-18. PHONE: 41223132/ 8217843233

## Wanted

**COMPUTER OPERATOR** for Reputed Pharma company, Preferably in and around Magadi-Nelamangala road Contact: 9148006935.

**COMPUTER DATA** Entry Operator required Part/ Full time in Rajajinagar with Typing Skill. Call 9164843555

# OTHERS

## For Sale

**ROSE WOOD** 2x4 Feet, Teak Cot Second Hand Steel Drum Taperecorder Unused Steel Utensil. 7204447743.

# PERSONAL

## Change of Name

**WE, A.VISHWANATH** and HEMALATHA.H. R/a#495 1st Cross PreethiNagar Laggere, Peenya Small Industries, Bangalore North,Bangalore 560058 have`changed our_minor Son's Name from V. CHIRANJEEVI to V. CHIRAG (DOB:03.1.2020) vide`affidavit dated:3.5.2025 before`Notary P.C.Ramaiah Bangalore.

**CHANGE OF NAME**
I, **VIJAYA LAXMI KADUR GURURAJ RAO** (Old Name), W/o Late: Venugopal K.M., presently residing at Sharath, K.V, No. 51, 1st Floor, 1st Main. 2nd Cross, Vyalikaval Police Station, Vyalikaval, VTC Vyalikaval Extn., PO : Malleswaram, Dist: Bengaluru-560003, have changed my name as **VIJAYALAKSHMI KADUR GURURAJ RAO** (New Name) for all purposes, vide affidavit dated: 10.06.2025 before advocate and notary S.R. Paramashivaiah, Bengaluru.

**I, MRS.** MARY PRAMILA, W/o. Late. Anthony Rajan, residing at No.125 Block No.87, K.H.B.Colony, Kengeri Satellite Town, Bangalore-560060, I have changed my daughter's name as ANGELINE LIANA. A, vide Affidavit dated 06.06.2025 before Notary: Ravi Bangalore.

**CHANGE OF NAME**
I, **PATTAN KHADER BASHA** Residing at # 2-9, Rajupalyem, Prakasam District, Andhra Pradesh-523369, have changed my Minor Son's name from **KHAJA MOHIDDIN** to **PATTAN ABDUL KHAJA JILANI** vide affidavit dated 14-06-2025 before notary B.M. Chandrashekar, Bengaluru.

## Lost

**LOST**
Loss of Document (Educational Certificate), **My Original Transfer Certificate/ School leaving Certificate** is lost. If anyone find the same, kindly Contact: **9900624369.** Subhashree Routray Aksya Redstone villa No.61, Hosakote Road Seegehalli, Bangalore-560067.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080-45557160/ 162/ 163/ 164/ 9845114560 / 9731810277/ 9886213331